ಶನಿವಾರ, ಮೇ 16, 2026 | ₹ 7.00

prajavani.net prajavani

www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ


**ಡ್ರಾ ಪಂದ್ಯದಲ್ಲಿ ಪ್ರಜ್ಞಾನಂದ**

ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್. ಪ್ರಜ್ಞಾನಂದ ಅವರು ರೊಮೇನಿಯಾದಲ್ಲಿ ನಡೆಯುತ್ತಿರುವ ಸೂಪರ್ ಚೆಸ್ ಕ್ಲಾಸಿಕ್‌ನ ಮೊದಲ ಸುತ್ತಿನಲ್ಲಿ ಫ್ರಾನ್ಸ್‌ನ ಅಲಿರೇಜಾ ಫಿರೋಝ್ ಎದುರು ಡ್ರಾ ಸಾಧಿಸಿದರು

**ಮತ್ಸ್ಯ ಶಿಕಾರಿ...**

ತಿರುಚಿರಾಪಳ್ಳಿಯ ತೆಪ್ಪಕುಳಂ ಕೆರೆಯಲ್ಲಿ ಯುವಕನೊಬ್ಬ ಶುಕ್ರವಾರ ಮೀನು ಶಿಕಾರಿ ನಡೆಸಿದ

ಹಿಯರ್‌ಜ್ಯಾಪ್®

49 YEARS OF TRUST

180+ EXPERIENCE CENTRES PAN INDIA

# ಸಂಬಂಧಗಳು ಶುರುವಾಗುವುದು ಸ್ಪಷ್ಟವಾದ ಕೇಳುವಿಕೆಯಿಂದ

## ಕಡಿಮೆ ಬೆಲೆಯ ಗ್ಯಾರೆಂಟಿ ಹಿಯರಿಂಗ್ ಏಡ್ ಗಳ ಮೇಲೆ

EXCLUSIVE BRANDS PHILIPS zenaud

Google Rating ★★★★★




PHILIPS Authorized dealer

- ಉಚಿತ ಹಿಯರಿಂಗ್ ಏಡ್ ಟ್ರಯಲ್
- 0% EMI ಸೌಲಭ್ಯ
- ಖಾತರಿಪಡಿಸಿದ ರಿಯಾಯಿತಿ
- ಹೆಚ್ಚಿನ ವಾರಂಟಿ

ಉಚಿತ ಮನೆ ಭೇಟಿಗೆ ಈಗಲೇ ಬುಕ್ ಮಾಡಿ

**9659 455 455**

ಬೆಂಗಳೂರಿನಲ್ಲಿ ನಮ್ಮ ಕೇಂದ್ರಗಳು:

ಬನಶಂಕರಿ • ಈಸ್ಟ್ ಪಾಯಿಂಟ್ ಆಸ್ಪತ್ರೆ • HSR ಲೇಔಟ್ • ಹುಳಿಮಾವು • ಇಂದಿರಾ ನಗರ • ಜಯನಗರ • ಕಲ್ಯಾಣ್ ನಗರ
ನಾಗರಭಾವಿ • RR ನಗರ • ಸದಾಶಿವನಗರ • ವಿಜಯನಗರ • ವೈಟ್‌ಫೀಲ್ಡ್ • ಯಲಹಂಕ • ಉಲ್ಲಾಳ್

ಕರ್ನಾಟಕದಲ್ಲಿ ಇತರೆ ಕೇಂದ್ರಗಳು: ಮಂಡ್ಯ • ಮೈಸೂರು • ಪಿರಿಯಾಪಟ್ಟಣ • ದಾವಣಗೆರೆ • ರಾಣೆಬೆನ್ನೂರು • ಕೋಲಾರ

SCAN FOR FREE HEARING TEST & TRIAL

ಕರ್ನಾಟಕ | ಮಹಾರಾಷ್ಟ್ರ | ಕೇರಳ | ತಮಿಳುನಾಡು | ಆಂಧ್ರ ಪ್ರದೇಶ | ತೆಲಂಗಾಣ | ಪಶ್ಚಿಮ ಬಂಗಾಳ | ಬಿಹಾರ | ಜಾರ್ಖಂಡ್ | ಛತ್ತೀಸ್ಗಢ | ಉತ್ತರ ಪ್ರದೇಶ

facebook prajavani.net instagram x youtube prajavani
ಶನಿವಾರ, ಮೇ 16, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 135 | ಪುಟ 22
www.prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ರಚಿನ್ ತವರಿಗೆ**
ಕೋಲ್ಕತ್ತ ನೈಟ್ ರೈಡರ್ಸ್ ತಂಡದ ರಚಿನ್ ರವೀಂದ್ರ, ತಮ್ಮ ತವರು ನ್ಯೂಜಿಲೆಂಡ್‌ಗೆ ಮರಳಿದ್ದಾರೆ. ಇಂಗ್ಲೆಂಡ್ ಎದುರು ಕಿವೀಸ್ ತಂಡವು ಟೆಸ್ಟ್ ಸರಣಿಯಲ್ಲಿ ಆಡಲಿದ್ದು, ಅದರ ಪೂರ್ವಸಿದ್ಧತೆಗಾಗಿ ರಚಿನ್ ಐಪಿಎಲ್‌ನಿಂದ ನಿರ್ಗಮಿಸಿದ್ದಾರೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 75,237 | ನಿಫ್ಟಿ 23,643 | $/₹ 95.81 | ಚಿನ್ನ (Std. 10g) ₹1,64,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,92,500 (ಬೆಂಗಳೂರು)

# ಪೆಟ್ರೋಲ್, ಡೀಸೆಲ್ ದರ ₹3 ಏರಿಕೆ

## ಕೆಲವು ನಗರಗಳಲ್ಲಿ ಸಿಎನ್‌ಜಿ ದರ ಕೆ.ಜಿಗೆ ₹2 ಹೆಚ್ಚಿಸಿದ ತೈಲ ಕಂಪನಿಗಳು

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಪೆಟ್ರೋಲ್ ಹಾಗೂ ಡೀಸೆಲ್ ದರವನ್ನು ಪ್ರತಿ ಲೀಟರ್‌ಗೆ ₹3ರಷ್ಟು ಹೆಚ್ಚಿಸಿದ್ದು, ಪರಿಷ್ಕೃತ ದರ ಶುಕ್ರವಾರದಿಂದಲೇ ಜಾರಿಗೆ ಬಂದಿದೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಳ ಕಂಡಿದೆ. ಉತ್ಪಾದನಾ ವೆಚ್ಚ ಏರಿಕೆಯಿಂದ ಸರ್ಕಾರಿ ತೈಲ ಕಂಪನಿಗಳು ನಷ್ಟ ಅನುಭವಿಸುತ್ತಿರುವ ಕಾರಣ ದರ ಪರಿಷ್ಕರಣೆ ಮಾಡಲಾಗಿದೆ.

ದೆಹಲಿ ಮತ್ತು ಮುಂಬೈ ಸೇರಿದಂತೆ ದೇಶದ ಕೆಲವು ನಗರಗಳಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲದ (ಸಿಎನ್‌ಜಿ) ದರವನ್ನು ಅನಿಲ ಸಂಸ್ಥೆಗಳು ಪ್ರತಿ ಕೆ.ಜಿಗೆ ₹2ರಷ್ಟು ಹೆಚ್ಚಿಸಿವೆ.

ದರ ಪರಿಷ್ಕರಣೆ ಬಳಿಕ ಬೆಂಗಳೂರಿನಲ್ಲಿ ಪೆಟ್ರೋಲ್ ದರ ಲೀಟರಿಗೆ ₹106.21 ಮತ್ತು ಡೀಸೆಲ್ ದರ ಲೀಟರಿಗೆ ₹94.10ಕ್ಕೆ ಏರಿಕೆ ಆಗಿದೆ. ಸಿಎನ್‌ಜಿ ದರ ಕೆ.ಜಿಗೆ ₹94ಕ್ಕೆ ಹೆಚ್ಚಳವಾಗಿದೆ.

▶10




### ಖಾಸಗಿ ಬಸ್ ಟಿಕೆಟ್ ದರ ಶೇ 30ರವರೆಗೆ ಹೆಚ್ಚಳ

ಬೆಂಗಳೂರು: ಡೀಸೆಲ್ ದರ ಏರಿಕೆ ಮತ್ತು ಇತರ ಕಾರಣಗಳಿಂದಾಗಿ ಶುಕ್ರವಾರ ರಾತ್ರಿ 12ರಿಂದ ಜಾರಿಗೆ ಬರುವಂತೆ ಶೇ 10ರಿಂದ ಶೇ 30ರವರೆಗೆ ಟಿಕೆಟ್ ದರ ಹೆಚ್ಚಳ ಮಾಡಲು ಮಾಡಲು ಬಸ್ ಮಾಲೀಕರು ನಿರ್ಧರಿಸಿದ್ದಾರೆ.

ಕಾಂಟ್ರ್ಯಾಕ್ಟ್ ಕ್ಯಾರಿಯೇಜ್, ಆಲ್ ಇಂಡಿಯಾ ಟೂರಿಸ್ಟ್ ಪರ್ಮಿಟ್ ಬಸ್‌ಗಳಿಗೆ ಇದು ಅನ್ವಯವಾಗಲಿದೆ.

‘ಶಕ್ತಿ’ ಯೋಜನೆ ಜಾರಿಯಾದ ಮೇಲೆ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಸುವವರ ಸಂಖ್ಯೆ ಕಡಿಮೆಯಾಯಿತು. ಟೋಲ್‌ಗಳಲ್ಲಿ ಶೇ 5ರಿಂದ ಶೇ 10ರಷ್ಟು ಸುಂಕವನ್ನು ಏಪ್ರಿಲ್ 1ರಿಂದ ಹೆಚ್ಚಿಸಿರುವುದರಿಂದ ಮತ್ತೆ ಹೊಡೆತ ಬಿತ್ತು. ಈಗ ಡೀಸೆಲ್ ದರ ಏರಿಸಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಡೀಸೆಲ್ ದರ ಲೀಟರ್‌ಗೆ ₹3 ಜಾಸ್ತಿಯಾಗಿರುವುದು ಒಂದೇ ಕಾರಣವಲ್ಲ, ಈ ಮೂರೂ ಕಾರಣಗಳಿಂದಾಗಿ ಪ್ರಯಾಣ ದರವನ್ನು ಹೆಚ್ಚಳ ಮಾಡುವುದು ಅನಿವಾರ್ಯವಾಗಿದೆ’ ಎಂದು ಕರ್ನಾಟಕ ರಾಜ್ಯ ಬಸ್ ಮಾಲೀಕರ ಸಂಘದ ಅಧ್ಯಕ್ಷ ಎಸ್. ನಟರಾಜ ಶರ್ಮ ತಿಳಿಸಿದ್ದಾರೆ.

‘ಟೋಲ್‌ಗಳು ಕಡಿಮೆ ಇರುವ ಮಾರ್ಗಗಳಲ್ಲಿ ದರ ಏರಿಕೆಯೂ ಕಡಿಮೆ ಇರಲಿದೆ. ಟೋಲ್ ಹೆಚ್ಚಿರುವಲ್ಲಿ ದರ ಏರಿಕೆಯ ಪ್ರಮಾಣ ಹೆಚ್ಚಿರಲಿದೆ. ಎಲ್ಲ ಬಸ್ ಮಾಲೀಕರು ಈ ಬಗ್ಗೆ ಚರ್ಚೆ ಮಾಡಿದ್ದೇವೆ’ ಎಂದು ಮಾಹಿತಿ ನೀಡಿದ್ದಾರೆ.

▶10

### ರೂಪಾಯಿ ಮೌಲ್ಯ ಮತ್ತಷ್ಟು ಕುಸಿತ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ಶುಕ್ರವಾರದ ವಹಿವಾಟಿನ ವೇಳೆ 96 ದಾಟಿತ್ತು. ನಂತರ ಮೌಲ್ಯವು ಚೇತರಿಕೆ ಕಂಡು ವಹಿವಾಟಿನ ಅಂತ್ಯಕ್ಕೆ 95.81 ಆಗಿದೆ. ಇದು ಸಾರ್ವಕಾಲಿಕ ಕನಿಷ್ಠ ಮಟ್ಟದ ಕುಸಿತವಾಗಿದೆ.

ಶುಕ್ರವಾರದ ವಹಿವಾಟಿನ ವೇಳೆ ಮೊದಲು 96.14ರ ಮಟ್ಟಕ್ಕೆ ಕುಸಿದಿತ್ತು. ಈ ವರ್ಷದ ಆರಂಭದಿಂದ ಇದುವರೆಗೆ ರೂಪಾಯಿ ಮೌಲ್ಯವು ಶೇ 6ರಷ್ಟು ಇಳಿದಿದೆ. ಕಳೆದ 6 ವಹಿವಾಟಿನ ದಿನಗಳಲ್ಲಿ ಶೇ 2ರಷ್ಟು ಮೌಲ್ಯ ಇಳಿದಿದೆ.

**ಸೆನ್ಸೆಕ್ಸ್ ಇಳಿಕೆ:** ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 160 ಇಳಿಕೆಯಾಗಿ, 75,237ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 46 ಅಂಶ ಕಡಿಮೆಯಾಗಿ, 23,643ಕ್ಕೆ ಕೊನೆಗೊಂಡಿದೆ. ಬ್ರೆಂಟ್ ಕಚ್ಚಾ ತೈಲ ದರವು ಶೇ 3ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರಲ್ ಬೆಲೆ 109.23 ಡಾಲರ್‌ಗೆ ತಲುಪಿದೆ.

## ಸಂಭ್ರಮ

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ನಡೆದ ‘ಜ್ಞಾನೋತ್ಸವ’ ತಾಂತ್ರಿಕ–ಸಾಂಸ್ಕೃತಿಕ ಉತ್ಸವದಲ್ಲಿ ಚಿತ್ತಾಕರ್ಷಕ ಬಣ್ಣ ಬಳಿದ ಹಳೆಯ ಬಸ್‌ನಲ್ಲಿ ಯುವತಿಯರು ಸಂಭ್ರಮಿಸಿದ್ದು ಹೀಗೆ

### ಅರ್ಜಿ ವಜಾ • ತ್ವರಿತ ವಿಚಾರಣೆಗೆ ‘ಸುಪ್ರೀಂ’ ನಿರ್ದೇಶನ

# ನಟ ದರ್ಶನ್‌ಗೆ ಜಾಮೀನಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ನಟ ದರ್ಶನ್‌ಗೆ ಜಾಮೀನು ನಿರಾಕರಿಸಿರುವ ಸುಪ್ರೀಂ ಕೋರ್ಟ್, 60 ಪ್ರಮುಖ ಸಾಕ್ಷಿಗಳ ವಿಚಾರಣೆಯನ್ನು ಒಂದು ವರ್ಷದೊಳಗೆ ಮುಗಿಸಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ಶುಕ್ರವಾರ ನಿರ್ದೇಶನ ನೀಡಿದೆ.

ದರ್ಶನ್

ದರ್ಶನ್ ಸಲ್ಲಿಸಿದ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ವಿಜಯ್ ಬಿಷ್ಣೋಯ್ ಅವರ ಪೀಠವು, ವಿಚಾರಣಾ ನ್ಯಾಯಾಲಯ ದಿನನಿತ್ಯ ಸಾಕ್ಷಿಗಳ ವಿಚಾರಣೆ ನಡೆಸಿ ಒಂದು ವರ್ಷದೊಳಗೆ ವಿಚಾರಣೆ ಪೂರ್ಣಗೊಳಿಸಬೇಕು. ಬಳಿಕ ದರ್ಶನ್ ಅವರು ಮತ್ತೊಮ್ಮೆ ಜಾಮೀನಿಗಾಗಿ ಅರ್ಜಿ ಸಲ್ಲಿಸಬಹುದು ಎಂದು ಸೂಚನೆ ನೀಡಿದೆ. ದರ್ಶನ್ ಹಾಗೂ ಇತರ ಆರೋಪಿಗಳ ಜಾಮೀನನ್ನು ನ್ಯಾಯಪೀಠ 2025ರ ಆಗಸ್ಟ್ 14ರಂದು ರದ್ದುಗೊಳಿಸಿತ್ತು.

▶2B

### ನ್ಯಾಯಪೀಠದ ನಿರ್ದೇಶನವೇನು?

- ತ್ವರಿತವಾಗಿ ವಿಚಾರಣೆ ನಡೆಯಬೇಕು. ಇಲ್ಲದಿದ್ದಲ್ಲಿ, ಒಂದು ವರ್ಷದ ನಂತರ ಜಾಮೀನು ಅರ್ಜಿಯನ್ನು ಪರಿಗಣನೆ ಮಾಡಲಾಗುತ್ತದೆ
- ವಿಚಾರಣಾ ನ್ಯಾಯಾಲಯದ ವರದಿ ಪ್ರಕಾರ, 2025ರ ನವೆಂಬರ್ 3ರಂದು ದೋಷಾರೋಪಗಳನ್ನು ಪಟ್ಟಿ ಮಾಡಲಾಗಿದೆ. ಆದರೆ, ಕಳೆದ ಏಳು ತಿಂಗಳಲ್ಲಿ ಪ್ರಾಸಿಕ್ಯೂಷನ್ ಕೇವಲ 10 ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದು, ಇನ್ನೂ 60 ಪ್ರಮುಖ ಸಾಕ್ಷಿಗಳ ವಿಚಾರಣೆ ನಡೆಸಬೇಕಿದೆ. ದೋಷಾರೋಪ ಪಟ್ಟಿಯಲ್ಲಿ 272 ಸಾಕ್ಷಿಗಳ ಹೆಸರಿದೆ. ಇದರಲ್ಲಿ 150 ಸಾಕ್ಷಿಗಳ ವಿಚಾರಣೆ ನಡೆಸಲು ಪ್ರಾಸಿಕ್ಯೂಷನ್ ಒಲವು ತೋರಿದೆ. ವಿಚಾರಣೆ ತುಂಬಾ ನಿಧಾನವಾಗಿ ನಡೆಯುತ್ತಿದ್ದು, ಇದೇ ವೇಗದಲ್ಲಿ ವಿಚಾರಣೆ ನಡೆದಲ್ಲಿ ದೀರ್ಘ ಕಾಲ ತೆಗೆದುಕೊಳ್ಳಲಿದೆ. ಆದ್ದರಿಂದ ಅಧೀನ ನ್ಯಾಯಾಲಯ ಪ್ರತಿದಿನ ವಿಚಾರಣೆ ನಡೆಸಬೇಕು. ಅನಗತ್ಯ ಕಾರಣಗಳಿಗೆ ವಿಚಾರಣೆ ಮುಂದೂಡಬಾರದು. ವಿಚಾರಣೆ ತ್ವರಿತಗತಿಯಲ್ಲಿ ನಡೆಯಲು ಪ್ರತಿವಾದಿಗಳು ಸಹಕಾರ ನೀಡಬೇಕು
- ಜೈಲಿನ ಮಾರ್ಗಸೂಚಿ ಅನುಸಾರ ವಿಚಾರಣಾಧೀನ ಕೈದಿಗೆ ದೊರೆಯುವ ಎಲ್ಲ ಸೌಕರ್ಯಗಳನ್ನು ಆರೋಪಿಗೆ ಒದಗಿಸಬೇಕು. ಇದರಲ್ಲಿ ಏನಾದರೂ ಲೋಪವಿದ್ದಲ್ಲಿ, ಆರೋಪಿಯು ಮತ್ತೊಮ್ಮೆ ಅರ್ಜಿ ಸಲ್ಲಿಸಬಹುದು

**ಚಿನಕುರುಳಿ** ಪ್ರಕಾಶ್ ಶೆಟ್ಟಿ

# ಮೇ 26ಕ್ಕೆ ಕೇರಳಂಗೆ ಮುಂಗಾರು

ನವದೆಹಲಿ: ನೈರುತ್ಯ ಮುಂಗಾರು ಮಾರುತಗಳು ಮೇ 26ರಂದು ಕೇರಳಂ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ಮುನ್ಸೂಚನೆ ನೀಡಿದೆ.

ಕೇರಳಂಗೆ ವಾಡಿಕೆಯಂತೆ ಜೂನ್ 1ರಂದು ಮುಂಗಾರು ಪ್ರವೇಶಿಸುತ್ತದೆ. ಆದರೆ, ಈ ಬಾರಿ ವಾಡಿಕೆಗಿಂತ ನಾಲ್ಕು ದಿನ ಮುನ್ನ ಅಥವಾ ನಾಲ್ಕು ದಿನ ನಂತರ ಮುಂಗಾರು ಪ್ರವೇಶಿಸಬಹುದು ಎಂದು ಐಎಂಡಿ ಅಂದಾಜಿಸಿದೆ.

‘ಮುಂದಿನ 24 ಗಂಟೆಗಳಲ್ಲಿ ಬಂಗಾಳ ಕೊಲ್ಲಿಯ ದಕ್ಷಿಣ ಭಾಗ, ಅಂಡಮಾನ್ ಸಮುದ್ರ ಹಾಗೂ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಕೆಲವು ಭಾಗಗಳಲ್ಲಿ ಮುಂಗಾರು ಪ್ರವೇಶಿಸಲು ಅನುಕೂಲಕರ ಪರಿಸ್ಥಿತಿಯಿದೆ’ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮುಂಗಾರು ಉತ್ತರದ ಕಡೆಗೆ ಸಾಗುತ್ತಿದ್ದಂತೆ, ಈ ಪ್ರದೇಶಗಳಲ್ಲಿ ಬಿಸಿಲ ಝಳ ತಗ್ಗುತ್ತದೆ. ಕಳೆದ ವರ್ಷ ಮೇ 24ರಂದು ಮುಂಗಾರು ಪ್ರವೇಶಿಸಿತ್ತು ಎಂದು ಹವಾಮಾನ ಇಲಾಖೆ ಹೇಳಿದೆ.

### ವಾಡಿಕೆಗಿಂತ ಕಡಿಮೆ ಮಳೆ

ಭಾರತದಲ್ಲಿ ಈ ವರ್ಷ ಮುಂಗಾರು ಋತುವಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಬಹುದು. ದೇಶದಲ್ಲಿ 1971ರಿಂದ 2020ರವರೆಗೆ ಮುಂಗಾರು ಅವಧಿಯಲ್ಲಿ ಸರಾಸರಿ 87 ಸೆಂ.ಮೀ ಮಳೆಯಾಗುತ್ತಿತ್ತು. ಆದರೆ, ಈ ಬಾರಿ 80 ಸೆಂ.ಮೀ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಅಂದಾಜಿಸಿದೆ.

ಎಲ್ ನಿನೊ ಕಾರಣದಿಂದ ಈ ವರ್ಷ ದೇಶದಲ್ಲಿ ಕಡಿಮೆ ಮಳೆಯಾಗುವ ಸಂಭವವಿದೆ ಎಂದು ಐಎಂಡಿ ಹೇಳಿದೆ.

ದೇಶದಲ್ಲಿ ಬೀಳುವ ಒಟ್ಟು ಮಳೆಯ ಪ್ರಮಾಣದಲ್ಲಿ ಶೇ 70ರಷ್ಟು ಮುಂಗಾರಿನ ನಾಲ್ಕು ತಿಂಗಳಲ್ಲೇ ಬೀಳುತ್ತದೆ.

ದೇಶದ ಕೃಷಿ ಚಟುವಟಿಕೆಗಳು ಮುಂಗಾರು ಮಳೆಯನ್ನೇ ಹೆಚ್ಚು ಅವಲಂಬಿಸಿವೆ. ಕುಡಿಯುವ ನೀರು ಪೂರೈಕೆ ಮತ್ತು ದೇಶದ ಆರ್ಥಿಕತೆಯ ಮೇಲೆ ಮುಂಗಾರು ಮಳೆಯು ಗಾಢವಾದ ಪರಿಣಾಮವನ್ನು ಉಂಟುಮಾಡುತ್ತದೆ.

ಸಿಕೆಸಿ ಗ್ರೂಪ್
155 ವರ್ಷಗಳು

ನಿಮ್ಮ ಆಭರಣವು ಕೇವಲ ಚಿನ್ನವಲ್ಲ. ಅದು ನಿಮ್ಮ ಕುಟುಂಬದ ಶಾಶ್ವತ ಪರಂಪರೆಯ ವಾರಸತ್ವ.

ತಲೆಮಾರುಗಳಿಂದ ಬಂದಿರುವ ನಿಮ್ಮ ಅಮೂಲ್ಯ ಆಭರಣಗಳು ಕರಗುವ ಭಟ್ಟಿಯಲ್ಲಿ ಕಣ್ಮರೆಯಾಗದಿರಲಿ. ಅದರೊಳಗಿನ ಜೀವಂತ ಕಥೆಗಳನ್ನು ಕಾಪಾಡಿ, ಹೊಸ ರೂಪ ನೀಡೋಣ.

ಚಿನ್ನವೆಂದರೆ ಕೇವಲ ಹೂಡಿಕೆ ಅಲ್ಲ. ಅದು ನಿಮ್ಮ ಪೂರ್ವಜರ ಅಮೂಲ್ಯ ಸ್ಮೃತಿಗಳ ಪ್ರತೀಕ. ಅದು ನೆನಪುಗಳು, ಭಾವನೆಗಳು, ಸಂಪ್ರದಾಯಗಳು ಹಾಗೂ ಕುಟುಂಬದ ಗೌರವವನ್ನು ಹೊತ್ತಿರುತ್ತದೆ. ಆ ಅಮೂಲ್ಯ ನೆನಪುಗಳು ಎಂದಿಗೂ ಕಳೆದುಹೋಗದಿರಲಿ. 155ಕ್ಕೂ ಹೆಚ್ಚು ವರ್ಷಗಳಿಂದ, ಸಿ. ಕೃಷ್ಣಯ್ಯ ಚೆಟ್ಟಿ ವಿಶ್ವಾಸದ ಪರಂಪರೆಯಾಗಿ, ನಿಮ್ಮ ಪಾರಂಪರಿಕ ಆಭರಣಗಳು, ಹಳೆಯ ಚಿನ್ನ ಹಾಗೂ ಬಳಕೆಯಲ್ಲಿಲ್ಲದ ಆಭರಣಗಳಿಗೆ ಹೊಸ ಜೀವ ತುಂಬಿ, ಮುಂದಿನ ತಲೆಮಾರಿಗೆ ಶಾಶ್ವತ ಮರುವಿನ್ಯಾಸಗಳಾಗಿ ರೂಪಾಂತರಿಸುತ್ತಿದೆ.

ರೂಪಾಂತರಿಸಿ. ಮರು ವಿನ್ಯಾಸ. ಉನ್ನತಿಗೊಳಿಸಿ.

ಆದರೆ ಅದರ ಭಾವನಾತ್ಮಕ ಮೌಲ್ಯವನ್ನು ಎಂದಿಗೂ ಕಳೆದುಕೊಳ್ಳಬೇಡಿ. ನಾವು ನಿಮ್ಮ ಅಮೂಲ್ಯ ಆಭರಣಗಳನ್ನು ವಿವೇಚನೆಯಿಲ್ಲದೆ ಕರಗಿಸುವುದಿಲ್ಲ. ಆಯ್ದ ಆಭರಣಗಳನ್ನು ನಮ್ಮ ‘ಪ್ರೀ-ಲವ್ಡ್ ಕಲೆಕ್ಷನ್™’ ಮೂಲಕ ಮರುಮಾರಾಟಕ್ಕೆ ನೀಡಲಾಗುತ್ತದೆ. ನಮ್ಮ “ಓನ್ ಹಿಸ್ಟರಿ, ಅಕ್ವೈರ್ ಇಟರ್ನಿಟಿ” ಕಾರ್ಯಕ್ರಮದಡಿ, ಪ್ರತಿಯೊಂದು ಆಭರಣದ ಮೂಲ, ಕರಕುಶಲತೆ ಹಾಗೂ ಇತಿಹಾಸವನ್ನು ವಿವರಿಸುವ ಸಮಗ್ರ “ಪರಂಪರೆ ವರದಿ”ಯನ್ನೂ ಸಹ ನೀಡಲಾಗುತ್ತದೆ.

Own History® Since 1869 Acquire Eternity Pre Independence

ಸಿ. ಕೃಷ್ಣಯ್ಯ ಚೆಟ್ಟಿ ಯಲ್ಲಿ ಮಾತ್ರ. 1869ರಿಂದ ಅಪಾರ ವಿಶ್ವಾಸ.

ನಿಮ್ಮ ಹಳೆಯ ಆಭರಣಗಳನ್ನು ನವೀನ ಹಾಗೂ ಅಂದವಾದ ವಿನ್ಯಾಸಗಳಿಗೆ ವಿನಿಮಯ ಮಾಡಿಕೊಳ್ಳಿ (ನಿಮ್ಮ ಅಮೂಲ್ಯ ಪಾರಂಪರಿಕ ಆಭರಣಗಳನ್ನು ಹೊರತುಪಡಿಸಿ).

ಪಾರಂಪರಿಕ ಆಭರಣಗಳ ಭಾವನಾತ್ಮಕ ಮೌಲ್ಯವನ್ನು ಕಾಪಾಡಿಕೊಂಡೇ ಹೊಸ ವಿನ್ಯಾಸ ನೀಡಲಾಗುತ್ತದೆ.

ಕಡಿಮೆ ಚಿನ್ನ ಬಳಸಿ ಹೊಸದಾದ ಡೈಮಂಡ್ ಹಾಗೂ ರತ್ನಾಭರಣಗಳನ್ನು ರೂಪಿಸಲಾಗುತ್ತದೆ.

ಕುಟುಂಬ ವಾರಸತ್ವದ ಮದುವೆ ಆಭರಣಗಳಿಗೆ ವಿಶೇಷ ಕಸ್ಟಮ್ ಬ್ರೈಡಲ್ ಪರಿವರ್ತನೆ.

ಚಿನ್ನವನ್ನು ಎಲ್ಲಿಂದ ಖರೀದಿಸಿದ್ದರೂ ಸ್ವೀಕರಿಸಲಾಗುತ್ತದೆ.

ನಮ್ಮದೇ ವಿನ್ಯಾಸದ ಅಪರೂಪದ ಆಭರಣಗಳನ್ನು “ಕ್ರಿಸ್ಟಲ್ ಮ್ಯೂಸಿಯಂ”ನಲ್ಲಿ ಸಂರಕ್ಷಿಸಲಾಗಿದೆ.

ಸಿ. ಕೃಷ್ಣಯ್ಯ ಚೆಟ್ಟಿ™ ಗ್ರೂಪ್ ಆಫ್ ಜ್ಯುವೆಲರ್ಸ್

ಬೆಂಗಳೂರಿನಾದ್ಯಂತ ಭವ್ಯವಾದ ಮಳಿಗೆಗಳು ಮತ್ತು ಬೋಟಿಕ್‌ಗಳು: ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರೋಡ್ (ಕೆಂಪು ಬಣ್ಣದ ಮುಂಭಾಗ) • ಜಯನಗರ • ಮಲ್ಲೇಶ್ವರಂ
ಹೆಚ್ಚಿನ ಮಾಹಿತಿಗಾಗಿ ನಮ್ಮ ಮೀಸಲಿಟ್ಟ ಸಂಬಂಧಿತ ವ್ಯವಸ್ಥಾಪಕರಿಗೆ ಕರೆ ಮಾಡಿ: +91 95 1313 1869 • Tel: 080-4000 1869 / 4100 1869 • www.ckcjewellers.com

©ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ • ಗುರುತುಗಳು, ಲೋಗೋಗಳು, ಹೆಸರುಗಳು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ಅನಧಿಕೃತ ಬಳಕೆಯನ್ನು ನಿಷೇಧಿಸಲಾಗಿದೆ.
ಸಿಕೆಸಿ ಸಮೂಹದ ಅಧಿಕೃತ ಕಂಪನಿಗಳು: C. Krishniah Chetty & Sons™ | C. Krishniah Chetty Jewellers® | The 1869 Guild | C. Krishniah Chetty & Sons | C. Krishniah Chetty Charitable Trust | C. Krishniah Chetty Foundation

ಎಚ್ಚರಿಕೆ ಸೂಚನೆ - ಸಾರ್ವಜನಿಕ ಹಿತಾಸಕ್ತಿಗಾಗಿ ಪ್ರಕಟಣೆ: ನಮ್ಮ ಸಂಸ್ಥೆಯೊಂದಿಗೆ ಯಾವುದೇ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯು, ತನ್ನ ಹೆಸರನ್ನು ದೀಪಾಲಿ ಕಂ. ಪ್ರೈ. ಲಿ. (Deepali Co Pvt. Ltd.) ಇಂದ ನಮ್ಮ ಸಂಸ್ಥೆಯ ಹೆಸರಿನಂತೆಯೇ ಮೋಸಪೂರಿತವಾಗಿ (C. Krishniah Chetty & CØ — ಇಲ್ಲಿ “Co” ಬದಲಾಗಿ “CØ (Zero)” ಬಳಸಿ ROC ಪೋರ್ಟಲ್‌ಗಳನ್ನು ತಪ್ಪು ದಾರಿಗೆಳೆಯುವ ಉದ್ದೇಶದಿಂದ) ಬದಲಾಯಿಸಿಕೊಂಡಿದೆ. ಈ ಸಂಸ್ಥೆಯನ್ನು ನಮ್ಮ ಕಂಪನಿಯ ಪ್ರಸ್ತುತ ನಿರ್ದೇಶಕರಾದ ಶ್ರೀ ಸಿ. ಗಣೇಶ್ ನಾರಾಯಣ್ ಹಾಗೂ ಅವರ ಪತ್ನಿಯವರು ಪ್ರಾರಂಭಿಸಿದ್ದಾರೆ. ಈ ನೂತನ ಅನಧಿಕೃತ ಮಳಿಗೆಯನ್ನು ಟಚ್ ಸ್ಟೋನ್ ಕಟ್ಟಡದ ಎಡಭಾಗದಲ್ಲಿ (ನಮ್ಮ ಫ್ಲಾಗ್‌ಶಿಪ್ ಶೋರೂಮ್ ಪಕ್ಕದಲ್ಲಿ) ತೆರೆಯಲಾಗಿದೆ. ನಮ್ಮ ಎಲ್ಲಾ ಗ್ರಾಹಕರಿಗೆ ಹಾಗೂ ಸಾರ್ವಜನಿಕರಿಗೆ ನಾವು ಎಚ್ಚರಿಕೆ ನೀಡುವುದೇನೆಂದರೆ, ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಮಳಿಗೆಯಿದೆ ಎಂದು ಭಾವಿಸಬಾರದು; ಅಂಥದ್ದು ಇಲ್ಲ. ಅವರಿಗೆ ಸಿ. ಕೃಷ್ಣಯ್ಯ ಚೆಟ್ಟಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೋ ಬಳಸಲು ಯಾವುದೇ ಅಧಿಕೃತ ಅನುಮತಿ ಇಲ್ಲ. ಈ ಸಂಬಂಧಿತ ವಿಚಾರಗಳು ನ್ಯಾಯಾಲಯಗಳಲ್ಲಿ ತುರ್ತು ಆದ್ಯತೆಯಡಿ ವಿಚಾರಣೆಯಲ್ಲಿವೆ.
ಗಮನಿಸಿ: ಅವರ ವ್ಯಾಪಾರವನ್ನು ಕಾನೂನುಬದ್ಧವಾಗಿ ಮುಚ್ಚುವ ಪರಿಸ್ಥಿತಿ ಉಂಟಾದಲ್ಲಿ, ಅವರು 15.03.2023ರಿಂದ (ಅವರ ಸಂಘರ್ಷಕಾರಿ ವ್ಯವಹಾರ ಆರಂಭವಾದ ದಿನಾಂಕದಿಂದ) ಮಾರಾಟ ಮಾಡಿದ ಉತ್ಪನ್ನಗಳನ್ನು ನಮ್ಮ ಸಿಕೆಸಿ ನೀತಿಗಳ ಪ್ರಕಾರ ಮರುಖರೀದಿ / ವಿನಿಮಯಕ್ಕಾಗಿ ಪರಿಗಣಿಸಲಾಗುವುದಿಲ್ಲ.

**ಹವಾಮಾನ ಮುನ್ಸೂಚನೆ:** ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆ ಆಗಲಿದೆ.

# 19ಕ್ಕೆ ಕಪ್ಪು ಬಾವುಟ ಪ್ರದರ್ಶನ, 20ರಿಂದ ಮುಷ್ಕರ

## ಶೇ 25ರಷ್ಟು ವೇತನ ಹೆಚ್ಚಳಕ್ಕೆ ನಾಲ್ಕು ಸಾರಿಗೆ ನಿಗಮಗಳ ನೌಕರರ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆಎಸ್‌ಆರ್‌ಟಿಸಿ ಸೇರಿದಂತೆ ನಾಲ್ಕು ನಿಗಮಗಳ ನೌಕರರಿಗೆ ರಾಜ್ಯ ಸರ್ಕಾರ ಅನ್ಯಾಯ ಎಸಗಿದ್ದು, ಇದನ್ನು ಖಂಡಿಸಿ ಮೇ 19ರಂದು ತುಮಕೂರಿನಲ್ಲಿ ನಡೆಯುವ ಸರ್ಕಾರದ ಸಾಧನಾ ಸಮಾವೇಶದ ಸಂದರ್ಭದಲ್ಲಿ ಮುಖ್ಯಮಂತ್ರಿಯವರಿಗೆ ಕಪ್ಪು ಬಾವುಟ ಪ್ರದರ್ಶಿಸಲಾಗುವುದು ಎಂದು ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಹೇಳಿದೆ.

ಜಂಟಿ ಕ್ರಿಯಾ ಸಮಿತಿಯು ಶುಕ್ರವಾರ ಆಯೋಜಿಸಿದ್ದ ನಾಲ್ಕು ಸಾರಿಗೆ ನಿಗಮಗಳ ನೌಕರರ ಮುಷ್ಕರ ಸಿದ್ಧತಾ ಸಮಾವೇಶದಲ್ಲಿ ಮಾತನಾಡಿದ ಬಿ. ಜಯದೇವರಾಜೇ ಅರಸ್ ಮತ್ತು ಡಿ.ಎ. ವಿಜಯ ಭಾಸ್ಕರ ಅವರು, ಮೇ 20ರಿಂದ ಮುಷ್ಕರ ನಡೆಸಲಾಗುವುದು ಎಂದು ತಿಳಿಸಿದರು.

'ನಾವು ಮುಷ್ಕರಕ್ಕೆ ಕರೆ ನೀಡಿರುವುದರಿಂದ ಸರ್ಕಾರ ಸಾಧನಾ ಸಮಾವೇಶವನ್ನು ಮೇ 20ರ ಬದಲು ಮೇ 19ರಂದು ನಡೆಸಲು ನಿರ್ಧರಿಸಿದೆ. ನಾವು ಮುಷ್ಕರದ ದಿನಾಂಕ ಬದಲಿಸುವುದಿಲ್ಲ. ನಿಮ್ಮ ಸಾಧನೆ ನಮ್ಮ ನೌಕರರಿಗೆ ಕಣ್ಣೀರು ತರಿಸಿದೆ. ಅದಕ್ಕಾಗಿ ಕಪ್ಪು ಬಾವುಟ ಪ್ರದರ್ಶಿಸುತ್ತೇವೆ' ಎಂದರು.

'ನೌಕರರು ಮುಷ್ಕರದ ದಿನ ಕರ್ತವ್ಯಕ್ಕೆ ಹಾಜರಾಗದೇ ಮನೆಯಲ್ಲಿದ್ದರೆ ಮುಷ್ಕರ ಯಶಸ್ವಿಯಾಗಲಿದೆ' ಎಂದರು.

'ಮೂಲ ವೇತನವನ್ನು ಶೇ 25ರಷ್ಟು ಹೆಚ್ಚಿಸಬೇಕು ಎಂಬುದು ನಮ್ಮ ಬೇಡಿಕೆ ಆಗಿತ್ತು. ಆದರೆ, ಏಕಾಏಕಿ ಶೇ 12.5ರಷ್ಟು ಹೆಚ್ಚಳ ಮಾಡಿ, ಇದು ಅಂತಿಮ ಎಂದು ಹೇಳಿರುವುದಕ್ಕೆ ನಮ್ಮ ಒಪ್ಪಿಗೆ ಇಲ್ಲ. 2024ರ ಜನವರಿ 1ರಿಂದ ಅನ್ವಯವಾಗಬೇಕು ಎಂದು ಹೇಳಿದ್ದರೂ 2025 ರಿಂದ ಅನ್ವಯವಾಗುವಂತೆ ಏರಿಕೆ ಮಾಡಿರುವುದನ್ನು ಒಪ್ಪಲು ಸಾಧ್ಯವಿಲ್ಲ ಎಂದರು.

ಜಂಟಿ ಕ್ರಿಯಾ ಸಮಿತಿಯ ಮುಖಂಡರಾದ ವೆಂಕಟರವಣಪ್ಪ, ಮೋಹನ್ ರಾಜ್, ಗಂಡಸಿ ಸದಾನಂದಸ್ವಾಮಿ ಭಾಗವಹಿಸಿದ್ದರು.

ಸಾರಿಗೆ ನಿಗಮಗಳ ನೌಕರರ ಮುಷ್ಕರ ಸಿದ್ಧತಾ ಸಮಾವೇಶದಲ್ಲಿ ಜಯದೇವರಾಜೇ ಅರಸ್, ವಿಜಯ ಭಾಸ್ಕರ್, ಜ್ಯೋತಿ ಅನಂತಸುಬ್ಬರಾವ್, ಎಚ್.ಎಸ್. ಮಂಜುನಾಥ್, ಎಚ್.ಡಿ.ರೇವಪ್ಪ, ಜಗದೀಶ್ ಎಚ್.ಆರ್. ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

# 'ಸಿಇಟಿ ಕೌನ್ಸೆಲಿಂಗ್ ಶೀಘ್ರ ತೀರ್ಮಾನ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನೀಟ್ ಫಲಿತಾಂಶಕ್ಕೆ ಕಾಯದೆ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಕೌನ್ಸಿಲಿಂಗ್ ಆರಂಭಿಸುವ ಕುರಿತು ವೈದ್ಯಕೀಯ ಶಿಕ್ಷಣ ಸಚಿವರ ಜತೆ ಚರ್ಚಿಸಿ, ತೀರ್ಮಾನಿಸಲಾಗುವುದು' ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕೆಲ ವರ್ಷಗಳಿಂದ ನೀಟ್ ಮತ್ತು ಸಿಇಟಿ ಕೌನ್ಸಿಲಿಂಗ್ ಒಟ್ಟಿಗೆ ಮಾಡುತ್ತ ಬಂದಿದ್ದೇವೆ. ಪ್ರತಿಭಾವಂತರಿಗೆ ಅವಕಾಶ ಸಿಗುತ್ತಿತ್ತು. ಆದರೆ, ನೀಟ್ ಮರು ಪರೀಕ್ಷೆಯಿಂದ ವಿಳಂಬವಾಗುತ್ತಿದೆ. ಸಿಇಟಿ ಬರೆದ ವಿದ್ಯಾರ್ಥಿಗಳಿಗೆ ವಿಳಂಬವಾಗದಂತೆ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಮುಂದಿನ ವರ್ಷದಿಂದ ಆನ್‌ಲೈನ್ ಮೂಲಕ ನೀಟ್ ನಡೆಸುವ ಕೇಂದ್ರದ ಚಿಂತನೆ ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತದೆ ಎಂದು ನೋಡಬೇಕು. ಗ್ರಾಮೀಣ ಭಾಗದ ಮಕ್ಕಳ ಪರಿಸ್ಥಿತಿ ಕುರಿತೂ ಚಿಂತನೆ ಮಾಡಬೇಕಿದೆ. ಕೇಂದ್ರ ಸರ್ಕಾರ ವಸ್ತುಸ್ಥಿತಿ ಅರ್ಥ ಮಾಡಿಕೊಳ್ಳದೆ ಹೇಳಿಕೆ ನೀಡುತ್ತಿದೆ. ಆನ್‌ಲೈನ್ ಪರೀಕ್ಷೆಗೆ ಸಾಕಷ್ಟು ತಯಾರಿ ಆಗಬೇಕು. ಅಣಕು ಪರೀಕ್ಷೆ ನಡೆಯಬೇಕು. ಈ ಪ್ರಕ್ರಿಯೆಗಳೂ ಸುಲಭವಲ್ಲ' ಎಂದು ಹೇಳಿದರು.

# '1,146 ರೋಬೊಟಿಕ್ ಶಸ್ತ್ರಚಿಕಿತ್ಸೆ ಯಶಸ್ವಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಿದ್ವಾಯಿ ಆಸ್ಪತ್ರೆಯಲ್ಲಿ 1,146 ರೋಬೊಟಿಕ್ ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಿದ್ದು, ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತವಾಗಿ ರೋಬೊಟಿಕ್ ಶಸ್ತ್ರಚಿಕಿತ್ಸೆ ನಡೆಸಲಾಗುವುದು ಎಂದು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ ಡಾ.ಟಿ. ನವೀನ್ ಹೇಳಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಶಸ್ತ್ರಚಿಕಿತ್ಸಾ ವಿಭಾಗದ ವತಿಯಿಂದ ಶುಕ್ರವಾರ ಇನ್ಫೊಸಿಸ್ ಸಭಾಂಗಣದಲ್ಲಿ ಆಯೋಜಿಸಿದ್ದ 'ಕಿದ್ವಾಯಿ ಶಸ್ತ್ರಚಿಕಿತ್ಸಾ ಗಂಥಿ ವಿಜ್ಞಾನ ಶೃಂಗ'ದಲ್ಲಿ ಅವರು ಮಾತನಾಡಿದರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿವೃತ್ತ ನಿರ್ದೇಶಕಿ ವಿಜಯಲಕ್ಷ್ಮೀ ದೇಶಮಾನೆ ಮಾತನಾಡಿ, 'ಶಸ್ತ್ರಚಿಕಿತ್ಸೆಯ ನೇರ ಪ್ರಾತ್ಯಕ್ಷಿಕೆಯಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕಲಿಕೆಯ ಜೊತೆಗೆ ಜ್ಞಾನವೃದ್ಧಿಯಾಗಲಿದೆ ಹಾಗೂ ವೈದ್ಯರಲ್ಲಿ ಪರಿಣತಿ, ಧೈರ್ಯ, ಚಿಕಿತ್ಸಾ ಕೌಶಲ ವೃದ್ಧಿಗೆ ಅನುಕೂಲಕರವಾಗಲಿದೆ' ಎಂದು ಅಭಿಪ್ರಾಯಪಟ್ಟರು.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಪ್ರಭಾಕರ್ ಮಾತನಾಡಿ, ಕಿದ್ವಾಯಿ ಆಸ್ಪತ್ರೆ ಹೊಸ ವೈದ್ಯಕೀಯ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಶಸ್ತ್ರಚಿಕಿತ್ಸೆ ಡನಡೆಸುತ್ತಿದೆ. ಆಧುನಿಕತೆಗೆ ಅನುಗುಣವಾಗಿ ಪ್ರಗತಿಯತ್ತ ಸಾಗುತ್ತಿದೆ' ಎಂದರು.

ಸಮಾವೇಶದಲ್ಲಿ ಶಸ್ತ್ರಚಿಕಿತ್ಸೆಯ ನೇರ ಪ್ರಾತ್ಯಕ್ಷಿಕೆ ನಡೆಯಿತು. ಶಸ್ತ್ರಚಿಕಿತ್ಸೆಯ ಆಧುನಿಕ ವ್ಯವಸ್ಥೆ, ಚಿಕಿತ್ಸಾ ಸವಾಲುಗಳ ಕುರಿತು ವಿಚಾರ ಸಂಕಿರಣ ನಡೆಯಿತು. 200ಕ್ಕೂ ಹೆಚ್ಚು ವೈದ್ಯರು ಭಾಗವಹಿಸಿದ್ದರು.

ವೈದ್ಯೆ ವಿಜಯಲಕ್ಷ್ಮಿ ದೇಶಮಾನೆ ಅವರನ್ನು ಅಭಿನಂದಿಸಲಾಯಿತು. ಡಾ. ವಿಜಯ್ ರಾಜ್, ಡಾ. ಪ್ರಕಾಶ್, ಡಾ. ಶ್ರೀನಿವಾಸ್, ಡಾ. ಟಿ.ನವೀನ್, ಡಾ.ಆರತಿ, ಡಾ.ಶೋಭಾ, ಡಾ.ನಮ್ರತಾ, ಡಾ.ಅರುಣ್, ಡಾ.ಪವನ್, ಡಾ.ಹರೀಶ್, ಡಾ. ಮಂಜುನಾಥ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸೌಮ್ಯಾರೆಡ್ಡಿ, ರಘುನಾಥ್ ನಾಯ್ಡು ಅವರು ಪೌರ ಕಾರ್ಮಿಕರಿಗೆ ದಿನಸಿ ಕಿಟ್ ವಿತರಿಸಿದರು

# ಪೌರಕಾರ್ಮಿಕರಿಗೆ ದಿನಸಿ ಕಿಟ್ ವಿತರಣೆ

**ಬೆಂಗಳೂರು:** ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಜನ್ಮದಿನದ ಅಂಗವಾಗಿ ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಕಚೇರಿಯಲ್ಲಿ ಪೌರ ಕಾರ್ಮಿಕರಿಗೆ ಬಟ್ಟೆ- ದಿನಸಿ ಕಿಟ್‌ಗಳನ್ನು ಶುಕ್ರವಾರ ವಿತರಿಸಲಾಯಿತು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾರೆಡ್ಡಿ ಅವರು ಕೇಕ್ ಕತ್ತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

'ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ತಾರತಮ್ಯವಿಲ್ಲದೆ ಎಲ್ಲ ವರ್ಗದವರನ್ನು ಸಮಾನವಾಗಿ ನಡೆಸಿಕೊಂಡು ಎಲ್ಲರನ್ನೂ ಪ್ರೀತಿಸುವ ಡಿ.ಕೆ.ಶಿವಕುಮಾರ್ ಅವರು, ಹಲವಾರು ಯೋಜನೆಗಳನ್ನು ಜಾರಿಗೊಳಿಸಿ ಪಕ್ಷವನ್ನು ಮುನ್ನಡೆಸುತ್ತ ಶ್ರಮಿಸುತ್ತಿದ್ದಾರೆ' ಎಂದರು.

ಕಾಂಗ್ರೆಸ್ ಮುಖಂಡ ವಿ. ರಘುನಾಥ್ ನಾಯ್ಡು ಮಾತನಾಡಿ, 'ಯಾವುದೇ ಒಬ್ಬ ವ್ಯಕ್ತಿ ನಾಯಕನಾಗುವುದರ ಹಿಂದೆ, ಪರಿಶ್ರಮ, ನೋವು-ನಲಿವು, ಕಷ್ಟ-ಸುಖ, ಟೀಕೆ-ಹೊಗಳಿಕೆ ಸೇರಿದಂತೆ ಎಲ್ಲವನ್ನೂ ಸಮಾನವಾಗಿ ಸ್ವೀಕರಿಸಬೇಕಾಗುತ್ತದೆ. ಡಿ.ಕೆ. ಶಿವಕುಮಾರ್ ಇದಕ್ಕೆ ಉದಾಹರಣೆಯಾಗಿ, ರಾಷ್ಟ್ರ ಮಟ್ಟದ ನಾಯಕರಾಗಿದ್ದಾರೆ' ಎಂದರು.

ಮಾಜಿ ಸಂಸದ ಶಿವರಾಮೇಗೌಡ, ಬಿಎಂಟಿಸಿ ಅಧ್ಯಕ್ಷ ಬಿ.ಎಸ್. ಆರಾಧ್ಯ, ಕಾಂಗ್ರೆಸ್ ಮುಖಂಡರಾದ ಮುತ್ತುರಾಜ್, ಸವಿತಾ, ಕೆ.ಮಹದೇವ್ ಭಾಗವಹಿಸಿದ್ದರು.

# ಮೆಸ್ಕಾಂ ಎಇಇ ಲೋಕಾಯುಕ್ತ ಬಲೆಗೆ

**ಕಡೂರು (ಚಿಕ್ಕಮಗಳೂರು):** ತಂಗಲಿ ಸಮೀಪ ಅಭಿವೃದ್ಧಿಪಡಿಸುತ್ತಿರುವ ನೂತನ ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹5 ಸಾವಿರ ಲಂಚ ಪಡೆಯುತ್ತಿದ್ದ ಮೆಸ್ಕಾಂನ ಕಡೂರು ವಲಯದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ತಿರುಪತಿ ನಾಯ್ಕ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಶಿರಾ ಮೂಲದ ಗುತ್ತಿಗೆದಾರ ಲೋಕೇಶ್ ಅವರಿಂದ ಕಚೇರಿಯಲ್ಲಿ ಲಂಚ ಪಡೆಯುವಾಗ ತಿರುಪತಿ ನಾಯ್ಕ ಅವರನ್ನು ವಶಕ್ಕೆ ಪಡೆಯಲಾಗಿದೆ. ಇವರು ₹10 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂಬ ದೂರು ದಾಖಲಾಗಿತ್ತು. ವಿಚಾರಣೆ ಬಳಿಕ ಕೋರ್ಟ್‌ಗೆ ಹಾಜರು ಪಡಿಸಲಾಗುವುದು ಎಂದು ಲೋಕಾಯುಕ್ತ ಡಿವೈಎಸ್‌ಪಿ ತಿರುಮಲೇಶ್ ಮತ್ತು ಇನ್‌ಸ್ಪೆಕ್ಟರ್ ಬಿ. ಮಲ್ಲಿಕಾರ್ಜುನ್ ತಿಳಿಸಿದರು.

ಕಡತಕ್ಕೆ ಸಹಿ ಹಾಕಲು ತಿರುಪತಿ ನಾಯ್ಕ ಕೆಲ ದಿನಗಳ ಹಿಂದೆ ಫೋನ್ ಪೇ ಮೂಲಕ ₹5 ಸಾವಿರ ಹಾಕಿಸಿಕೊಂಡಿದ್ದರು.

nandhana PARTY HALL

ನಂದನ® ಪಾರ್ಟಿ ಹಾಲ್

ನಿಮ್ಮ ಸಮಾರಂಭವನ್ನು ವಿಶೇಷಗೊಳಿಸಿ

• ಹುಟ್ಟುಹಬ್ಬ • ನಿಶ್ಚಿತಾರ್ಥಗಳು • ನಾಮಕರಣ
• ಸಂತೋಷಕೂಟ • ಬೀಗರ ಔತಣ • ಆರತಕ್ಷತೆ

ಮೀಸಲಾತಿಗಾಗಿ ಕೂಡಲೇ ಕರೆ ಮಾಡಿ:
+91 99019 85642, 080 4613 1111

ನಮ್ಮ ಶಾಖೆಗಳು: ರಾಜಾಜಿನಗರ | ಕೋರಮಂಗಲ | ಕಮ್ಮನಹಳ್ಳಿ | ನ್ಯೂ ಬೆಲ್ ರೋಡ್ಸ್
ರಾಜರಾಜೇಶ್ವರಿ ನಗರ | ಸಹಕಾರ ನಗರ | ಕನಕಪುರ ರಸ್ತೆ | ಬೊಮ್ಮಸಂದ್ರ | ನಾಗರಭಾವಿ

www.nandhanarestaurants.com | banquets@nandhanahotels.com

## ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ವಿಭಾಗ, ಎಡಿಯೂರು – 572 142.
ದೂ. : 73385 90199, ಇ–ಮೇಲ್ : eeyediyur1@gmail.com

ಟೆಂಡರ್ ಪ್ರಕಟಣೆ ಸಂಖ್ಯೆ : 03/2026–27 ದಿನಾಂಕ : 13–05–2026

### ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು / ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 16 ಕಾಮಗಾರಿಗಾಗಿ Quality Cost Based Selection (QCBS) ಟೆಂಡರ್‌ನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.

ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 24.40 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ. 2.32 ಲಕ್ಷ ರೂಪಾಯಿಗಳು.

ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 12 ತಿಂಗಳು ಇ.ಎಂ.ಡಿ. ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್ / ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ : 15–05–2026 ರ ಮಧ್ಯಾಹ್ನ 4.00 ಗಂಟೆಯವರೆಗೆ, ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ. ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ : 20–05–2026 ರ ಮಧ್ಯಾಹ್ನ 4.00 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 21–05–2026 ರ ಮಧ್ಯಾಹ್ನ 4.00 ಗಂಟೆಗೆ ಹಾಗೂ ಇಂಡೆಂಟ್ ಸಂಖ್ಯೆ : SE0749, SE0764, SE0760, SE0740, SE0902, SE0901, SE0761, SE0857, SE0856 & SE0858 ಗಳಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿ. ಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ : 21–05–2026 ರ ಮಧ್ಯಾಹ್ನ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 22–05–2026 ರ ಮಧ್ಯಾಹ್ನ 4.00 ಗಂಟೆಗೆ.

ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ : www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ,
ಕಾ.ನೀ.ನಿ.ನಿ., ಎಡೆಯೂರು.

ಡಿಐಪಿಆರ್/ತುಮಕೂರು/07/ಮಣಿಪಾಲ್/2026–27

## ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/12/2026–27 ದಿನಾಂಕ: 14–05–2026

### ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ, ಬಿಲ್ಲಿನಕೋಟೆ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವಸತಿ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **"ವಸತಿ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

| ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು | ತಾಲ್ಲೂಕು / ಹೋಬಳಿ / ಗ್ರಾಮ | ಸ.ನಂ. | ವಿಸ್ತೀರ್ಣ (ಎ–ಗು) | ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ | ಬದಲಾವಣೆ ಕೋರಿರುವ ಭೂ ಉಪಯೋಗ |
|---|---|---|---|---|---|
| ಶ್ರೀಮತಿ ಕೆ. ಪದ್ಮ ರಮೇಶ್ ಕೋಂ ಕೆ. ರಮೇಶ್ | ನೆಲಮಂಗಲ / ಸೋಂಪುರ / ಬಿಲ್ಲಿನಕೋಟೆ | 92/26 | 00-17 ಪೈಕಿ 00-12 | ವಸತಿ | ವಾಣಿಜ್ಯ |

**ಷರಾ:–** ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಾಣಿಜ್ಯ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವಸತಿ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/693/ಅಡ್ವರ್ಟೋರ್/2026–27

## ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

CIN: L85110KA1993PLC013869
ನೋಂದಾಯಿತ ಕಚೇರಿ: ನಂ.44, ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂಟೌನ್, ಬೆಂಗಳೂರು 560 064. ದೂರವಾಣಿ: +91-80-41436000 ಫ್ಯಾಕ್ಸ್: +91-80-41436005
ಇ-ಮೇಲ್: investors@centumelectronics.com ವೆಬ್‌ಸೈಟ್: www.centumelectronics.com

**31ನೇ ಮಾರ್ಚ್ 2026ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪರಿಶೋಧಿತ ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ**

(ರೂ. ಮಿಲಿಯನ್ಸ್ ಗಳಲ್ಲಿ)

| ಕ್ರ. ಸಂ. | ವಿವರಗಳು | ತ್ರೈಮಾಸಿಕಕ್ಕೆ ಕೊನೆಗೊಂಡ | | | ವರ್ಷಕ್ಕೆ ಕೊನೆಗೊಂಡ | |
|---|---|---|---|---|---|---|
| | | 31-03-2026 ಪರಿಶೋಧಿತ (ಟಿಪ್ಪಣಿ 5 ನೋಡಿ) | 31-12-2025 (ಅಪರಿಶೋಧಿತ) | 31-03-2025 ಪರಿಶೋಧಿತ (ಟಿಪ್ಪಣಿ 5 ನೋಡಿ) | 31-03-2026 (ಪರಿಶೋಧಿತ) | 31-03-2025 (ಪರಿಶೋಧಿತ) |
| 1 | ನಿರ್ವಹಣೆಯಿಂದ ಬಂದ ಒಟ್ಟು ವರಮಾನ | 3,478.91 | 2,397.77 | 2,707.61 | 9,685.65 | 7,468.53 |
| 2 | ನಿವ್ವಳ ಲಾಭ / (ನಷ್ಟ) ತೆರಿಗೆಯ ಮುಂಚಿನ ಅವಧಿಗೆ (ಮುಂದುವರಿದ ಕಾರ್ಯಾಚರಣೆಗಳಿಂದ) | 462.09 | 254.77 | 384.64 | 1,148.42 | 664.95 |
| 3 | ನಿವ್ವಳ ಲಾಭ / (ನಷ್ಟ) ತೆರಿಗೆಯ ನಂತರದ ಅವಧಿಗೆ (ಮುಂದುವರಿದ ಕಾರ್ಯಾಚರಣೆಗಳಿಂದ) | 349.97 | 328.77 | 301.58 | 1,007.11 | 504.22 |
| 4 | ನಿವ್ವಳ ಲಾಭ / (ನಷ್ಟ) ತೆರಿಗೆಯ ನಂತರದ ಅವಧಿಗೆ (ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ) | (333.57) | (949.27) | (86.33) | (1,525.17) | (523.49) |
| 5 | ನಿವ್ವಳ ಲಾಭ / (ನಷ್ಟ) ತೆರಿಗೆಯ ನಂತರದ ಅವಧಿಗೆ (ಮುಂದುವರಿದ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ) | 16.40 | (620.50) | 215.25 | (518.06) | (19.27) |
| 6 | ಸಂಪೂರ್ಣ ಸಮಗ್ರ ಅವಧಿಯ ಆದಾಯ [ಒಳಗೊಂಡಿರುವ ಲಾಭ / (ನಷ್ಟ) (ತೆರಿಗೆಯ ನಂತರ) ಅವಧಿಗೆ ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ)] | (28.03) | (627.57) | 204.07 | (586.86) | (10.10) |
| 7 | ಈಕ್ವಿಟಿ ಷೇರು ಬಂಡವಾಳ (ಮುಖ ಬೆಲೆ ರೂ.10 ಪ್ರತಿ ಷೇರಿಗೆ) | 147.41 | 147.36 | 147.07 | 147.41 | 147.07 |
| 8 | ಮೀಸಲು (ಪುನರುಜ್ಜೀವನ ಮೀಸಲು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿರುವಂತೆ | | | | 3,284.69 | 3,905.16 |
| 9 | ಪ್ರತಿ ಷೇರಿನ ಗಳಿಕೆ (ಪ್ರತಿ ರೂ. 10 ಕ್ಕೆ) (ಮುಂದುವರಿದ ಮತ್ತು ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ) | | | | | |
| | ಎ) ಮೂಲಭೂತ: | 3.35 | (41.76) | 16.92 | (31.62) | 1.89 |
| | ಬಿ) ಡೈಲ್ಯೂಟೆಡ್: | 3.35 | (41.76) | 16.78 | (31.62) | 1.88 |

**ಸೂಚನೆ :**

1. 31ನೇ ಮಾರ್ಚ್ 2026ರ ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಪ್ರತ್ಯೇಕವಾದ ಪರಿಶೋಧಿತ ಹಣಕಾಸಿನ ಫಲಿತಾಂಶಗಳ ಸಂಕ್ಷಿಪ್ತ ರೂಪ

(ರೂ. ಮಿಲಿಯನ್ಸ್ ಗಳಲ್ಲಿ)

| ವಿವರಗಳು | ತ್ರೈಮಾಸಿಕಕ್ಕೆ ಕೊನೆಗೊಂಡ | | | ವರ್ಷಕ್ಕೆ ಕೊನೆಗೊಂಡ | |
|---|---|---|---|---|---|
| | 31-03-2026 ಪರಿಶೋಧಿತ (ಟಿಪ್ಪಣಿ 5 ನೋಡಿ) | 31-12-2025 (ಅಪರಿಶೋಧಿತ) | 31-03-2025 ಪರಿಶೋಧಿತ (ಟಿಪ್ಪಣಿ 5 ನೋಡಿ) | 31-03-2026 (ಪರಿಶೋಧಿತ) | 31-03-2025 (ಪರಿಶೋಧಿತ) |
| ನಿರ್ವಹಣೆಯಿಂದ ಬಂದ ಒಟ್ಟು ವರಮಾನ | 3,516.59 | 2,410.45 | 2,777.64 | 9,888.72 | 7,826.62 |
| ನಿವ್ವಳ ಲಾಭ / (ನಷ್ಟ) ಅವಧಿಗೆ (ತೆರಿಗೆಯ ಮುಂಚಿನ ಮತ್ತು ವಿನಾಯಿತಿ ಪಡೆದ ವಸ್ತುಗಳು) | 430.19 | 186.89 | 362.74 | 1,003.88 | 617.04 |
| ನಿವ್ವಳ ಲಾಭ / (ನಷ್ಟ) ತೆರಿಗೆಯ ಮುಂಚಿನ ಅವಧಿಗೆ (ವಿನಾಯಿತಿ ಪಡೆದ ವಸ್ತುಗಳ ನಂತರ) | 438.95 | (1,854.94) | 362.74 | (1,029.19) | 617.04 |
| ನಿವ್ವಳ ಲಾಭ / (ನಷ್ಟ) ತೆರಿಗೆಯ ನಂತರದ ಅವಧಿಗೆ | 326.83 | (1,780.94) | 279.67 | (1,170.50) | 456.31 |

2. ಈ ಮೇಲಿನ ಪರಿಶೋಧಿತ ಪ್ರತ್ಯೇಕವಾದ ಮತ್ತು ಒಟ್ಟುಗೂಡಿಸಿದ ಹಣಕಾಸಿನ ಫಲಿತಾಂಶಗಳನ್ನು ಕಂಪನಿಯ ಲೆಕ್ಕಪರಿಶೋಧಕ ಸಮಿತಿಯು 13ನೇ ಮೇ, 2026 ರಂದು ನಡೆದ ಸಭೆಯಲ್ಲಿ ಪರಿಶೀಲಿಸಿದ್ದು, ಅದನ್ನು ನಿರ್ದೇಶಕ ಮಂಡಳಿಯು 14ನೇ ಮೇ, 2026 ರಂದು ನಡೆದ ಸಭೆಯಲ್ಲಿ ಅನುಮೋದಿಸಿದೆ.
3. ಕಂಪನಿಯ ನಿರ್ದೇಶಕರ ಮಂಡಳಿಯು ಮೇ 14, 2026 ರಂದು ನಡೆದ ತಮ್ಮ ಸಭೆಯಲ್ಲಿ, ಮಾರ್ಚ್ 31, 2026 ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಪ್ರತಿ ಈಕ್ವಿಟಿ ಶೇರಿಗೆ ರೂ. 5 ರಂತೆ ಲಾಭಾಂಶವನ್ನು (ಡಿವಿಡೆಂಡ್) ಶಿಫಾರಸು ಮಾಡಿದೆ. ಇದು ಕಂಪನಿಯ ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಿರುತ್ತದೆ.
4. ಮೇಲಿರುವ 2015ರ ಸೆಬಿ (ಪಟ್ಟಿ ಕರಾರು ಮಾಡುವುದು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿಗಳ ನಿಯಮಾವಳಿ 33 ರಂತೆ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಾಖಲು ಮಾಡಲಾದ, ಸಮಗ್ರ ಹಣಕಾಸಿನ ಪರಿಶೋಧಿತ, ಪ್ರತ್ಯೇಕವಾದ ಫಲಿತಾಂಶಗಳ ಸಂಕ್ಷಿಪ್ತ ರೂಪವಾಗಿದೆ. ತ್ರೈಮಾಸಿಕ ಮತ್ತು ವಾರ್ಷಿಕ ಅವಧಿಗೆ ಕೊನೆಗೊಂಡ ಹಣಕಾಸಿನ ಫಲಿತಾಂಶಗಳ ಪೂರ್ಣರೂಪವು ಸ್ಟಾಕ್ ಎಕ್ಸ್‌ಚೇಂಜ್‌ನ ಜಾಲತಾಣದಲ್ಲಿ www.nseindia.com, www.bseindia.com ಮತ್ತು ನಮ್ಮ ಕಂಪನಿಯ ಜಾಲತಾಣದಲ್ಲಿ www.centumelectronics.com ಲಭ್ಯವಿದೆ.
5. ಪ್ರಸ್ತುತ ಮತ್ತು ಹಿಂದಿನ ವರ್ಷದ ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದ ಏಕೀಕೃತ ಇಂಡ್ ಎಎಸ್ ಹಣಕಾಸು ಫಲಿತಾಂಶಗಳ ಅಂಕಿಅಂಶಗಳು, ಪೂರ್ಣ ಹಣಕಾಸು ವರ್ಷಗಳ ಪರಿಶೋಧಿತ ಅಂಕಿಅಂಶಗಳು ಮತ್ತು ಆಯಾ ವರ್ಷಗಳ ಡಿಸೆಂಬರ್ 31ಕ್ಕೆ ಕೊನೆಗೊಂಡ ಒಂಬತ್ತು ತಿಂಗಳ ಅವಧಿಯ ಅನ್‌ಆಡಿಟೆಡ್ ಪ್ರಕಟಿತ ಅಂಕಿಅಂಶಗಳ ನಡುವಿನ ಸಮತೋಲನ ಮೊತ್ತಗಳಾಗಿವೆ. ಡಿಸೆಂಬರ್ 31 ಹಣಕಾಸು ವರ್ಷದ ಮೂರನೇ ತ್ರೈಮಾಸಿಕದ ಅಂತ್ಯದ ದಿನಾಂಕವಾಗಿದ್ದು, ಈ ಅವಧಿಯ ಅಂಕಿಅಂಶಗಳನ್ನು ಸೀಮಿತ ವಿಮರ್ಶೆಗೆ ಒಳಪಡಿಸಲಾಗಿರುತ್ತದೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರವಾಗಿ
ಸಹಿ/-
ನಿಖಿಲ್ ಮಲ್ಲವರಪು
ಜಂಟಿ ವ್ಯವಸ್ಥಾಪಕ ನಿರ್ದೇಶಕರು
DIN : 00288551

ಸ್ಥಳ : ಬೆಂಗಳೂರು
ದಿನಾಂಕ : ಮೇ 14, 2026

## ಬೆಂಗಳೂರು ಪೂರ್ವ ನಗರ ಪಾಲಿಕೆ

ಸಹಾಯಕ ನಿರ್ದೇಶಕರು (ಪಶುಪಾಲನೆ)ರವರ ಕಚೇರಿ, ಎಡಿ(ಎಹೆಚ್),
ನೆಲಮಹಡಿ, ಬೆಂಪೂನಪಾ ಉಪ–ವಿಭಾಗ ಕಚೇರಿ,
ಕೆ.ಆರ್. ಪುರಂ, ಬೆಂಗಳೂರು – 560036

ಸಂಖ್ಯೆ: ಬೆಂಪೂನಪಾ/2026–27/ಎಸ್‌ಇ0062 ದಿನಾಂಕ: 15–05–2026

**ಬೆಂಗಳೂರು ಪೂರ್ವ ನಗರ ಪಾಲಿಕೆಯ ಪಶುಸಂಗೋಪನಾ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಗಳನ್ನು ಒದಗಿಸುವ ಪ್ರಸ್ತಾವನೆಗಾಗಿ ವಿನಂತಿ– 2ನೇ ಕರೆ**

ಪ್ರಸ್ತಾವನೆ ವಿನಂತಿಯ (ಆರ್.ಎಫ್.ಪಿ) ವೇಳಾಪಟ್ಟಿ

| | | |
|---|---|---|
| 1. | ಆರ್‌ಎಫ್‌ಪಿ ಉಲ್ಲೇಖ ಸಂಖ್ಯೆ | ಬೆಂಪೂನಪಾ/2026–27/ಎಸ್‌ಇ0062 |
| 2. | ಕೆಪಿಪಿ ಪೋರ್ಟಲ್‌ನಿಂದ ಆರ್‌ಎಫ್‌ಪಿ ದಾಖಲೆಗಳನ್ನು ಡೌನ್‌ಲೋಡ್ ಮಾಡುವ ಆರಂಭದ ದಿನಾಂಕ http://kppp.karnataka.gov.in | 15–05–2026 ರಿಂದ |
| 3. | ಕೆಪಿಪಿ ಪೋರ್ಟಲ್‌ನಲ್ಲಿ ಆಕ್ಷೇಪಣೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ | 19–05–2026 ರ ಸಂಜೆ 5:00 ಗಂಟೆಯವರೆಗೆ |
| 4. | ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ | ದಿನಾಂಕ : 19–05–2026ರ ಮಧ್ಯಾಹ್ನ 2:30 ಗಂಟೆಗೆ ಈ ಕೆಳಗಿನ ಸ್ಥಳದಲ್ಲಿ ಎಡಿ(ಎಹೆಚ್), ನೆಲಮಹಡಿ, ಬೆಂಪೂನಪಾ ಉಪ–ವಿಭಾಗ ಕಚೇರಿ, ಕೆ.ಆರ್. ಪುರಂ, ಬೆಂಗಳೂರು – 560036 |
| 5. | ಆರ್‌ಎಫ್‌ಪಿ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ | 25–05–2026 ರ ಸಂಜೆ 5:00 ಗಂಟೆಯವರೆಗೆ |
| 6. | ಆರ್‌ಎಫ್‌ಪಿ ಅರ್ಜಿಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ತೆರೆಯುವ ದಿನಾಂಕ ಮತ್ತು ಸಮಯ | 26–05–2026 ರ ಸಂಜೆ 5:10 ಗಂಟೆಗೆ |
| 7. | ಆರ್‌ಎಫ್‌ಪಿ ದಾಖಲೆಗಳನ್ನು ತೆರೆಯುವ ಸ್ಥಳ | ಕೆಪಿಪಿ ಪೋರ್ಟಲ್‌ನಲ್ಲಿ |
| 8. | ಸಂವಹನದ ವಿಳಾಸ | ಎಡಿ(ಎಹೆಚ್), ನೆಲಮಹಡಿ, ಕೆ.ಆರ್. ಪುರಂ, ಬೆಂಪೂನಪಾ, ಉಪ–ವಿಭಾಗ ಕಚೇರಿ, ಕೆ.ಆರ್. ಪುರಂ, ಬೆಂಗಳೂರು–560036, ದೂರವಾಣಿ: 8296184712, Email: adahkrp01@gmail.com |

ಸಹಿ/– ಸಹಾಯಕ ನಿರ್ದೇಶಕರು,
(ಪಶುಪಾಲನೆ) ಜಿಬಿಎ, ಬೆಂಪೂನಪಾ

सत्यमेव जयते

## ಭಾರತ ಸರ್ಕಾರ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ವಿಶೇಷ ಚೇತನರ ಸಬಲೀಕರಣ ಇಲಾಖೆ,
5ನೇ ಮಹಡಿ, ಪಂಡಿತ್ ದೀನ್‌ದಯಾಳ್ ಅಂತ್ಯೋದಯ ಭವನ, ಸಿಜಿಓ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ

* * * * ** *

### 2026ನೇ ವಿಶೇಷಚೇತನರ ಸಬಲೀಕರಣಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಗಳಿಗೆ ಆನ್‌ಲೈನ್ ಅರ್ಜಿಗಳ ಆಹ್ವಾನ

ವಿಶೇಷಚೇತನ ರ ಸಬಲೀಕರಣಕ್ಕಾಗಿ 2026ನೇ ಸಾಲಿನ ರಾಷ್ಟ್ರೀಯ ಪ್ರಶಸ್ತಿಗಳ ಅರ್ಜಿಗಳು/ನಾಮನಿರ್ದೇಶನಗಳನ್ನು ಸ್ವೀಕರಿಸಲು ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ ದಿನಾಂಕ 15 ಮೇ, 2026 ರಿಂದ 31 ಜುಲೈ, 2026 ರವರೆಗೆ ತೆರೆದಿರುತ್ತದೆ. ಇದರ ವಿವರಗಳು ಈ ಕೆಳಗಿನಂತಿವೆ:

1. ಅರ್ಜಿಗಳು/ನಾಮನಿರ್ದೇಶನಗಳನ್ನು ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ [www.awards.gov.in] ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಬಹುದು.
2. 2026 ರ ರಾಷ್ಟ್ರೀಯ ಪ್ರಶಸ್ತಿಗಳಿಗಾಗಿ 31 ಜುಲೈ, 2026ರವರೆಗೆ ಸ್ವೀಕರಿಸಲಾಗುವ ಎಲ್ಲಾ ಅರ್ಜಿಗಳು/ ನಾಮನಿರ್ದೇಶನಗಳನ್ನು ಪರಿಗಣಿಸಲಾಗುವುದು.
3. 2026ನೇ ವರ್ಷದ ಅರ್ಜಿಗಳನ್ನು ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ [www.awards.gov.in] ಮೂಲಕ ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸಬೇಕಾಗಿರುತ್ತದೆ. ನಾಮನಿರ್ದೇಶನವು ಪೋರ್ಟಲ್‌ನಲ್ಲಿ ಲಭ್ಯವಿರುವ ನಮೂನೆಯಲ್ಲಿ ನಿರ್ದಿಷ್ಟಪಡಿಸಿದಂತೆ ಎಲ್ಲಾ ಸಂಬಂಧಿತ ವಿವರಗಳನ್ನು ಒಳಗೊಂಡಿರಬೇಕು ಮತ್ತು ಗಮನಾರ್ಹ ಹಾಗೂ ಸ್ಫೂರ್ತಿದಾಯಕ ಸಾಧನೆಗಳನ್ನು ನಿರೂಪಣಾ ರೂಪದಲ್ಲಿ ಸ್ಪಷ್ಟವಾಗಿ ಹೈಲೈಟ್ ಮಾಡಬೇಕು. ಸಾಧನೆಗಳಿಗೆ ಸಂಬಂಧಿಸಿದ ಪೋಷಕ ದಾಖಲೆಗಳನ್ನು ಸಹ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗುತ್ತದೆ. ಪುರಸ್ಕಾರದ ವಿಭಾಗಗಳಾದ 'ಸರ್ವಶ್ರೇಷ್ಠ ದಿವ್ಯಾಂಗಜನ' (ಅತ್ಯುತ್ತಮ ವಿಶೇಷಚೇತನ ವ್ಯಕ್ತಿ), 'ಶ್ರೇಷ್ಠ ದಿವ್ಯಾಂಗಜನ' (ಉತ್ತಮ ವಿಶೇಷಚೇತನ ವ್ಯಕ್ತಿ), ಮತ್ತು 'ಶ್ರೇಷ್ಠ ಸೃಜನಶೀಲ ದಿವ್ಯಾಂಗ ಬಾಲ/ಬಾಲಿಕಾ' (ಅತ್ಯುತ್ತಮ ಸೃಜನಶೀಲ ವಿಶೇಷಚೇತನ ಮಗು)ಗಳಿಗೆ ಯುಡಿಐಡಿ ಕಾರ್ಡ್/ವಿಕಲಾಂಗತೆಯ ಪ್ರಮಾಣಪತ್ರವನ್ನು ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿದೆ.
4. **ಭೌತಿಕ ರೂಪದಲ್ಲಿ ಅಥವಾ ಯಾವುದೇ ಇತರ ಮಾಧ್ಯಮದ ಮೂಲಕ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.**
5. ಅರ್ಹತಾ ಮಾನದಂಡಗಳು ಮತ್ತು ಇತರ ವಿವರಗಳಿಗಾಗಿ, ಇಲಾಖೆಯ ವೆಬ್‌ಸೈಟ್ (www.depwd.gov.in) ಹಾಗೂ ರಾಷ್ಟ್ರೀಯ ಪುರಸ್ಕಾರ ಪೋರ್ಟಲ್ (www.awards.gov.in) ನಲ್ಲಿ ಲಭ್ಯವಿರುವ 'ರಾಷ್ಟ್ರೀಯ ಪ್ರಶಸ್ತಿಗಳ ಮಾರ್ಗಸೂಚಿಗಳನ್ನು' ವೀಕ್ಷಿಸಬಹುದಾಗಿದೆ.

ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ
ದೂರವಾಣಿ: 011–24369057

cbc38117/11/0001/2627

**ಬಿಸಿಲ ಬೇಗೆ...**
ನೋಯ್ಡಾದಲ್ಲಿ ಬೇಸಿಗೆಯ ಝಳ ತಾಳಲಾರದೆ ಪೈಪ್‌ನಿಂದ ತನ್ನ ತಲೆಯ ಮೇಲೆ ನೀರು ಸುರಿದುಕೊಂಡ ಬಾಲಕ

# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

**ಪ್ರತಿಭಟನೆ**
ಶಾಲೆಗಳ ವಿಲೀನ ವಿರೋಧಿಸಿ ಎಐಡಿಎಸ್‌ಒ ಸದಸ್ಯರು ಮೈಸೂರಿನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು

# ನೀಟ್: ಜೂನ್ 21ಕ್ಕೆ ಮರು ಪರೀಕ್ಷೆ

## ಪರೀಕ್ಷಾ ಅವಧಿ 15 ನಿಮಿಷ ವಿಸ್ತರಣೆ
## 2027ರಿಂದ ಕಂಪ್ಯೂಟರ್ ಮೂಲಕ ಪರೀಕ್ಷೆ

**ನವದೆಹಲಿ (ಪಿಟಿಐ):** 'ನೀಟ್-ಯುಜಿ' ಮರು ಪರೀಕ್ಷೆಯನ್ನು ಜೂನ್ 21ರಂದು ನಡೆಸಲಾಗುವುದು ಎಂದು ಹೇಳಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಮುಂದಿನ ವರ್ಷದಿಂದ ವೈದ್ಯಕೀಯ ಪ್ರವೇಶಕ್ಕೆ 'ಕಂಪ್ಯೂಟರ್ ಮೂಲಕ ಪರೀಕ್ಷೆ' (ಸಿಬಿಟಿ) ನಡೆಸಲಾಗುವುದು ಎಂದು ಪ್ರಕಟಿಸಿದರು.

ಧರ್ಮೇಂದ್ರ ಪ್ರಧಾನ್

ಮೇ 3ರಂದು ನಡೆದಿದ್ದ 'ನೀಟ್-ಯುಜಿ' ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಕಾರಣ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ರದ್ದುಪಡಿಸಿತ್ತು. ಈ ಪರೀಕ್ಷಾ ಅಕ್ರಮಗಳ ಆರೋಪಗಳನ್ನು ಗಮನದಲ್ಲಿಟ್ಟುಕೊಂಡು ಪರೀಕ್ಷಾ ವ್ಯವಸ್ಥೆ ಸುಧಾರಣೆಗೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

**15 ನಿಮಿಷ ವಿಸ್ತರಣೆ:** ಮರು ಪರೀಕ್ಷೆಯ ಅವಧಿಯನ್ನು 15 ನಿಮಿಷಗಳವರೆಗೆ ವಿಸ್ತರಿಸಲಾಗುತ್ತದೆ. ಅಲ್ಲದೆ ಅಭ್ಯರ್ಥಿಗಳಿಗೆ ತಮ್ಮ ಆದ್ಯತೆಯ ಪರೀಕ್ಷಾ ನಗರಗಳನ್ನು ಆಯ್ಕೆ ಮಾಡಿಕೊಳ್ಳಲು ಮತ್ತೆ ಅವಕಾಶ ದೊರೆಯಲಿದ್ದು, ಜೂನ್ 14ರೊಳಗೆ ಪ್ರವೇಶ ಪತ್ರಗಳು ಲಭ್ಯವಾಗಲಿವೆ ಎಂದು ಅವರು ಹೇಳಿದರು.

ಸಾಮಾನ್ಯವಾಗಿ ಪರೀಕ್ಷೆಯು ಮಧ್ಯಾಹ್ನ 2ರಿಂದ 5 ಗಂಟೆಯವರೆಗೆ ನಿಗದಿಯಾಗಿರುತ್ತದೆ, ಅದರೆ ಈ ಮರು ಪರೀಕ್ಷೆಯು 5.15ರವರೆಗೆ ಮುಂದುವರಿಯಲಿದೆ. ನಗರಗಳ ಆಯ್ಕೆಗಾಗಿ ಅಭ್ಯರ್ಥಿಗಳಿಗೆ ಒಂದು ವಾರ ಸಮಯ ನೀಡಲಾಗುತ್ತದೆ ಎಂದು ಅವರು ವಿವರಿಸಿದರು. ▶9

### ಮುಖ್ಯಾಂಶಗಳು
- ಜೂನ್ 14ರೊಳಗೆ ಪ್ರವೇಶ ಪತ್ರ
- ಪರೀಕ್ಷಾ ನಗರಗಳ ಆಯ್ಕೆಗೆ ಮತ್ತೆ ಅವಕಾಶ
- ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ

## ಪ್ರಶ್ನೆಪತ್ರಿಕೆ ಸೋರಿಕೆ: ಪ್ರಾಧ್ಯಾಪಕನ ಬಂಧನ

**ನವದೆಹಲಿ/ಲಾತೂರ್ (ಪಿಟಿಐ):** ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಪ್ರಮುಖ ಸಂಚುಕೋರ ಎಂದು ಶಂಕಿಸಲಾಗಿರುವ ಪುಣೆಯ ನಿವೃತ್ತ ಪ್ರಾಧ್ಯಾಪಕರೊಬ್ಬರನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಮಹಾರಾಷ್ಟ್ರದ ಲಾತೂರ್ ಮೂಲದ, ರಸಾಯನ ವಿಜ್ಞಾನದ ಬೋಧಕ ಪಿ.ವಿ.ಕುಲಕರ್ಣಿ ಬಂಧಿತರು. ಪುಣೆಯ ನಿವಾಸ ದಿಂದ ಅವರನ್ನು ಬಂಧಿಸಲಾಗಿದೆ. ಲಾತೂರ್‌ನ ಪ್ರತಿಷ್ಠಿತ ಕಾಲೇಜೊಂದರಲ್ಲಿ ಪ್ರಾಧ್ಯಾಪಕರಾಗಿದ್ದ ಅವರು ನಾಲ್ಕು ವರ್ಷಗಳ ಹಿಂದೆ ನಿವೃತ್ತರಾಗಿದ್ದರು. ಆದರೆ, ವರ್ಷಗಳಿಂದ ನೀಟ್ ಪ್ರಶ್ನೆ ಪತ್ರಿಕೆ ಸಿದ್ಧಪಡಿಸುವ ಸಮಿತಿಯ ಭಾಗವಾಗಿದ್ದರು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ತಮ್ಮ ನಿವಾಸದಲ್ಲಿ ವಿಶೇಷ ಕೋಚಿಂಗ್ ತರಗತಿಗಳನ್ನು ನಡೆಸುತ್ತಿದ್ದ ಅವರು, 2026ರ ಏಪ್ರಿಲ್ ಕೊನೆಯ ವಾರದಲ್ಲಿ ಮತ್ತೊಬ್ಬ ಆರೋಪಿ, ಪುಣೆಯ ಮನೀಶಾ ವಾಘ್ಮರೆ (ಬ್ಯೂಟೀಷಿಯನ್) ಅವರ ಜತೆಗೂಡಿ ಕೆಲ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಿದ್ದರು. ಮನೀಶಾ ಅವರನ್ನು ಸಿಬಿಐ ಗುರುವಾರವಷ್ಟೇ ಬಂಧಿಸಿದೆ ಎಂದು ಅವರು ತಿಳಿಸಿದರು.

ಕುಲಕರ್ಣಿ ಅವರು, ಈ ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಪ್ರಶ್ನೆಗಳು, ಉತ್ತರದ ಆಯ್ಕೆಗಳು ಹಾಗೂ ಸರಿ ಉತ್ತರಗಳನ್ನು ತಿಳಿಸಿದ್ದರು. ▶9

### ಸಿಬಿಟಿಗೆ ಒತ್ತು: ಸಚಿವ

ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಮುಂದಿನ ಶೈಕ್ಷಣಿಕ ವರ್ಷದಿಂದ 'ಕಂಪ್ಯೂಟರ್ ಮೂಲಕ ಪರೀಕ್ಷೆ' (ಸಿಬಿಟಿ) ನಡೆಸಲಾಗುವುದು. ಸಿಬಿಟಿ ಪರೀಕ್ಷಾ ವಿಧಾನವು ಈಗಿನ ಒಎಂಆರ್ ವಿಧಾನಕ್ಕಿಂತ ತುಲನಾತ್ಮಕವಾಗಿ ಉತ್ತಮವಾಗಿದ್ದು, ಸುರಕ್ಷಿತವೂ ಆಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು.

'ಆದರೂ ಸೈಬರ್ ಅಪರಾಧ ದೊಡ್ಡದಾಗಿ ಬೆಳೆದಿದ್ದು, ಹಲವು ಸವಾಲುಗಳು ನಮ್ಮ ಮುಂದಿವೆ. ಅದರ ನಡುವೆಯೂ ನಾವು ನಮ್ಮ ದೇಶದ ವ್ಯವಸ್ಥೆಯನ್ನು ನಂಬಬೇಕಾಗುತ್ತದೆ' ಎಂದು ಎಂದು ಅವರು ತಿಳಿಸಿದರು.

### ಆರು ದಿನ ಸಿಬಿಐ ವಶಕ್ಕೆ

**ನವದೆಹಲಿ (ಪಿಟಿಐ):** ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಆರೋಪಿ ಧನಂಜಯ ನಿವೃತ್ತಿ ಲೋಖಂಡೆ ಅವರನ್ನು ಆರು ದಿನಗಳವರೆಗೆ ಸಿಬಿಐ ವಶಕ್ಕೆ ನೀಡಿ ದೆಹಲಿ ನ್ಯಾಯಾಲಯ ಆದೇಶಿಸಿದೆ.

ಪ್ರಶ್ನೆ ಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ನಡೆದಿರುವ ಪಿತೂರಿ ತಿಳಿದುಕೊಳ್ಳಲು ಹಾಗೂ ತನಿಖೆಗೆ ಪೂರಕವಾಗಿ ಕೆಲ ಸಾಕ್ಷ್ಯ ಸಂಗ್ರಹಿಸಲು ಆರೋಪಿಯ ವಿಚಾರಣೆ ಅಗತ್ಯವಿದೆ ಎಂದು ನ್ಯಾಯಾಲಯವನ್ನು ಸಿಬಿಐ ಕೋರಿತು. ಅದನ್ನು ಮಾನ್ಯ ಮಾಡಿದ ಸಿಬಿಐ ಪ್ರಕರಣಗಳ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಅಜಯ್ ಗುಪ್ತಾ ಆರು ದಿನಗಳವರೆಗೆ ಸಿಬಿಐ ವಶಕ್ಕೆ ಒಪ್ಪಿಸಿ ಆದೇಶಿಸಿದರು. ಈಗಾಗಲೇ ಈ ಪ್ರಕರಣದ ಐವರು ಆರೋಪಿಗಳನ್ನು ನ್ಯಾಯಾಲಯ ಇದೇ 20ರವರೆಗೆ ಸಿಬಿಐ ಕಸ್ಟಡಿಗೆ ವಹಿಸಿದೆ.

## ರೈತರ ಪ್ರತಿಭಟನೆ...

ಪ್ರಜಾವಾಣಿ ಚಿತ್ರ ಅನೂಪ್ ರಾಘ. ಟಿ

ಗುಡುಮಾದನಹಳ್ಳಿಯ 20 ಎಕರೆ ಕೃಷಿ ಭೂಮಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣವನ್ನು ವಿರೋಧಿಸಿ ಗ್ರಾಮದಿಂದ ಶುಕ್ರವಾರ ನಡೆದ ಪಾದಯಾತ್ರೆಯು ಮೈಸೂರು ಜಿಲ್ಲಾ ಪಂಚಾಯಿತಿ ತಲುಪಿದಾಗ ಪಾದಯಾತ್ರಿಗಳೊಂದಿಗೆ ಬಂದ ಹಸುವೊಂದು ನೆಲಕ್ಕೆ ಅಳವಡಿಸಿದ್ದ ಕಂಬಿಗಳ ಮೇಲೆ ಹೆಜ್ಜೆ ಇಡಲಾಗದೆ ಆವರಣದೊಳಕ್ಕೆ ಜಿಗಿಯಿತು

# 'ಸುಪ್ರೀಂ'ನಿಂದಲೂ 'ಮಿತವ್ಯಯ'

**ನವದೆಹಲಿ (ಪಿಟಿಐ):** ಸೋಮವಾರ ಮತ್ತು ಶುಕ್ರವಾರ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಕರಣಗಳ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರ್ಧರಿಸಿದೆ. ಇಂಧನ ಬಳಕೆ ತಗ್ಗಿಸಲಿಕ್ಕಾಗಿ 'ಕಾರ್ ಪೂಲಿಂಗ್' ಅಳವಡಿಸಿಕೊಳ್ಳಲು ನ್ಯಾಯಮೂರ್ತಿಗಳು ಸಮ್ಮತಿಸಿದ್ದಾರೆ.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾಗಿರುವ ಬಿಕ್ಕಟ್ಟು ಎದುರಿಸಲಿಕ್ಕಾಗಿ ಇಂಧನ ಬಳಕೆ ತಗ್ಗಿಸಲು ಮತ್ತು ತಪ್ಪಿಸಬಹುದಾದ ವೆಚ್ಚಗಳಿಗೆ ಕಡಿವಾಣ ಹಾಕಲು ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಕರೆ ನೀಡಿದ್ದರು. ಅವರ ಸಲಹೆಯನ್ನು ಪರಿಗಣಿಸಿ ಸುಪ್ರೀಂ ಕೋರ್ಟ್ ಈ ಕ್ರಮ ಕೈಗೊಂಡಿದೆ.

'ಇತರೆ ದಿನಗಳಲ್ಲಿ (ಅಂದರೆ ಸೋಮವಾರ, ಶುಕ್ರವಾರ ಅಥವಾ 'ಇತರೆ' ಎಂದು ಘೋಷಿಸಿರುವ ದಿನಗಳಲ್ಲಿ) ಮತ್ತು ಭಾಗಶಃ ಅಥವಾ ಅರ್ಧ ಕೆಲಸದ ದಿನಗಳಲ್ಲಿ ಕೈಗೆತ್ತಿಕೊಳ್ಳಲು ಪಟ್ಟಿ ಮಾಡಲಾದ ಪ್ರಕರಣಗಳ ವಿಚಾರಣೆಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಸಲಾಗುತ್ತದೆ' ಎಂದು ಸುತ್ತೋಲೆ ಹೊರಡಿಸಲಾಗಿದೆ.

'ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ಸಂದರ್ಭ ನ್ಯಾಯಾಲಯಕ್ಕೆ ಯಾವುದೇ ಅನನುಕೂಲತೆ ಆಗದಂತೆ ರಿಜಿಸ್ಟ್ರಿ ಖಚಿತಪಡಿಸಿಕೊಳ್ಳಬೇಕು. ವಿಡಿಯೊ ಕಾನ್ಫರೆನ್ಸ್‌ಗೆ ಲಿಂಕ್‌ಗಳನ್ನು ಸೂಕ್ತ ಸಮಯದಲ್ಲಿ ಕಳುಹಿಸಬೇಕು, ಯಾವುದೇ ಅಡೆತಡೆಯಿಲ್ಲದ ವಿಚಾರಣೆಗೆ ಸೂಕ್ತ ಸೌಲಭ್ಯ ಕಲ್ಪಿಸಬೇಕು ಮತ್ತು ಅಗತ್ಯ ತಾಂತ್ರಿಕ ನೆರವು ಒದಗಿಸಬೇಕು' ಎಂದು ಸುತ್ತೋಲೆ ಹೇಳಿದೆ.

'ಇಂಧನದ ಅತ್ಯುತ್ತಮ ಬಳಕೆಯನ್ನು ಖಚಿತಪಡಿಸಿಕೊಳ್ಳಲು, ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು ತಮ್ಮೊಳಗೆ 'ಕಾರ್ ಪೂಲಿಂಗ್' ವ್ಯವಸ್ಥೆ ಉತ್ತೇಜಿಸಲು ಒಮ್ಮತದಿಂದ ನಿರ್ಧರಿಸಿದ್ದಾರೆ' ಎಂದು ತಿಳಿಸಿದೆ.

### ಶೇ 50ರಷ್ಟು ಸಿಬ್ಬಂದಿಗೆ 'ವರ್ಕ್ ಫ್ರಂ ಹೋಂ'

ಸುಪ್ರೀಂ ಕೋರ್ಟ್ ರಿಜಿಸ್ಟ್ರಿಯ ಪ್ರತಿ ಶಾಖೆ ಅಥವಾ ವಿಭಾಗದ ಶೇ 50ರಷ್ಟು ಸಿಬ್ಬಂದಿಗೆ ವಾರದಲ್ಲಿ ಎರಡು ದಿನ ಮನೆಯಿಂದ ಕೆಲಸ (ವರ್ಕ್ ಫ್ರಂ ಹೋಂ) ಮಾಡಲು ಅನುಮತಿಸಲಾಗಿದೆ. ಉಳಿದ ಸಿಬ್ಬಂದಿ ಕಚೇರಿಯಲ್ಲಿ ಲಭ್ಯರಿರುತ್ತಾರೆ ಎಂದು ಸುತ್ತೋಲೆ ತಿಳಿಸಿದೆ.

'ಪ್ರತಿ ವಾರದ ಕಲಾಪದ ಪಟ್ಟಿ ಆ ವಾರದ ಆರಂಭಕ್ಕೂ ಮುನ್ನವೇ ಸಿದ್ಧ ಆಗಿರುವುದನ್ನು ಸಂಬಂಧಿತ ರಿಜಿಸ್ಟ್ರಾರ್ ಖಚಿತಪಡಿಸಿಕೊಳ್ಳಬೇಕು. ಮನೆಯಿಂದ ಕೆಲಸ ಮಾಡುವ ಸಿಬ್ಬಂದಿ ದೂರವಾಣಿ ಕರೆಗಳಿಗೆ ಲಭ್ಯರಿರಬೇಕು ಮತ್ತು ಅಗತ್ಯ-ಬಿದ್ದಲ್ಲಿ, ಕಚೇರಿಗೆ ಬರಲು ಸಿದ್ಧರಾಗಿರಬೇಕು' ಎಂದು ಹೇಳಿದೆ.

ಕೊಪ್ಪಳ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುಂಡಿಗೆ ಬಿದ್ದ ಟ್ರ್ಯಾಕ್ಟರ್

# ಪ್ರತ್ಯೇಕ ಅವಘಡ: 11 ಸಾವು

ಪ್ರಜಾವಾಣಿ ವಾರ್ತೆ

**ಕೊಪ್ಪಳ/ವಿಜಯನಗರ/ವಿಜಯಪುರ:** ರಾಜ್ಯದಲ್ಲಿ ಶುಕ್ರವಾರ ಸಂಭವಿಸಿದ ಎರಡು ಪ್ರತ್ಯೇಕ ಅವಘಡಗಳಲ್ಲಿ ಐವರು ಮಕ್ಕಳು ಸೇರಿ ಒಟ್ಟು 11 ಮಂದಿ ಮೃತಪಟ್ಟಿದ್ದಾರೆ.

ಕೊಪ್ಪಳ-ವಿಜಯನಗರ ಜಿಲ್ಲೆ ವ್ಯಾಪ್ತಿಯ ತುಂಗಭದ್ರಾ ಅಣೆಕಟ್ಟು ಬಳಿ ಸಂಭವಿಸಿದ ಅಪಘಾತದಲ್ಲಿ ಏಳು ಮಂದಿ ಮೃತಪಟ್ಟರೆ, ವಿಜಯಪುರ ಜಿಲ್ಲೆಯಲ್ಲಿ ಮನೆ ಚಾವಣಿ ಕುಸಿದು ನಾಲ್ವರು ಅಸುನೀಗಿದ್ದಾರೆ.

**ಕೊಪ್ಪಳ/ವಿಜಯನಗರ ವರದಿ:** ತುಂಗಭದ್ರಾ ಅಣೆಕಟ್ಟು ಬಳಿ ರಾಷ್ಟ್ರೀಯ ಹೆದ್ದಾರಿ 50ರಲ್ಲಿ, ಹುಲಿಗಿಯ ಹುಲಿಗೆಮ್ಮ ದೇವಿಯ ಜಾತ್ರೆಗೆ ತೆರಳುತ್ತಿದ್ದ ಏಳು ಜನ ಭಕ್ತರು ಟ್ಯಾಂಕರ್ ಡಿಕ್ಕಿ ಹೊಡೆದು ಮೃತಪಟ್ಟಿದ್ದಾರೆ.

ವಿಜಯನಗರ, ಬಳ್ಳಾರಿ ಜಿಲ್ಲೆಗಳ ವಿವಿಧ ಊರುಗಳ 19 ಜನ ಸಂಬಂಧಿಕರು ಟ್ರ್ಯಾಕ್ಟರ್‌ನಲ್ಲಿ ತೆರಳುತ್ತಿದ್ದಾಗ ಸೇತುವೆ ಬಳಿ ಹಿಂದಿನಿಂದ ಬಂದ ಟ್ಯಾಂಕರ್ ರಭಸದಿಂದ ಡಿಕ್ಕಿ ಹೊಡೆದಿದೆ. ಚಾಲಕನ ನಿಯಂತ್ರಣ ತಪ್ಪಿದ ಟ್ರ್ಯಾಕ್ಟರ್ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು 15 ಅಡಿ ಆಳದ ಸೇತುವೆ ಕೆಳಗಿನ ಗುಂಡಿಗೆ ಉರುಳಿದೆ.

ಸಂಡೂರು ಹಾಗೂ ಕೂಡ್ಲಿಗಿ ತಾಲ್ಲೂಕುಗಳ ಗೌರಮ್ಮ(25), ಗೀತಾ(20), ಮಹಾಂತೇಶ(18), ಮಂಜಮ್ಮ(30), ಟ್ರ್ಯಾಕ್ಟರ್ ಚಾಲಕ ಕೆಂಚಪ್ಪ (35) ಹಾಗೂ ಭರತ್ (1) ಸ್ಥಳದಲ್ಲಿಯೇ ಮೃತಪಟ್ಟರೆ, ಕೂಡ್ಲಿಗಿ ತಾಲೂಕಿನ ಮರ್ಲಾನಹಳ್ಳಿಯ ಮಾಯಾ (16) ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಅಸುನೀಗಿದರು.

ಎಂಟು ಜನ ಗಾಯಾಳುಗಳನ್ನು ಕೊಪ್ಪಳ ಜಿಲ್ಲಾಸ್ಪತ್ರೆಗೆ, ನಾಲ್ವರನ್ನು ಹೊಸಪೇಟೆಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಇದರಲ್ಲಿ ಒಬ್ಬರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ. ▶2B

## ಬೆಳ್ಳಿ ದರದಲ್ಲಿ ₹21,600 ಇಳಿಕೆ

**ನವದೆಹಲಿ (ಪಿಟಿಐ):** ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯವು ಸದೃಢಗೊಂಡಿರುವುದು ಮತ್ತು ಲಾಭದ ಗಳಿಕೆಗಾಗಿ ಹೂಡಿಕೆದಾರರು ಚಿನ್ನ ಮತ್ತು ಬೆಳ್ಳಿ ಮಾರಾಟಕ್ಕೆ ಮುಂದಾಗಿದ್ದರಿಂದ ಶುಕ್ರವಾರದ ವಹಿವಾಟಿನಲ್ಲಿ ಈ ಲೋಹಗಳ ಬೆಲೆಯಲ್ಲಿ ಇಳಿಕೆಯಾಗಿದೆ.

ಶೇ 99.9ರಷ್ಟು ಪರಿಶುದ್ಧತೆಯ ಚಿನ್ನದ ದರವು ₹3,200 ಕಡಿಮೆಯಾಗಿ, ₹1,62,800ರಂತೆ ಮಾರಾಟ ಆಗಿದೆ. ಬೆಳ್ಳಿ ದರವು ಕೆ.ಜಿಗೆ ₹21,600 ಇಳಿಕೆಯಾಗಿ, ₹2.75 ಲಕ್ಷಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

## ರಾಜ್ಯದಲ್ಲಿ ಎಸ್‌ಐಆರ್‌ಗೆ ಸಕಲ ಸಿದ್ಧತೆ

ವಿವರ ಪುಟ ▶8

# ಭೋಜಶಾಲಾ ಸಂಕೀರ್ಣ ಸರಸ್ವತಿ ದೇವಾಲಯ: ಹೈಕೋರ್ಟ್ ತೀರ್ಪು

**ಇಂದೋರ್(ಪಿಟಿಐ):** 'ಧಾರ್‌ನಲ್ಲಿರುವ ವಿವಾದಿತ ಭೋಜಶಾಲಾ ಸಂಕೀರ್ಣವು ಸರಸ್ವತಿ ದೇವಾಲಯ' ಎಂದು ಮಧ್ಯಪ್ರದೇಶ ಹೈಕೋರ್ಟ್ ಘೋಷಿಸಿದೆ.

ಇದೇ ವೇಳೆ ಕಮಾಲ್ ಮೌಲಾ ಮಸೀದಿ ನಿರ್ಮಾಣಕ್ಕಾಗಿ ಜಿಲ್ಲೆಯಲ್ಲಿ ಪ್ರತ್ಯೇಕ ಜಮೀನು ಮಂಜೂರು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಅರ್ಜಿ ಸಲ್ಲಿಸುವಂತೆ ಮುಸ್ಲಿಂ ಸಮುದಾಯದವರಿಗೆ ನ್ಯಾಯಾಲಯವು ಸಲಹೆ ನೀಡಿದೆ.

ಭೋಜಶಾಲಾ ದೇವಸ್ಥಾನ-ಕಮಾಲ್ ಮೌಲಾ ಮಸೀದಿ ಸಂಕೀರ್ಣ ವಿವಾದಕ್ಕೆ ಸಂಬಂಧಿಸಿದ ತೀರ್ಪಿನಲ್ಲಿ, ಭೋಜಶಾಲಾದಲ್ಲಿ ಸಂಸ್ಕೃತ ಬೋಧನಾ ಕೇಂದ್ರ ಮತ್ತು ಸರಸ್ವತಿ ದೇವಿಯ ದೇವಾಲಯದ ಕುರುಹುಗಳಿವೆ ಎಂದು ನ್ಯಾಯಾಲಯ ಉಲ್ಲೇಖಿಸಿದೆ. ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠವು ಈ ಪ್ರಕರಣದ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ಶುಕ್ರವಾರ ಪ್ರಕಟಿಸಿತು.

**ಏನಿದು ವಿವಾದ:** ಮಧ್ಯಪ್ರದೇಶದ ಧಾರ್ ಜಿಲ್ಲೆಯಲ್ಲಿರುವ ಭೋಜಶಾಲಾ ಸಂಕೀರ್ಣವನ್ನು ಹಿಂದೂ ಸಮುದಾಯದವರು ವಾಗ್ದೇವಿ (ಸರಸ್ವತಿ ದೇವತೆ) ಇರುವ ದೇವಾಲಯ ಎಂದು ವಾದಿಸಿದರೆ, ಮುಸ್ಲಿಂ ಸಮುದಾಯದವರು ಈ ಸ್ಮಾರಕವನ್ನು ಕಮಾಲ್ ಮೌಲಾ ಮಸೀದಿ ಎಂದು ವಾದಿಸಿದ್ದರು. ಜೈನ ಸಮುದಾಯದ ಅರ್ಜಿದಾರರೊಬ್ಬರು, ವಿವಾದಿತ ಸಂಕೀರ್ಣವು ಮಧ್ಯಕಾಲೀನ ಜೈನ ದೇವಾಲಯ ಮತ್ತು ಗುರುಕುಲ ಎಂದು ವಾದ ಮುಂದಿಟ್ಟಿದ್ದರು.

ಭೋಜಶಾಲಾ ಸಂಕೀರ್ಣದ ವಿವಾದ ಭುಗಿಲೆದ್ದ ನಂತರ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) 2003ರ ಏಪ್ರಿಲ್ 7ರಂದು ಆದೇಶ ಹೊರಡಿಸಿ, ಪ್ರತಿ ಮಂಗಳವಾರ ಹಿಂದೂಗಳು ಸಂಕೀರ್ಣದಲ್ಲಿ ಪೂಜೆ ಸಲ್ಲಿಸಲು ಮತ್ತು ಪ್ರತಿ ಶುಕ್ರವಾರ ಮುಸ್ಲಿಮರು ನಮಾಜ್ ಮಾಡಲು ಅನುಮತಿ ನೀಡಿತ್ತು. ▶10

### ಪ್ರಮುಖ ಅಂಶಗಳು
- 2003ರ ಏಪ್ರಿಲ್ 7ರಂದು ಹಿಂದೂಗಳ ಪೂಜೆಗೆ ಅವಕಾಶ
- ಸಂಸ್ಕೃತ ಬೋಧನಾ ಕೇಂದ್ರ, ಸರಸ್ವತಿ ದೇವಿಯ ಕುರುಹು
- ಮಸೀದಿ : ಪ್ರತ್ಯೇಕ ಜಮೀನಿಗಾಗಿ ಅರ್ಜಿ ಸಲ್ಲಿಕೆಗೆ ಸಲಹೆ

ಮಧ್ಯಪ್ರದೇಶದ ಧಾರಾದಲ್ಲಿರುವ ಭೋಜಶಾಲಾ ಸಂಕೀರ್ಣದಲ್ಲಿ ಸರಸ್ವತಿ ದರ್ಶನಕ್ಕೆ ಬಂದ ಭಕ್ತರು —ಪಿಟಿಐ ಚಿತ್ರ

### ಸಮಾಜದ ಮೇಲೆ ದಾಳಿ ಮಾಡುವ ಪರಾವಲಂಬಿಗಳಿಗೆ ಸಿಜೆಐ ಎಚ್ಚರಿಕೆ
# 'ಜಿರಲೆಯಂತೆ ಕಾಡುವ ನಿರುದ್ಯೋಗಿಗಳು'

**ನವದೆಹಲಿ (ಪಿಟಿಐ):** 'ಕೆಲವು ನಿರುದ್ಯೋಗಿ ಯುವಕರು ಜಿರಲೆಯಂತೆ ಸಮಾಜವನ್ನು ಕಾಡುತ್ತಾರೆ. ಉದ್ಯೋಗ, ಸ್ಥಾನಮಾನ ಸಿಗದೆ ಇದ್ದಾಗ ಅವರು ಎಲ್ಲರ ಮೇಲೆ ದಾಳಿ ಆರಂಭಿಸುತ್ತಾರೆ' ಎಂದು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್ ಬೇಸರ ವ್ಯಕ್ತಪಡಿಸಿದ್ದಾರೆ.

'ಪದಾಂಕಿತ ಹಿರಿಯ ವಕೀಲ' ಸ್ಥಾನ ಪಡೆಯಲು ವಕೀಲರೊಬ್ಬರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಇದಕ್ಕಾಗಿ ಆ ವಕೀಲ ಅನುಸರಿಸಿದ ಮಾರ್ಗದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿತು.

'ಈಗಾಗಲೇ ಸಮಾಜದಲ್ಲಿ ವ್ಯವಸ್ಥೆ ಮೇಲೆ ದಾಳಿ ಮಾಡುವ ಪರಾವಲಂಬಿಗಳು ಸಾಕಷ್ಟಿದ್ದಾರೆ. ನೀವೂ ಅವರೊಂದಿಗೆ ಸೇರಲು ಬಯಸುತ್ತೀರಾ' ಎಂದು ಸಿಜೆಐ ಸೂರ್ಯಕಾಂತ್, ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠವು ಅರ್ಜಿದಾರನನ್ನು ಪ್ರಶ್ನಿಸಿತು.

ನ್ಯಾಯಮೂರ್ತಿ ಸೂರ್ಯಕಾಂತ್

'ಕೆಲವು ಯುವಕರು ಜಿರಲೆಗಳಿದ್ದಂತೆ. ಅವರಿಗೆ ಯಾವುದೇ ಉದ್ಯೋಗ ಸಿಗುವುದಿಲ್ಲ ಅಥವಾ ವೃತ್ತಿಯಲ್ಲಿ ಯಾವುದೇ ಸ್ಥಾನ ಲಭಿಸುವುದಿಲ್ಲ. ಅಂಥವರು ತಾವೇ ಮಾಧ್ಯಮ, ಸಾಮಾಜಿಕ ಮಾಧ್ಯಮ ಮತ್ತು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಥವಾ ಇತರೆ ಕಾರ್ಯಕರ್ತರಾಗಿ ಸಮಾಜದ ಎಲ್ಲರ ಮೇಲೆ ದಾಳಿ ಮಾಡಲು ಆರಂಭಿಸುತ್ತಾರೆ' ಎಂದು ಆಕ್ಷೇಪ ವ್ಯಕ್ತಪಡಿಸಿತು.

ಫೇಸ್‌ಬುಕ್ ಪೋಸ್ಟ್‌ನಲ್ಲಿ ವಕೀಲ ಬಳಸಿದ ಭಾಷೆಯನ್ನು ಉಲ್ಲೇಖಿಸಿದ ಸಿಜೆಐ, 'ಹಿರಿಯ ವಕೀಲರಾಗಿ ನೇಮಕಗೊಳ್ಳಲು ಬಯಸುವ ವ್ಯಕ್ತಿಯ ನಡವಳಿಕೆ ಇದೇನಾ' ಎಂದು ಪ್ರಶ್ನಿಸಿದರು.

'ಒಂದು ವೇಳೆ, ದೆಹಲಿ ಹೈಕೋರ್ಟ್ ಅರ್ಜಿದಾರರಿಗೆ 'ಪದಾಂಕಿತ ಹಿರಿಯ ವಕೀಲ ಸ್ಥಾನ' ನೀಡಿದರೆ, ಈ ವಕೀಲನ ವೃತ್ತಿಪರ ನಡವಳಿಕೆಯನ್ನು ನೋಡಿ, ಸುಪ್ರೀಂ ಕೋರ್ಟ್ ಆ ಸ್ಥಾನವನ್ನು ಬದಿಗಿಡುತ್ತದೆ' ಎಂದರು.

'ಹಿರಿಯರ ಸ್ಥಾನಕ್ಕಾಗಿ (ಹಿರಿಯ ವಕೀಲ) ಇಡೀ ವಿಶ್ವವೇ ಅರ್ಹವಿರಬಹುದು, ಆದರೆ, ಆ ಸ್ಥಾನಕ್ಕೆ ಬೇಕಿರುವ ಕನಿಷ್ಠ ಅರ್ಹತೆಯೂ ನಿಮಗಿಲ್ಲ' ಎಂದು ಅರ್ಜಿದಾರರಿಗೆ ಕಟು ಶಬ್ದಗಳಲ್ಲಿ ನ್ಯಾಯಪೀಠ ಎಚ್ಚರಿಕೆ ನೀಡಿತು.

ಕಪ್ಪು ಕೋಟು ಮತ್ತು ಗೌನು ಧರಿಸಿ ನ್ಯಾಯಾಲಯಕ್ಕೆ ಬರುವ ಕೆಲವರು ಹೊಂದಿರುವ ಪದವಿಗಳ ನೈಜತೆಯ ಬಗ್ಗೆಯೇ ಅನುಮಾನಗಳಿವೆ. ಅಂತಹ ಕೆಲವರ ಪದವಿಗಳ ನೈಜತೆ ಕುರಿತು ಸಿಬಿಐನಿಂದ ಪರಿಶೀಲನೆ ನಡೆಸುವ ಇರಾದೆಯೂ ತನಗಿದೆ ಎಂದು ನ್ಯಾಯಪೀಠ ಹೇಳಿತು.

### 'ಅಲಂಕಾರಿಕ ಸಂಕೇತವಲ್ಲ'

'ಪದಾಂಕಿತ ಹಿರಿಯ ವಕೀಲ' ಹುದ್ದೆ ಅಲಂಕಾರಿಕವಾಗಿ ಇಟ್ಟುಕೊಳ್ಳಬೇಕಾದ ಸಂಕೇತವಲ್ಲ' ಎಂದು ಅರ್ಜಿದಾರರಿಗೆ ತಿಳಿಸಿದ ನ್ಯಾಯಪೀಠ, 'ಬಾರ್ ಕೌನ್ಸಿಲ್ ಕೂಡ ಇಂತಹ ವಿಷಯಗಳಲ್ಲಿ ಯಾವುದೇ ಕ್ರಮ ವಹಿಸುವುದಿಲ್ಲ, ಯಾಕೆಂದರೆ ಅವರಿಗೆ ಇಂಥವರ ಮತಗಳು ಬೇಕಾಗಿವೆ' ಎಂದು ಬೇಸರ ವ್ಯಕ್ತಪಡಿಸಿತು.

**ಕ್ಷಮೆಯಾಚನೆ:** ನ್ಯಾಯಪೀಠದ ಮುಂದೆ ಕ್ಷಮೆಯಾಚಿಸಿದ ಅರ್ಜಿದಾರರು, ಅರ್ಜಿಯನ್ನು ವಾಪಸ್ ಪಡೆಯಲು ಅನುಮತಿ ಕೋರಿದರು. ಪೀಠವು ಇದಕ್ಕೆ ಅನುಮತಿ ನೀಡಿತು.

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು
ಭಾರತ ಸರ್ಕಾರ

नवीन एवं नवीकरणीय ऊर्जा मंत्रालय
MINISTRY OF NEW AND RENEWABLE ENERGY

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆ
ವಿದ್ಯುತ್ ಉತ್ಪಾದಿಸಿ, ಹಣ ಉಳಿಸಿ, ಆದಾಯಗಳಿಸಿ

ಪ್ರಯೋಜನಗಳು:
- 25 ವರ್ಷಗಳ ಸುದೀರ್ಘ ಬಾಳಿಕೆ
- ವಿದ್ಯುತ್ ಬಿಲ್‌ನಲ್ಲಿ ಉಳಿತಾಯ
- ಹೆಚ್ಚುವರಿ ವಿದ್ಯುತ್ ಎಸ್ಕಾಂಗಳಿಗೆ ಮಾರಾಟ ಮಾಡುವ ಮೂಲಕ ಆದಾಯಗಳಿಸಬಹುದು

| ಗ್ರಾಹಕ ವರ್ಗ | ಸೋಲಾರ್ ಘಟಕದ ಸಾಮರ್ಥ್ಯ | ಸಬ್ಸಿಡಿ ದರ |
|---|---|---|
| ಗೃಹ ಬಳಕೆ ಗ್ರಾಹಕರು (ಪ್ರತ್ಯೇಕ ಮನೆಗಳಿಗೆ) | 1 ಕಿ.ವ್ಯಾ<br>2 ಕಿ.ವ್ಯಾ<br>3 ಕಿ.ವ್ಯಾ | ರೂ.30,000/-<br>ರೂ.60,000/-<br>ರೂ.78,000/- |
| ವಸತಿ ಸಂಕೀರ್ಣ ಅಥವಾ ಅಪಾರ್ಟ್‌ಮೆಂಟ್ ಗ್ರಾಹಕರು | 500 ಕಿ.ವ್ಯಾ ವರೆಗೆ (ಕಾಮನ್ ಏರಿಯಾ) | ರೂ.18,000/- ಕಿ.ವ್ಯಾ |

ಸಾಲ ಸೌಲಭ್ಯ:
ಕನಿಷ್ಠ 6.5% ರಿಂದ 7.5% ಬಡ್ಡಿ ದರದಲ್ಲಿ ಬ್ಯಾಂಕನಲ್ಲಿ ಸಾಲ ಸೌಲಭ್ಯ

ಅರ್ಜಿ ಸಲ್ಲಿಕೆ:
- https://www.pmsuryaghar.gov.in/ ವೆಬ್ ಸೈಟ್‌ನಲ್ಲಿ ನೋಂದಾಯಿಸಿ ಅರ್ಜಿ ಸಲ್ಲಿಸಿ
- ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಎಸ್ಕಾಂ ಕಚೇರಿಗೆ ಭೇಟಿ ನೀಡಿ

BESCOM C.E.S.C. MYSORE GESCOM HESCOM MESCOM

ಸ್ಕ್ಯಾನ್ ಮಾಡಿ

ಹೆಚ್ಚಿನ ಮಾಹಿತಿಗಾಗಿ ಸೋಲಾರ್ ಸಹಾಯವಾಣಿ
08022340816/817
bescomsgy@gmail.com
solarithelpdesk@gmail.com

# ಸಾಮಾಜಿಕ ಪರಿವರ್ತನೆ ಸಾಧನವೇ ಶಿಕ್ಷಣ

## 'ಕ್ಯಾಂಪಸ್-ಟು-ಕರಿಯರ್' ಶೃಂಗ ಉದ್ಘಾಟಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಪರಿವರ್ತನೆಗೆ ಶಿಕ್ಷಣವು ಅತ್ಯಂತ ಶಕ್ತಿಯುತ ಸಾಧನವಾಗಿದ್ದು, ಅದಕ್ಕಾಗಿಯೇ ಶಿಕ್ಷಣ ಕ್ಷೇತ್ರವನ್ನು ಆದ್ಯತಾ ವಲಯ ಎಂದು ಪರಿಗಣಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉನ್ನತ ಶಿಕ್ಷಣ, ಕೌಶಲಾಭಿವೃದ್ಧಿ ಇಲಾಖೆ ಶುಕ್ರವಾರ ಹಮ್ಮಿಕೊಂಡಿದ್ದ 'ಕ್ಯಾಂಪಸ್-ಟು-ಕರಿಯರ್' ಶೃಂಗ ಉದ್ಘಾಟಿಸಿ ಅವರು ಮಾತನಾಡಿದರು.

'ಜ್ಞಾನ, ಕೌಶಲ ಅಭಿವೃದ್ಧಿ, ನಾವೀನ್ಯದ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಸಮಾನ, ಪ್ರಗತಿಪರ ಮತ್ತು ಸದೃಢ ಸಮಾಜವನ್ನು ರೂಪಿಸುವಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ ಎನ್ನುವುದು ರಾಜ್ಯ ಸರ್ಕಾರದ ನಂಬಿಕೆ. ಪ್ರತಿ ಪದವೀಧರನಿಗೂ ಉದ್ಯೋಗ ಸಿಗಬೇಕು. ಪ್ರತಿ ಶಿಕ್ಷಣ ಸಂಸ್ಥೆಯೂ ಸಮೃದ್ಧ ಕರ್ನಾಟಕ ನಿರ್ಮಾಣದ ಗುರಿ ಹೊಂದಬೇಕು. ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆಗೆ 66 ಕಾಲೇಜುಗಳಿವೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ದೇಶದಲ್ಲೇ ಮುಂಚೂಣಿಯಲ್ಲಿದೆ. ರಾಜ್ಯವು ₹30.7 ಲಕ್ಷ ಕೋಟಿ ಜಿಎಸ್‌ಡಿಪಿ ಹೊಂದಿರುವ ಆರ್ಥಿಕ ಶಕ್ತಿಯಾಗಿ ಬೆಳೆಯಲು ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕಾರಣ' ಎಂದು ವಿವರಿಸಿದರು.

ಉದ್ಯೋಗ, ಉದ್ಯಮಶೀಲತೆ, ನಾಯಕತ್ವದ ಅವಕಾಶಗಳು ಎಲ್ಲರಿಗೂ ಸಿಗಬೇಕು. ಕಾಲೇಜಿಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಗೂ ವೃತ್ತಿ ಜೀವನಕ್ಕೆ ಪೂರಕವಾದ ಪ್ರಾಯೋಗಿಕ ಕೌಶಲ ಕಲಿಸಬೇಕು. ಕರ್ನಾಟಕದ ಕೈಗಾರಿಕಾ ನೀತಿಯು ಶಿಕ್ಷಣದ ಜತೆ ಉದ್ಯೋಗವನ್ನು ಬೆಸೆಯುತ್ತದೆ. ಭವಿಷ್ಯದ ಪೀಳಿಗೆಗೆ 20 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದರು.

ಮಾಹಿತಿ, ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಖುಷ್ಬೂ ಚೌಧರಿ ಇದ್ದರು.

### ವಿದ್ಯಾರ್ಥಿಗಳಿಗೆ ಷೇರು ಮಾರುಕಟ್ಟೆ ಶಿಕ್ಷಣ

ಸರ್ಕಾರಿ ಕಾಲೇಜು ವಿದ್ಯಾರ್ಥಿಗಳಿಗೆ ಅಲ್ಪಾವಧಿ ಉದ್ಯೋಗಗಳು, ಇಂಟರ್ನ್‌ಶಿಪ್ ಮತ್ತು ಗಿಗ್ ಕೆಲಸದ ಅವಕಾಶ, ಹಣಕಾಸು ಸಾಕ್ಷರತೆ, ಷೇರು ಮಾರುಕಟ್ಟೆ ಮತ್ತು ಮ್ಯೂಚುವಲ್ ಫಂಡ್ ಬಗ್ಗೆ ಜ್ಞಾನ ಮೂಡಿಸುವ ಒಪ್ಪಂದಕ್ಕೆ ಟಿಂಬಕ್ಟೂ ಸಂಸ್ಥೆ ಜತೆಗೆ ಉನ್ನತ ಶಿಕ್ಷಣ ಇಲಾಖೆ ಒಪ್ಪಂದ ಮಾಡಿಕೊಂಡಿತು.

ಸೌಟ್ ಕಾರ್ಯಕ್ರಮದಡಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮತ್ತು ಬ್ರಿಟಿಷ್ ಕೌನ್ಸಿಲ್ 30 ವಿದ್ಯಾರ್ಥಿಗಳಿಗೆ ಬ್ರಿಟನ್ ವಿಶ್ವವಿದ್ಯಾಲಯದಲ್ಲಿ ಎರಡು ವಾರ ಸುಸ್ಥಿರತೆ ಮತ್ತು ಹವಾಮಾನ ಬದಲಾವಣೆ, ನಗರ ಯೋಜನೆ ಹಾಗೂ ಸಂವಹನ ಕೌಶಲಗಳ ಮೇಲೆ ತರಬೇತಿ ನೀಡುವ ಒಪ್ಪಂದ ಸೇರಿದಂತೆ ವಿವಿಧ ಸಂಸ್ಥೆಗಳ ಜತೆಗೆ ಒಟ್ಟು ಆರು ಒಪ್ಪಂದ ಮಾಡಿಕೊಳ್ಳಲಾಯಿತು.

> **'ಕ್ಯಾಂಪಸ್ ಟು ಕರಿಯರ್' ಶೃಂಗಸಭೆಯು ಸುಭದ್ರವಾದ ಉನ್ನತ ಶಿಕ್ಷಣ, ಯುವ ಸಬಲೀಕರಣವನ್ನು ಸಾಧ್ಯವಾಗಿಸುತ್ತದೆ. ಗ್ರಾಮೀಣ, ನಗರ ವಿದ್ಯಾರ್ಥಿಗಳಿಗೆ ಉದ್ಯೋಗ ಆಧರಿತ ಶಿಕ್ಷಣವನ್ನು ಖಾತ್ರಿಪಡಿಸುತ್ತದೆ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಬೆಂಗಳೂರಿನಲ್ಲಿ ಉನ್ನತ ಶಿಕ್ಷಣ ಇಲಾಖೆ ಆಯೋಜಿಸಿದ್ದ ಕ್ಯಾಂಪಸ್ ಟು ಕರಿಯರ್ ಶೃಂಗದಲ್ಲಿ ಸಿದ್ದರಾಮಯ್ಯ ಅವರು ಟಿಂಬಕ್ಟೂ ಸಂಸ್ಥೆಯ ಸಿಇಒ ಮೈತ್ರಿ ಕುಮಾರ್‌ಗೆ ಒಪ್ಪಂದ ಪತ್ರ ನೀಡಿದರು. ಸಚಿವರಾದ ಪ್ರಿಯಾಂಕ್ ಖರ್ಗೆ, ಶರಣಪ್ರಕಾಶ ಪಾಟೀಲ, ಎಂ.ಸಿ.ಸುಧಾಕರ್ ಮತ್ತು ಟಿಂಬಕ್ಟೂ ಸಿಒಒ ಅಪೂರ್ವ್ ಶರ್ಮ ಪ್ರಸಾದ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

### ತಾಂತ್ರಿಕ ಶಿಕ್ಷಣ ಪಠ್ಯಕ್ರಮ ಬದಲು: ಸುಧಾಕರ್

ತಾಂತ್ರಿಕ ಶಿಕ್ಷಣದಲ್ಲಿ ಪಠ್ಯಕ್ರಮ ಬದಲಾವಣೆಯ ಅಗತ್ಯವಿದ್ದು, ಅನುಭವ ಆಧರಿತ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲು ಎಂಜಿನಿಯರಿಂಗ್, ತಾಂತ್ರಿಕ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಹಾಗೂ ಸುರಕ್ಷತಾ ಕೋರ್ಸ್‌ಗಳಲ್ಲಿ ಸಮಗ್ರ ಬದಲಾವಣೆ ತರಲಾಗುತ್ತದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹೇಳಿದರು. ಎಂಜಿನಿಯರಿಂಗ್ ಶಿಕ್ಷಣದಲ್ಲಿ ಸುಮಾರು ಶೇ 75ರಷ್ಟು ಬೋಧಕ ವೃಂದಕ್ಕೆ ಸಾಮರ್ಥ್ಯ ವೃದ್ಧಿ ಹಾಗೂ ತರಬೇತಿ ಕಾರ್ಯಕ್ರಮದ ಅಗತ್ಯವಿದೆ. ವಿವಿಧ ವಿಭಾಗಗಳಲ್ಲಿ ಈಗಾಗಲೇ ಗುಣಮಟ್ಟದ ಶಿಕ್ಷಣ ಮತ್ತು ಕೌಶಲಾಭಿವೃದ್ಧಿ ಕೋರ್ಸ್‌ಗಳನ್ನು ಆರಂಭಿಸಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವೃತ್ತಿ ಅಭಿವೃದ್ಧಿಗೆ ಅಗತ್ಯವಾದ ತರಬೇತಿ ಮತ್ತು ಅನುಭವ ಒದಗಿಸಲಾಗಿದೆ. ಕೋರ್ಸ್‌ಗಳಿಗೆ ಪ್ರವೇಶ ಮಿತಿ ವಿಧಿಸುವ ಜತೆಗೆ ಶುಲ್ಕ ವಿನಾಯಿತಿ ಮತ್ತು ಪರೀಕ್ಷಾ ವ್ಯವಸ್ಥೆಯ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

### ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

#### ಪಠ್ಯಪುಸ್ತಕ, ಸಮವಸ್ತ್ರ ಖರೀದಿಸಿದೆ

'ಪ್ರಜಾವಾಣಿ' ಪತ್ರಿಕೆ ನೀಡಿದ ವಿದ್ಯಾರ್ಥಿವೇತನದಿಂದ ಪಠ್ಯಪುಸ್ತಕ, ಸಮವಸ್ತ್ರ ಖರೀದಿಸಿದೆ. ಆರ್ಥಿಕವಾಗಿ ಹಿಂದುಳಿದಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗುರುತಿಸಿ ಸಹಾಯ ಮಾಡುತ್ತಿರುವ 'ಪ್ರಜಾವಾಣಿ'ಗೆ ನಾನು ಚಿರಋಣಿಯಾಗಿದ್ದೇನೆ.

**ದೀಪ್ತಿ ಎಲ್. ಪೂಜಾರಿ,** ಬಜಪೆ, ದಕ್ಷಿಣ ಕನ್ನಡ

#### 'ಶುಲ್ಕ ಪಾವತಿ, ಪುಸ್ತಕ ಖರೀದಿ'

'ಪ್ರಜಾವಾಣಿ' ಪತ್ರಿಕಾ ಸಂಸ್ಥೆಯವರು ಕೊಟ್ಟ ಶಿಷ್ಯ ವೇತನದಿಂದ ನನಗೆ ಕಾಲೇಜು ಶುಲ್ಕ ಪಾವತಿಸಲು ಮತ್ತು ಪುಸ್ತಕ ಖರೀದಿಗೆ ಬಹಳ ಸಹಾಯವಾಯಿತು. 'ಪ್ರಜಾವಾಣಿ' ಈ ರೀತಿ ಬಡವರಿಗೆ ನೆರವಾಗುತ್ತಿರುವುದು ಬಹಳ ಖುಷಿಯ ವಿಚಾರ. ಇದರಿಂದ ನನ್ನಂಥವರಿಗೆ ಬಹಳ ಅನುಕೂಲವಾಗಿದೆ.

**ವಿಶ್ವ ರಮೇಶ್,** ನಿರ್ಣಾ, ಬೀದರ್ ಜಿಲ್ಲೆ

# ನಟ ದರ್ಶನ್‌ಗೆ ಜಾಮೀನಿಲ್ಲ

**ಒಂದನೇ ಪುಟದಿಂದ...**

ಜೈಲಿನಲ್ಲಿ ತಮಗೆ ಯಾವುದೇ ಮೂಲಸೌಕರ್ಯ ಒದಗಿಸಿಲ್ಲ. ಇತರ ವಿಚಾರಣಾಧೀನ ಕೈದಿಗಳಿಗೆ ನೀಡುವ ಸೌಕರ್ಯಗಳಿಂದಲೂ ತಮ್ಮನ್ನು ವಂಚಿತರನ್ನಾಗಿಸಲಾಗಿದೆ. ತಮ್ಮನ್ನು ಕ್ವಾರಂಟೈನ್ ಕೋಣೆಯಲ್ಲಿ ಇರಿಸಲಾಗಿದೆ. ಇತರ ಕೈದಿಗಳೊಂದಿಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ. ಜೊತೆಗೆ, ಪ್ರಕರಣದ ಸಾಕ್ಷಿಗಳ ವಿಚಾರಣೆ ನಿಧಾನಗತಿಯಲ್ಲಿ ಸಾಗಿದೆ ಎಂದು ಆರೋಪಿಸಿದ್ದ ದರ್ಶನ್, ಇದರ ಆಧಾರದ ಮೇಲೆ ತಮಗೆ ಜಾಮೀನು ಮಂಜೂರು ಮಾಡಬೇಕು ಎಂದು ಅರ್ಜಿಯಲ್ಲಿ ಮನವಿ ಮಾಡಿದ್ದರು.

ದರ್ಶನ್‌ಗೆ ಮೂಲಸೌಕರ್ಯ ಒದಗಿಸಿಲ್ಲ ಎಂಬ ವಿಷಯವನ್ನು ನ್ಯಾಯಪೀಠ ಗಂಭೀರವಾಗಿ ಪರಿಗಣಿಸಿತು. ರಾಜ್ಯ ಸರ್ಕಾರವನ್ನು ಪ್ರತಿನಿಧಿಸಿದ ಹಿರಿಯ ವಕೀಲ ಸಿದ್ಧಾರ್ಥ ಲೂತ್ರಾ, 'ವಿಚಾರಣಾಧೀನ ಕೈದಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ಆರೋಪಿಗೆ ಒದಗಿಸಲಾಗಿದೆ' ಎಂದು ಸಮರ್ಥಿಸಿಕೊಂಡರು.

ಇದಕ್ಕೆ ದರ್ಶನ್ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ ಆಕ್ಷೇಪ ವ್ಯಕ್ತಪಡಿಸಿ, '2025ರ ನವೆಂಬರ್‌ನಿಂದ ಸಾಕ್ಷಿಗಳ ವಿಚಾರಣೆ ನಡೆಸಲಾಗುತ್ತಿದೆ. 7 ತಿಂಗಳು ಕಳೆದರೂ ಇಲ್ಲಿಯವರೆಗೆ ಕೇವಲ 10 ಸಾಕ್ಷಿಗಳ ವಿಚಾರಣೆ ಮಾಡಲಾಗಿದೆ. ಆರೋಪಿಯನ್ನು ಕ್ವಾರಂಟೈನ್ ಸೆಲ್‌ನಲ್ಲಿ ಇರಿಸಲಾಗಿದ್ದು, ಇತರ ಕೈದಿಗಳೊಂದಿಗೆ ಮಾತನಾಡಲು ಅವಕಾಶ ಒದಗಿಸುತ್ತಿಲ್ಲ. ಈ ಎಲ್ಲ ಅಂಶಗಳ ಆಧಾರದ ಮೇಲೆ ಜಾಮೀನು ಮಂಜೂರು ಮಾಡಬೇಕು' ಎಂದು ಮನವಿ ಮಾಡಿದರು.

ಇದನ್ನು ಒಪ್ಪದ ನ್ಯಾಯಮೂರ್ತಿ ಪಾರ್ದೀವಾಲಾ, 'ಜಾಮೀನು ರದ್ದುಗೊಳಿಸಿ ಕೆಲವೇ ತಿಂಗಳು ಕಳೆದಿವೆ. ಈ ಹಿನ್ನೆಲೆಯಲ್ಲಿ ಜಾಮೀನು ಅರ್ಜಿ ಪರಿಗಣಿಸಲು ಇದು ಸೂಕ್ತ ಸಮಯವಲ್ಲ. ಆದರೆ, ಇಲ್ಲಿ ಕೆಲವೊಂದು ವಿಷಯಗಳ ಕುರಿತು ಗಮನಹರಿಸಬೇಕಿದೆ. ಪ್ರಕರಣದ ವಿಚಾರಣೆಯು ತ್ವರಿತಗತಿಯಲ್ಲಿ ನಡೆಯಬೇಕು' ಎಂದು ನಿರ್ದೇಶನ ನೀಡಿದರು.

ಆಗ ಸಿದ್ಧಾರ್ಥ ಲೂತ್ರಾ, 'ಕೋವಿಡ್ ಸಂದರ್ಭದಲ್ಲಿ ಕ್ವಾರಂಟೈನ್ ಸೆಲ್ ಆಗಿ ಬಳಕೆಯಾಗುತ್ತಿದ್ದ ಸೆಲ್‌ನಲ್ಲಿ ದರ್ಶನ್ ಅವರನ್ನು ಇರಿಸಲಾಗಿದೆ' ಎಂದು ಸ್ಪಷ್ಟನೆ ನೀಡಿದರು. ಇತರ ಕೈದಿಗಳ ಜತೆಗೆ ದರ್ಶನ್ ಸಮಾಲೋಚನೆ ನಡೆಸುತ್ತಿರುವ ಚಿತ್ರಗಳು ತಮ್ಮ ಬಳಿ ಇವೆ ಎಂದೂ ವಾದಿಸಿದರು.

ಆಗ ನ್ಯಾಯಪೀಠ, 'ವಿಚಾರಣೆ ನಿಧಾನಗತಿಯಲ್ಲಿ ಏಕೆ ಸಾಗುತ್ತಿದೆ' ಎಂದು ಪ್ರಶ್ನಿಸಿತು. ಅದಕ್ಕೆ ಲೂತ್ರಾ, 'ಒಂದು ವರ್ಷದ ಒಳಗೆ 60 ಸಾಕ್ಷಿಗಳ ವಿಚಾರಣೆ ನಡೆಸಲು ಯೋಜಿಸಲಾಗಿದೆ' ಎಂದರು. ಅದಕ್ಕೆ ನ್ಯಾಯಪೀಠ, 'ಕೇವಲ ಸಾಕ್ಷಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಇರಬೇಡಿ' ಎಂದು ಸಲಹೆ ನೀಡಿತು. ಆಗ ರೋಹಟಗಿ, 'ಪ್ರಕರಣದ ವಿಚಾರಣೆ ನಡೆಸುತ್ತಿರುವ ನ್ಯಾಯಾಧೀಶರು ಹೆಚ್ಚುವರಿ ಹೊಣೆಗಾರಿಕೆ ಹೊಂದಿರುವುದರಿಂದ ವಿಚಾರಣೆ ನಿಧಾನವಾಗುತ್ತಿದೆ' ಎಂದು ದೂರಿದರು. ಆಗ ಲೂತ್ರಾ, 'ನಾವು ಒಂದು ದಿನದಲ್ಲಿ ಸಾಕ್ಷಿಗಳ ವಿಚಾರಣೆ ಪೂರ್ಣಗೊಳಿಸುತ್ತಿದ್ದೇವೆ. ಆದರೆ, ಪ್ರತಿವಾದಿಗಳ ವಕೀಲರು ಐದಾರು ದಿನಗಳ ಕಾಲ ಸಾಕ್ಷಿಗಳ ವಿಚಾರಣೆ ಮಾಡುತ್ತಿದ್ದಾರೆ' ಎಂದು ದೂರಿದರು.

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**
ಜಲಭವನ, 5ನೇ ಮಹಡಿ, ನಂ.5, 1ನೇ ಹಂತ, 1ನೇ ಘಟ್ಟ, ಬಿಟಿಎಂ ಲೇಔಟ್, ಬನ್ನೇರುಘಟ್ಟ ಮುಖ್ಯರಸ್ತೆ, ಬೆಂಗಳೂರು – 560029

**ತಿದ್ದುಪಡಿ**

ಸಂಖ್ಯೆ: **KWB/TEC/CE(B)/CHAN-UGD/TENDER/188/2026-27 Dated: 14.05.2026**

**ಕಾಮಗಾರಿಯ ಹೆಸರು:** ಚನ್ನಪಟ್ಟಣ ನಗರಕ್ಕೆ 2ನೇ ಹಂತದ ಒಳಚರಂಡಿ ವ್ಯವಸ್ಥೆ ಒದಗಿಸಲು (ಡಿಬಿಓಟಿ ಮಾದರಿ) ಮೂಲಕ 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಒಳಗೊಂಡಂತೆ (1 ವರ್ಷಗಳ ಡಿಎಲ್‌ಪಿ ಸೇರಿದಂತೆ) ಕಾಮಗಾರಿಯ ಟೆಂಡರ್.

ಇಂಡೆಂಟ್ ಸಂಖ್ಯೆ: **KUWSDB/2026-27/WS/Work_INDENT502**

ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in**ನಲ್ಲಿ ಪಡೆಯಬಹುದು.

ಸಹಿ/– ಮುಖ್ಯ ಅಭಿಯಂತರರು,
ಕನನೀಸ ಮತ್ತು ಒಚ ಮಂಡಳಿ, ಬೆಂಗಳೂರು

ಡಿಐಪಿಆರ್/ಸಿಪಿ/685/ಸಿಎಲ್/2026–27

**ಪೊಲೀಸ್ ಇಲಾಖೆ**
**ಪೊಲೀಸ್ ಆಯುಕ್ತರವರ ಕಛೇರಿ, ಬೆಂಗಳೂರು ನಗರ**

ಸಂಖ್ಯೆ : COPBCP/EST/EST3(MISC)/34/2023 ದಿನಾಂಕ : 14.05.2026

**ಪೊಲೀಸ್ ಇಲಾಖೆಯ ತಾಂತ್ರಿಕ ಹುದ್ದೆಗಳ ನೇಮಕಾತಿ ಪ್ರಕಟಣೆ**

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದಲ್ಲಿನ ಸೈಬರ್ ಕ್ರೈಂ ಪೊಲೀಸ್ ಠಾಣೆಗಳಲ್ಲಿ ಖಾಲಿ ಇರುವ 11 ತಾಂತ್ರಿಕ ಹುದ್ದೆಗಳನ್ನು ಒಪ್ಪಂದದ ಆಧಾರದ (Contract Basis) ಮೇಲೆ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಹುದ್ದೆ | ಹುದ್ದೆಗಳ ಸಂಖ್ಯೆ |
|---|---|
| ಸೈಬರ್ ಸೆಕ್ಯೂರಿಟಿ ಅನಾಲಿಸ್ಟ್ | 8 |
| ಡಿಜಿಟಲ್ ಫಾರೆನ್ಸಿಕ್ ಅನಾಲಿಸ್ಟ್ | 3 |

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ:18.05.2026 ಬೆಳಿಗ್ಗೆ 10.00 ಗಂಟೆಯಿಂದ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:24.05.2026 ಸಂಜೆ 06:00 ಗಂಟೆವರೆಗೆ.

ಮೇಲ್ಕಂಡ ಹುದ್ದೆಗಳ ನೇಮಕಾತಿ ಅಧಿಸೂಚನೆಯನ್ನು ಪೊಲೀಸ್ ಇಲಾಖೆಯ ಅಂತರ್ಜಾಲ https://ksp.karnataka.gov.in ರಲ್ಲಿ ಮತ್ತು ಪೊಲೀಸ್ ಆಯುಕ್ತರ ಅಂತರ್ಜಾಲ www.bcp.gov.in ರಲ್ಲಿ ಪ್ರಕಟಿಸಲಾಗಿರುತ್ತದೆ. ಸದರಿ ವೆಬ್ ಸೈಟ್‌ಗಳ ಮುಖಾಂತರ ವಿವರಗಳನ್ನು ಪಡೆದು ಅರ್ಜಿಗಳನ್ನು ಈ ಕಛೇರಿಯ ವಿಳಾಸ: ನಂ.01, ಇನ್‌ಫೆಂಟ್ರಿ ರಸ್ತೆ, ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು– 560001 ಕ್ಕೆ ಅಥವಾ ಇಲಾಖೆಯ ಇ–ಮೇಲ್ dcpadminbcp@ksp.gov.in ಗೆ ಸಲ್ಲಿಸುವುದು.

ಸಹಿ/–
ಅಧ್ಯಕ್ಷರು, ನೇಮಕಾತಿ ಸಮಿತಿ ಅಪರ ಪೊಲೀಸ್ ಆಯುಕ್ತರು,
ಅಪರಾಧಗಳು ಬೆಂಗಳೂರು ನಗರ.

DIPR/CP/681/Zen/2026-27

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ: ಬೆಂಗಳೂರು

ಸಂ: ಕರಾಸಾ/ವಿನಿ/ಕೆಂಬನಿ/ವಾ/4/158/2026–27 ದಿನಾಂಕ: 11.05.2026

**ಇ–ಟೆಂಡರ್ ಪ್ರಕಟಣೆ ಸಂಖ್ಯೆ: 01/2026–27**

ಕೆಂಪೇಗೌಡ ಬಸ್. ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು ಟರ್ಮಿನಲ್–3 ರಲ್ಲಿ ಖಾಲಿ ಇರುವ /ಖಾಲಿಯಾಗಲಿರುವ ಟರ್ಮಿನಲ್–01 ರಲ್ಲಿನ ಮಳಿಗೆ ಸಂಖ್ಯೆ 17,18, 24, 26, 44, 46, 48, 58, 59, 78, 118, 127, ಟರ್ಮಿನಲ್–02 ರಲ್ಲಿನ ಮಳಿಗೆ ಸಂಖ್ಯೆ 113, ಟರ್ಮಿನಲ್–02ಎ ರಲ್ಲಿನ ಮಳಿಗೆ ಸಂಖ್ಯೆ 07, 12 ಟರ್ಮಿನಲ್–03 ರಲ್ಲಿನ ಮಳಿಗೆ ಸಂಖ್ಯೆ 02, ದೂರವಾಣಿ ಬೂತ್, ಕಾರು & ದ್ವಿಚಕ್ರ ವಾಹನ ನಿಲುಗಡೆ (ಟರ್ಮಿನಲ್–3 ರ ಮುಖ್ಯದ್ವಾರದ ಎಡಭಾಗ & ಬಲಭಾಗದಲ್ಲಿರುವ ಖಾಲಿ ಜಾಗ & ಇಂದಿರಾ ಕ್ಯಾಂಟೀನ್‌ನ ಹಿಂಭಾಗ ಹಾಗೂ ಪಕ್ಕದಲ್ಲಿರುವ ಖಾಲಿ ಜಾಗ) ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿನ ಮಳಿಗೆ ಸಂಖ್ಯೆ 01 (ತೆರೆದ ಸ್ಥಳ), 06, 08, 11, 12, 11&12, 29, 30,31, 33 (ಲಾಡ್ಜಿಂಗ್ & ಡಾರ್ಮಿಟರಿ) ಹಾಗೂ ಶ್ರೀ ಬಸವೇಶ್ವರ ಬಸ್ ನಿಲ್ದಾಣದ (ಪೀಣ್ಯ) ಕೆಳಮಹಡಿ, ನೆಲಮಹಡಿ, ಎರಡನೇ ಮಹಡಿ ಮತ್ತು ಒಟ್ಟಾರೆ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ದಿನಾಂಕ: 15.05.2026 ರಿಂದ 04.06.2026 ರವರೆಗೆ ಇ–ಟೆಂಡರ್ ಮೂಲಕ ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಕ.ರಾ.ರ.ಸಾ.ನಿಗಮದ ವೆಬ್‌ಸೈಟ್: ksrtc.karnataka.bov.in ನಲ್ಲಿ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009, ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760990554, 7760990557 ಮತ್ತು ಕೆಪಿಪಿ ಪೋರ್ಟಲ್ ಸಹಾಯವಾಣಿ: ಸಂಖ್ಯೆ 09240214000 / 09240214001.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕೆಂಬನಿ ವಿಭಾಗ, ಬೆಂಗಳೂರು

DIPR/CP/684/NR/2026-27

## ಶಾಲೆಗಳಲ್ಲಿ ಹಿಜಾಬ್ ಧರಿಸುವುದಕ್ಕೆ ಪೂರಕ ಆದೇಶ: ಬೊಮ್ಮಾಯಿ ಟೀಕೆ

# ಕಾನೂನು ವಿವಾದ ಸೃಷ್ಟಿಸಿದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಲೆಗಳಲ್ಲಿ ಹಿಜಾಬ್ ಧರಿಸುವುದಕ್ಕೆ ಪೂರಕ ಆದೇಶ ಹೊರಡಿಸಿ, ಕಾನೂನು ರೀತಿಯಲ್ಲಿ ರಾಜ್ಯ ಸರ್ಕಾರವೇ ವಿವಾದ ಹುಟ್ಟು ಹಾಕಿದೆ. ಇದು ನಾಗರಿಕ ಸರ್ಕಾರಕ್ಕೆ ಶೋಭೆ ತರುವುದಿಲ್ಲ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

'ಶಾಲೆಗಳಲ್ಲಿ ಧರ್ಮದ ಆಧಾರದಲ್ಲಿ ತಾರತಮ್ಯ ಮನೋಭಾವ ಸೃಷ್ಟಿಗೆ ಕಾಂಗ್ರೆಸ್ ಸರ್ಕಾರವೇ ಅವಕಾಶ ನೀಡಿದ್ದು, ಇದರಿಂದ ಉದ್ಭವಿಸುವ ಸಮಸ್ಯೆಗಳಿಗೆ ಸಿದ್ದರಾಮಯ್ಯ ಸರ್ಕಾರವೇ ಹೊಣೆ ಹೊರಬೇಕು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಸವರಾಜ ಬೊಮ್ಮಾಯಿ

'ಮುಸ್ಲಿಮರ ತುಷ್ಟೀಕರಣಕ್ಕೆಂದೇ ಸರ್ಕಾರ ಈ ಆದೇಶ ಮಾಡಿದೆ. 1980ರ ಶಾಲಾ ಸಮವಸ್ತ್ರ ಕಾನೂನು ಅಡಿಯಲ್ಲಿ ನಮ್ಮ ಸರ್ಕಾರ ಆದೇಶ ಮಾಡಿತ್ತು. ಅದನ್ನು ಹೈಕೋರ್ಟ್ ಕೂಡ ಎತ್ತಿಹಿಡಿದಿತ್ತು. ಸುಪ್ರೀಂ ಕೋರ್ಟ್‌ನಲ್ಲೂ ಅದಕ್ಕೆ ವಿಭಜಿತ ತೀರ್ಪು ಬಂದಿತ್ತು. ಈ ಪ್ರಕರಣ ಇನ್ನೂ ಸುಪ್ರೀಂ ಕೋರ್ಟ್‌ನಲ್ಲಿ ಇರುವಾಗಲೇ ಮಕ್ಕಳಲ್ಲಿ ಭೇದ-ಭಾವದ ಆತಂಕ ಮೂಡಿಸುವ ಕೆಲಸ ಸರ್ಕಾರ ಮಾಡುತ್ತಿದೆ' ಎಂದು ಬೊಮ್ಮಾಯಿ ಟೀಕಿಸಿದ್ದಾರೆ.

'ರಾಜ್ಯ ಸರ್ಕಾರ ಶಿಕ್ಷಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹದಗೆಡಿಸಿದೆ. ಯಾವುದೇ ಸ್ಪಷ್ಟವಾದ ನೀತಿ ಇಲ್ಲ. ಗುಣಮಟ್ಟದ ವಿದ್ಯಾರ್ಜನೆ ಆಗುತ್ತಿಲ್ಲ. ಶಿಕ್ಷಕರ ಕೊರತೆ ಇದೆ. ತನ್ನ ತಪ್ಪುಗಳನ್ನು ಮುಚ್ಚಿಕೊಳ್ಳಲು ಇಂತಹ ಆದೇಶ ಮಾಡಿದ್ದಾರೆ. ಈ ಆದೇಶಕ್ಕೆ ತುಷ್ಟೀಕರಣದ ರಾಜಕಾರಣ ಬಿಟ್ಟರೆ ಬೇರೆ ಯಾವುದೇ ಕಾರಣವಿಲ್ಲ' ಎಂದು ಅವರು ತಿಳಿಸಿದ್ದಾರೆ.

'ಜಗತ್ತಿನ ಹಲವು ಮುಸ್ಲಿಂ ರಾಷ್ಟ್ರಗಳಲ್ಲಿ ಹೆಣ್ಣುಮಕ್ಕಳು ಹಿಜಾಬ್ ತೊರೆದು ನಿತ್ಯ ಜೀವನ ನಡೆಸುತ್ತಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯದಲ್ಲಿ ಹಿಜಾಬ್ ಧರಿಸಲು ಆದೇಶ ಮಾಡಿರುವುದು ಸೂಕ್ತವಲ್ಲ. ಕೂಡಲೇ ಆದೇಶ ಹಿಂದಕ್ಕೆ ಪಡೆಯಬೇಕು' ಎಂದು ಬೊಮ್ಮಾಯಿ ಒತ್ತಾಯಿಸಿದ್ದಾರೆ.

> **ಕಾಂಗ್ರೆಸ್ ತನ್ನ ಮತ ಬ್ಯಾಂಕ್ ಭದ್ರಪಡಿಸಿಕೊಳ್ಳಲು ದೇಶದ ಸಂವಿಧಾನವನ್ನು ಒತ್ತೆ ಇಡುವುದಕ್ಕೂ ಹೇಸುವುದಿಲ್ಲ. ಈಗ ಮತ್ತೆ ಹಿಜಾಬ್ ಧ್ಯಾನ ಆರಂಭಿಸಿದೆ. ಇಂಥ ಓಲೈಕೆ ರಾಜಕಾರಣದಿಂದ ದೇಶಾದ್ಯಂತ ಕಾಂಗ್ರೆಸ್ 'ಕಸ'ವಾಗಿದೆ**
> **ವಿ. ಸುನಿಲ್ ಕುಮಾರ್,** ಬಿಜೆಪಿ ಶಾಸಕ

### ಧರ್ಮ ಆಚರಣೆಗೆ, ಶಿಕ್ಷಣ ಬದುಕಿಗೆ: ಮಹದೇವಪ್ಪ

'ಶಾಲಾ ಕಾಲೇಜುಗಳಲ್ಲಿ ಜನಿವಾರ, ಶಿವದಾರ ಮತ್ತು ಹಿಜಾಬ್ ಹಾಕುವುದು ಅಪರಾಧವಲ್ಲ. ಎಲ್ಲ ಧರ್ಮಗಳಿಗೂ ಸಂವಿಧಾನ ಅವಕಾಶ ಕಲ್ಪಿಸಿದ್ದು, ಅದರ ಆಶಯಕ್ಕೆ ಪೂರಕವಾಗಿಯೇ ಧಾರ್ಮಿಕ ಸಂಕೇತಗಳನ್ನು ವಿದ್ಯಾರ್ಥಿಗಳು ಧರಿಸಬಹುದು' ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

ಮಹದೇವಪ್ಪ

'ಶಾಲಾ ಕಾಲೇಜುಗಳು ಮತ್ತು ಸರ್ಕಾರಿ ಕಚೇರಿಗಳು ಧರ್ಮಾತೀತ ಮತ್ತು ಜಾತ್ಯತೀತ ಸ್ಥಳಗಳಾಗಿವೆ. ಶಿಕ್ಷಣ ಪಡೆಯುವ ಜಾಗದಲ್ಲಿ ಬಾಬಾ ಸಾಹೇಬರು ಹೇಳುವ ಹಾಗೆ ಜ್ಞಾನಾರ್ಜನೆಯೇ ಮೊದಲ ಆದ್ಯತೆ ಆಗಲಿ. ಧರ್ಮ ಆಚರಣೆಗೆ-ಶಿಕ್ಷಣ ಬದುಕಿಗೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಎಂಬ ಸರಳ ಸತ್ಯ ಎಲ್ಲರಿಗೂ ಅರ್ಥವಾಗಲಿ' ಎಂದು ಅವರು ಪ್ರತಿಪಾದಿಸಿದ್ದಾರೆ.

ಶಿಕ್ಷಣ ಪಡೆದುಕೊಳ್ಳಬೇಕಾದ ಜಾಗದಲ್ಲಿ ಧಾರ್ಮಿಕ ಉಡುಪುಗಳನ್ನು ಹಾಕಬೇಕೇ ಅಥವಾ ಬೇಡವೇ ಎಂಬ ವಿಷಯಕ್ಕಿಂತ ಶಿಕ್ಷಣ ಪಡೆಯುವುದು ಮತ್ತು ಮಕ್ಕಳ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಜ್ಞಾನ ಸಂಪಾದನೆ ಮಾಡುವುದು ಆದ್ಯತೆ ಆಗಬೇಕು ಎಂದು ಮಹದೇವಪ್ಪ ಹೇಳಿದ್ದಾರೆ.

## ಸಾರ್ವಜನಿಕ ಸೇವೆಗೆ ಡ್ರೋನ್ ಬಳಕೆ: ಪ್ರಿಯಾಂಕ್

ಬೆಂಗಳೂರು: 'ಆಡಳಿತದಲ್ಲಿ ದಕ್ಷತೆ ಮತ್ತು ಸಾರ್ವಜನಿಕ ಸೇವೆಗಳ ಸ್ವರೂಪದಲ್ಲಿ ಗಮನಾರ್ಹ ಪರಿವರ್ತನೆ ತರುವ ಸಾಮರ್ಥ್ಯವನ್ನು ಡ್ರೋನ್‌ಗಳು ಹೊಂದಿದ್ದು, ಅವುಗಳ ವ್ಯಾಪಕ ಬಳಕೆಗೆ ರಾಜ್ಯ ಸರ್ಕಾರ ಉತ್ತೇಜನ ನೀಡಲಿದೆ' ಎಂದು ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಡ್ರೋನ್ ಉದ್ಯಮದ ಅಭಿವೃದ್ಧಿಗೆ ಸಂಬಂಧಿಸಿದಂತೆ ಶುಕ್ರವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಅವರು ಮಾತನಾಡಿದರು.

'ಡ್ರೋನ್‌ಗಳ ತಯಾರಿಕೆ ಮತ್ತು ಬಳಕೆಯಲ್ಲಿ ಕರ್ನಾಟಕವು ಆದ್ಯತೆಯ ಕೇಂದ್ರವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕಾರ್ಯ-ಪ್ರವೃತ್ತವಾಗಿದೆ. ದೇಶದ ಡ್ರೋನ್ ಆರ್ಥಿಕತೆ ಮುನ್ನಡೆಸಲು ಕರ್ನಾಟಕ ಬದ್ಧವಾಗಿದೆ' ಎಂದು ಪ್ರಿಯಾಂಕ್ ಹೇಳಿದರು.

ಡ್ರೋನ್ ನಾವೀನ್ಯ ಮತ್ತು ಅವುಗಳ ಬಳಕೆಯಲ್ಲಿ ಕರ್ನಾಟಕವು ಮುಂಚೂಣಿಯಲ್ಲಿ ಇರುವುದಕ್ಕೆ ಇನ್ನಷ್ಟು ವೇಗ ನೀಡಲು ಕೈಗೊಳ್ಳಬೇಕಾದ ಕ್ರಮಗಳು, ಬೆಂಗಳೂರಿನ ಸಮೀಪ ಪ್ರತ್ಯೇಕ ಡ್ರೋನ್ ಹಾರಾಟ ಪರೀಕ್ಷಾ ಸೌಲಭ್ಯ ಅಭಿವೃದ್ಧಿಪಡಿಸುವುದರ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

## ಪ್ರತ್ಯೇಕ ಅವಘಡ: 11 ಸಾವು

**ಎರಡನೇ ಮುಖಪುಟದಿಂದ...**

'ಜಾತ್ರೆಗೆ ಟ್ರ್ಯಾಕ್ಟರ್‌ನಲ್ಲಿ ಹೊರಟಿದ್ದ ಭಕ್ತರು ಮೃತಪಟ್ಟಿದ್ದಾರೆ. ಪ್ರಾಥಮಿಕ ವರದಿಯ ಪ್ರಕಾರ ಟ್ಯಾಂಕರ್ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಟ್ಯಾಂಕರ್ ಚಾಲಕನನ್ನು ಬಂಧಿಸಲಾಗಿದೆ' ಎಂದು ಬಳ್ಳಾರಿ ವಲಯದ ಐಜಿಪಿ ಪಿ.ಎಸ್. ಹರ್ಷ ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

**ತಲಾ ₹5 ಲಕ್ಷ ಪರಿಹಾರ:** ರಸ್ತೆ ಅಪಘಾತದಲ್ಲಿ ಮೃತಪಟ್ಟ ಆರು ಮಂದಿಯ ಕುಟುಂಬಗಳಿಗೆ ಮುಖ್ಯಮಂತ್ರಿ ಅವರ ಪರಿಹಾರ ನಿಧಿಯಿಂದ ತಲಾ ₹5 ಲಕ್ಷ ನೀಡಲಾಗುವುದು ಎಂದು ಸಂಸದ ಇ.ತುಕಾರಾಂ ತಿಳಿಸಿದರು. 'ಅಪಘಾತದ ಬಗ್ಗೆ ಮುಖ್ಯಮಂತ್ರಿ ಅವರ ಜತೆಗೆ ಮಾತನಾಡಿರುವೆ. ತಕ್ಷಣ ತಲಾ ₹5 ಲಕ್ಷ ಪರಿಹಾರ ನೀಡುವುದಾಗಿ ಪ್ರಕಟಿಸಿದ್ದಾರೆ' ಎಂದು ಅವರು ತಿಳಿಸಿದರು. 'ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ನಾನೇ ಭರಿಸಲಿದ್ದೇನೆ. ಕಂಪನಿಗಳ ಸಿಎಸ್‌ಆರ್ ನಿಧಿಯಡಿ ಗರಿಷ್ಠ ₹1 ಲಕ್ಷವರೆಗೂ ವೆಚ್ಚ ಭರಿಸಲು ಅವಕಾಶ ಇದೆ' ಎಂದು ಸಂಸದರು ಹೇಳಿದರು.

### ಚಾವಣಿ ಕುಸಿದು ನಾಲ್ವರ ಸಾವು

ವಿಜಯಪುರ: ಜಿಲ್ಲೆಯ ಆಲಮೇಲ ತಾಲ್ಲೂಕಿನ ಮೋರಟಗಿದಲ್ಲಿ ಗುರುವಾರ ತಡರಾತ್ರಿ ಮನೆಯ ಚಾವಣಿ ಕುಸಿದು ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದಾರೆ. ದಂಪತಿ ಗುರುನಾಥ ಬಡಿಗೇರ (35), ಜ್ಯೋತಿ (28), ಅವರ ಮಕ್ಕಳಾದ ಕಾಳಮ್ಮ (13), ಕೀರ್ತಿ (9) ಮೃತರು. ಗುರುನಾಥ ಅವರ ತಾಯಿ ಶಾಂತಾಬಾಯಿ ಮತ್ತು ಇನ್ನೊಬ್ಬ ಮಗ ವೀರೇಶ ಇನ್ನೊಂದು ಮನೆಯಲ್ಲಿ ಮಲಗಿದ್ದರಿಂದ ಅಪಾಯದಿಂದ ಪಾರಾಗಿದ್ದಾರೆ. ದಂಪತಿ ತಮ್ಮ ಮನೆ ದುರಸ್ತಿ ಹಿನ್ನೆಲೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಶುಕ್ರವಾರ ತಮ್ಮ ಮನೆಗೆ ಮರಳುವವರಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

**ಪರಿಹಾರ ಘೋಷಣೆ:** ಘಟನಾ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಪರಿಶೀಲನೆ ನಡೆಸಿ, ಕುಟುಂಬದವರಿಗೆ ಸಾಂತ್ವನ ಹೇಳಿದರು. 'ಮೃತ ನಾಲ್ವರ ಕುಟುಂಬಗಳಿಗೆ ತಲಾ ₹ 5 ಲಕ್ಷ ಪರಿಹಾರ ನೀಡಲಾಗುವುದು. ಕುಟುಂಬದ ಬಾಲಕ ವೀರೇಶ ಬಡಿಗೇರ ಶಿಕ್ಷಣಕ್ಕೆ ನೆರವು ನೀಡಲಾಗುವುದು. ಪರಿಹಾರದ ಹಣವನ್ನು ಬಾಲಕನ ಹೆಸರಿನಲ್ಲಿ ಠೇವಣಿ ಇಡಲಾಗುವುದು' ಎಂದು ಎಂ.ಬಿ.ಪಾಟೀಲ ತಿಳಿಸಿದರು.

## ಸಂಕ್ಷಿಪ್ತ ಸುದ್ದಿ

### ಬೆಲೆ ಏರಿಕೆ ವಾಪಸ್‌ಗೆ ಸಿದ್ದರಾಮಯ್ಯ ಒತ್ತಾಯ

ಬೆಂಗಳೂರು: ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ನಿರ್ಧಾರವನ್ನು ಕೇಂದ್ರ ಸರ್ಕಾರ ತಕ್ಷಣವೇ ಹಿಂಪಡೆಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎಲ್‌ಪಿಜಿ ಸಿಲಿಂಡರ್ ಪೂರೈಕೆಯ ವ್ಯತ್ಯಯದಿಂದ ಪರದಾಡುತ್ತಿರುವ ಜನರನ್ನು ಬೆಲೆ ಏರಿಕೆ ಮತ್ತಷ್ಟು ಸಂಕಷ್ಟಕ್ಕೆ ದೂಡಲಿದೆ. ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳ ನಂತರ ಕೇಂದ್ರ ಸರ್ಕಾರ ದರ ಹೆಚ್ಚಳ ಮಾಡುವ ನಿರೀಕ್ಷೆ ಇತ್ತು. ನರೇಂದ್ರ ಮೋದಿ ದೇಶದ ಪ್ರಧಾನಿಯಾದ ನಂತರ ಹಲವು ಬಾರಿ ತೈಲ ದರಗಳನ್ನು ಹೆಚ್ಚಿಸಿದ್ದಾರೆ. ಈ ಬೆಲೆಏರಿಕೆ ಜನಸಾಮಾನ್ಯರ ಮೇಲೆ ಪರಿಣಾಮ ಬೀರಲಿದ್ದು, ಕಾರ್ಮಿಕರು, ರೈತರು, ಬಡವರ ಬದುಕು ದುಸ್ತರವಾಗಲಿದೆ' ಎಂದರು.

'ಕರ್ನಾಟಕದಲ್ಲಿ ಇತರೆ ರಾಜ್ಯಗಳಿಗಿಂತ ಪೆಟ್ರೋಲ್ ಬೆಲೆ ಕಡಿಮೆ ಇತ್ತು. ರಾಜ್ಯ ಸರ್ಕಾರ ಸ್ವಲ್ಪ ಹೆಚ್ಚಳ ಮಾಡಿದ್ದಕ್ಕೆ ಬಿಜೆಪಿ ಮುಖಂಡರು ಟೀಕೆ ಮಾಡಿದ್ದರು. 2014ಕ್ಕೂ ಮೊದಲು ₹413 ಇದ್ದ ಗೃಹಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಈಗ ₹1,000 ದಾಟಿದೆ. ನಿತ್ಯದ ಬೆಲೆ ಹೆಚ್ಚಳಕ್ಕೂ ಕಾರಣವಾಗಲಿದೆ. ಜನಜೀವನವನ್ನು ಅಸ್ತವ್ಯಸ್ತಗೊಳಿಸಲಿದೆ' ಎಂದು ದೂರಿದರು.

**ಬೆಲೆ ಏರಿಕೆ ಮೋದಿ ಕೊಡುಗೆ: ಡಿಕೆಶಿ**

'ಬೆಲೆ ಏರಿಕೆ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆ. ಅಂತರರಾಷ್ಟ್ರೀಯ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟೀಕಿಸಿದರು. ಸುದ್ದಿಗಾರರ ಜತೆ ಮಾತನಾಡಿದ ಅವರು, 'ಇಂಧನಗಳನ್ನು ಬಳಸದೆ ನಿತ್ಯ ಜೀವನ ಮಾಡುವುದು ಹೇಗೆ? ಅನೇಕರು ತಮ್ಮ ಬೆಂಗಾವಲು ಪಡೆ ವಾಹನಗಳನ್ನು ಕಡಿತ ಮಾಡಿದ್ದಾರೆ. ಆದರೆ, ಜನರು ಬದುಕಿಗಾಗಿ ಪ್ರಯಾಣ ಅನಿವಾರ್ಯ. ದೇಶ ದೊಡ್ಡ ದುರಂತದ ಸ್ಥಿತಿಗೆ ಬಂದಿದೆ' ಎಂದರು.

### ಟೀಕಿಸದಿದ್ದರೆ ಎಚ್‌ಡಿಕೆಗೆ ರಾಜಕೀಯ ಬದುಕಿಲ್ಲ: ಡಿಕೆಶಿ

ಬೆಂಗಳೂರು: 'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನನ್ನ ಬಗ್ಗೆ ಟೀಕೆ ಮಾಡಲಿಲ್ಲ ಎಂದರೆ ರಾಜಕೀಯವಾಗಿ ಬದುಕಿರಲು ಆಗುವುದಿಲ್ಲ. ನಾನು ಒಳ್ಳೆಯ ಕೆಲಸ ಮಾಡುತ್ತೇನೆ, ಅವರು ವಿರೋಧ ಮಾಡುತ್ತಾರೆ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕುಮಾರಸ್ವಾಮಿ ಅವರೇ ಯೋಜನೆಯ ಭೂಮಿಯನ್ನು ಡಿನೋಟಿಫೈ ಮಾಡಬಹುದಿತ್ತು. ಯಾಕೆ ಮಾಡಲಿಲ್ಲ? ರಾಜ್ಯ ಸರ್ಕಾರ ಈಗ ಡಿನೋಟಿಫೈ ಮಾಡಲು ಸಿದ್ಧವಿಲ್ಲ. ಡಿನೋಟಿಫೈ ಮಾಡಿ ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಅನುಭವಿಸುತ್ತಿರುವುದು ಅವರಿಗೆ ಗೊತ್ತು' ಎಂದು ಹೇಳಿದರು.

'ಬಿಡದಿ ಉಪನಗರ ಯೋಜನೆಯ ಬಗ್ಗೆ ಟೀಕೆ ಮಾಡಿದ್ದಾರೆ. ಅವರು ಮಾಡಿದ ಯೋಜನೆಯನ್ನೇ ಮುಂದುವರಿಸಲಾಗುತ್ತಿದೆ. ಯೋಜನೆಯ ಉಪಯೋಗ ಕುರಿತು ರೈತರ ಬಳಿಗೇ ತೆರಳಿ ಮನವೊಲಿಸುತ್ತೇವೆ. ರೈತರು ಎರಡು ಏಟು ಹೊಡೆಯಬಹುದು, ಬಟ್ಟೆ ಹರಿಯಬಹುದು, ಕಲ್ಲು ಎಸೆಯಬಹುದು, ಧಿಕ್ಕಾರ ಹಾಕಬಹುದು. ಅದಕ್ಕೆಲ್ಲಾ ಹೆದರಿಕೊಳ್ಳಲು ಆಗುತ್ತದೆಯೇ? ಮುಂದೆ ಅವರ ಭವಿಷ್ಯ, ಮಕ್ಕಳ ಹಾಗೂ ಆಸ್ತಿಗಳ ಭವಿಷ್ಯ ಮುಖ್ಯ. ಮುಂದಿನ 20 ವರ್ಷಗಳ ನಂತರ ಬಿಡದಿ, ಬೆಂಗಳೂರು ದಕ್ಷಿಣದ ಜನರು ಈ ಉತ್ತಮ ಕಾರ್ಯವನ್ನು ಸ್ಮರಿಸುತ್ತಾರೆ' ಎಂದರು.

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ**
**ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ**

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ತಾಶಾ–4/ಟೆಂಡರ/2026–27/445 ದಿನಾಂಕ: 14/05/2026

**ಇ–ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ–ಲಕೋಟೆ ಪದ್ಧತಿಯಲ್ಲಿ**

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: ಕಲಬುರಗಿ ಜಿಲ್ಲೆಯ ಕಲಬುರಗಿ ಪಟ್ಟಣದಲ್ಲಿ ನೂತನ ಜಿಲ್ಲಾ ಪಂಚಾಯತ್ ಕಟ್ಟಡ ನಿರ್ಮಾಣ ಕಾಮಗಾರಿಯ ಇಂಡೆಂಟ್ ಸಂಖ್ಯೆ RDPR/2026-27/BD/WORK_INDENT25907, 2) ಲೆಕ್ಕ ಶೀರ್ಷಿಕೆ: **2025–26 ಮತ್ತು 2026–27ನೇ ಸಾಲಿನ 4515–00–102–1–03–386 ಮತ್ತು 2026–27ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ**, 3) ಟೆಂಡರಿಗಿಟ್ಟ ಅಂದಾಜು ಮೊತ್ತ: ರೂ. **36,71,66,483.48** 4) ಗುತ್ತಿಗೆದಾರರ ಅರ್ಹತೆ: 1ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **13.5.2026 ರಿಂದ 15.6.2026 ಸಾಯಂಕಾಲ 4:00 ಗಂಟೆವರೆಗೆ**, 6) ಟೆಂಡರ ಅರ್ಜಿ ಬೆಲೆ : ರೂ. 7,500.00, 7) ಇ.ಎಂ.ಡಿ. : ರೂ. **36,75,000.00**, 8) ಟೆಂಡರ ಸಲ್ಲಿಸುವ ದಿನಾಂಕ: **13.5.2026 ರಿಂದ 15.6.2026 ಸಾಯಂಕಾಲ 4:00 ಗಂಟೆವರೆಗೆ**, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **16.06.2026 ಸಾಯಂಕಾಲ 4:00 ಗಂಟೆ ನಂತರ**, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **18.06.2026 ಬೆಳಿಗ್ಗೆ 11:00 ಗಂಟೆ ನಂತರ**, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ್‌ರಾಜ್ ಇಂಜಿನೀಯರಿಂಗ್ ವಿಭಾಗ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಧಾನ ಕಛೇರಿ ಎದುರಿಗೆ, ಸರ್ಕಾರಿ ಪದವಿ ಕಾಲೇಜು ಹತ್ತಿರ ಕಲಬುರಗಿ–585105, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/122/ಕೆ.ಎಸ್.ಎಂ.ಸಿ.&ಎ/2026–27

## ಬೇಡ ಜಂಗಮ: ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಲಾಗಿದ್ದ ಮೇಲ್ಮನವಿ ಅರ್ಜಿ

# ಪ್ರಮಾಣಪತ್ರ ವಿವಾದ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ವೀರಶೈವ ಜಂಗಮರು ಬೇಡ ಜಂಗಮರಲ್ಲ ಎಂದು ಹೈಕೋರ್ಟ್ ನೀಡಿದ್ದ ತೀರ್ಪು ಪ್ರಶ್ನಿಸಿ ಸಲ್ಲಿಸಲಾದ ಮೇಲ್ಮನವಿ ಅರ್ಜಿ ಸಂಬಂಧ ಕರ್ನಾಟಕ ಸರ್ಕಾರ ಹಾಗೂ ಇತರರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ನೋಟಿಸ್ ಜಾರಿ ಮಾಡಿದೆ.

'ಲಿಂಗಾಯತ ಸಮುದಾಯದ ಜಂಗಮರೇ ಬೇರೆ, ಬುಡ್ಗ ಅಥವಾ ಬೇಡ ಜಂಗಮರೇ ಬೇರೆ' ಎಂದು 2025ರ ಜೂನ್ 30ರಂದು ಸ್ಪಷ್ಟಪಡಿಸಿದ್ದ ಹೈಕೋರ್ಟ್, 'ವೀರಶೈವ ಜಂಗಮರು ಬೇಡ ಅಥವಾ ಬುಡ್ಗ ಜಂಗಮರಲ್ಲ' ಎಂದು ಮಹತ್ವದ ತೀರ್ಪು ನೀಡಿತ್ತು.

ಈ ಸಂಬಂಧ ರಾಜ್ಯ ಸಮಾಜ ಕಲ್ಯಾಣ ಇಲಾಖೆ, ಬೀದರ್‌ನ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾರುತಿ ಬೌದ್ಧೆ ಹಾಗೂ ಬೀದರ್‌ನ ರಾಘವೇಂದ್ರ ಕಾಲೋನಿಯ ರವೀಂದ್ರ ಸ್ವಾಮಿ ಸಲ್ಲಿಸಿದ್ದ ರಿಟ್ ಮೇಲ್ಮನವಿಗಳಲ್ಲಿ ಈ ಕುರಿತಂತೆ ಆದೇಶ ಹೊರಡಿಸಿತ್ತು.

'ವೀರಶೈವ ಸಮುದಾಯದ ಜಂಗಮರು ಪುರೋಹಿತ ವರ್ಗಕ್ಕೆ ಸೇರಿದವರು ಮತ್ತು ಇವರೆಲ್ಲಾ ಸಸ್ಯಾಹಾರಿಗಳು. ಆದರೆ, ಬೇಡ ಜಂಗಮರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಗುತ್ತದೆ' ಎಂಬ ಅಂಶವನ್ನು ಪೀಠ ದಾಖಲಿಸಿತ್ತು.

'ಜಾತಿ ಹೆಸರು ಒಂದೇ ರೀತಿ ಇದೆ ಎನ್ನುವ ಕಾರಣಕ್ಕಾಗಿ ಆ ಜಾತಿಗಳಿಗೆ ಪರಿಶಿಷ್ಟ ಜಾತಿಗಳ ಸ್ಥಾನಮಾನ ನೀಡಲಾಗದು ಎಂದು ಸುಪ್ರೀಂ ಕೋರ್ಟ್ ಈಗಾಗಲೇ ಪ್ರಭುದೇವ ಮಲ್ಲಿಕಾರ್ಜುನಯ್ಯ ವರ್ಸಸ್ ರಾಮಚಂದ್ರ ವೀರಪ್ಪ ಪ್ರಕರಣದಲ್ಲಿ ತೀರ್ಮಾನಿಸಿದೆ' ಎಂಬ ಅಂಶವನ್ನು ನ್ಯಾಯಪೀಠ ಉಲ್ಲೇಖಿಸಿತ್ತು.

'ಲಿಂಗಾಯತ ವರ್ಗಕ್ಕೆ ಸೇರಿರುವ ಅರ್ಜಿದಾರ ರವೀಂದ್ರ ಸ್ವಾಮಿ, ಬೇಡ ಜಂಗಮ ಪ್ರಯೋಜನ ಪಡೆಯಲು ಹಕ್ಕು ಮಂಡಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವರ ಕುಟುಂಬದ ಒಬ್ಬರಿಗೆ ಬೇಡ ಜಂಗಮ ಪ್ರಮಾಣ ಪತ್ರ ದೊರೆತಿದೆ ಎಂದ ಮಾತ್ರಕ್ಕೆ ಇತರರಿಗೂ ಆ ಪ್ರಮಾಣ ಪತ್ರ ನೀಡಬೇಕೆಂಬ ಅನುಮತಿಯನ್ನು ಒಪ್ಪಲಾಗದು. ಏಕೆಂದರೆ, ಅವರು ವೀರಶೈವ ಸಮುದಾಯಕ್ಕೆ ಸೇರಿದವರಾಗಿದ್ದಾರೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿತ್ತು.

ಇದನ್ನು ಪ್ರಶ್ನಿಸಿ ರವೀಂದ್ರಸ್ವಾಮಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ್ದರು. ಅದನ್ನು ಸುಪ್ರೀಂ ಕೋರ್ಟ್ ಈ ಹಿಂದೆ ವಜಾಗೊಳಿಸಿತ್ತು.

### 'ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸಿ'

ಕರ್ನಾಟಕ ಬೇಡ ಜಂಗಮ ಸಮಾಜ ಸಂಸ್ಥೆ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್‌ನಾಥ್ ಹಾಗೂ ಸಂದೀಪ್ ಮೆಹ್ತಾ ಪೀಠವು, ಬೇಡ ಜಂಗಮ ಪರಿಶಿಷ್ಟ ಜಾತಿ ಪ್ರಮಾಣಪತ್ರ ವಿವಾದಕ್ಕೆ ಸಂಬಂಧಿಸಿದಂತೆ ನಾಲ್ಕು ವಾರಗಳಲ್ಲಿ ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಈ ಸಂಘವು 4 ಲಕ್ಷ ಸದಸ್ಯರನ್ನು ಹೊಂದಿದೆ.

ಅರ್ಜಿದಾರರ ಪರ ಹಿರಿಯ ವಕೀಲರಾದ ಎಸ್. ಗುರು ಕೃಷ್ಣ ಕುಮಾರ್, ಮಹಾಲಕ್ಷ್ಮಿ ಪಾವನಿ ಮತ್ತು ವಕೀಲ ಟಾಮಿ ಚಾಕೊ ವಾದಿಸಿದರು.

# ‘ವಿ.ವಿಯಲ್ಲಿ ಸುರಕ್ಷಿತ ವಾತಾವರಣ ಕಲ್ಪಿಸಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ (ಎಪಿಯು) ಇತ್ತೀಚೆಗೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು ನಡೆಸಿದ ದಾಳಿಯನ್ನು ಖಂಡಿಸಿರುವ ವಿವಿಧ ಸಂಘಟನೆಗಳ ಪ್ರತಿನಿಧಿಗಳು, ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳಿಗೆ ಸುರಕ್ಷಿತ ವಾತಾವರಣ ಕಲ್ಪಿಸಬೇಕೆಂದು ಆಗ್ರಹಿಸಿದ್ದಾರೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ‘ನಾವೆದ್ದು ನಿಲ್ಲದಿದ್ದರೆ’ ಸಂಘಟನೆಯ ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಮಧು ಭೂಷಣ್, ‘ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸ್ಪಾರ್ಕ್–ಎಪಿಯು ವಿದ್ಯಾರ್ಥಿ ಸಂಘಟನೆ ಆಯೋಜಿಸಿದ್ದ ‘ರೀಡಿಂಗ್ ಸರ್ಕಲ್’ ಕಾರ್ಯಕ್ರಮ ವಿರೋಧಿಸಿ, ಎಬಿವಿಪಿಯ 20 ಜನರ ಗುಂಪೊಂದು ವಿ.ವಿ ಕ್ಯಾಂಪಸ್‌ಗೆ ನುಗ್ಗಿ ದಾಳಿ ನಡೆಸಿತ್ತು. ಕುನಾನ್–ಪೋಶ್ಪೋರಾ ದೌರ್ಜನ್ಯ ಮತ್ತು ಭಾರತೀಯ ಸೇನೆಯ ಸಾಮೂಹಿಕ ಅತ್ಯಾಚಾರದ ಕುರಿತು ಆ ಕಾರ್ಯಕ್ರಮ ಕೇಂದ್ರೀಕೃತವಾಗಿತ್ತು. ದೇಶ ವಿರೋಧಿ ಕಾರ್ಯಕ್ರಮವೆಂದು ಬಿಂಬಿಸಿ, ದಾಳಿ ನಡೆಸಿರುವುದು ಖಂಡನೀಯ. ಈ ಘಟನೆಯ ಸತ್ಯಾಸತ್ಯತೆ ತಿಳಿಯಲು ವಿವಿಧ ನಾಗರಿಕ ಸಂಘಟನೆಗಳ ಕಾರ್ಯಕರ್ತರ ತಂಡವು ಸಂಬಂಧಪಟ್ಟವರಿಂದ ಮಾಹಿತಿ ಕಲೆ ಹಾಕಿ, ವರದಿ ತಯಾರಿಸಿದೆ’ ಎಂದು ಹೇಳಿದರು.

‘ದಾಳಿ ನಡೆಯುವುದು ಮೊದಲೇ ತಿಳಿದಿದ್ದರೂ ವಿಶ್ವ ವಿದ್ಯಾಲಯದ ಆಡಳಿತ ಮಂಡಳಿ ಸೂಕ್ತ ಕ್ರಮಕೈಗೊಳ್ಳಲು ವಿಫಲವಾಗಿದೆ. ಈ ಪ್ರಕರಣದಲ್ಲಿ ಎಬಿವಿಪಿಯನ್ನು ಹೊಣೆಗಾರರನ್ನಾಗಿ ಮಾಡಲು ಎಪಿಯು ವಿಫಲವಾಗಿದೆ. ಬದಲಾಗಿ ತನ್ನದೇ ವಿದ್ಯಾರ್ಥಿಗಳನ್ನು ದಂಡನೆಗೆ ಗುರಿಯಾಗಿಸಿದೆ. ಈ ಬಗ್ಗೆ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಜತೆಗೆ ಮಾತನಾಡಲು ಪ್ರಯತ್ನಿಸಿದರೂ ಅವರು ಸಂಪರ್ಕಕ್ಕೆ ಸಿಗಲಿಲ್ಲ’ ಎಂದು ದೂರಿದರು.

‘ಬಹುತ್ವ ಕರ್ನಾಟಕ’ದ ಮೋಹನ್ ರಾವ್ ಮಾತನಾಡಿ, ‘ಈ ಪ್ರಕರಣದಲ್ಲಿ ವಿಶ್ವವಿದ್ಯಾಲಯವು ವಿದ್ಯಾರ್ಥಿನಿಯನ್ನು ಎರಡು ವರ್ಷಗಳ ಕಾಲ ಅಮಾನತು ಮಾಡಿದೆ. ಇದು ವಿದ್ಯಾರ್ಥಿ ವಿರೋಧಿ ನಡೆಯಾಗಿದೆ. ಕೂಡಲೇ ಈ ಅಮಾನತು ರದ್ದುಗೊಳಿಸಬೇಕು. ವಿದ್ಯಾರ್ಥಿ ಚಟುವಟಿಕೆಗಳ ಮೇಲಿನ ನಿರ್ಬಂಧವನ್ನು ತೆಗೆಯಬೇಕು. ಸ್ಪಾರ್ಕ್–ಎಪಿಯು ವಿರುದ್ಧದ ಪ್ರಕರಣವನ್ನು ಪೊಲೀಸರು ರದ್ದು ಮಾಡಿ, ಎಬಿವಿಪಿ ಗುಂಪಿನ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಶಿಕ್ಷಣ ತಜ್ಞ ಸುವ್ರತ್ ರಾಜು, ಪಿಯುಸಿಎಲ್–ಕರ್ನಾಟಕದ ಅಧ್ಯಕ್ಷ ಅರವಿಂದ್ ನರೈನ್, ಎಐಎಲ್‌ಎಜೆ–ಕರ್ನಾಟಕದ ಮಧುಲಿಕಾ ಟಿ. ಉಪಸ್ಥಿತರಿದ್ದರು.

### ‘ಸಂವಿಧಾನಕ್ಕೆ ವಿರುದ್ಧ’

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ವಿಶೇಷ ಶಿಸ್ತು ಸಮಿತಿ ರಚನೆಯೂ ಪಾರದರ್ಶಕವಾಗಿ ನಡೆದಿಲ್ಲ. ಎಬಿವಿಪಿ ನಡೆಸಿದ ದಾಳಿ ಸಂವಿಧಾನಕ್ಕೆ ವಿರುದ್ಧವಾಗಿದ್ದು, ವಿಶ್ವವಿದ್ಯಾಲಯವು ಸ್ಪಾರ್ಕ್–ಎಪಿಯು ವಿರುದ್ಧದ ಎಲ್ಲ ಆರೋಪಗಳನ್ನು ಹಿಂಪಡೆಯಬೇಕು ಎಂದು ಮಧು ಭೂಷಣ್ ಆಗ್ರಹಿಸಿದ್ದಾರೆ.

ಆರ್ಟ್ ಆಫ್ ಗಿವಿಂಗ್‌ನ 13ನೇ ವಾರ್ಷಿಕೋತ್ಸವದ ಅಂಗವಾಗಿ ಮಹಿಳೆಯರನ್ನು ಸನ್ಮಾನಿಸಲಾಯಿತು

# ಪೌರಕಾರ್ಮಿಕರಿಗೆ ಸೀರೆ ವಿತರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆರ್ಟ್ ಆಫ್ ಗಿವಿಂಗ್‌ನ 13ನೇ ವಾರ್ಷಿಕೋತ್ಸವದ (ಮೇ 17) ಅಂಗವಾಗಿ ಬಸವೇಶ್ವರ ನಗರದ ಇಂಡಿಯನ್ ಹೈಸ್ಕೂಲ್‌ನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಶಾಲೆಯ ಸುತ್ತಮುತ್ತ ಕೆಲಸ ಮಾಡುವ ಪೌರಕಾರ್ಮಿಕರು, ಆಯಾಗಳು, ಬಡ ಮಹಿಳೆಯರಿಗೆ ಸೀರೆ ಮತ್ತು ಹಣ್ಣು ವಿತರಿಸಲಾಯಿತು. ಈ ಬಾರಿಯ ಆರ್ಟ್ ಆಫ್ ಗಿವಿಂಗ್‌ನ ಘೋಷವಾಕ್ಯ ‘ಶೇರ್ ಟು ಶೈನ್’ ಆಗಿದೆ.

ಶಾಲೆಯ ಕಾರ್ಯದರ್ಶಿ ಎಚ್.ಎಂ. ಸೌಭಾಗ್ಯಲಕ್ಷ್ಮಿ ಮಾತನಾಡಿ, ‘ಬಡ ಮಹಿಳೆಯರು, ಪೌರಕಾರ್ಮಿಕರನ್ನು ಗುರುತಿಸಿ ಗೌರವಿಸಿರುವುದು ಒಳ್ಳೆಯ ಕೆಲಸ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗೌರವ ಸ್ವೀಕರಿಸಿ ಮಾತನಾಡಿದ ಪೌರಕಾರ್ಮಿಕರು, ‘ಪರಿಸರದ ಸ್ವಚ್ಛತೆಗಾಗಿ ಕೆಲಸ ಮಾಡುತ್ತೇವೆ. ನಮ್ಮ ಸೇವೆಯನ್ನೂ ಆರ್ಟ್ ಆಫ್ ಗಿವಿಂಗ್ ಗುರುತಿಸಿರುವುದಕ್ಕೆ ಧನ್ಯವಾದಗಳು’ ಎಂದರು.

ಇದೇ ವೇಳೆ ವಿಜ್ಞಾನ ಶಿಕ್ಷಕಿ ಜ್ಯೋತಿ ಪ್ರಿಯಾ ಅವರು, ನೀರನ್ನು ಹೇಗೆ ಕುಡಿಯಬೇಕು, ಯಾವ ನೀರು ಕುಡಿಯುಲು ಯೋಗ್ಯ, ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ಮಾಹಿತಿ ನೀಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಜಂಟಿ ಕಾರ್ಯದರ್ಶಿ ಜಯಲಕ್ಷ್ಮಿ, ಸಮನ್ವಯಕಾರರಾದ ಮಮತಾ ಎನ್. ಸ್ವಾಮಿ, ಅನಿತಾ ಗುರು ಪ್ರಸಾದ್, ಶಿಕ್ಷಕಿ ವೀಣಾ ಇದ್ದರು.

# ನೀಟ್ ಮರುಪರೀಕ್ಷೆ: ದೀಕ್ಷಾ ವೇದಾಂತು ಸಂಸ್ಥೆಯಿಂದ ತರಬೇತಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೀಕ್ಷಾ ವೇದಾಂತು ಸಂಸ್ಥೆಯು ‘ರೀ–ನೀಟ್’ ಕಾರ್ಯಕ್ರಮ ಆಯೋಜಿಸಿದ್ದು, ನೀಟ್ ಆಕಾಂಕ್ಷಿಗಳಿಗೆ ಉಚಿತವಾಗಿ ಆನ್‌ಲೈನ್ ತರಬೇತಿ ನೀಡುವುದರ ಜತೆಗೆ ಕ್ಯಾಂಪಸ್‌ಗಳಲ್ಲಿ ಆಫ್‌ಲೈನ್ ತರಗತಿಗೆ ಹಾಜರಾಗಲು ಅವಕಾಶ ಕಲ್ಪಿಸಿದೆ.

ಇದರ ಉದ್ದೇಶ ಶೈಕ್ಷಣಿಕ ಸಿದ್ಧತೆ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುವುದು, ಸ್ಥಿರತೆ ಕಾಪಾಡಿಕೊಳ್ಳಲು, ಮರುಪರೀಕ್ಷೆಯನ್ನು ಶಾಂತ ರೀತಿಯಲ್ಲಿ ಎದುರಿಸಲು ಸಹಾಯ ಮಾಡುವುದಾಗಿದೆ ಎಂದು ದೀಕ್ಷಾ ವೇದಾಂತುವಿನ ಸಂಸ್ಥಾಪಕ ಶ್ರೀಧರ್ ಜಿ. ಹೇಳಿದ್ದಾರೆ.

ನೀಟ್‌ಗೆ ಉಚಿತವಾಗಿ ಕಠಿಣ ಮಾದರಿಯ ಅಣಕು ಪರೀಕ್ಷೆ, ನೈಜ ಪರೀಕ್ಷಾ ಸ್ಥಿತಿಯ ಅಭ್ಯಾಸ, ಕಾರ್ಯಕ್ಷಮತೆ ವಿಶ್ಲೇಷಣೆ ಮತ್ತು ಸುಧಾರಣೆಗೆ ಮಾರ್ಗದರ್ಶನ, ಕಾರ್ಯತಂತ್ರದ ಪರಿಷ್ಕರಣೆಗೆ ಬೆಂಬಲ ಮತ್ತು ಗೊಂದಲ ಬಗೆಹರಿಸುವಿಕೆ, ಸಮಯ ನಿರ್ವಹಣೆ ಮತ್ತು ಪರೀಕ್ಷಾ ತರಬೇತಿ, ಅನುಭವಿ ಶೈಕ್ಷಣಿಕ ತಂಡಗಳಿಂದ ಸಕಾರಾತ್ಮಕವಾಗಿ ತಯಾರಿಗೆ ನೆರವು ಮೊದಲಾದವು ಉಚಿತ ತರಬೇತಿ ಕಾರ್ಯಕ್ರಮದ ಭಾಗವಾಗಿವೆ.

ನೋಂದಣಿಯು ಸೀಮಿತ ಅವಧಿಯಲ್ಲಿ ಲಭ್ಯವಿದೆ. ಮಾಹಿತಿಗೆ ವಿದ್ಯಾರ್ಥಿಗಳು ಮತ್ತು ಪೋಷಕರು ಸಮೀಪದ ದೀಕ್ಷಾ ವೇದಾಂತು ಕ್ಯಾಂಪಸ್ ಸಂಪರ್ಕಿಸಬಹುದು.

# ನಾಳೆ ಹೊಸಹಳ್ಳಿ–ಕಬ್ಬನ್ ಪಾರ್ಕ್ ನಡುವೆ ಮೆಟ್ರೊ ರೈಲು ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ಮೇ 17ರಂದು ಭಾನುವಾರ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮತ್ತು ಸೆಂಟ್ರಲ್ ಕಾಲೇಜಿನ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣಗಳ ನಡುವೆ ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಹಾಗಾಗಿ ಅಂದು ಬೆಳಿಗ್ಗೆ 7ರಿಂದ 9ರವರೆಗೆ ಹೊಸಹಳ್ಳಿ ಬಾಲಗಂಗಾಧರನಾಥ ಸ್ವಾಮೀಜಿ ನಿಲ್ದಾಣ ಮತ್ತು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳ ನಡುವೆ ಮೆಟ್ರೊ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿದೆ.

ಈ ಮಾರ್ಗದಲ್ಲಿ ಚಲ್ಲಘಟ್ಟದಿಂದ ವಿಜಯನಗರವರೆಗೆ, ಎಂ.ಜಿ. ರಸ್ತೆಯಿಂದ ವೈಟ್‌ಫೀಲ್ಡ್‌ವರೆಗೆ (ಕಾಡುಗೋಡಿ) ಸಂಚಾರ ಎಂದಿನಂತೆ ಇರಲಿದೆ. ಮಾದಾವರ– ರೇಷ್ಮೆ ಸಂಸ್ಥೆ ನಡುವಿನ ಹಸಿರು ಮಾರ್ಗದಲ್ಲಿ ಆರ್.ವಿ. ರಸ್ತೆ – ಬೊಮ್ಮಸಂದ್ರ ನಡುವಿನ ಹಳದಿ ಮಾರ್ಗದಲ್ಲಿ ಯಾವುದೇ ವ್ಯತ್ಯಯ ಇರುವುದಿಲ್ಲ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

# ಉಚಿತ ವೈದ್ಯಕೀಯ ಶಿಬಿರ ಇಂದು

**ಬೆಂಗಳೂರು:** ವೈಟ್‌ಫೀಲ್ಡ್‌ನ ಚನ್ನಸಂದ್ರದಲ್ಲಿರುವ ಎಂವಿಜೆ ಪದವಿ ಕಾಲೇಜು ತನ್ನ ಕ್ಯಾಂಪಸ್‌ನಲ್ಲಿ ಶನಿವಾರ ಬೆಳಿಗ್ಗೆ 11 ಗಂಟೆಯಿಂದ ಉಚಿತ ವೈದ್ಯಕೀಯ ಮತ್ತು ರಕ್ತದಾನ ಶಿಬಿರ ಹಮ್ಮಿಕೊಂಡಿದೆ.

ವೈದ್ಯಕೀಯ ಸಮಾಲೋಚನೆ, ಕಣ್ಣಿನ ಪರೀಕ್ಷೆ, ರಕ್ತ ಮತ್ತು ಅಧಿಕ ರಕ್ತದೊತ್ತಡದ ಪರೀಕ್ಷೆ, ಸ್ತ್ರೀರೋಗ ತಪಾಸಣೆ, ಕಿವಿ, ಮೂಗು ಮತ್ತು ಗಂಟಲ ತಪಾಸಣೆ, ಇಸಿಜಿ ಪರೀಕ್ಷೆ ಸೇರಿದಂತೆ ವಿವಿಧ ವೈದ್ಯಕೀಯ ಸೇವೆಗಳು ಲಭ್ಯವಿರುತ್ತದೆ.

ಶಿಬಿರದಲ್ಲಿ ಪಾಲ್ಗೊಳ್ಳುವವರು ಆಧಾರ್ ಕಾರ್ಡ್ ಪ್ರತಿಯನ್ನು ಹೊಂದಿರಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದೆ.

50ರ ಹೆಣ್ಣುಮಗಳೊಬ್ಬಳು 'ಅಯ್ಯೋ ವಯಸ್ಸಾಯಿತು, ಇನ್ನೇನಿದೆ' ಎಂದು ನಿಡುಸುಯ್ದರೆ, ಅದೇ ವಯಸ್ಸಿನ ಇನ್ನೊಬ್ಬ ಹೆಣ್ಣುಮಗಳು ಮಗಳೊಟ್ಟಿಗೆ ಪಿಯುಸಿ ಪರೀಕ್ಷೆ ಪಾಸಾಗಿ ಬೀಗುತ್ತಾಳೆ. ಗಂಡನ ಅಕಾಲಿಕ ಸಾವಿನಿಂದ ನೊಂದ ತಾಯಿಯೊಬ್ಬಳು ಮಕ್ಕಳೊಂದಿಗೆ ನೀರುಪಾಲಾದರೆ, ಗಂಡ ಕೈಕೊಟ್ಟರೂ ಎದೆಗುಂದದ ಇನ್ನೊಬ್ಬಳು ತಾಯಿ, ಮಕ್ಕಳ ನಗುವಿನಲ್ಲಿ ತನ್ನ ಖುಷಿ ಕಾಣುತ್ತಾಳೆ; ಕಷ್ಟಪಟ್ಟು ದುಡಿದು ಅವರನ್ನು ದಡ ಮುಟ್ಟಿಸಿ ವಿಜಯದ ನಗೆ ಬೀರುತ್ತಾಳೆ. ಹೀಗೆ, ಬತ್ತಿದ ಜೀವನಪ್ರೀತಿ ಬದುಕನ್ನೇ ಮುಳುಗಿಸಿದರೆ, ಬತ್ತದ ಜೀವನಪ್ರೀತಿ ಬದುಕನ್ನು ಸಾರ್ಥಕತೆಯೆಡೆಗೆ ಕೊಂಡೊಯ್ಯುತ್ತದೆ.

# ಪುಟಿ ಪುಟಿಯಲಿ ಜೀವನೋತ್ಸಾಹ

• ಶ್ರೀರಂಜನಿ ಅಡಿಗ

**ಮುಂ**ಜಾವಿನ ನಡಿಗೆ ಎಂಬುದು ಪ್ರತಿದಿನ ನನ್ನ ಅಮೂಲ್ಯ ಏಕಾಂತದ ಸಮಯ. ಹೊಗೆ, ದೂಳು, ಗಾಡಿಗಳ ಹಾರ್ನಿನ ರಗಳೆಯಿಲ್ಲದ, ನಿತ್ಯದ ಜಂಜಡಗಳನ್ನೆಲ್ಲ ಬದಿಗಿರಿಸಿ ಮನಸ್ಸನ್ನು ಪ್ರಶಾಂತವಾಗಿಸಿಕೊಳ್ಳಲು ಸಿಗುವ ಸದವಕಾಶ. ದೂರದಲ್ಲಿ ಎಲ್ಲಿಂದಲೋ ಢಣಢಣಗುಟ್ಟುವ ದೇಗುಲದ ಗಂಟೆಯ ರವ, ಸುಬ್ಬುಲಕ್ಷ್ಮಿಯ ಸುಪ್ರಭಾತ, ಹಕ್ಕಿಗಳ ಕಲರವ, ಮರೆಯಾಗುತ್ತಿರುವ ಚಂದ್ರಮನಿಗೆ ಜೊತೆಯಾಗಿ ಒಂದಿಷ್ಟು ತಂಗಾಳಿಯ ಸಾಂಗತ್ಯದ ನಡಿಗೆಯನ್ನು ತಪ್ಪಿಸಿಕೊಳ್ಳಲು ಒಂದು ದಿನದ ಮಟ್ಟಿಗಾದರೂ ಕಾರಣ ಹುಡುಕಬೇಕು ಅನ್ನಿಸುವುದಿಲ್ಲ.

ಅಂತಹ ಆಹ್ಲಾದಕರ ಸಮಯದಲ್ಲಿ, ಜೀವನದ ಇಳಿಸಂಜೆಯಲ್ಲಿರುವ ಹಿರಿಯರ ಗುಂಪಿನ ಮಾತಿಗೆ ಕಿವಿಯಾಗುವಾಗ, ಅವರ ಜೀವನೋತ್ಸಾಹ ಎಳೆಬಿಸಿಲಿನಂತೆ ಮನಸ್ಸಿಗೆ ಮುದ ನೀಡುತ್ತದೆ.

ಹಿರಿಯ ನಾಗರಿಕರೆಂದರೆ ವೈರಾಗ್ಯದ ಮಾತನಾಡುವವರು, ಇಡೀ ದಿನ ತಮ್ಮ ಗೋಳುಗಳನ್ನು ಹೇಳಿಕೊಳ್ಳುವವರು, ದೇವರು ದಿಂಡರು ಎಂದು ಅಧ್ಯಾತ್ಮದ ಕುರಿತೇ ಮಾತನಾಡುವ 'ಬೋರಿಂಗ್ ಪರ್ಸನಾಲಿಟಿ' ಎಂಬುದೇ ಹೆಚ್ಚಿನವರ ಭಾವನೆ. ಆದರೆ ದಿನನಿತ್ಯ ನಡಿಗೆಯ ವೇಳೆ ನನಗೆ ಸಿಗುವ ಹಿರಿಯ ಮಹಿಳೆಯರು ಮತ್ತು ಪುರುಷರ ಪ್ರತ್ಯೇಕ ಗುಂಪುಗಳು ಇದಕ್ಕೆ ತದ್ವಿರುದ್ಧ!

ನಡಿಗೆಯ ಬಳಿಕ ಕೈಕಾಲು ಆಡಿಸುತ್ತ, ಶ್ಲೋಕಗಳನ್ನು ಪಠಿಸುತ್ತ, ಉಳಿದ ನಡಿಗೆದಾರರನ್ನು ತಮ್ಮ ನಗು, ಹರಟೆಯ ಮೂಲಕ ಸೆಳೆಯುವ ವ್ಯಕ್ತಿತ್ವ ಮಹಿಳಾ ಗುಂಪಿನದ್ದಾದರೆ, 'ಏನು ಮೇಷ್ಟ್ರೇ, ನಿನ್ನೆ ಮ್ಯಾಚ್ ನೋಡಿದ್ರಾ? ವಿರಾಟನದ್ದು ಏನ್ರೀ ಆಟ ಅದು? ಜೆಮಿಮಾ ಇಲ್ದಿದ್ರೆ ಏನಾಗ್ತಿತ್ತೋ? (ನಿಜ ಹೇಳಬೇಕೆಂದರೆ ಮಹಿಳಾ ಕ್ರಿಕೆಟ್ ಆಟಗಾರ್ತಿಯರ ಹೆಸರನ್ನು ಅವರ ಬಾಯಿಯಿಂದಲೇ ನಾನು ಮೊದಲು ಕೇಳಿದ್ದು!) ಮ್ಯಾಚ್ ನೋಡ್ಕೊಂಡೇ ಮಲಗಿದ್ದು'; 'ಪಾಪ ಕಣ್ರೀ, ಕಾಂಪೌಂಡ್ ಬಿದ್ದು ಜನ ಸತ್ತುಹೋದ್ರಂತಲ್ಲ? ಛೇಛೇ' ಎಂದೆಲ್ಲ ಹಿಂದಿನ ದಿನದ ಸುದ್ದಿಯ ವಿಶ್ಲೇಷಣೆಯಲ್ಲಿ ತೊಡಗುವವರು ಪುರುಷರ ಗುಂಪಿನ ಸದಸ್ಯರು.

ಹೀಗಾಗಿ, ಅವರೊಂದಿಗಿನ ಮಾತುಕತೆಯ ನಂತರ ನ್ಯೂಸ್‌ಪೇಪರನ್ನಾಗಲೀ ಟಿ.ವಿ. ನ್ಯೂಸ್ ಚಾನೆಲ್ಲನ್ನಾಗಲೀ ನೋಡಬೇಕಂತಲೇ ಇಲ್ಲ. ಜ್ಞಾನವೂ ಉಂಟು, ಮನರಂಜನೆಯೂ ಉಂಟು. ಒಬ್ಬರಿಗೊಬ್ಬರು ಕಾಲೆಳೆಯುತ್ತಾ ಖುಷಿಖುಷಿಯಾಗಿರುವ ಅವರ್‍ಯಾರೂ ಮನೆಯ ತಲೆನೋವನ್ನು ಪಾರ್ಕಿಗೆ ತಂದದ್ದು ನನಗಂತೂ ತಿಳಿದಿಲ್ಲ. ಎಲ್ಲೋ ಒಮ್ಮೊಮ್ಮೆ 'ಮಕ್ಕಳೆಲ್ಲ ಅವರವರ ಜೀವನ ನೋಡಿಕೊಂಡು ಆರಾಮಾಗಿದ್ದಾರೆ' ಎನ್ನುವುದನ್ನು ಬಿಟ್ಟರೆ, ಹಳವಂಡಗಳಿಗೆ ತಲೆಬಿಸಿ ಮಾಡಿಕೊಳ್ಳುತ್ತಾ ಇನ್ನೊಬ್ಬರಿಗೆ ತಮ್ಮ ಜಂಜಡವನ್ನು ದಾಟಿಸಿದ್ದು ನನ್ನ ಗಮನಕ್ಕೆ ಒಮ್ಮೆಯೂ ಬಂದಿಲ್ಲ.

ಈ ಹಿರಿಯ ಜೀವಗಳನ್ನು ಕಂಡಾಗೆಲ್ಲ ನೆನಪಾಗುವುದು ಇಂಥದ್ದೇ ಇನ್ನೊಂದು ಜೀವವಾದ ನನ್ನ ದೊಡ್ಡಮ್ಮ. ಜೀವನದ ಕೊನೇ ಗಳಿಗೆಯಲ್ಲಿ ಆರೋಗ್ಯಕ್ಕಿಂತ ಜಾಸ್ತಿ ಅವರು ಕಾಪಾಡಿಕೊಂಡದ್ದು ತಮ್ಮ ಬತ್ತದ ಉತ್ಸಾಹವನ್ನು. ಸ್ಥಳೀಯ ಜನಪದ ಹಾಡುಗಳಷ್ಟೇ ಸೊಗಸಾಗಿ ಸಿನಿಮಾ ಹಾಡುಗಳನ್ನೂ ಹಾಡುತ್ತಿದ್ದರು ಅವರು. ಅದರಲ್ಲೂ ಸಂದರ್ಭಕ್ಕೆ ತಕ್ಕಂತೆ ಹಾಡುವ ಚಾತುರ್ಯ ಅವರಲ್ಲಿತ್ತು. ಸೇವಂತಿ ಹೂಗಳನ್ನು ಕಂಡರೆ 'ಸೇವಂತಿಯೇ ಸೇವಂತಿಯೇ' ಎಂದೋ, ಶಾಲೆಗೆ ಹೋಗುತ್ತಿರುವ ಮಕ್ಕಳನ್ನು ಕಂಡರೆ 'ಕನ್ನಡದಾ ಮಕ್ಕಳೆಲ್ಲ ಒಂದಾಗಿ ಬನ್ನಿ' ಎಂದೋ, ಇನ್ನೂ ಪುಟ್ಟಪುಟ್ಟ ಮಕ್ಕಳನ್ನು ನೋಡಿದರೆ 'ಮಕ್ಕಳಾಟವು ಚಂದ, ಮರುಳು ಬುದ್ಧಿಯು ಚಂದ' ಎಂದೋ, ನೀರು ಹೊರುವ ಹುಡುಗಿಯರು ಕಣ್ಣಿಗೆ ಬಿದ್ದರೆ 'ತಾರಕ್ಕ ಬಿಂದಿಗೆ ನಾ ನೀರಿಗೋಗುವೆ' ಎಂದೋ ಕ್ಷಣ ಕೂಡ ಆಲೋಚಿಸದೆ ಹಾಡುವ ಕ್ಷಿಪ್ರಮತಿಯಾಗಿದ್ದರು.

### ಹಿರಿಯ ಜೀವಗಳೇ ಸ್ಫೂರ್ತಿ!

ಬೆಳ್ಳಂಬೆಳಗ್ಗಿನ ತಂಪು ಹವೆಯಲ್ಲಿ ಉದ್ಯಾನಗಳ ಬೆಂಚಿನ ಮೇಲೆ ಕುಳಿತು ರೀಲ್ಸ್‌ಗಳನ್ನು ಸ್ಕ್ರಾಲ್ ಮಾಡುತ್ತಾ ವಿಡಿಯೊಗಳನ್ನು ನೋಡುತ್ತಾ ಗಂಟೆಗಟ್ಟಲೆ ಇಹಲೋಕದ ಪರಿವೆಯೇ ಇಲ್ಲದಂತೆ ಕುಳಿತುಕೊಳ್ಳುವ ಯುವಜನರನ್ನು ಕಂಡಾಗ ಮನಸ್ಸು ಪಿಚ್ಚೆನ್ನಿಸುತ್ತದೆ. ಅಲ್ಲೇ ಸಮೀಪದಲ್ಲಿ ವಾಕ್ ಮಾಡುತ್ತಾ, ಖುಷಿಯಾಗಿ ಹರಟೆ ಹೊಡೆಯುತ್ತಾ ಸಾಗುವ ಹಿರಿಯ ಜೀವಗಳಲ್ಲಿರುವ ಜೀವನೋತ್ಸಾಹದ ಕಾಲಂಶವಾದರೂ ಇವರಲ್ಲಿ ಕಾಣಬಾರದೇ, ಹೀಗಾದರೆ ಈ ಹೊಸ ಪೀಳಿಗೆಯ ಭವಿಷ್ಯ ಹೇಗಿರಬಹುದು ಎಂಬ ಅಂತರಂಗದ ಪ್ರಶ್ನೆ ಕಳಕಳಿ ಹುಟ್ಟಿಸುತ್ತದೆ.

ನನ್ನ ಇನ್ನೊಬ್ಬ ಸಂಬಂಧಿ ತಮ್ಮ ಮಕ್ಕಳನ್ನೆಲ್ಲ ಓದಿಸಿ, ಒಂದು ಹಂತಕ್ಕೆ ಅವರನ್ನು ದಡ ಸೇರಿಸಿದ ಮೇಲೆ ಮನೆಯಲ್ಲಿ ಸುಮ್ಮನೆ ಕುಳಿತುಕೊಳ್ಳದೆ ಒಂದು ಸಂಘದ ಸದಸ್ಯತ್ವ ಪಡೆದುಕೊಂಡರು. ಅದರ ಮೂಲಕ ಅವರು ಮನೆಗಳಲ್ಲಿ, ದೇವಸ್ಥಾನಗಳಲ್ಲಿ ಭಜನೆ, ಸೋಬಾನೆ, ವಿಷ್ಣುಸಹಸ್ರನಾಮವನ್ನು ಹಾಡುತ್ತಾ ತಮ್ಮನ್ನು ತಾವು ಕ್ರಿಯಾಶೀಲರಾಗಿಸಿಕೊಂಡಿದ್ದಾರೆ. ಇನ್ನೊಬ್ಬ ಪರಿಚಿತೆ ಶಾಲೆ ಕಲಿತದ್ದು ಹತ್ತನೆಯ ತರಗತಿ. ಮಕ್ಕಳೆಲ್ಲ ಗೂಡಿನಿಂದ ಗಗನಕ್ಕೆ ಹಾರಿದ ಮೇಲೆ ಈಗ ಆನ್‌ಲೈನಿನಲ್ಲಿ ಸಂಸ್ಕೃತ ಅಭ್ಯಾಸ ಮಾಡುತ್ತಿದ್ದಾರೆ. ಮೊಮ್ಮಗಳನ್ನು ಈಜಿನ ತರಗತಿಗೆ ದಿನಾ ಕರೆದುಕೊಂಡು ಹೋಗುತ್ತಿದ್ದ ಅಜ್ಜಿಯೊಬ್ಬರು, ಅವಳು ಈಜುವುದನ್ನು ನೋಡಿ ಉತ್ತೇಜಿತರಾಗಿ ಸ್ವತಃ ಈಜು ಕಲಿಯಲು ಆಸಕ್ತರಾದರು. ಈ ಹಂಬಲ ಅವರನ್ನು ಎಷ್ಟು ದೂರ ಕರೆದುಕೊಂಡು ಹೋಗಿದೆಯೆಂದರೆ, ಈಗ ಅವರು ಸ್ಪರ್ಧೆಗಳಲ್ಲಿ ಭಾಗವಹಿಸುವಷ್ಟು ನಿಪುಣರು.

ನಮ್ಮೂರಿನಲ್ಲಿ ಈಗೀಗ ಸಮಾರಂಭಗಳಲ್ಲಿ ಬಡಿಸುವ ಕೆಲಸಕ್ಕೆ ಅಥವಾ ಮನೆಯಲ್ಲಿ ನಡೆಯುವ ಸಣ್ಣಪುಟ್ಟ ಕಾರ್ಯಕ್ರಮಗಳಿಗೆ ಸಹಾಯ ಮಾಡಲು ಮಧ್ಯವಯಸ್ಸು ದಾಟಿದ ಮಹಿಳೆಯರು ಸದಾ ಮುಂದು. ಮನೆಯ ಆರ್ಥಿಕ ಪರಿಸ್ಥಿತಿಗೆ ನಿಯಮಿತ ಸಂಬಳವಲ್ಲದಿದ್ದರೂ ತಮ್ಮಿಂದಾದಷ್ಟು ಸಹಾಯ ಮಾಡಿ ಗಂಡನಿಗೆ ಹೆಗಲೆಣೆಯಾಗಿ ನಿಲ್ಲುವ ಅಪೇಕ್ಷೆ ಅವರದು. ಇಂಥ ಮಹಿಳೆಯರಲ್ಲಿ ಒಬ್ಬರು ಭತ್ತದ ಗದ್ದೆಗಳಲ್ಲಿ ದುಡಿದು, ಮಲ್ಲಿಗೆ ಗಿಡಗಳನ್ನು ಬೆಳೆಸಿ, ಹಾಲು ಮಾರಿ ಕೈತುಂಬಾ ಹಣವನ್ನು ಸಂಪಾದಿಸುತ್ತಿದ್ದಾರೆ.

ಈಗಂತೂ ವ್ಯಾಟ್ಸ್‌ಆ್ಯಪ್, ಫೇಸ್‌ಬುಕ್ಕಿನಿಂದಾಗಿ ಹಳೆಯ ಸ್ನೇಹಿತರು ಸಂಪರ್ಕಕ್ಕೆ ಸಿಗುವುದು ಸುಲಭ. ಮಾಲುಗಳಲ್ಲಿ, ಹೋಟೆಲ್ಲುಗಳಲ್ಲಿ ಇಂಥ ಹಳೆಯ ಗೆಳತಿಯರ, ಶಾಲಾ ಗೆಳತಿಯರ ರೀಯೂನಿಯನ್ನೋ ಗೆಟ್ ಟುಗೆದರ್ರೋ... ಒಟ್ಟಾರೆ ಇಂಥದ್ದೇ ಏನೋ ಒಂದು ನೆಪ ಹುಡುಕಿ ಆಗಾಗ್ಗೆ ಒಟ್ಟಾಗಿ ಸೇರಿ, ಜೀವನದಲ್ಲಿ ಉತ್ಸಾಹ ಕಳೆದುಕೊಳ್ಳದಂತೆ ಜಾಗ್ರತೆ ವಹಿಸುವವರು ಬೇಕಾದಷ್ಟು ಮಂದಿ.

ಸಣ್ಣ ಪ್ರವಾಸ, ಕಿಟಿ ಪಾರ್ಟಿಗಳನ್ನು ಆಯೋಜಿಸಿ, ಹಾಡು, ನೃತ್ಯ, ಆಟ ಎಂದು ಖುಷಿಯಿಂದ ತೊಡಗಿಕೊಳ್ಳುವ ಅವರ ಗಮ್ಮತ್ತೇ ಗಮ್ಮತ್ತು. ಆ ಒಂದು ದಿನದ ಮಟ್ಟಿಗೆ ಆರೋಗ್ಯದ ಕಾಳಜಿಯನ್ನು ದೂರವಿಟ್ಟು ಮಂಚೂರಿ, ಐಸ್‌ಕ್ರೀಂ, ಚಾಟ್ಸು ಎಂದು ಎಲ್ಲಕ್ಕೂ ಜೈಕಾರ ಹಾಕುತ್ತಿರುತ್ತಾರೆ. ಆ ಗಳಿಗೆಯಲ್ಲಿ ತಮ್ಮ ಬಿ.ಪಿ., ಶುಗರ್ರು, ಮಂಡಿನೋವಿಗೆಲ್ಲ 'ಡೋಂಟ್ ಕೇರ್' ಎನ್ನುತ್ತ 'ಈ ಸಮಯ ಆನಂದಮಯ' ಎಂದು ತಲ್ಲೀನರಾಗಿರುತ್ತಾರೆ. ಈಗಿನ ಕಾಲಕ್ಕೆ ತಕ್ಕಂತೆ ಅಪ್‌ಡೇಟ್ ಆಗಿ 'ಬುಕ್ ಮೈ ಶೋ'ನಲ್ಲಿ ಪಿಕ್ಚರ್ ಟಿಕೆಟ್ ಬುಕ್ ಮಾಡಿ, ಆ್ಯಪ್‌ನಲ್ಲಿ ಟ್ಯಾಕ್ಸಿ ಬುಕ್ ಮಾಡಿಕೊಂಡು ಟಾಕೀಸಿಗೆ ಹೋಗಿ, ಪಾಪ್‌ಕಾರ್ನ್ ತಿನ್ನುತ್ತ 'ನಾವು ಯಾರ್‍ಗೂ ಕಮ್ಮಿಯಿಲ್ಲ' ಎಂಬ ಭಾವನೆಯಲ್ಲಿ ಎಷ್ಟೋ ಹೆಣ್ಣುಮಕ್ಕಳು ಮರಳಿ ಅರಳುತ್ತಿದ್ದಾರೆ.

ಒಂದಷ್ಟು ವಯಸ್ಸಾದ ಮೇಲೆ ಬದುಕನ್ನು ಬಂದಂತೆ ಸ್ವೀಕರಿಸಿ, ಇದ್ದುದರಲ್ಲಿಯೇ ಖುಷಿ ಕಂಡುಕೊಳ್ಳುತ್ತಾ ತಾವು ಸಂತೋಷವಾಗಿ ಇರುವುದಲ್ಲದೆ ತಮ್ಮ ಸುತ್ತಲಿನವರನ್ನೂ ಸಂತೋಷವಾಗಿ ಇರಿಸಿಕೊಳ್ಳುವುದೂ ಒಂದು ಜೀವನ ಕಲೆ- ಅದೇ ಜೀವನೋತ್ಸಾಹ. ಜೀವನದ ಜಂಜಡಗಳಿಗೆ ಹಲುಬದ, 'ನಮ್ಮ ಬದುಕು ಮುಗಿಯಿತು, ನಮಗೆ ಇನ್ನೇನಾಗಬೇಕು' ಎಂದು ಬದುಕಿನ ಬಗ್ಗೆ ನಿರಾಸಕ್ತಿಯನ್ನು ತೋರದ, 'ಅದೆಲ್ಲ ಇದ್ದದ್ದೇ' ಎಂದುಕೊಳ್ಳುತ್ತ ಪ್ರತಿಕ್ಷಣವನ್ನೂ ಜೀವಿಸುವ ಇಂಥವರು ನಮಗೆ ಯಾವತ್ತೂ ಆದರ್ಶಪ್ರಾಯರು!

### ಅದೇನು ಉತ್ಸಾಹ ಅಂತೀರ...

ಕಳೆದ ವರ್ಷ ಒಂದು ಬ್ಯಾಡ್ಮಿಂಟನ್ ಟೂರ್ನಮೆಂಟಿನಲ್ಲಿ ಭಾಗವಹಿಸಲು ಹೋಗಿದ್ದೆ. ಆಶ್ಚರ್ಯವೆಂಬಂತೆ ಅರವತ್ತರ ಮೇಲಿನ ಮಹಿಳೆಯರು ಸಾಕಷ್ಟು ಮಂದಿ ಇದ್ದರು. ಅವರಲ್ಲಿ ಒಬ್ಬರು ಕ್ರಿಕೆಟ್ ಕೋಚ್ ಬೇರೆ ಆಗಿರುವವರಂತೆ! ಎಲ್ಲರದ್ದೂ ಏನು ಪ್ಲೇಸಿಂಗ್, ಏನು ಸ್ಮ್ಯಾಷ್, ಏನು ಚುರುಕಿನ ಮೂವ್‌ಮೆಂಟ್?! ಮೂಕವಿಸ್ಮಿತಳಾಗಿದ್ದೆ. ಅವರಿಗಿಂತ ಚಿಕ್ಕವಳಾದರೂ ಅರ್ಧಗಂಟೆ ಆಡುವಷ್ಟರಲ್ಲಿ ಸುಸ್ತಾಗಿ ಹೋದ ನಾನು, ಅವರ ಉತ್ಸಾಹದ ಎದುರು ನಾಚಿಕೆ ಪಟ್ಟಿದ್ದೆ. ಕೆಲವೊಮ್ಮೆ ಬದುಕಿನಲ್ಲಿ 'ಆ ಕ್ಷಣ' ಎನ್ನುವುದು ಹೇಗೆ ಸಂಧಿಯಾಗುವುದೆಂದೇ ತಿಳಿಯುವುದಿಲ್ಲ ನೋಡಿ!

# 'ಸನ್‌ಶೈನ್ ವಿಟಮಿನ್' ಕೊರತೆಯೇ?

ಸ್ಪಂದನ

ಡಾ. ವೀಣಾ ಎಸ್. ಭಟ್

• **ನನಗೆ ಮದುವೆಯಾಗಿ ಎರಡು ವರ್ಷವಾಗಿದ್ದು, ಮಗು ಆಗುತ್ತಿಲ್ಲ. ತಜ್ಞವೈದ್ಯರು ಪಿಸಿಒಡಿ ಸಮಸ್ಯೆ ಇದೆ ಎಂದಿದ್ದಾರೆ ಮತ್ತು ವಿಟಮಿನ್ 'ಡಿ' ಕೊರತೆಗೆ ಮಾತ್ರೆ ಕೊಡುತ್ತಿದ್ದಾರೆ. ಸ್ವಲ್ಪ ದಿನ ಆಸ್ಪತ್ರೆಗೆ ಹೋಗಬೇಡ ಎಂದು ಮನೆಯವರು ಹೇಳಿದ್ದರಿಂದ ನಾನೀಗ ಸದ್ಯ ವೈದ್ಯರ ಹತ್ತಿರ ಹೋಗುವುದನ್ನು ನಿಲ್ಲಿಸಿರುವೆ. ರಕ್ತದಲ್ಲಿ ವಿಟಮಿನ್ 'ಡಿ' ಪ್ರಮಾಣ ಎಷ್ಟಿದೆ ಎಂದು ನಾನೀಗ ಮತ್ತೆ ಪರೀಕ್ಷೆ ಮಾಡಿಸಬೇಕೇ? ನನಗೆ ಮಕ್ಕಳಾಗುವುದು ಕಷ್ಟವೇ?**

**ಸಂಗೀತಾ**, ತಿಪಟೂರು

ಪಿಸಿಒಡಿ ಸಮಸ್ಯೆ ಅಂದರೆ, ತಿಂಗಳಿಗೊಮ್ಮೆ ಅಂಡಾಶಯದಿಂದ ಸರಿಯಾಗಿ ಅಂಡೋತ್ಪತ್ತಿ ಆಗದಿದ್ದಾಗ ಮುಟ್ಟಿನಲ್ಲಿ ಏರುಪೇರು ಆಗುವುದು. ಜೊತೆಗೆ ಬಂಜೆತನವೂ ಉಂಟಾಗಬಹುದು. ಇದು ದೀರ್ಘಾವಧಿ ಆರೋಗ್ಯ ಸಮಸ್ಯೆಯನ್ನು ಸಹ ಉಂಟು ಮಾಡಬಹುದು. ಆದರೆ ಸಮಸ್ಯೆ ಇರುವವರಿಗೆಲ್ಲ ವಿಟಮಿನ್ 'ಡಿ' ಮಟ್ಟವನ್ನು ಪರೀಕ್ಷಿಸಲು ಅನುಮೋದಿಸುವುದಿಲ್ಲ. ಅದರಲ್ಲೂ ಬಹುತೇಕ ಭಾರತೀಯ ಮಹಿಳೆಯರಲ್ಲಿ ವಿಟಮಿನ್ 'ಡಿ' ಕೊರತೆ ಕಂಡುಬರುತ್ತಿದೆ. ಪಿಸಿಒಡಿಯಿಂದ ಬಳಲುವ ಶೇ 85ರಷ್ಟು ಮಹಿಳೆಯರಲ್ಲಿ ವಿಟಮಿನ್ 'ಡಿ' ಕೊರತೆ ಇದ್ದೇ ಇರುತ್ತದೆ.

ಹಾಗಿದ್ದರೆ ನಮ್ಮ ದೇಹಕ್ಕೆ ವಿಟಮಿನ್ 'ಡಿ' ಲಭ್ಯತೆ ಹೇಗೆ ಸಿಗುತ್ತದೆ? ಶೇ 10ರಿಂದ 20ರಷ್ಟು ವಿಟಮಿನ್ 'ಡಿ' ಮಾತ್ರ ನಮಗೆ ಆಹಾರದಿಂದ ದೊರಕುತ್ತದೆ. ಅಂತಹ ಆಹಾರಗಳು ಯಾವುವೆಂದರೆ ಮೀನು, ಮೊಟ್ಟೆ, ಅಣಬೆ, ಕೆಂಪು ಮಾಂಸ, ಬಾದಾಮಿ, ಅವಕಾಡೊ, ಇನ್ನಿತರ ಒಣಹಣ್ಣುಗಳು. ಉಳಿದ ಶೇ 80ಕ್ಕಿಂತ ಹೆಚ್ಚು ವಿಟಮಿನ್ 'ಡಿ' ಸೂರ್ಯನ ಕಿರಣಗಳಿಗೆ ನಮ್ಮ ಚರ್ಮವನ್ನು ತೆರೆದುಕೊಳ್ಳುವುದರಿಂದ ದೊರಕುತ್ತದೆ. ಅದಕ್ಕೆ ವಿಟಮಿನ್ 'ಡಿ'ಯನ್ನು 'ಸನ್‌ಶೈನ್ ವಿಟಮಿನ್' ಎನ್ನುತ್ತಾರೆ.

ಬೆಳಿಗ್ಗೆ 11ರಿಂದ 2 ಗಂಟೆಯ ಒಳಗಿನ ಬಿಸಿಲಿಗೆ 15 ನಿಮಿಷ ಕಣ್ಣು, ತಲೆಯ ಭಾಗ, ಗುಪ್ತಾಂಗಗಳ ಹೊರತಾಗಿ ಬೆನ್ನು, ಕೈಕಾಲಿನ ಭಾಗ ತೆರೆದುಕೊಂಡಿದ್ದರೂ ಸಾಕಷ್ಟು ವಿಟಮಿನ್ 'ಡಿ' ನಮ್ಮ ಶರೀರದಲ್ಲೇ ಉತ್ಪಾದನೆಯಾಗುತ್ತದೆ.

ವಿಟಮಿನ್ 'ಡಿ'ಯು ಗ್ಲೂಕೋಸ್ ಮತ್ತು ಇನ್ಸುಲಿನ್ ಚಯಾಪಚಯ ಕ್ರಿಯೆಯ ಮೇಲೂ ಪರಿಣಾಮ ಬೀರುತ್ತದೆ. ಇನ್ಸುಲಿನ್ ಪ್ರತಿರೋಧ ಇರುವವರಲ್ಲಿ ವಿಟಮಿನ್ 'ಡಿ' ಮಟ್ಟವು ಕಡಿಮೆ ಇರುವುದು ಹಲವಾರು ಅಧ್ಯಯನಗಳಿಂದ ತಿಳಿದುಬಂದಿದೆ. 2020ರ ಒಂದು ಬೃಹತ್ ಅಧ್ಯಯನದ ಪ್ರಕಾರ, ವಿಟಮಿನ್ 'ಡಿ' ಕೊಟ್ಟಾಗ ಪಿಸಿಒಎಸ್ ಇರುವ ಮಹಿಳೆಯರಲ್ಲಿ ಗರ್ಭಧಾರಣೆಯ ದರ ಹೆಚ್ಚಿರುವುದು ಕಂಡುಬಂದಿದೆ.

ಒಟ್ಟಾರೆ, ಪಿಸಿಒಎಸ್ ಅಲ್ಲದೆ ಹಲವಾರು ಚಯಾಪಚಯ ಕ್ರಿಯೆಗಳ ಜೊತೆಗೂ ತಳಕು ಹಾಕಿಕೊಂಡಿರುವ ವಿಟಮಿನ್ 'ಡಿ' ಕೊರತೆಯ ಬಗ್ಗೆ ಪ್ರತಿ ಮಹಿಳೆಯೂ ತಿಳಿದಿರಲೇಬೇಕು. ಸೂರ್ಯನ ಬೆಳಕು ಮತ್ತು ಸೂಕ್ತ ಆಹಾರದ ಜೊತೆಗೆ ವೈದ್ಯರ ಸಲಹೆಯಂತೆ ವಿಟಮಿನ್ 'ಡಿ' ಮಾತ್ರೆ ಸೇವಿಸುವುದು ಅಗತ್ಯ. ನೀವು ಮಕ್ಕಳಾಗಿಲ್ಲ ಎಂದು ಆತಂಕ ಪಡಬೇಡಿ. ತಜ್ಞರ ಸಲಹೆಯ ಮೇರೆಗೆ ಬಂಜೆತನದ ಚಿಕಿತ್ಸೆಯನ್ನು ಮತ್ತೆ ಮುಂದುವರಿಸಿ.

# ಅಂತರಾಳದ ನೋವನ್ನು ಹೀಗೂ ತೋರಬಹುದು!

• ಎನ್.ಎಸ್.ಅಶ್ವಿನಿ ನೊಣವಿನಕೆರೆ

ಭಾವಯಾನ

**ದೇಹಕ್ಕೆ** ಬಾಧೆ ಕೊಡುವ ಗಾಯವನ್ನು ನಾವು ಮತ್ತೊಬ್ಬರಿಗೆ ತೋರಿಸಲು ಸಾಧ್ಯ. ಹಾಗೇ ನಮ್ಮ ಮನಸ್ಸಿಗಾದ ನೋವನ್ನು ಹೇಳಿಕೊಳ್ಳಬಹುದೇ ವಿನಾ ತೋರಿಸಲು ಸಾಧ್ಯವೇ? ಆದರೆ ನನ್ನ ಕಣ್ಣಮುಂದೆ ನಡೆದ ಪ್ರಕರಣವೊಂದು, ಅಂತರಾಳದ ನೋವನ್ನು ಹೀಗೂ ವ್ಯಕ್ತಪಡಿಸಬಹುದೇ ಎಂದು ನಾನು ಅಚ್ಚರಿಯಲ್ಲಿ ಮುಳುಗುವಂತೆ ಮಾಡಿತು.

ಅದೊಂದು ದಂತ ಚಿಕಿತ್ಸಾಲಯ. ಅವರು 20ಕ್ಕೂ ಹೆಚ್ಚು ವರ್ಷಗಳಿಂದ ದಂತವೈದ್ಯಕೀಯ ಸೇವೆಯಲ್ಲಿ ನಿರತರಾಗಿದ್ದ ಸಂಸ್ಕಾರವಂತ ವೈದ್ಯರು. ಅಂದು ಸಂಜೆ ನಾಲ್ಕೈದು ಜನ ಅವರ ಚಿಕಿತ್ಸಾಲಯದಲ್ಲಿ ಸರದಿಯಲ್ಲಿ ಕಾಯುತ್ತಿದ್ದೆವು. ನಮಗಿಂತ ಮುಂದೆ ಇದ್ದ ವ್ಯಕ್ತಿಯೊಬ್ಬರು ಹೆಂಡತಿಯನ್ನು ಒಳಗೆ ಕರೆದೊಯ್ದು ಹಲ್ಲು ಕೀಳಿಸಿಕೊಂಡು ಹೊರಗೆ ಬಂದು ಕುಳಿತುಕೊಂಡರು. ಅವರ ಜೊತೆಯಲ್ಲಿ ಮೂರ್ನಾಲ್ಕು ಮಂದಿ ಸಂಬಂಧಿಕರೂ ಬಂದಿದ್ದು, ಕುಶಲೋಪರಿ ಕೇಳುತ್ತಾ ಕುಳಿತರು.

ಒಂದೈದು ನಿಮಿಷ ಸುಮ್ಮನಿದ್ದ ಆ ಹೆಣ್ಣುಮಗಳು, ನಂತರ ತನಗೆ ನೋವಾಗುತ್ತಿದೆ ಎಂದು ಹೇಳುತ್ತಾ ನೋಡ ನೋಡುತ್ತಲೇ ಕಿರುಚಾಡತೊಡಗಿದಳು. ವೈದ್ಯರು ಹೊರಗೆ ಬಂದು ಆಕೆಯನ್ನು ಪರೀಕ್ಷಿಸಿ, ಎರಡು ನೋವು ನಿವಾರಕ ಇಂಜೆಕ್ಷನ್‌ಗಳನ್ನು ಕೊಟ್ಟರು. 5-10 ನಿಮಿಷ ಸುಮ್ಮನೆ ಕುಳಿತ ಆಕೆ ಮತ್ತೆ ನೋವಿನಿಂದ ಕೂಗಾಡುತ್ತಾ ನೆಲದ ಮೇಲೆ ಬಿದ್ದು ಹೊರಳಾಡತೊಡಗಿದಳು. ಸಮಾಧಾನ ಮಾಡಲು ಹೋದ ಗಂಡನನ್ನು ಚೆನ್ನಾಗಿ ಬೈದು, 'ನನಗೆ ಇಷ್ಟವಿಲ್ಲದಿದ್ದರೂ ಏಕೆ ಹಲ್ಲು ಕೀಳಿಸಿದೆ' ಎನ್ನುತ್ತಾ ಗುಂಡಿಗಳು ಕಿತ್ತುಬರುವಂತೆ ಆತನ ಅಂಗಿಯನ್ನು ಎಳೆದಾಡಿದಳು. ಸಮಾಧಾನ ಮಾಡಲು ಬಂದ ಸಂಬಂಧಿಕರನ್ನೆಲ್ಲ ಬಾಯಿಗೆ ಬಂದಂತೆ ಬೈದು ಮತ್ತಷ್ಟು ಜೋರಾಗಿ ಕಿರುಚಾಟ ಶುರು ಮಾಡಿದಳು. ವೈದ್ಯರು ಹೊರಬಂದು, ತೆಗೆದ ಹಲ್ಲು ಸಂಪೂರ್ಣ ಸಡಿಲವಾಗಿದ್ದು, ಇಷ್ಟೊಂದು ನೋವು ಬರಲು ಸಾಧ್ಯ ಇಲ್ಲವಲ್ಲ ಎಂದು ಚಡಪಡಿಸುತ್ತಾ ಗಾಬರಿಯಲ್ಲಿ ಬೆವರತೊಡಗಿದರು.

ಆ ಮಹಿಳೆಯ ಗೋಳಾಟ ನೋಡಿ, ಬೇರೆ ರೋಗಿಗಳು ತಮಗೂ ಹೀಗಾಗಬಹುದು ಎಂಬ ಗಾಬರಿಯಲ್ಲಿ ಅಲ್ಲಿಂದ ಹೊರಟುಹೋದರು. ದೂರದ ಊರಿಂದ ವೈದ್ಯರನ್ನು ಭೇಟಿ ಮಾಡಲು ಬಂದಿದ್ದ ಅವರ ಸಂಬಂಧಿಕರು ಸಹ ಗಾಬರಿ ಬಿದ್ದು, ಆ ಹೆಣ್ಣುಮಗಳನ್ನು ಸಮಾಧಾನಪಡಿಸಲು ಹರಸಾಹಸಪಟ್ಟರು. ಏನು ಮಾಡಿದರೂ ಆಕೆ ಕಿರುಚಾಟ, ಅಳು ನಿಲ್ಲಿಸದಿದ್ದಾಗ ಅವರ ಸಂಬಂಧಿಕರು ಸಮಾಧಾನ ಮಾಡಿ ಮೆಲ್ಲಗೆ ಮನೆಗೆ ಕರೆದುಕೊಂಡು ಹೋದರು.

ಇದೆಲ್ಲದರಿಂದಾಗಿ ವೈದ್ಯರು ನಮಗೆ ಚಿಕಿತ್ಸೆ ನೀಡುವ ಸ್ಥಿತಿಯಲ್ಲಿ ಇಲ್ಲದಿದ್ದರಿಂದ ನಾವು ಮರುದಿನ ಬರುವುದಾಗಿ ಹೇಳಿ, ತಾತ್ಕಾಲಿಕ ಉಪಶಮನಕ್ಕೆ ಮಾತ್ರೆ ಪಡೆದು ಹೊರಬಂದೆವು. ಮರುದಿನ ನಾವು ವೈದ್ಯರಲ್ಲಿಗೆ ಹೋದಾಗ ಅದೇ ಹೆಣ್ಣುಮಗಳು ತಾಯಿಯ ಜೊತೆ ವೈದ್ಯರ ಕೊಠಡಿ ಪ್ರವೇಶಿಸಿದಳು. ನಿನ್ನೆಯ ದಿನ ಅಷ್ಟು ರಂಪ ರಾಮಾಯಣ ಮಾಡಿದ್ದ ಆಕೆ ಅತ್ಯಂತ ಸಮಾಧಾನ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಇದ್ದುದನ್ನು ಕಂಡು ನನಗೆ ಅಚ್ಚರಿಯಾಯಿತು. ಬಂದವಳೇ ವೈದ್ಯರ ಕಾಲಿಗೆರಗಿ, 'ನನ್ನ ಗಂಡ ನನ್ನನ್ನು ತುಂಬಾ ಸತಾಯಿಸುತ್ತಾನೆ, ಹೊಡೆಯುತ್ತಾನೆ, ಚಿತ್ರಹಿಂಸೆ ಕೊಡುತ್ತಾನೆ. ಅವನನ್ನು ಹೆದರಿಸಲು, ಬುದ್ಧಿ ಕಲಿಸಲು ಇದೇ ಸಂದರ್ಭ ಎಂದುಕೊಂಡು ನಾನು ಆ ರೀತಿ ನಾಟಕವಾಡಿದೆ. ದಯವಿಟ್ಟು ನನ್ನನ್ನು ಕ್ಷಮಿಸಿ' ಎಂದು ಅಳತೊಡಗಿದಳು.

ಆದರೆ ಪಾಪ, ಆ ವೈದ್ಯರ ಸ್ಥಿತಿಯಂತೂ ಅಯೋಮಯವಾಗಿತ್ತು. ತನ್ನಿಂದ ಚಿಕಿತ್ಸೆಯಲ್ಲಿ ಏನಾದರೂ ಅಚಾತುರ್ಯ ಆಗಿ ಆಕೆಗೆ ಏನಾದರೂ ಹೆಚ್ಚು ಕಡಿಮೆಯಾಗಿಬಿಟ್ಟರೆ ಎಂಬ ಭಯದಲ್ಲಿ ರಾತ್ರಿಯೆಲ್ಲ ನಿದ್ದೆಗೆಟ್ಟು, ನೂರಾರು ದೇವರಿಗೆ ಹರಕೆ ಹೊತ್ತುಕೊಂಡಿದ್ದಾಗಿ ಅವರು ತಿಳಿಸಿದರು. ಅಷ್ಟಾದರೂ ಆ ಹೆಣ್ಣುಮಗಳಿಗೆ ಒಂದು ಮಾತನ್ನೂ ಬೈಯದ ಅವರು, ಆಕೆಗೆ ಸಮಾಧಾನ ಮಾಡುತ್ತಾ, ಇನ್ನೆಂದಿಗೂ ಎಲ್ಲಿಯೂ ಆ ರೀತಿ ಮಾಡದಂತೆ ಬುದ್ಧಿಮಾತು ಹೇಳಿ ಕಳಿಸಿಕೊಟ್ಟರು. ಅದನ್ನು ನೋಡಿ, ಅವರ ಬಗೆಗಿನ ನನ್ನ ಗೌರವ ಮತ್ತಷ್ಟು ಹೆಚ್ಚಾಯಿತು.

ತನ್ನ ನೋವು, ಹತಾಶೆ, ಅವಮಾನ, ಸಂಕಟದ ಕಾರಣದಿಂದ ಆ ಹೆಣ್ಣುಮಗಳು ಅಂತಹ ಸನ್ನಿವೇಶವನ್ನು ದುರ್ಬಳಕೆ ಮಾಡಿಕೊಂಡಿದ್ದು ಬೇಜಾರಿನ ವಿಚಾರವೇ ಆಗಿದ್ದರೂ ತೀವ್ರತರವಾದ ನೋವು ಆಕೆಯಿಂದ ಅಂತಹ ಕೆಲಸ ಮಾಡಿಸಿತ್ತು. ಗಂಡನನ್ನು ಹೆದರಿಸಲು ಆಕೆ ಈ ರೀತಿ ಮಾಡಿದ್ದರೂ ಏನೂ ತಪ್ಪಿರದ ವೈದ್ಯರಿಗೆ ಶಿಕ್ಷೆ ಕೊಟ್ಟದ್ದು ಸರಿಕಾಣಲಿಲ್ಲ.

# ಸಂಸ್ಕೃತಿ–ಪ್ರಕೃತಿಯ ಸಂಗಮ ಪತ್ರೊಡೆ

ರಸಾಸ್ವಾದ

• ಅರ್ಪಿತಾ ರಾಣಿ ಎ.ಎಸ್.

**ಮಲೆನಾಡು** ವೈವಿಧ್ಯಮಯ ಅಡುಗೆಗಳ ತವರೂರು. ಇಲ್ಲಿನ ಪ್ರತಿ ಮನೆಯಲ್ಲೂ ನೆಲದ ಗೆಡ್ಡೆಯಿಂದ ಹಿಡಿದು ಮರದ ಸೊಪ್ಪಿನವರೆಗೆ ಏನೆಲ್ಲವನ್ನೂ ಬಳಸಿ ದಿನವೂ ಬಿಸಿಬಿಸಿ ಅಡುಗೆ ತಯಾರಾಗುತ್ತದೆ. ಅದರಲ್ಲೂ ಮಳೆಗಾಲ ಬಂತೆಂದರೆ ಮಲೆನಾಡಿಗರ ಮನೆಯ ಹಿತ್ತಲಿನಲ್ಲಿ ಕೆಸುವಿನ ಎಲೆಗಳು ಹಸಿರಿನಿಂದ ನಳನಳಿಸುತ್ತಿರುತ್ತವೆ. ಈ ಋತುವಿನಲ್ಲಿ ಸಿಗುವ ಅಪರೂಪದ ಕೆಸುವಿಗಾಗಿ ವರ್ಷಗಟ್ಟಲೇ ಕಾಯುವ ಜನ, ಇದರಿಂದ ತಯಾರಾಗುವ ಒಂದು ವಿಶೇಷ ಬಗೆಯ ಖಾದ್ಯವನ್ನು ಖುಷಿಯಿಂದ ಸವಿಯುತ್ತಾರೆ. ಅದುವೇ ಮಲೆನಾಡು ಹಾಗೂ ಕರಾವಳಿ ಭಾಗದ ವಿಶೇಷ ಖಾದ್ಯ ಪತ್ರೊಡೆ.

ಹೌದು, ಮುಂಗಾರು ಭೂಮಿಗೆ ಮುತ್ತಿಡುತ್ತಿದ್ದಂತೆ ನೆಲದಲ್ಲಿ ಅಡಗಿದ್ದ ಕೆಸುವಿನ ಗೆಡ್ಡೆಗೆ ಜೀವಕಳೆ ಬರುತ್ತದೆ. ಈ ಹಸಿರು ಕೋಮಲೆ 'ಕೆಸ' ಭೋಜನಪ್ರಿಯರ ಬಾಯಲ್ಲಿ ನೀರೂರಿಸುತ್ತಾಳೆ. ಇಲ್ಲಿನ ಮಂದಿಗೆ ಸೂಪರ್ ಮಾರ್ಕೆಟ್‌ಗಳಲ್ಲಿ ಸಿಗುವ ಎಷ್ಟೋ ಆಹಾರ ಪದಾರ್ಥಗಳ ಪರಿಚಯವೇ ಇರುವುದಿಲ್ಲ. ಅಕ್ಕಪಕ್ಕ ಸಿಗುವ ಗೆಡ್ಡೆ, ಗೆಣಸು, ಪೋಷಕಾಂಶಯುಕ್ತ ಎಲೆಗಳೇ ಇವರ ಅಡುಗೆಮನೆಯ ಕಾಯಂ ತರಕಾರಿಗಳು. ಅದೇ ರೀತಿ ಮಳೆಗಾಲದಲ್ಲಿ ಮಾತ್ರ ಗರಿ ಬಿಚ್ಚಿದ ನವಿಲಿನಂತೆ ನಳನಳಿಸುವ ಕೆಸುವಿನ ಎಲೆಗಳಿಂದ ತಯಾರಾಗುವ ಪತ್ರೊಡೆ ಎಂದರೆ ಇನ್ನಿಲ್ಲದ ಅಚ್ಚುಮೆಚ್ಚು, ಒಂದು ಬಗೆಯ 'ಹುಚ್ಚು'!

ಪತ್ರೊಡೆ ಬರೀ ಒಂದು ಅಡುಗೆಯಲ್ಲ. ಅದು ಮಲೆನಾಡು ಮತ್ತು ಕರಾವಳಿಯ ಸಾಂಸ್ಕೃತಿಕ ಅಸ್ಮಿತೆ ಸಹ. ಕಾಫಿ–ಅಡಿಕೆ ತೋಟಗಳ ಅಂಚಿನಲ್ಲಿ, ಹಳ್ಳ–ಕೊಳ್ಳಗಳ ಮಗ್ಗುಲಲ್ಲಿ ಬೆಳೆಯುವ ನೆಲಕೆಸು ಹಾಗೂ ಬೃಹತ್ ಮರಗಳ ಮೇಲೆ ಆನೆ ಕಿವಿಯಂತೆ ಅಗಲವಾಗಿ ಹರಡಿ ನಿಲ್ಲುವ ನಾನಾ ವಿಧದ ಕೆಸುಗಳು ಮಳೆಗಾಲದ ಆಗಮನವನ್ನು ಸಾರುತ್ತವೆ. ಈ ಎಲೆಗಳಿಂದ ಸಾಂಪ್ರದಾಯಿಕ ವಿಧಾನದಲ್ಲಿ ತಯಾರಾಗುವ ಪತ್ರೊಡೆ ಮಲೆನಾಡಿಗರು ಪ್ರಕೃತಿ ಮಾತೆಗೆ ಅರ್ಪಿಸುವ ಒಂದು ಕೃತಜ್ಞತೆಯ ಅಡುಗೆ. ಸಂಸ್ಕೃತಿ ಮತ್ತು ಪ್ರಕೃತಿಯ ಸಂಗಮದಂತಿರುವ 'ಪತ್ರೊಡೆ'ಗೆ ಇಲ್ಲಿ ಭಾವನಾತ್ಮಕ ಸ್ಥಾನವಿದೆ. ಆಷಾಢದ ಮಳೆ ಧೋ... ಎಂದು ಸುರಿಯುವಾಗ ದೇಹದ ಉಷ್ಣಾಂಶವನ್ನು ಸಮತೋಲನದಲ್ಲಿ ಇಡಲು ಈ ಖಾದ್ಯ ರಾಮಬಾಣ.

## ಏನಂಥ ವಿಶೇಷ?

ಪತ್ರೊಡೆ ಮಾಡುವುದೆಂದರೆ ತಾಳ್ಮೆಯ ಕೆಲಸ. ಕಾಡಿನ ಅಥವಾ ಹಿತ್ತಲ ಹಳ್ಳಗಳ ಪಕ್ಕದಲ್ಲಿ ಬೆಳೆಯುವ ಎಳೆಯ ಕೆಸುವಿನ ಎಲೆಗಳನ್ನು ಕಿತ್ತು ತಂದು, ಚೆನ್ನಾಗಿ ತೊಳೆದು, ಅದರ ಹಿಂಭಾಗದ ನಾರುಗಳನ್ನು ಜಾಗರೂಕವಾಗಿ ತೆಗೆಯಬೇಕು.

ನಂತರ ಅಕ್ಕಿ, ತೆಂಗಿನತುರಿ, ಒಣಮೆಣಸಿನಕಾಯಿ, ಜೀರಿಗೆ, ಕೊತ್ತಂಬರಿ ಸೇರಿಸಬೇಕು. ಮುಖ್ಯವಾಗಿ ಹುಣಸೆಹಣ್ಣು ಮತ್ತು ಬೆಲ್ಲ ಬೆರೆಸುವುದನ್ನು ಮರೆಯುವಂತಿಲ್ಲ. ಈ ಮಸಾಲೆಯನ್ನು ಎಲೆಗಳ ಮೇಲೆ ಒಂದರ ಮೇಲೊಂದರಂತೆ ಹಚ್ಚಿ, ನಂತರ ಅದನ್ನು ಸುರುಳಿ ಆಕಾರದಲ್ಲಿ ಕಡುಬಿನ ರೀತಿಯಲ್ಲಿ ಸುತ್ತಿಕೊಳ್ಳಬೇಕು. ಹೀಗೆ ತಯಾರಿಸಿದ ಸುರುಳಿಗಳನ್ನು ಇಡ್ಲಿ ಪಾತ್ರೆಯಲ್ಲಿಟ್ಟು ಹಬೆಯಲ್ಲಿ ಹದಕ್ಕೆ ತಕ್ಕಂತೆ ಬೇಯಿಸಿಕೊಳ್ಳಬೇಕು. ಚೆನ್ನಾಗಿ ಬೆಂದ ಈ ಕಡುಬುಗಳನ್ನು ಬಿಲ್ಲೆಗಳಂತೆ ಕತ್ತರಿಸಿ, ತೆಂಗಿನ ಎಣ್ಣೆಯಲ್ಲಿ ಕರಿಯಬಹುದು ಅಥವಾ ಸಾಸಿವೆ– ಕರಿಬೇವು ಹಾಕಿ ಒಗ್ಗರಣೆ ಕೊಟ್ಟು ಪಲ್ಯವನ್ನು ಕೂಡ ಮಾಡಿಕೊಳ್ಳಬಹುದು.

ಪತ್ರೊಡೆ ತಯಾರಿಕೆಯಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಕೆಸುವಿನ ಎಲೆಯಲ್ಲಿ 'ಕ್ಯಾಲ್ಸಿಯಂ ಆಕ್ಸಲೇಟ್' ಎಂಬ ಅಂಶವಿರುತ್ತದೆ. ಇದು ಗಂಟಲಿನಲ್ಲಿ ಕೆರೆತ ಉಂಟುಮಾಡಬಹುದು. ಇದನ್ನು ಹೋಗಲಾಡಿಸಲು ಆಮ್ಲೀಯ ಗುಣವಿರುವ ಹುಣಸೆಹಣ್ಣನ್ನು ಬಳಸಲಾಗುತ್ತದೆ. ಇದು ನಮ್ಮ ಪೂರ್ವಜರ ಆಹಾರ ವಿಜ್ಞಾನಕ್ಕೆ ಸಾಕ್ಷಿ.

ಪತ್ರೊಡೆ ನಾಲಿಗೆ ಚಪಲಕ್ಕಷ್ಟೇ ಅಲ್ಲ, ಆರೋಗ್ಯದ ದೃಷ್ಟಿಯಿಂದಲೂ ಅಮೂಲ್ಯವಾಗಿದೆ. ಈ ಎಲೆಯಲ್ಲಿ ವಿಟಮಿನ್ ಎ, ಬಿ ಮತ್ತು ಸಿ ಅಂಶಗಳು ಹೇರಳವಾಗಿದ್ದು, ಇದು ಮಳೆಗಾಲದಲ್ಲಿ ಕಾಡುವ ಸಣ್ಣಪುಟ್ಟ ಕಾಯಿಲೆಗಳ ವಿರುದ್ಧ ಹೋರಾಡಲು ರೋಗನಿರೋಧಕ ಶಕ್ತಿ ನೀಡುತ್ತದೆ. ಇದರಲ್ಲಿ ಹೇರಳವಾದ ನಾರಿನಂಶ ಇರುವುದರಿಂದ ಜೀರ್ಣಕ್ರಿಯೆ ಸರಾಗವಾಗುತ್ತದೆ. ಜೊತೆಗೆ ಕಬ್ಬಿಣದಂಶ ಅಧಿಕವಾಗಿರುವ ಕಾರಣ ರಕ್ತಹೀನತೆ ಇರುವವರಿಗೆ ಅತ್ಯುತ್ತಮ ಆಹಾರ.

ಒಂದು ಕಾಲದಲ್ಲಿ ಕರಾವಳಿ ಮತ್ತು ಮಲೆನಾಡಿಗೆ ಸೀಮಿತವಾಗಿದ್ದ ಪತ್ರೊಡೆ ಇಂದು ಬೆಂಗಳೂರು, ಮೈಸೂರು ಸೇರಿದಂತೆ ಇಡೀ ಕರ್ನಾಟಕದ ನೆಚ್ಚಿನ ಖಾದ್ಯವಾಗಿಬಿಟ್ಟಿದೆ. ಹುಳಿ, ಸಿಹಿ, ಖಾರ ಮತ್ತು ಉಪ್ಪಿನ ಸಮತೋಲನವಿರುವ ಪತ್ರೊಡೆಯ ರುಚಿ ಎಲ್ಲರನ್ನೂ ಸೆಳೆಯುತ್ತಿದೆ.

ಇಂದಿನ ಜಂಕ್‌ಫುಡ್ ಯುಗದಲ್ಲಿ ಇಂತಹ ಸಾಂಪ್ರದಾಯಿಕ ಹಾಗೂ ಆರೋಗ್ಯಕರ ಆಹಾರಗಳನ್ನು ಉಳಿಸಿ ಬೆಳೆಸುವ ಅಗತ್ಯವಿದೆ. ಇಂದು ನಾವು ಪಿಜ್ಜಾ, ಬರ್ಗರ್‌ಗಳತ್ತ ಮುಖ ಮಾಡುತ್ತಿದ್ದೇವೆ. ಆದರೆ, ಮಳೆಗಾಲದ ಆ ಅಬ್ಬರದ ನಡುವೆ, ಮನೆಯ ಹೆಂಚಿನ ಮೇಲೆ ಮಳೆಯ ಹನಿಗಳು ಬೀಳುವ ಶಬ್ದವನ್ನು ಕೇಳುತ್ತಾ, ಅಮ್ಮ ಮಾಡಿದ ಬಿಸಿಬಿಸಿ ಪತ್ರೊಡೆಯನ್ನು ತೆಂಗಿನ ಎಣ್ಣೆ ಹಾಕಿಕೊಂಡು ತಿನ್ನುವ ಸುಖ ಬೇರೆಲ್ಲೂ ಸಿಗಲಾರದು. ಇದು ನಮ್ಮ ಮಣ್ಣಿನ ರುಚಿ, ನಮ್ಮ ಪರಂಪರೆಯ ಹೆಮ್ಮೆ. ಪತ್ರೊಡೆ ಬರೀ ಹೊಟ್ಟೆ ತುಂಬಿಸುವ ಆಹಾರವಲ್ಲ, ಇದು ಮಲೆನಾಡಿನ ಪ್ರೀತಿಯ ಸಾರ.

### ಹೀಗೂ ಸವಿಯಿರಿ

- **ಪತ್ರೊಡೆ ಫ್ರೈ (ತವಾ ಫ್ರೈ):** ಹಬೆಯಲ್ಲಿ ಬೆಂದ ಪತ್ರೊಡೆ ಬಿಲ್ಲೆಗಳನ್ನು ರವೆ ಅಥವಾ ಅಕ್ಕಿಹಿಟ್ಟಿನಲ್ಲಿ ಅದ್ದಿ ತೆಂಗಿನ ಎಣ್ಣೆಯಲ್ಲಿ ಕೆಂಪಗೆ ಕರಿದು ತಟ್ಟೆಗೆ ಬಡಿಸಿದರೆ ತಿಂದವರು ಅಬ್ಬಾ ಎಂಥಾ ರುಚಿ ಎನ್ನದೇ ಇರಲಾರರು.
- **ಒಗ್ಗರಣೆ ಪತ್ರೊಡೆ:** ಬೆಂದ ಪತ್ರೊಡೆಯನ್ನು ಪುಡಿಪುಡಿ ಮಾಡಿ ಸಾಸಿವೆ, ಹಸಿಮೆಣಸಿನಕಾಯಿ ಮತ್ತು ತೆಂಗಿನತುರಿಯೊಂದಿಗೆ ಒಗ್ಗರಣೆ ಹಾಕಿಕೊಟ್ಟರೆ ಮನೆಮಂದಿ ಚಪ್ಪರಿಸಿಕೊಂಡು ತಿನ್ನುತ್ತಾರೆ.
- **ಪತ್ರೊಡೆ ಗಸಿ (ಕರಿ):** ತೆಂಗಿನಹಾಲಿನ ಸಾರಿನಲ್ಲಿ ಪತ್ರೊಡೆ ಚೂರುಗಳನ್ನು ಬೇಯಿಸಿ ಅನ್ನದೊಂದಿಗೆ ಸವಿಯುವುದು ಕರಾವಳಿ ಭಾಗದ ಶೈಲಿ.

### ಅಮ್ಮ ಹೇಳ್ತಾಳೆ

ತಿಳಿಸಾರಿಗೆ ಕೊಬ್ಬರಿ ಎಣ್ಣೆಯಲ್ಲಿ ಒಗ್ಗರಣೆ ಕೊಡಬೇಕು; ಹಾಗೇ ರಸಂಗೆ ಕಾಯಿಹಾಲು ಹಾಕಿದರೆ ಭಿನ್ನ ರುಚಿ ಕೊಡುತ್ತದೆ.

***

ಪಾತ್ರೆಯಲ್ಲಿ ಎಣ್ಣೆ ಬಿಸಿ ಆದಮೇಲೆ ಯಾವುದಾದರೂ ಪದಾರ್ಥ ಹಾಕಿದರೆ ಹೊರಗೆ ಸಿಡಿಯುತ್ತದೆ. ಇದನ್ನು ತಪ್ಪಿಸಲು, ಕಾದ ಎಣ್ಣೆಯಲ್ಲಿ ಸ್ವಲ್ಪ ಉಪ್ಪು ಹಾಕಬೇಕು. ಆಗ ಎಣ್ಣೆ ಚಿಮ್ಮುವುದಿಲ್ಲ.

# ಏನಿವರ ಬ್ಯೂಟಿ ಸೀಕ್ರೆಟ್?

**ಅನು ಪೂವಯ್ಯ**, ಚಿತ್ರನಟಿ

**ಚರ್ಮ** ಮತ್ತು ಕೂದಲಿಗೆ ಮೊದಲಿನಿಂದಲೂ ವಿಶೇಷ ಆರೈಕೆಯನ್ನೇನೂ ನಾನು ಮಾಡುವುದಿಲ್ಲ. ದೇಹಕ್ಕೆ ನೀರಿನ ಅಗತ್ಯ ಹೆಚ್ಚಾಗಿರುತ್ತದೆ. ಅದರಲ್ಲಿಯೂ ಈ ಬೇಸಿಗೆಯಲ್ಲಿ ನೀರಿಗೆ ಮಹತ್ವ ಕೊಡಬೇಕು. ದಿನಕ್ಕೆ ಮೂರೂವರೆ ಲೀಟರ್ ನೀರನ್ನು ಕುಡಿಯುತ್ತೇನೆ. ಎಲ್ಲೇ ಹೋದರೂ ಯಾವುದೇ ಕಾಲದಲ್ಲಿಯೂ ಇಷ್ಟು ಪ್ರಮಾಣದ ನೀರು ಕುಡಿಯುವುದನ್ನು ತಪ್ಪಿಸುವುದಿಲ್ಲ. ಜತೆಗೆ ಗ್ರೀನ್ ಟೀ ಕುಡಿಯುತ್ತೇನೆ. ಪಾಲಾಕ್ ಸೊಪ್ಪಿನ ರಸವನ್ನು ಆಗಾಗ್ಗೆ ಸೇವಿಸುತ್ತೇನೆ. ಇದು ಚರ್ಮವನ್ನು ಆರೋಗ್ಯವಾಗಿಡಲು ಸಹಕರಿಸುತ್ತದೆ.

ಯಾವಾಗಾದರೊಮ್ಮೆ ಫೇಸ್ ಲೇಸರ್ ಮಾಡಿಸುತ್ತೇನೆ. ಫೇಷಿಯಲ್ ಮಾಡಿಸುವುದಿಲ್ಲ. ತಿಂಗಳಿನಲ್ಲಿ ಹದಿನೈದು ದಿನ ಎಬಿಸಿ (ಆಮ್ಲ, ಬೀಟ್ರೂಟ್, ಕ್ಯಾರೆಟ್) ಜ್ಯೂಸ್ ಕುಡಿದರೆ ಹೆಚ್ಚು. ಚರ್ಮ ನಳನಳಿಸಲು ತಾಜಾ ಹಣ್ಣು ಮತ್ತು ತರಕಾರಿಗಳನ್ನು ಹೆಚ್ಚಾಗಿ ತಿನ್ನುತ್ತೇನೆ. ಇದು ಬಿಟ್ಟರೆ ನಿರ್ದಿಷ್ಟವಾಗಿ ಮನೆ ಮದ್ದು ಎಂದು ಏನನ್ನೂ ಮಾಡುವುದಿಲ್ಲ.

ಕೂದಲಿಗೆ ನಿತ್ಯ ಎಣ್ಣೆ ಹಚ್ಚುವ ಪೈಕಿಯವಳಲ್ಲ. ಅಮ್ಮ ನನ್ನ ಜತೆ ಇದ್ದಾಗಷ್ಟೇ ಅವರು ನನ್ನ ಕೂದಲಿಗೆ ಎಣ್ಣೆ ಹಚ್ಚುತ್ತಾರೆ. ನಾನು ಸಲೂನ್‌ಗೆ ಹೋಗಿ ಹೇರ್‌ವಾಷ್ ಮಾಡಿಸಿಕೊಳ್ಳುತ್ತೇನೆ. ತುಂಬಾ ತುರ್ತು ಇದ್ದಾಗ ಮಾತ್ರ ಮನೆಯಲ್ಲಿ ಹೇರ್‌ವಾಷ್ ಮಾಡಿಕೊಳ್ಳುತ್ತೇನೆ. ಇದು ಬಿಟ್ಟರೆ ಹದಿನೈದು ದಿನಗಳಿಗೊಮ್ಮೆ ಹೇರ್‌ಸ್ಪಾ ಮಾಡಿಸುತ್ತೇನೆ.

ನಿತ್ಯ ಬೆಳಿಗ್ಗೆ ಬಿರುಸು ನಡಿಗೆಯಿಂದ ದಿನ ಆರಂಭಗೊಳ್ಳುತ್ತದೆ. ತಿಂಗಳಲ್ಲಿ ಇಪ್ಪತ್ತು ದಿನಗಳಾದರೂ ಜಿಮ್‌ಗೆ ಹೋಗುತ್ತೇನೆ. ವ್ಯಾಯಾಮದ ಮೂಲಕ ದೇಹವನ್ನು ದಂಡಿಸುವುದರಿಂದ ಮನಸ್ಸು ನಿರಾಳವಾಗುತ್ತದೆ. ಮನಸ್ಸಿನ ಕಲ್ಮಶಗಳು ಹೊರ ಹೋದಂತೆ ದೇಹ ತಾನಾಗಿಯೇ ಹೊಳಪು ಪಡೆಯುತ್ತದೆ. ಮನಸ್ಸಿಗೆ ಶಾಂತಿ ಇದ್ದಾಗಷ್ಟೇ ಕಣ್ಣು ಮತ್ತು ಚರ್ಮದಲ್ಲಿ ಹೊಳಪು ಬರುತ್ತದೆ. ಬದುಕಿನಲ್ಲಿ ನೆಮ್ಮದಿ ಇಲ್ಲವಾದರೆ ಯಾವುದೇ ದುಬಾರಿ ಕ್ರೀಮ್‌ಗಳೂ ಪ್ರಯೋಜನಕ್ಕೆ ಬಾರವು. ದೈಹಿಕ ಹಾಗೂ ಮಾನಸಿಕ ಒತ್ತಡವನ್ನು ಸರಿಯಾದ ಮಾರ್ಗದಲ್ಲಿ ನಿವಾರಿಸಿಕೊಳ್ಳದೇ ಇದ್ದರೆ ಅದು ಮುಖದಲ್ಲಿ ಎದ್ದು ಕಾಣುತ್ತದೆ.

ಎಲ್ಲರಿಗೂ ವಯಸ್ಸಾಗುತ್ತದೆ. ಮಾಗುವ ಪ್ರಕ್ರಿಯೆಯಲ್ಲಿ ಒಂದು ಸಹಜತನವಿದೆ. ಅದಕ್ಕೆ ತೊಂದರೆಯಾಗದಂತೆ ಬದುಕುವುದು ಬಹಳ ಮುಖ್ಯ. ಏನೇನೋ ಕೃತಕ ಪ್ರಸಾಧನ ಸಾಮಗ್ರಿಗಳನ್ನು ಬಳಸುವುದು, ವಯಸ್ಸನ್ನು ಮರೆಮಾಚಲು ಬೊಟೊಕ್ಸ್, ಫಿಲ್ಲರ್ಸ್‌ಗಳನ್ನು ಮಾಡಬಹುದು. ಆದರೆ ಅವೆಲ್ಲ ತಾತ್ಕಾಲಿಕ. ಅನುಭವಗಳಿಂದ ಮಾಗಿದಂತೆ ಕಂಡಾಗ, ವಯಸ್ಸಾದರೂ ಸಹಜವಾಗಿಯೇ ಸುಂದರವಾಗಿ ಕಾಣುತ್ತೇವೆ.

# ‘ನನ್ನ ಇ–ಖಾತಾ ನನ್ನ ಹಕ್ಕು ಅಭಿಯಾನ’ಕ್ಕೆ ಇಂದು ಚಾಲನೆ

## ಇ-ಖಾತಾ ವಿತರಿಸಲು ಐದು ನಗರ ಪಾಲಿಕೆಗಳ 52 ಕೇಂದ್ರಗಳಲ್ಲಿ ಪ್ರತಿ ಶನಿವಾರ ಅಭಿಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ‘ಭೂ ಗ್ಯಾರಂಟಿ’ ಯೋಜನೆಯಡಿ ‘ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನ’ ಮೇ 16ರ ಶನಿವಾರದಿಂದ ಆರಂಭವಾಗಲಿದೆ.

ಆಸ್ತಿ ಮಾಲೀಕರಿಗೆ ಸುರಕ್ಷಿತ ಭೂ ದಾಖಲೆಗಳನ್ನು ನೀಡುವ ಸಲುವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನಿರ್ದೇಶನದಂತೆ ಇ-ಖಾತಾ ಸಿದ್ಧಪಡಿಸಿ, ವಿತರಿಸಲಾಗುತ್ತಿದೆ ಎಂದು ಜಿಬಿಎ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಭಿಯಾನಕ್ಕಾಗಿ ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 52 ಕೇಂದ್ರಗಳನ್ನು ತೆರೆಯಲಾಗಿದ್ದು, ಪ್ರತಿ ಶನಿವಾರ ಪ್ರತಿ ಕೇಂದ್ರದಲ್ಲಿ 100ರಿಂದ 200 ನಾಗರಿಕರಿಗೆ ಸೇವೆ ಒದಗಿಸಲಾಗುತ್ತದೆ. 200ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಆಸ್ತಿ ಮಾಲೀಕರು ಬಂದರೆ, ಅವರಿಗೆ ಟೋಕನ್ ನೀಡಿ, ಮುಂದಿನವಾರ ಅರ್ಜಿ ಸ್ವೀಕರಿಸಲಾಗುತ್ತದೆ. ಪ್ರತಿ ಶನಿವಾರ ಎಲ್ಲ ಕೇಂದ್ರಗಳಿಂದ ಸುಮಾರು ಐದು ಸಾವಿರ ನಾಗರಿಕರಿಗೆ ಸೇವೆ ಒದಗಿಸುವ ಗುರಿ ಹೊಂದಲಾಗಿದೆ ಎಂದು ಹೇಳಲಾಗಿದೆ.

ಬಿ ಖಾತೆದಿಂದ ಎ ಖಾತೆಗೆ ಪರಿವರ್ತನೆಗಾಗಿ ಮಾರ್ಗಸೂಚಿ ದರದ ಶೇ 5ರ ಬದಲಿಗೆ ಶೇ 2ರಷ್ಟು ಶುಲ್ಕ ಪಾವತಿಸುವ ಅವಕಾಶ ಕಲ್ಪಿಸಲಾಗಿದ್ದು, ಈ ಯೋಜನೆಯು 100 ದಿನ ಇರಲಿದೆ.

ಸಹಾಯಕ ಕಂದಾಯ ಅಧಿಕಾರಿಗಳು (ಎಆರ್‌ಒ), ಕಂದಾಯ ನಿರೀಕ್ಷಕರು (ಆರ್‌ಐ), ತಾಂತ್ರಿಕ ತಂಡಗಳು ಮತ್ತು ನಾಗರಿಕ ಸೌಲಭ್ಯ ಸಿಬ್ಬಂದಿ ಸೇರಿದಂತೆ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಅಭಿಯಾನ ಕೇಂದ್ರದಲ್ಲಿ ಅರ್ಜಿ ವಿಲೇವಾರಿ ಮತ್ತು ಪರಿಹಾರ ಒದಗಿಸಲಿದ್ದಾರೆ. ನಾಗರಿಕರು ಖಾತಾ ಅಭಿಯಾನದ ಸ್ಥಳಕ್ಕೆ ಭೇಟಿ ನೀಡುವಾಗ ತಮ್ಮ ಆಸ್ತಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು, ಗುರುತಿನ ಪುರಾವೆ ಮತ್ತು ಅರ್ಜಿ ವಿವರಗಳೊಂದಿಗೆ ಹಾಜರಾಗಲು ತಿಳಿಸಲಾಗಿದೆ.

ಅಭಿಯಾನ ಪ್ರತಿ ಶನಿವಾರ ನಡೆಯುವುದರಿಂದ ಎರಡನೇ ಮತ್ತು ನಾಲ್ಕನೇ ಶನಿವಾರದ ರಜಾದಿನದಂದು ಕಾರ್ಯನಿರ್ವಹಿಸುವ ಕಂದಾಯ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ, ಬದಲಿಯಾಗಿ ಕೆಲಸದ ದಿನಗಳಂದು ರಜೆ ನೀಡಲಾಗುತ್ತದೆ ಎಂದು ಮಾಹಿತಿ ನೀಡಲಾಗಿದೆ.

### ಖಾತಾ ಅಭಿಯಾನ ಕೇಂದ್ರದಲ್ಲಿನ ವ್ಯವಸ್ಥೆ

- ನಾಗರಿಕ ಸಹಾಯ ಕೇಂದ್ರ (ಹೆಲ್ಪ್ ಡೆಸ್ಕ್)
- ಅರ್ಜಿ ಹಾಗೂ ಸರತಿ ಸಾಲು ವ್ಯವಸ್ಥೆ
- ಸೂಚನಾ ಹಾಗೂ ಮಾಹಿತಿಯುಳ್ಳ ನಾಮಫಲಕ
- ವಿವಿಧ ಸೇವೆಗಳಿಗೆ ಪ್ರತ್ಯೇಕ ಕೌಂಟರ್
- ಇಂಟರ್‌ನೆಟ್ ಸೌಲಭ್ಯ ಹೊಂದಿದ ಕಂಪ್ಯೂಟರ್‌ಗಳು, ಪ್ರಿಂಟರ್, ಸ್ಕ್ಯಾನರ್
- ಪಾವತಿ ನೆರವು
- ನುರಿತ ಸಿಬ್ಬಂದಿ

### ಕೇಂದ್ರಗಳಲ್ಲಿನ ಸೌಲಭ್ಯಗಳು

- ಇ-ಖಾತಾ – ಹೊಸ ಇ-ಖಾತಾ
- ಬಿ ಖಾತಾದಿಂದ ಎ ಖಾತಾಗೆ ಪರಿವರ್ತನೆ
- ಬಾಕಿ ಇರುವ ಅರ್ಜಿಗಳು, ತಿದ್ದುಪಡಿಗಳು ಹಾಗೂ ಆಕ್ಷೇಪಣೆಗಳು, ಹೊಸ ಅರ್ಜಿದಾರರಿಗೆ ನೆರವು
- ಅಂತಿಮ ಇ-ಖಾತಾದಾರರಿಗೆ ‘ನಿಮ್ಮ ಇ-ಖಾತಾ ಸಿದ್ಧವಿದೆ, ಕೇಂದ್ರಕ್ಕೆ ಭೇಟಿ ನೀಡಿ ಮುದ್ರಿತ ಪ್ರತಿಯನ್ನು ಸಂಗ್ರಹಿಸಿ’ ಎಂದು ದೂರವಾಣಿ ಹಾಗೂ ಎಸ್‌ಎಂಎಸ್ ಮೂಲಕ ಮಾಹಿತಿ
- ಅರ್ಜಿ ಸಲ್ಲಿಸುವವರಿಗೆ ಯಾವ ರೀತಿ ಅರ್ಜಿ ಸಲ್ಲಿಸಬೇಕೆಂಬ ತರಬೇತಿ
- ಇ-ಖಾತಾ ಸೇವೆಗಳ ಕುರಿತ ನಾಗರಿಕರ ಅಹವಾಲುಗಳಿಗೆ ತಕ್ಷಣದ ಪರಿಹಾರ ಹಾಗೂ ಸ್ಥಳದಲ್ಲೇ ಸೇವೆ

### ನಗರ ಪಾಲಿಕೆಗಳಲ್ಲಿನ ಅಭಿಯಾನ ಕೇಂದ್ರಗಳ ವಿವರ

**ಬೆಂಗಳೂರು ಪೂರ್ವ**

ಮಾರತ್ತಹಳ್ಳಿ– ನ್ಯೂ ಹೊರೈಜಾನ್ ಕಾಲೇಜು, ಬೆಳ್ಳಂದೂರು, ಕಾಡು ಬೀಸನಹಳ್ಳಿ; ವೈಟ್‌ಫೀಲ್ಡ್ ಕ್ಲಬ್; ಹೂಡಿ ಪಾಲಿಕೆ ವಾರ್ಡ್ ಕಚೇರಿ, ಎಇಸಿಎಸ್ ಲೇಔಟ್, ದೊಡ್ಡನೆಕ್ಕುಂದಿ; ಕೆ.ಆರ್.ಪುರ– ಐಟಿಐ ಶಾಲೆ, ಐಟಿಐ ಕಾಲೊನಿ; ಎಚ್‌ಎಎಲ್ ವಿಮಾನನಿಲ್ದಾಣ– ಎಸ್.ಸಿ.ಟಿ ಪಾಲಿಟೆಕ್ನಿಕ್, ಕಗ್ಗದಾಸಪುರ ಮುಖ್ಯರಸ್ತೆ; ಹೊರಮಾವು– ನ್ಯಾಷನಲ್ ಪಬ್ಲಿಕ್ ಸ್ಕೂಲ್, ಕಲ್ಕೆರೆ ಅಗರ ಮುಖ್ಯ ರಸ್ತೆ.

**ಬೆಂಗಳೂರು ಕೇಂದ್ರ**

ಸಿ.ವಿ. ರಾಮನ್ ನಗರ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ, 9ನೇ ಎ ಮುಖ್ಯರಸ್ತೆ, ಎಲ್‌ಐಸಿ ಕಾಲೊನಿ; ಜೀವನ್ ಬಿಮಾ ನಗರ, ತಮಿಳು ಸರ್ಕಾರಿ ಶಾಲೆ; ಶಾಂತಿನಗರ ಸರ್ಕಾರಿ ಮಾದರಿ ಪ್ರಾಥಮಿಕ ತಮಿಳು ಬಾಲಕಿಯರ ಶಾಲೆ, ಶಾಂತಿನಗರ ಮುಖ್ಯರಸ್ತೆ, ಲಾಂಗ್‌ಫೋರ್ಡ್ ಟೌನ್; ಡಾ. ಶಿವಕುಮಾರ ಸ್ವಾಮೀಜಿ ಬಯಲು ರಂಗಮಂಟಪ, ಇಂಡಿಕ್ಯೂಬ್ ಪಾರ್ಕ್, ದೊಮ್ಮಲೂರು 1ನೇ ಹಂತ; ಗುಂಡೂರಾವ್ ಮೈದಾನ, ಸಿರೂರ್ ಪಾರ್ಕ್ ರಸ್ತೆ, ಮಲ್ಲೇಶ್ವರ; ಪಾಲಿಕೆ ಬಾಲಕಿಯರ ಪಿಯು ಕಾಲೇಜು, 1ನೇ ಕ್ರಾಸ್, ಮಾಗಡಿ ಮುಖ್ಯರಸ್ತೆ, ಆರೋಗ್ಯ ಸೌಧ ಸಮೀಪ; ನ್ಯಾಷನಲ್ ಹೈಸ್ಕೂಲ್, ಕೆ.ಆರ್ ರಸ್ತೆ, ಬಸವನಗುಡಿ; ರಾಣಿ ಸರಳಾ ದೇವಿ ವಿದ್ಯಾ ಸಂಸ್ಥೆ, ನಂ.281, 7ನೇ ಕ್ರಾಸ್ ರಸ್ತೆ, 1ನೇ ಬ್ಲಾಕ್, ಜಯನಗರ; ಪಾಲಿಕೆ ಬಾಲಕಿಯರ ಪಿಯು ಕಾಲೇಜು, ಡಿಸ್ಪೆನ್ಸರಿ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆ ಹಿಂಭಾಗ; ಸರ್ದಾರ್ ಪಟೇಲ್ ಭವನ, ನಂ.16, ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ; ಪಾಲಿಕೆ ಪಿಯು ಕಾಲೇಜು, 2ನೇ ಮುಖ್ಯ ರಸ್ತೆ, 6ನೇ ಕ್ರಾಸ್, ಚಾಮರಾಜಪೇಟೆ; ಪಾಲಿಕೆ ಬಾಲಕಿಯರ ಪಿಯು ಕಾಲೇಜು, ಪಾದರಾಯನಪುರ.

**ಬೆಂಗಳೂರು ಪಶ್ಚಿಮ**

ಮಲ್ಲೇಶ್ವರ ವಿಭಾಗ ಕಂದಾಯ ಅಧಿಕಾರಿಗಳ ಕಚೇರಿ ಸಭಾಂಗಣ, ಪಾಲಿಕೆ ಕಟ್ಟಡ, 5ನೇ ಮುಖ್ಯ ರಸ್ತೆ, 5ನೇ ಕ್ರಾಸ್ ರಸ್ತೆ, ಎಂ.ಕೆ.ಕೆ ರಸ್ತೆ; ರಾಜಾಜಿನಗರ ವಿಭಾಗದ ಕಂದಾಯ ಅಧಿಕಾರಿಗಳ ಕಚೇರಿ, 1ನೇ ಮಹಡಿ, ಸರ್ ಎಂ. ವಿಶ್ವೇಶ್ವರಯ್ಯ ಸಂಕೀರ್ಣ, 2ನೇ ಬ್ಲಾಕ್; ಬಸವನಗುಡಿ ವಿಭಾಗದ ಕಂದಾಯ ಅಧಿಕಾರಿಗಳ ಕಚೇರಿ, #19, ನೆಲ ಮಹಡಿ, ತ್ಯಾಗರಾಜನಗರ, ಚನ್ನಮ್ಮನಕೆರೆ ಅಚ್ಚುಕಟ್ಟು; ಜ್ಞಾನಸೌಧ, 3ನೇ ಮುಖ್ಯರಸ್ತೆ, ಕಲ್ಯಾಣನಗರ, 8ನೇ ಕ್ರಾಸ್, 1ನೇ ಹಂತ, 2ನೇ ಬ್ಲಾಕ್, ನಾಗರಭಾವಿ, ಮೂಡಲಪಾಳ್ಯ; ಪಾಲಿಕೆ ವಾರ್ಡ್ ಕಚೇರಿ, ಹಂಪಿನಗರ, ಶಾಸಕರ ಕಚೇರಿ, ಸಂಕಷ್ಟಹರ ಗಣಪತಿ ದೇವಸ್ಥಾನ ಸಮೀಪ, ಹಂಪಿನಗರ; ಪದ್ಮನಾಭನಗರ ಶಾಸಕರ ಕಚೇರಿ, ಸಂಖ್ಯೆ 3, 9ನೇ ಮುಖ್ಯರಸ್ತೆ, ವಿಹಾರ ಕೇಂದ್ರ ಸಮೀಪ, ಸಿದ್ದಣ್ಣ ಲೇಔಟ್, ಬನಶಂಕರಿ 2ನೇ ಹಂತ; ಗಂಗಮ್ಮ ತಿಮ್ಮಯ್ಯ ಶಿಕ್ಷಣ ಸಂಸ್ಥೆ, ಸುಂಕದಕಟ್ಟೆ, 10/15, ಮಾಗಡಿ ಮುಖ್ಯರಸ್ತೆ; ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಕೊಮ್ಮಘಟ್ಟ ರಸ್ತೆ, 18, 3ನೇ ಮುಖ್ಯರಸ್ತೆ, ಅಂಚೆ ಕಚೇರಿ ಹಿಂಭಾಗ, ಕೆಂಗೇರಿ ಉಪನಗರ; ಹೆಗ್ಗನಹಳ್ಳಿ ವಿಭಾಗದ ಕಂದಾಯ ಅಧಿಕಾರಿಗಳ ಕಚೇರಿ, 4ನೇ ಕ್ರಾಸ್, ಎಚ್‌ಎಂಟಿ ಲೇಔಟ್, ಓಂ ಟಿಂಬರ್ಸ್ ರಸ್ತೆ, ನೀರಿನ ಟ್ಯಾಂಕ್ ಸಮೀಪ; ಮಹಾಲಕ್ಷ್ಮೀಪುರ ವಿಭಾಗದ ಕಂದಾಯ ಅಧಿಕಾರಿಗಳ ಕಚೇರಿ, ಪಾಲಿಕೆ ಸಂಕೀರ್ಣ, ಸಂಖ್ಯೆ 1,221, 12ನೇ ಮುಖ್ಯರಸ್ತೆ, 11ನೇ ಕ್ರಾಸ್ ರಸ್ತೆ, ವೆಸ್ಟ್ ಆಫ್ ಕಾರ್ಡ್ ರಸ್ತೆ, 2ನೇ ಹಂತ, ನಾಗಪುರ.

**ಬೆಂಗಳೂರು ದಕ್ಷಿಣ**

ಬುದ್ಧ ಭವನ, ಜೆಪಿ ನಗರ 8ನೇ ಹಂತ, ರಾಘವ ನಗರ, ಐಎಂಜಿ ಅಪಾರ್ಟ್‌ಮೆಂಟ್ಸ್ ಸಮೀಪ; ವಿದ್ಯಾ ವಿಕಾಸ್ ಸರ್ಕಾರಿ ಪ್ರೌಢಶಾಲೆ, ವಿಶ್ವಪ್ರಿಯಾ ನಗರ, ಬೇಗೂರು; ಬಹುಉದ್ದೇಶದ ಕಾರ್ಪೊರೇಷನ್ ಕಟ್ಟಡ, 2ನೇ ಕ್ರಾಸ್ ರಸ್ತೆ, ಸಿಎಚ್‌ಸಿಎಸ್ ಲೇಔಟ್, ಎಲ್‌ಐಸಿ ಕಾಲೊನಿ, ಜಯನಗರ 4ನೇ ಬ್ಲಾಕ್; ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, 21ನೇ ಮುಖ್ಯರಸ್ತೆ, ಮಾರೇನಹಳ್ಳಿ, ರೇಣುಕಾ ಪ್ರಸನ್ನ ಥಿಯೇಟರ್ ಎದುರು, 2ನೇ ಹಂತ, ಜೆಪಿ ನಗರ; ಕರ್ನಾಟಕ ಪಬ್ಲಿಕ್ ಸ್ಕೂಲ್, ಉತ್ತರಹಳ್ಳಿ ಬಸ್ ನಿಲ್ದಾಣದ ಹಿಂಭಾಗ, ಉತ್ತರಹಳ್ಳಿ; ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚುಂಚಘಟ್ಟ, 14ನೇ ಮುಖ್ಯರಸ್ತೆ, ಆರ್‌ಬಿಐ ಲೇಔಟ್, ಜೆಪಿ ನಗರ 7ನೇ ಹಂತ; ಎಆರ್‌ಒ ಕಚೇರಿ, ಸಿಜೆ ವೆಂಕಟದಾಸ್ ರಸ್ತೆ, 150 ಬಸ್ ನಿಲ್ದಾಣದ ಸಮೀಪ, ಲಕ್ಷ್ಮೀಕಾಂತ ಪಾರ್ಕ್ ಎದುರು; ಶ್ರೀ ಸದ್ಗುರು ಸಾಯಿಬಾಬಾ ಕನ್ನಡ ಪ್ರಾಥಮಿಕ ಶಾಲೆ, ರೂಪೇನ ಅಗ್ರಹಾರ, ಪೊಲೀಸ್ ಠಾಣೆ ಸಮೀಪ; ಸರ್ಕಾರಿ ಮಾದರಿ ಪ್ರಾಥಮಿಕ ಮತ್ತು ಪ್ರೌಢಶಾಲೆ, ಪುಟ್ಟೇನಹಳ್ಳಿ, ಜಂಬೂಸವಾರಿ ದಿನ್ನೆ ಮುಖ್ಯರಸ್ತೆ; ಎಚ್‌ಎಸ್‌ಆರ್ ಲೇಔಟ್: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸೆಕ್ಟರ್-1; ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಸಿಆರ್‌ಪಿ ಪೊಲೀಸ್ ಕ್ವಾರ್ಟರ್ಸ್, ಅಡುಗೋಡಿ; ಶ್ರೀ ಸಾಯಿ ಇಂಗ್ಲಿಷ್ ಶಾಲೆ, 2ನೇ ಮುಖ್ಯರಸ್ತೆ, ನ್ಯೂ ಮೈಕೊ ಲೇಔಟ್ ರಸ್ತೆ, ಆಡುಗೋಡಿ ಸಿಗ್ನಲ್ ಸಮೀಪ.

**ಬೆಂಗಳೂರು ಉತ್ತರ**

ಸರ್ಕಾರಿ ಪ್ರಾಥಮಿಕ ಶಾಲೆ, ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ; ಬಿಬಿಎಂಪಿ ಸಮುದಾಯಭವನ ಕಟ್ಟಡ, ಎಚ್‌ಎಂಟಿ ಲೇಔಟ್, ಹಾಪ್‌ಕಾಮ್ಸ್ ರಸ್ತೆ, ವಿದ್ಯಾರಣ್ಯಪುರ; ಬಿಬಿಎಂಪಿ ಬಾಲಕಿಯರ ಪ್ರೌಢಶಾಲೆ, ರಾಬರ್ಟ್‌ಸನ್ ರಸ್ತೆ, ಕ್ಲೀವ್‌ಲ್ಯಾಂಡ್ ಟೌನ್; ಸೀತಾರಾಮ ಕಲ್ಯಾಣ ಮಂಟಪ, ಬಾಣಸವಾಡಿ ಮುಖ್ಯರಸ್ತೆ, ಮಾರುತಿಸೇವಾನಗರ; ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಾಥಮಿಕ ಶಾಲೆ, ಎಚ್‌ಬಿಆರ್ ಲೇಔಟ್, 7ನೇ ಮುಖ್ಯರಸ್ತೆ; ಸೌಂದರ್ಯ ಶಾಲೆ, ಕಾಂಪೋಸಿಟ್ ಪ್ರೀ-ಯೂನಿವರ್ಸಿಟಿ ಕಾಲೇಜು, ಹವನೂರು ಎಕ್ಸ್‌ಟೆನ್ಷನ್, ಹೆಸರಘಟ್ಟ ರಸ್ತೆ; ಸೌಂದರ್ಯ ಶಾಲೆ, ಕಾಂಪೋಸಿಟ್ ಪ್ರೀ-ಯೂನಿವರ್ಸಿಟಿ ಕಾಲೇಜು, ಹವನೂರು ಎಕ್ಸ್‌ಟೆನ್ಷನ್, ಹೆಸರಘಟ್ಟ ರಸ್ತೆ; ಆರ್‌ಆರ್ ಇನ್‌ಸ್ಟಿಟ್ಯೂಟ್ ಆಫ್ ನರ್ಸಿಂಗ್, ಚಿಕ್ಕಬಾಣಾವರ ರೈಲು ನಿಲ್ದಾಣ ರಸ್ತೆ, ಬ್ಯಾಂಕ್ ಆಫ್ ಬರೋಡಾ ಎಟಿಎಂ ಸಮೀಪ, ಮೇಡರಹಳ್ಳಿ; ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೆಬ್ಬಾಳ; ಫ್ಲಾರೆನ್ಸ್ ಪಬ್ಲಿಕ್ ಸ್ಕೂಲ್, ಆರ್.ಟಿ.ನಗರ; ಯಲಹಂಕ ನ್ಯೂ ಟೌನ್ / ಯಲಹಂಕ ಓಲ್ಡ್ ಟೌನ್ ಮಿನಿ ವಿಧಾನಸೌಧ, 3ನೇ ಮಹಡಿ, ಎನ್‌ಇಎಸ್ ಸಮೀಪ, ಸುಗ್ಗಪ್ಪ ಲೇಔಟ್, ಯಲಹಂಕ.

# ಅಜನೀಶ್ ಲೋಕನಾಥ್ ಸಂಗೀತ ಕಛೇರಿ ಇಂದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಸಿಟಿಸಿ ಈವೆಂಟ್ಸ್ ಇದೇ 16ರಂದು ಸಂಜೆ 6.30ಕ್ಕೆ ಭಾರತೀಯ ಮಾಲ್ ಆಫ್ ಬೆಂಗಳೂರಿನಲ್ಲಿ ಸಂಗೀತ ನಿರ್ದೇಶಕ ಬಿ. ಅಜನೀಶ್ ಲೋಕನಾಥ್ ಅವರ ನೇತೃತ್ವದಲ್ಲಿ ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಈ ಕಾರ್ಯಕ್ರಮ ‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ನಡೆಯಲಿದೆ. ಕನ್ನಡದ ಜನಪ್ರಿಯ ಸಂಗೀತ ನಿರ್ದೇಶಕರಲ್ಲಿ ಒಬ್ಬರಾಗಿರುವ ಅಜನೀಶ್ ಲೋಕನಾಥ್ ಅವರು, ‘ಕಾಂತಾರ’ ಸೇರಿದಂತೆ ಹಲವು ಯಶಸ್ವಿ ಚಲನಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ದಕ್ಷಿಣ ಭಾರತೀಯ ಚಿತ್ರರಂಗದಲ್ಲಿ ಅತ್ಯಂತ ಪ್ರಭಾವಶಾಲಿ ಸಂಗೀತ ಸಂಯೋಜಕರಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟಿರುವ ಅವರ ಚಿತ್ರರಂಗದ ಪಯಣ ವೇದಿಕೆ ಮೇಲೆ ಅನಾವರಣಗೊಳ್ಳಲಿದೆ.

ಈ ಸಂಗೀತ ಕಛೇರಿಯಲ್ಲಿ ವಿಜಯ್ ಪ್ರಕಾಶ್, ಮಂಗ್ಲಿ, ನಕಾಶ್ ಅಜೀಜ್, ಅನನ್ಯಾ ಭಟ್, ಸಾನ್ವಿ ಸುದೀಪ್, ಸಂಜಿತ್ ಹೆಗಡೆ, ಹರಿಶಂಕರ್, ಅಬ್ಬಿ ವಿ., ವಾಸುಕಿ ವೈಭವ್, ಅನಿರುದ್ಧ್, ಐಶ್ವರ್ಯ ರಂಗರಾಜನ್, ರಾಮ್‌ದಾಸ್, ಸಾಯಿ ವಿಘ್ನೇಶ್, ಹರ್ಷಿಕಾ, ಬಾಬಿ ಸೇರಿದಂತೆ ಹಲವು ಗಾಯಕರು ಪಾಲ್ಗೊಳ್ಳಲಿದ್ದಾರೆ.

ಟಿಕೆಟ್‌ಗಳು ‘ಬುಕ್ ಮೈ ಶೋ’ದಲ್ಲಿ ಲಭ್ಯವೆಂದು ಆಯೋಜಕರು ತಿಳಿಸಿದ್ದಾರೆ.

# ಬಿಡಿಎ ಫ್ಲ್ಯಾಟ್ ದರದಲ್ಲಿ ಹೆಚ್ಚಳ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ಮಿಸಿರುವ ಫ್ಲ್ಯಾಟ್‌ಗಳ ದರ ವರ್ಷದಲ್ಲಿ ಶೇ 25ರಿಂದ 50ರಷ್ಟು ಹೆಚ್ಚಾಗಿದೆ. ಬೆಂಗಳೂರು ಪೂರ್ವ ಭಾಗದ ಕೋನದಾಸಪುರದಲ್ಲಿ 1 ಬಿಎಚ್‌ಕೆ ಫ್ಲ್ಯಾಟ್ ದರ ₹51 ಲಕ್ಷ, 3 ಬಿಎಚ್‌ಕೆ ಫ್ಲ್ಯಾಟ್ ದರ ₹1.44 ಕೋಟಿ ಇದ್ದು, ಈ ದರಗಳು ಗ್ರೇಡ್ ‘ಎ’ ಡೆವಲಪರ್‌ಗಳು ಮಾರಾಟ ಮಾಡುವ ಅಪಾರ್ಟ್‌ಮೆಂಟ್‌ಗಳ ಬೆಲೆಗೆ ಸಮಾನವಾಗಿದೆ.

ಪ್ರಾಧಿಕಾರವು ಈಗ ‘ಸ್ಕಂದಗಿರಿ’ ಅಪಾರ್ಟ್‌ಮೆಂಟ್ ಯೋಜನೆ ಆರಂಭಿಸಿದೆ. ಒಟ್ಟು 16 ಟವರ್‌ಗಳಲ್ಲಿ 1,488 ಫ್ಲ್ಯಾಟ್‌ಗಳು ಒಳಗೊಂಡಿದೆ. ಈ ಪೈಕಿ 488 ಫ್ಲ್ಯಾಟ್‌ಗಳನ್ನು ಸೇನಾ ವಸತಿ ಕಲ್ಯಾಣ ಸಂಘಕ್ಕೆ ಈಗಾಗಲೇ ಮಾರಾಟ ಮಾಡಲಾಗಿದೆ.

ಮಾಹಿತಿ ಪ್ರಕಾರ ಒಂದು ಬಿಎಚ್‌ಕೆ 645 ಚದರ ಅಡಿ ವಿಸ್ತೀರ್ಣ ಮತ್ತು ಮೂರು ಬಿಎಚ್‌ಕೆ 1,444 ಚದರ ಅಡಿ ವಿಸ್ತೀರ್ಣ ಪ್ರದೇಶ ಒಳಗೊಂಡಿದೆ.

ಎಂಟು ಟವರ್‌ಗಳು ಪೂರ್ಣಗೊಳ್ಳುವ ಹಂತದಲ್ಲಿದ್ದು, 2027ರ ಮಾರ್ಚ್ ಗಡುವು ನೀಡಲಾಗಿದೆ. ಉಳಿದ ಟವರ್‌ಗಳು ಇನ್ನೂ ನಿರ್ಮಾಣ ಹಂತದಲ್ಲಿವೆ.

ಈಜುಕೊಳ, ಬ್ಯಾಡ್ಮಿಂಟನ್ ಕೋರ್ಟ್, ಜಿಮ್ನಾಷಿಯಂ, ಯೋಗ ಕೇಂದ್ರ ಮುಂತಾದ ಸೌಲಭ್ಯ ನೀಡುವ ಭರವಸೆ ನೀಡಲಾಗಿದೆ. ಆದರೆ, ಬಿಡಿಎ ಇನ್ನೂ ಕಾಮಗಾರಿ ಆರಂಭಿಸಿಲ್ಲ.

ಈ ಹಿಂದೆ ಪ್ರಾಧಿಕಾರವು ಪಕ್ಕದ ಜಾಗದಲ್ಲಿ ಇದೇ ರೀತಿಯ ವಸತಿ ಯೋಜನೆ ಕೈಗೆತ್ತಿಕೊಂಡಿತು. ಗಮನಿಸಬೇಕಾದ ವಿಷಯವೆಂದರೆ ಎರಡು ಬಿಎಚ್‌ಕೆ ಫ್ಲ್ಯಾಟ್‌ಗಳನ್ನು ವರ್ಷದ ಹಿಂದೆ ₹52 ಲಕ್ಷಕ್ಕೆ ಮಾರಾಟ ಮಾಡಲಾಗಿತ್ತು. ಅಂದರೆ ಪ್ರತಿ ಚದರ ಅಡಿಗೆ ₹6,451.

ಈಗ ಬಿಡಿಎ ಒಂದು ಮತ್ತು ಮೂರು ಬಿಎಚ್‌ಕೆ ಫ್ಲ್ಯಾಟ್‌ಗಳಿಗೆ ಕ್ರಮವಾಗಿ ಪ್ರತಿ ಚದರ ಅಡಿಗೆ ₹8 ಸಾವಿರದಿಂದ ₹10 ಸಾವಿರವರೆಗೆ ದರ ನಿಗದಿಪಡಿಸಿದೆ.

ಫ್ಲ್ಯಾಟ್‌ಗಳನ್ನು ಬುಕ್ ಮಾಡುವ ನಿರೀಕ್ಷೆಯೊಂದಿಗೆ ಬಂದಿದ್ದ ಅನೇಕರು ದರ ಕೇಳಿ ನಿರಾಸೆಗೊಂಡರು.

ಫ್ಲ್ಯಾಟ್‌ಗಳ ದರ ಏರಿಕೆಯನ್ನು ಸಮರ್ಥಿಸಿಕೊಂಡಿರುವ ಬಿಡಿಎ ಅಧಿಕಾರಿ, ‘ಖಾಸಗಿ ಬಿಲ್ಡರ್‌ಗಳು ಒದಗಿಸುವ ಅನೇಕ ಸೌಲಭ್ಯಗಳನ್ನು ಈ ಯೋಜನೆಯಲ್ಲೂ ಕಲ್ಪಿಸಲಾಗಿದೆ. ಈ ಸೌಲಭ್ಯಗಳಿಗೆ ಇತ್ತೀಚೆಗಷ್ಟೇ ಅನುಮೋದನೆ ದೊರೆತಿದ್ದು, ಪೂರ್ಣಗೊಳಿಸಲು ಒಂದು ವರ್ಷ ಬೇಕಾಗುತ್ತದೆ. ನಾಗರಿಕ ಸೌಲಭ್ಯಗಳಿಗೆ ಸುಮಾರು 1.2 ಎಕರೆ ಜಮೀನು ಮೀಸಲಿಡಲಾಗಿದೆ. ಖಾಸಗಿ ಡೆವಲಪರ್‌ಗಳು ಪ್ರಾಧಿಕಾರಕ್ಕಿಂತ ಹೆಚ್ಚು ದರ ಉಲ್ಲೇಖಿಸುತ್ತಿದ್ದಾರೆ’ ಎಂದು ಹೇಳಿದರು.

### ಬಿಡಿಎ ಆಸ್ತಿ ತೆರಿಗೆ: ಶೇ 5 ರಿಯಾಯಿತಿ

**ಬೆಂಗಳೂರು:** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವ್ಯಾಪ್ತಿಯಲ್ಲಿರುವ ನಿವೇಶನ, ಫ್ಲ್ಯಾಟ್‌ಗಳು, ಮನೆಗಳ ಪ್ರಸಕ್ತ ಸಾಲಿನ ಆಸ್ತಿ ತೆರಿಗೆಯನ್ನು ಮುಂಗಡವಾಗಿ ಪಾವತಿಸಿದಲ್ಲಿ ಶೇಕಡ 5ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಆಸ್ತಿ ತೆರಿಗೆಯನ್ನು ಮೇ 31ರೊಳಗೆ ಪಾವತಿಸುವ ಮಾಲೀಕರು ಈ ರಿಯಾಯಿತಿಗೆ ಅರ್ಹರು. ಆಸ್ತಿ ತೆರಿಗೆ ಪಾವತಿಸಲು https://app.bda.karnataka.gov.in/bdaptax-citizen/login ಜಾಲತಾಣಕ್ಕೆ ಭೇಟಿ ನೀಡಿ ಆನ್‌ಲೈನ್ ಮೂಲಕ ಪಾವತಿಸಬಹುದು.

ಮಾಹಿತಿಗೆ ಹಾಗೂ ನಾಗರಿಕರ ಕುಂದು-ಕೊರತೆಗಳ ನಿವಾರಣೆಗೆ ಸಹಾಯವಾಣಿ ಸಂಖ್ಯೆ 9483166622 ಸಂಪರ್ಕಿಸಬಹುದು. ಸಾರ್ವಜನಿಕರು ಈ ಸೌಲಭ್ಯವನ್ನು ಸದ್ಬಳಕೆ ಮಾಡಿಕೊಂಡು, ನಿಗದಿತ ಅವಧಿಯೊಳಗೆ ಆಸ್ತಿ ತೆರಿಗೆಯನ್ನು ಪಾವತಿಸಿ ರಿಯಾಯಿತಿಯ ಪ್ರಯೋಜನ ಪಡೆಯುವಂತೆ ಕೋರಲಾಗಿದೆ.

ಕೋರಮಂಗಲದ ಜೋಯಾಲುಕ್ಕಾಸ್ ಮಳಿಗೆಯಲ್ಲಿ ಹಮ್ಮಿಕೊಂಡಿರುವ ‘ಬ್ರಿಲಿಯನ್ಸ್’ ವಜ್ರಾಭರಣಗಳ ಪ್ರದರ್ಶನಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು. ಎಮ್ಮಾರ್ ಪ್ರಾಪರ್ಟೀಸ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೊಹಮ್ಮದ್ ರಿಹಾನ್ ನವಾಬ್, ಪಾಕಶಾಲಾದ ಸಹ ಸಂಸ್ಥಾಪಕ ವಿನೋದ್ ವಿ. ಅಡಿಗ, ವಿವೇಕಾನಂದ ಇಂಟರ್‌ನ್ಯಾಷನಲ್ ಶಾಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಾಕಮ್ಮ ಶೆಟ್ಟಿ, ನಿರ್ಮಾಪಕ ಸೆವೆನ್ ರಾಜ್ ಮತ್ತು ಜೋಯಾಲುಕ್ಕಾಸ್ ಮುಖ್ಯಸ್ಥ ರಾಜೇಶ್ ಕೃಷ್ಣನ್ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

### 310 ಎಂಜಿನಿಯರ್‌ಗಳಿಗೆ ನೋಟಿಸ್

**ಬೆಂಗಳೂರು:** ಅಕ್ರಮ ಹಾಗೂ ನಕಲಿ ಬಿಲ್ ಪ್ರಕರಣಕ್ಕೆ ಸಂಬಂಧಿಸಿದಂತೆ 310 ಎಂಜಿನಿಯರ್‌ಗಳಿಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ನೋಟಿಸ್ ಜಾರಿ ಮಾಡಿದೆ.

ಬಿಬಿಎಂಪಿಯಾಗಿದ್ದಾಗ 2008–09 ಮತ್ತು 2011–12ರ ಅವಧಿ ಯಲ್ಲಿ ಗಾಂಧಿನಗರ, ಮಲ್ಲೇಶ್ವರ, ರಾಜ ರಾಜೇಶ್ವರಿನಗರ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ ನಡೆದಿದ್ದ ಸಾರ್ವಜನಿಕ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಲು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಸಮಿತಿಯನ್ನು ರಚಿಸಲಾಗಿತ್ತು. ಈ ಕುರಿತು ಮೇ 13ರಂದು ಹೊರಡಿಸಿರುವ ಅಧಿಸೂಚನೆಯಲ್ಲಿ, ಕಾಮಗಾರಿ ನಡೆಯದಿದ್ದರೂ ನಕಲಿ ಬಿಲ್‌ಗಳನ್ನು ಸಲ್ಲಿಸಲಾಗಿದೆ ಎನ್ನಲಾಗಿದೆ.

ನಗರಾಭಿವೃದ್ಧಿ ಇಲಾಖೆ ಈ ಹಿಂದೆ ನೀಡಿದ್ದ ನೋಟಿಸ್‌ಗಳಿಗೆ ಎಂಜಿನಿಯರ್ ಗಳು ಪ್ರತಿಕ್ರಿಯಿಸಿಲ್ಲ. ಹೀಗಾಗಿ, ಅಧಿಸೂಚನೆ ಹೊರಡಿಸಿರುವ 15 ದಿನಗಳಲ್ಲಿ ಎಂಜಿನಿಯರ್‌ಗಳು ಪ್ರಾಧಿಕಾರದ ಮುಂದೆ ಹಾಜರಾಗಿ, ಲಿಖಿತ ಪ್ರತಿಕ್ರಿಯೆ ಸಲ್ಲಿಸಬೇಕೆಂದು ಸೂಚಿಸಲಾಗಿದೆ.

2008–09 ಮತ್ತು 2011–12ರ ಅವಧಿಯಲ್ಲಿ ಸಂಬಂಧಿಸಿದ ವಲಯಗಳಲ್ಲಿದ್ದ ಸಹಾಯಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ.

# ‘ಮ್ಯಾಂಗೊ ಉತ್ಸವ’ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ಯಲಹಂಕ:** ಕೆಬಿಜಿ ಸ್ವಯಂ ಸೇವಕರ ಸಂಘ ಹಾಗೂ ವಾಸವಿ ಕಾಂಡಿಮೆಂಟ್ಸ್ ಸಹಯೋಗದಲ್ಲಿ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಸಹಕಾರನಗರದ ಗಣೇಶ ಮೈದಾನದಲ್ಲಿ ಮೇ 15ರಿಂದ 17ರವರೆಗೆ ಆಯೋಜಿಸಿರುವ ‘ಮ್ಯಾಂಗೊ ಉತ್ಸವ’ಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಉತ್ಸವದಲ್ಲಿ ತಾಜಾ ಮಾವಿನ ಹಣ್ಣುಗಳು, ಜ್ಯೂಸ್, ಮಿಲ್ಕ್ ಶೇಕ್, ಡೆಸರ್ಟ್, ಮ್ಯಾಂಗೊ ಕುನಾಫ, ಮ್ಯಾಂಗೊ ಹೋಳಿಗೆ, ಮ್ಯಾಂಗೊ ಚಿತ್ರಾನ್ನ, ಹಲಸಿನ ಹಣ್ಣಿನ ಬಿರಿಯಾನಿ, ಮ್ಯಾಂಗೊ ಸ್ಯಾಂಡ್‌ವಿಚ್, ಮ್ಯಾಂಗೊ ಕೇಸರಿ ಬಾತ್, ಮ್ಯಾಂಗೊ ರಸಂ ರೈಸ್ ಸೇರಿದಂತೆ ಮಾವಿನಿಂದ ತಯಾರಿಸಿದ 100ಕ್ಕೂ ಹೆಚ್ಚು ಬಗೆಯ ಖಾದ್ಯಗಳನ್ನು ಒಂದೇ ಸೂರಿನಡಿಯಲ್ಲಿ ಸವಿಯಲು ವ್ಯವಸ್ಥೆ ಮಾಡಲಾಗಿದೆ.

ಉತ್ಸವದ ಅಂಗವಾಗಿ ಲೈವ್ ಸಂಗೀತ ಕಾರ್ಯಕ್ರಮ, ಪರ್ವ ಬ್ಯಾಂಡ್ ತಂಡದವರಿಂದ ಭಜನ್ ಜಮ್ಮಿಂಗ್, ಐಪಿಎಲ್ ಲೈವ್ ಸ್ಕ್ರೀನಿಂಗ್ ಹಾಗೂ ಮಕ್ಕಳ ಮನರಂಜನೆಗಾಗಿ ವಿವಿಧ ಆಟಿಕೆಗಳ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ. ಪ್ರತಿದಿನ ಬೆಳಿಗ್ಗೆ 11ರಿಂದ ರಾತ್ರಿ 10 ಗಂಟೆಯವರೆಗೆ ಉತ್ಸವ ನಡೆಯಲಿದೆ.

ಸಾರ್ವಜನಿಕರ ಮನರಂಜನೆಗಾಗಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ.

‘ಮ್ಯಾಂಗೊ ಉತ್ಸವ’ದಲ್ಲಿ ನಾಗರಿಕರು ಮಾವಿನ ಹಣ್ಣಿನಿಂದ ತಯಾರಿಸಿದ ವಿವಿಧ ಬಗೆಯ ಖಾದ್ಯಗಳ ರುಚಿಯನ್ನು ಸವಿದರು

# ಚುನಾವಣೆ ನಡೆಸಿ: ಸಿಎಸ್‌ಗೆ ರಾಜ್ಯಪಾಲರ ಕಚೇರಿ ಪತ್ರ

**ಬೆಂಗಳೂರು:** ‘ಸುಪ್ರೀಂ ಕೋರ್ಟ್ ಆದೇಶದಂತೆ 2026ರ ಜೂನ್ 30ರ ಒಳಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಪಾಲಿಕೆಗಳಿಗೆ ಚುನಾವಣೆ ನಡೆಸಿ’ ಎಂದು ರಾಜ್ಯಪಾಲರ ಕಚೇರಿಯು ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದೆ.

‘ಪಾಲಿಕೆಗಳಿಗೆ ಚುನಾವಣೆ ನಡೆದು ಹಲವು ವರ್ಷಗಳೇ ಕಳೆದಿವೆ. ಬೆಂಗಳೂರಿನಂತಹ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳು ಇಲ್ಲದಂತಾಗಿದೆ. ಕಾಲಮಿತಿಯಲ್ಲಿ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರೂ, ಚುನಾವಣೆ ಮುಂದೂಡಲು ರಾಜ್ಯ ಸರ್ಕಾರ ಮುಂದಾಗಿದೆ. ಜೂನ್ 30ರ ಒಳಗೆ ಚುನಾವಣೆ ನಡೆಸಿ ಎಂದು ಸರ್ಕಾರಕ್ಕೆ ನಿರ್ದೇಶನ ನೀಡಿ ಎಂದು ಜೆಡಿಎಸ್‌ನ ಪ್ರತಿನಿಧಿಗಳು ಮನವಿ ಸಲ್ಲಿಸಿದ್ದರು’ ಎಂದು ಪತ್ರದಲ್ಲಿ ವಿವರಿಸಿದೆ.

‘ಮನವಿಯಲ್ಲಿ ಉಲ್ಲೇಖಿಸಲಾದ ವಿವರಗಳನ್ನು ಪರಿಶೀಲಿಸಲಾಗಿದೆ. ಜಿಬಿಎ ಪಾಲಿಕೆಗಳಿಗೆ ಜೂನ್ 30ರ ಒಳಗೆ ಚುನಾವಣೆ ನಡೆಸದೇ ಇದ್ದರೆ ಅದು ನ್ಯಾಯಾಂಗ ನಿಂದನೆಯಾಗುತ್ತದೆ. ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳುವುದು ಮತ್ತು ಅಗತ್ಯ ಹಣಕಾಸನ್ನು ಒದಗಿಸುವುದು ರಾಜ್ಯ ಸರ್ಕಾರ ಹಾಗೂ ರಾಜ್ಯ ಚುನಾವಣಾ ಆಯೋಗದ ಕರ್ತವ್ಯ. ಚುನಾವಣೆ ನಡೆಸದೇ ಇದ್ದರೆ ಅದರಿಂದ ತಪ್ಪು ಸಂದೇಶ ರವಾನೆಯಾಗುತ್ತದೆ. ಕೇಂದ್ರ ಸರ್ಕಾರದಿಂದ ಬರಬೇಕಾದ ಅನುದಾನಗಳ ನಷ್ಟಕ್ಕೂ ಕಾರಣವಾಗುತ್ತದೆ’ ಎಂದಿದೆ.

‘ಚುನಾವಣೆ ನಡೆಸಲು ಅಗತ್ಯವಾದ ಸಿಬ್ಬಂದಿ ಮತ್ತು ಹಣಕಾಸನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸಲು ಅಗತ್ಯ ಕ್ರಮ ತೆಗೆದುಕೊಳ್ಳಿ’ ಎಂದು ಮುಖ್ಯ ಕಾರ್ಯದರ್ಶಿಗೆ ಸೂಚಿಸಿದೆ.

ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ಎ.ಪಿ. ರಂಗನಾಥ್ ಅವರು ಈಚೆಗೆ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿ, ಬೇಗ ಚುನಾವಣೆ ನಡೆಸುವಂತೆ ಸರ್ಕಾರಕ್ಕೆ ಸೂಚನೆ ನೀಡಿ ಎಂದು ಮನವಿ ಮಾಡಿದ್ದರು.

# ಸಮಾನ ವೇತನಕ್ಕೆ ಪರವಾನಗಿ ಭೂಮಾಪಕರ ಆಗ್ರಹ

**ಬೆಂಗಳೂರು:** ‘ಪರವಾನಗಿ ಪಡೆದ ಭೂಮಾಪಕರನ್ನು ವಿಶೇಷ ನೇಮಕಾತಿ ಮೂಲಕ ಸರ್ಕಾರಿ ಹುದ್ದೆಯಲ್ಲಿ ವಿಲೀನಗೊಳಿಸಿ, ಸಮಾನ ಕೆಲಸಕ್ಕೆ ಸಮಾನ ವೇತನ ಒದಗಿಸಬೇಕು’ ಎಂದು ಅಖಿಲ ಕರ್ನಾಟಕ ಸರ್ಕಾರಿ ಪರವಾನಗಿ ಭೂ ಮಾಪಕರ ಸಂಘವು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಗೌರವಾಧ್ಯಕ್ಷ ಕೆ.ಪಿ. ಭಾರ್ಗವಲು, ‘ರಾಜ್ಯದಲ್ಲಿ ಪರವಾನಗಿ ಹೊಂದಿದ ಐದು ಸಾವಿರಕ್ಕೂ ಅಧಿಕ ಭೂಮಾಪಕರಿದ್ದು, ಕಳೆದ 23 ವರ್ಷಗಳಿಂದ ಕನಿಷ್ಠ ವೇತನಕ್ಕೆ ದುಡಿಯುತ್ತಿದ್ದಾರೆ. ಸರ್ಕಾರಿ ಸೇವೆಗಳಾದ ವಿಭಾಗ ಪತ್ರ, ದಾನ, ಕ್ರಯಕ್ಕೆ ಇ-ನಕ್ಷೆ ತಯಾರಿ ಸೇರಿ ವಿವಿಧ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಕನಿಷ್ಠ ಸಂಭಾವನೆ ನಿಗದಿಪಡಿಸಿದ್ದು, ಬದುಕು ಕಷ್ಟಕರವಾಗಿದೆ. ಆದ್ದರಿಂದ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಭೂಮಾಪಕರನ್ನು ವಿಶೇಷ ನೇಮಕಾತಿ ಮೂಲಕ ಸರ್ಕಾರಿ ಹುದ್ದೆಯಲ್ಲಿ ವಿಲೀನಗೊಳಿಸಬೇಕು’ ಎಂದು ಆಗ್ರಹಿಸಿದರು.

‘ಪರವಾನಗಿ ಪಡೆದ ಭೂ ಮಾಪಕರನ್ನು ಕೆ.ಎಲ್.ಆರ್. ಕಾಯ್ದೆ 46ರ ತಿದ್ದುಪಡಿಯಂತೆ ಸರ್ಕಾರಿ ಹುದ್ದೆಯಲ್ಲಿ ವಿಲೀನಗೊಳಿಸಲು ಅವಕಾಶವಿದೆ. ಈ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಆದರೆ, ಈವರೆಗೆ ಯಾವುದಕ್ಕೂ ಸ್ಪಂದನೆ ಸಿಕ್ಕಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

# ಜಿಲೆಟಿನ್ ಕಡ್ಡಿ: ಭಯ ಸೃಷ್ಟಿಸಲು ಸಂಚು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಭಯದ ವಾತಾವರಣ ಸೃಷ್ಟಿಸಲು ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ವಡೇರಹಳ್ಳಿಯ ಸೇತುವೆಯ ಬಳಿ ಜಿಲೆಟಿನ್ ಕಡ್ಡಿಗಳನ್ನು ರಾತ್ರೋರಾತ್ರಿ ಇಟ್ಟು ದುಷ್ಕರ್ಮಿಗಳು ಪರಾರಿ ಆಗಿದ್ದಾರೆ’ ಎಂಬುದು ಪೊಲೀಸ್ ತನಿಖೆ ವೇಳೆ ಪತ್ತೆಯಾಗಿದೆ.

ಮೇ 10ರಂದು ನಡೆದ ‘ದಿ ಆರ್ಟ್ ಆಫ್ ಲಿವಿಂಗ್’ನ 45ನೇ ವಾರ್ಷಿಕೋತ್ಸವದಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿ ಅವರು ನಗರಕ್ಕೆ ಬಂದಿದ್ದರು. ಅವರು ಸಂಚರಿಸಿದ ನೈಸ್ ರಸ್ತೆಯ ಸಮೀಪವೇ ಬಾಕ್ಸ್‌ನಲ್ಲಿ ಜಿಲೆಟಿನ್ ಕಡ್ಡಿಗಳನ್ನು ತುಂಬಿಡಲಾಗಿತ್ತು. ಆ ಬಾಕ್ಸ್‌ನಲ್ಲಿ ಗಂಧದ ಕಡ್ಡಿ, ಕರ್ಪೂರವೂ ಪತ್ತೆಯಾಗಿದ್ದವು. ಪ್ರಕರಣದ ತನಿಖೆಗೆ ಸಿಸಿಬಿ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ಪೊಲೀಸರ ನೇತೃತ್ವದಲ್ಲಿ 6 ತಂಡಗಳನ್ನು ರಚಿಸಲಾಗಿತ್ತು.

‘ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ. ಇದುವರೆಗೂ ನಡೆದಿರುವ ತನಿಖೆಯಲ್ಲಿ ಕೆಲವು ಅಂಶಗಳು ಪತ್ತೆ ಆಗಿವೆ. ತಮ್ಮ ವಿರೋಧಿಗಳನ್ನು ಹೆದರಿಸಲು ಕೆಲವರು ಜಿಲೆಟಿನ್ ಕಡ್ಡಿಗಳನ್ನು ತಂದಿಟ್ಟಿದ್ದಾರೆ. ಅಲ್ಲದೇ ಪರಿಶೀಲನೆ ವೇಳೆ ಸ್ಫೋಟಕ ವಸ್ತುಗಳು ಪತ್ತೆಯಾದರೆ, ಮೋದಿ ಅವರು ಭದ್ರತಾ ಕಾರಣ ನೀಡಿ ಕಾರ್ಯಕ್ರಮಕ್ಕೆ ಬಾರದೇ ವಾಪಸ್ ಹೋಗುತ್ತಾರೆ ಎಂಬ ಕಾರಣಕ್ಕೆ ಸಂಚು ರೂಪಿಸಿರುವುದು ಕಂಡುಬಂದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬಾಕ್ಸ್‌ನಲ್ಲಿ ತುಂಬಿಟ್ಟಿದ್ದು 3 ವರ್ಷದ ಹಳೆಯ ಜಿಲೆಟಿನ್ ಕಡ್ಡಿಗಳು ಎಂಬುದು ಕಂಡು ಬಂದಿದೆ. ಜಿಲೆಟಿನ್ ಕಡ್ಡಿಗಳು ಹಾಗೂ ಎಲೆಕ್ಟ್ರಿಕ್ ಸರ್ಕ್ಯೂಟ್ ಬೋರ್ಡ್‌ಗಳ ವೈರ್‌ಗಳನ್ನು ಪರಸ್ಪರ ಸಂಪರ್ಕಿಸಿಲ್ಲ. ಹೀಗಾಗಿ ಬೆದರಿಸುವ ಉದ್ದೇಶದಿಂದ ಅಷ್ಟೇ ಬಾಕ್ಸ್ ತಂದಿಟ್ಟಿರುವುದು ಸ್ಪಷ್ಟವಾಗಿದೆ’ ಎಂದಿದ್ದಾರೆ.

ವಡೇರಹಳ್ಳಿಯ ಸೇತುವೆಯ ಬಳಿ ಪತ್ತೆಯಾದ ಸ್ಫೋಟಕ ವಸ್ತುಗಳು

# ಅಶ್ವಗಂಧ ಬಳಕೆ ನಿರ್ಬಂಧ: ಸಲಹೆಗೆ ತಡೆ

**ಬೆಂಗಳೂರು:** ‘ಮನುಷ್ಯರ ದೈಹಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟುಮಾಡುತ್ತದೆ ಎಂಬ ಕಾರಣಕ್ಕೆ ಅಶ್ವಗಂಧ ಸಸ್ಯದ ಎಲೆಗಳು ಅಥವಾ ಅದರ ಸಾರವನ್ನು ಆಹಾರ ಪದಾರ್ಥಗಳಲ್ಲಿ ಬಳಸಬಾರದು’ ಎಂಬ ‘ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ’ದ (ಎಫ್‌ಎಸ್‌ಎಸ್‌ಎಐ) ಸಲಹೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ಎಫ್‌ಎಸ್‌ಎಸ್‌ಎಐ’ ಸಲಹಾ ಸಂವಹನವನ್ನು ಪ್ರಶ್ನಿಸಿ ಅಮೆರಿಕದ ‘ಕೆರ್ರಿ ಇಂಕ್’ ಕಂಪನಿಯ ಬೆಂಗಳೂರು ಶಾಖೆ ಸೇರಿದಂತೆ ಭಾರತದ ವಿವಿಧೆಡೆ ಇರುವ ಒಟ್ಟು 8 ಕಂಪನಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ರಜಾಕಾಲದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಎಫ್‌ಎಸ್‌ಎಸ್‌ಎಐ ಹೊರಡಿಸಿರುವ ಸಲಹಾ ಪ್ರಕಟಣೆಗೆ ನೀಡಲಾಗುತ್ತಿರುವ ಮಧ್ಯಂತರ ತಡೆ ಆದೇಶ ಅರ್ಜಿದಾರರಿಗೆ ಮುಂದಿನ ವಿಚಾರಣೆವರೆಗೆ ಮಾತ್ರ ಸೀಮಿತವಾಗಿದೆ’ ಎಂದು ಇದೇ ವೇಳೆ ಸ್ಪಷ್ಟಪಡಿಸಿರುವ ನ್ಯಾಯಪೀಠ, ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಕೇಂದ್ರ ಸರ್ಕಾರ, ‘ಎಫ್‌ಎಸ್‌ಎಸ್‌ಎಐ’ಗೆ ನಿರ್ದೇಶಿಸಿ ವಿಚಾರಣೆಯನ್ನು ಜೂನ್ 8ಕ್ಕೆ ಮುಂದೂಡಿದೆ.

### ಕೋರಿಕೆ

‘ಆಹಾರ ಸುರಕ್ಷತೆ ಮತ್ತು ನಿಯಮಗಳು–2016ರ ಅಡಿಯಲ್ಲಿನ ಮಾನದಂಡಗಳ ಪ್ರಕಾರವೇ ಅಶ್ವಗಂಧದ ಎಲೆಗಳು ಸೇರಿದಂತೆ ಅದರ ಸಸ್ಯದ ಬೇರುಗಳು ಮತ್ತು ಸಾರಗಳಿರುವ ಉತ್ಪನ್ನಗಳನ್ನು ಸಿದ್ಧಪಡಿಸಲಾಗುತ್ತಿದೆ. ಈವರೆಗೆ ಯಾವುದೇ ಗಂಭೀರ ಸುರಕ್ಷತಾ ಸಮಸ್ಯೆಗಳು ಕಂಡುಬಂದಿಲ್ಲ’ ಎಂಬುದು ಅರ್ಜಿದಾರರ ಆಕ್ಷೇಪ.

‘ಎಫ್‌ಎಸ್‌ಎಸ್‌ಎಐ 2026ರ ಏಪ್ರಿಲ್ 16ರಂದು ಹೊರಡಿಸಿರುವ ಸಲಹೆ ಮತ್ತು ಕೇಂದ್ರ ಸರ್ಕಾರಕ್ಕೆ ಒದಗಿಸಿರುವ ಸಂವಹನ ಪತ್ರ, ಸಂವಿಧಾನದ 19(1)(ಜಿ) ವಿಧಿಗೆ ವಿರುದ್ಧವಾಗಿದ್ದು ಇದನ್ನು ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

## ನಗರದಲ್ಲಿ ಇಂದು

**ಪ್ಯಾನ್‌ಐಐಟಿ ಬೆಂಗಳೂರು ಶೃಂಗಸಭೆ:** ಭಾಷಣ: ಪಂಕಜ್ ಕುಮಾರ್ ಪಾಂಡೆ, ಪ್ರಭಾತ್ ಕುಮಾರ್, ವಿಶೇಷ ಉಪನ್ಯಾಸ: ಶ್ರೀ ಶ್ರೀ ರವಿಶಂಕರ ಗುರೂಜಿ, ಜಿ. ಸತೀಶ್ ರೆಡ್ಡಿ, ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ವಿ. ಅನಂತ ನಾಗೇಶ್ವರನ್, ಶಾಲಿನಿ ರಜನೀಶ್, ಶಿವಕುಮಾರ್ ಕಲ್ಯಾಣ ರಾಮನ್, ಚರ್ಚಾಗೋಷ್ಠಿ: ಮನೀಶ್ ಗುಪ್ತ, ವೆಂಕಟ್ ಪ್ರದ್ಮನಾಭನ್, ವಿವೇಕ್ ರಾಘವನ್, ಲಾಲ್ ಚಂದ್ ಬಿಸು, ಆಯೋಜನೆ: ಐಐಟಿ ಅಲುಮ್ನಿ, ಸ್ಥಳ: ತಾಜ್ ಹೋಟೆಲ್, ಯಶವಂತಪುರ, ಬೆಳಿಗ್ಗೆ 9

**18ನೇ ಸಂಭ್ರಮ ಹಾಗೂ ಶನೇಶ್ವರ ಸ್ವಾಮಿ ಜಯಂತಿ:** ನೂತನ ಬೆಳ್ಳಿ ಪ್ರಭಾವಳಿ ಸಮರ್ಪಣೆ ಹಾಗೂ ಉದ್ಘಾಟನೆ: ದಿನೇಶ್ ಗುಂಡೂರಾವ್, ಅತಿಥಿಗಳು: ಆರ್. ಸಪ್ತಗಿರಿ ಗೌಡ, ಕೆ. ಲಕ್ಕಣ್ಣ, ಎಂ. ರಾಮಚಂದ್ರಪ್ಪ, ಆರ್.ಎಸ್. ಸತ್ಯನಾರಾಯಣ, ವಿ. ಶ್ರೀನಿವಾಸ್, ಆಯೋಜನೆ ಹಾಗೂ ಸ್ಥಳ: ಶನಿದೇವರ ದೇವಾಲಯ, 2ನೇ ಅಡ್ಡರಸ್ತೆ, ಮುನೇಶ್ವರ ಬ್ಲಾಕ್, ಪ್ಯಾಲೇಸ್ ಗುಟ್ಟಹಳ್ಳಿ, ಬೆಳಿಗ್ಗೆ 9.30

**ಕಡಿದಾಳ್ ಮಂಜಪ್ಪ ದತ್ತಿ ಕಾರ್ಯಕ್ರಮ:** ಉದ್ಘಾಟನೆ: ಶಿವರಾಜ್ ವಿ. ಪಾಟೀಲ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ದತ್ತಿ ಉಪನ್ಯಾಸ: ಬಿ.ಎಲ್. ಶಂಕರ್, ಅತಿಥಿಗಳು: ಡಿ.ಆರ್. ಪಾಟೀಲ, ಎಚ್. ಶರತ್‌ಚಂದ್ರ, ಉಪಸ್ಥಿತಿ: ಶ್ರೀಕಲಾ ಕಡಿದಾಳ್, ಜಯಪ್ರಕಾಶ್ ಕಡಿದಾಳ್, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್, ಬೆಳಿಗ್ಗೆ 10.30

**ತಾಯಂದಿರ ದಿನ ಆಚರಣೆ:** ಅತಿಥಿಗಳು: ಪ್ರಮೋದಾ ದೇವಿ ಒಡೆಯರ್, ಡಾ.ಕಾವ್ಯಾ ಎಸ್.ಟಿ., ಡಾ. ಸುಜಾತಾ ರಾಥೋಡ್, ಡಾ. ಸರೋಜಾ ಆರ್.ಕೆ., ಆಯೋಜನೆ: ಭಾರತೀಯ ವೈದ್ಯಕೀಯ ಸಂಘದ ಬೆಂಗಳೂರು ಶಾಖೆ, ಸ್ಥಳ: ಪಿಎಂಎಸ್‌ಎಸ್‌ವೈ ಆಸ್ಪತ್ರೆ, ಕೆ.ಆರ್. ಮಾರುಕಟ್ಟೆ, ಬೆಳಿಗ್ಗೆ 10



ಪ್ರಮೋದಾ ದೇವಿ ಒಡೆಯರ್

**ಕರ್ನಾಟಕ ಮುಸ್ಲಿಂ ಸಮಾವೇಶ:** ‘ಕಾಂಗ್ರೆಸ್ ಸರ್ಕಾರ ಹೇಳಿದ್ದೇನು? ಮಾಡಿದ್ದೇನು? ಮುಂದೇನು?’ ವರದಿ ಬಿಡುಗಡೆ, ಆಯೋಜನೆ: ಕರ್ನಾಟಕ ರಾಜ್ಯ ಮುಸ್ಲಿಂ ಸಂಘಟನೆಗಳು, ಸ್ಥಳ: ಪುರಭವನ, ಬೆಳಿಗ್ಗೆ 10.30

**ಜೈನ ಸಾಹಿತ್ಯ ಸಿರಿ:** ‘ಶ್ರೀವಿಜಯನ ಕವಿರಾಜಮಾರ್ಗ ಮತ್ತು ಕನ್ನಡದ ವಿವೇಕ’ ವಿಷಯದ ಬಗ್ಗೆ ಉಪನ್ಯಾಸ: ಎಂ.ಎಸ್. ಆಶಾದೇವಿ, ಅಧ್ಯಕ್ಷತೆ: ವಿಮುಕ್ತ ಜೈನ್, ಉಪಸ್ಥಿತಿ: ಮಮತ ಕಾಂತರಾಜ್, ನಾಗಶ್ರೀ ಮುಪ್ಪಾನೆ, ಆಯೋಜನೆ: ಜೈನ್ ಮಿಲನ್, ಬೆಂಗಳೂರು ಸೆಂಟ್ರಲ್, ಸ್ಥಳ: ಶ್ರೀ ಚಕ್ರೇಶ್ವರಿ ಮಹಿಳಾ ಸಮಾಜ, ಜಯನಗರ 3ನೇ ಬಡಾವಣೆ, ಸಂಜೆ 4.15

**ಮಂಡಳಿ ವೆಂಕಟಕೃಷ್ಣ ರಾವ್ ಅವರ ಜನ್ಮಶತಮಾನೋತ್ಸವ ಆಚರಣೆ:** ಅತಿಥಿಗಳು: ಬಸವರಾಜ ಹೊರಟ್ಟಿ, ಮಂಡಳಿ ಬುದ್ಧಪ್ರಸಾದ್, ಕೆ. ಗೋಪಿನಾಥ್, ಕೆ.ಆರ್. ರಮೇಶ್ ಕುಮಾರ್, ಪೊಟ್ಟಿ ಶ್ರೀರಾಮುಲು, ಡಿ. ಮುನಿರತ್ನಂ, ಅಧ್ಯಕ್ಷತೆ: ರಾಧಾಕೃಷ್ಣ ರಾಜು, ಪ್ರಶಸ್ತಿ ಪುರಸ್ಕೃತರು: ವೆಂಕಟ ರಾಯುಡು, ವೈ.ಎಸ್.ವೈಕೆ. ವಾಸುದೇವರಾವ್, ಎ.ವಿ. ಸೀತಾರಾಮಯ್ಯ, ‘ಮಾ ತೆಲುಗು ತಲ್ಲಿ’ ಕಿರುಚಿತ್ರ ಪ್ರದರ್ಶನ, ಆಯೋಜನೆ: ತೆಲುಗು ವಿಜ್ಞಾನ ಸಮಿತಿ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ವೈಯಾಲಿಕಾವಲ್, ಸಂಜೆ 5

**ಭಕ್ತಿಗೀತೆಗಳ ಅರ್ಪಣೆ:** ರಾಮಚಂದ್ರಾಚಾರ್ಯ, ಆಯೋಜನೆ: ಮಹಾಲಕ್ಷ್ಮೀ ಭಕ್ತ ಮಂಡಳಿ ವೇದಿಕೆ, ಸ್ಥಳ: ಪ್ರಸನ್ನ ವೀರಾಂಜನೇಯ ದೇವಸ್ಥಾನ, ಮಹಾಲಕ್ಷ್ಮೀ ಲೇಔಟ್, ಸಂಜೆ 5.30

**‘ಮನ ಮಹರ್ಷುಲು’ ತೆಲುಗು ಪ್ರವಚನ:** ಸಾಮವೇದಂ ಷಣ್ಮುಖ ಶರ್ಮ, ಆಯೋಜನೆ: ಋಷಿಪೀಠಂ ಸತ್ಸಂಗಂ, ಸ್ಥಳ: ನ್ಯೂ ಹೊರೈಜನ್ ಕಾಲೇಜ್ ಆಫ್ ಎಂಜಿನಿಯರಿಂಗ್ ಸಭಾಂಗಣ, ಹೊರವರ್ತುಲ ರಸ್ತೆ, ಮಾರತಹಳ್ಳಿ, ಸಂಜೆ 6

**ತಿಂಗಳ ನಾಟಕ ಸಂಭ್ರಮ:** ತಿಂಗಳ ಅತಿಥಿ: ಸಿ.ಕೆ. ಗುಂಡಣ್ಣ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ರಂಗವಾಹಿನಿ ತಂಡದಿಂದ ‘ಬೆಲ್ಲದ ದೋಣಿ’ ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಮುಚ್ಚಯ ಭವನ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

**ನಾಟಕಗಳ ಪ್ರದರ್ಶನ:** ಸಂಜೆ 4ಕ್ಕೆ ‘ಮಿಸ್ಟರ್. ರಾವ್ ಅ್ಯಂಡ್ ಅಸೋಸಿಯೇಟ್ಸ್’ ನಾಟಕ ಪ್ರದರ್ಶನ, ನಿರ್ದೇಶನ: ಬಾಷ್ ರಾಘವೇಂದ್ರ, ಸಂಜೆ 7ಕ್ಕೆ ‘ಕ್ರೇಜಿ ಕುಟುಂಬ’ ನಾಟಕ ಪ್ರದರ್ಶನ, ನಿರ್ದೇಶನ: ಸತೀಶ್ ಐತಾಳ್, ತಂಡ: ಅಂತರಂಗ ಬಹಿರಂಗ, ಸ್ಥಳ: ಡಾ.ಸಿ.ಅಶ್ವಥ್ ಕಲಾ ಭವನ, ಎನ್.ಆರ್. ಕಾಲೊನಿ.

**ಭರತನಾಟ್ಯ ರಂಗಪ್ರವೇಶ:** ಮನ್ವಿತ ಎಸ್.ಎಂ., ಅತಿಥಿಗಳು: ರಾಮಲಿಂಗಾರೆಡ್ಡಿ, ಎಂ. ಸತೀಶ್ ರೆಡ್ಡಿ, ಸಾ.ರಾ.ಮಹೇಶ್, ಕೆ.ಎನ್. ರಮೇಶ್, ಸುಂದರ್ ರಾಜ್, ಸ್ನೇಹಾ ಕಪ್ಪಣ್ಣ, ಆಯೋಜನೆ: ನೃತ್ಯ ಸಂಹಿತ ಅಕಾಡೆಮಿ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಬಸವನಗುಡಿ, ಸಂಜೆ 5

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

# ಇಂಧನ ದರ ಏರಿಕೆ: ಗಿಗ್ ಕಾರ್ಮಿಕರಿಗೆ ಸಂಕಷ್ಟ

## ಹೋಟೆಲ್, ರೆಸ್ಟೊರೆಂಟ್‌ಗಳಲ್ಲಿ ಆಹಾರದ ದರ ಹೆಚ್ಚಳ

• ಅಗತ್ಯ ಬಿದ್ದಾಗ ನೇರವಾಗಿ ಹೋಟೆಲ್‌ಗೆ ತೆರಳುತ್ತಿರುವ ಗ್ರಾಹಕರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಇಂಧನ ದರ ಏರಿಕೆಯು ಗಿಗ್ ಕಾರ್ಮಿಕರ ಜೀವನೋಪಾಯದ ಮೇಲೆ ಪರಿಣಾಮ ಬೀರುತ್ತಿದೆ. ಎಲ್‌ಪಿಜಿ ಸಿಲಿಂಡರ್ ದರ ಏರಿಕೆಯಾಗಿ ಆನ್‌ಲೈನ್ ಪ್ಲ್ಯಾಟ್‌ಫಾರ್ಮ್ ಬಳಸಿ ಆಹಾರ ತರಿಸುವವರ ಪ್ರಮಾಣ ಒಂದೆಡೆ ಕಡಿಮೆಯಾಗಿದ್ದರೆ, ಪೆಟ್ರೋಲ್ ದರ ಹೆಚ್ಚಳವಾಗಿ ಪೂರೈಕೆ ವೆಚ್ಚ ಅಧಿಕಗೊಂಡಿದೆ.

ಎಲ್‌ಪಿಜಿ ಸಿಲಿಂಡರ್ ಸಮಸ್ಯೆ ತಲೆದೋರಿದಾಗ ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಆಹಾರದ ದರವನ್ನು ಏರಿಕೆ ಮಾಡಿದರು. ಗ್ರಾಹಕರು ಅಗತ್ಯ ಬಿದ್ದಾಗ ನೇರವಾಗಿ ಹೋಟೆಲ್‌ಗಳಿಗೆ ಹೋಗುವುದಕ್ಕೆ ಆದ್ಯತೆ ನೀಡುತ್ತಿದ್ದು, ಆನ್‌ಲೈನ್ ವಿತರಣಾ ಪ್ಲ್ಯಾಟ್‌ಫಾರ್ಮ್ ಬಳಸುವುದನ್ನು ಕಡಿಮೆ ಮಾಡಿದ್ದಾರೆ. ಇದರಿಂದ ಪೂರೈಕೆಯ ವೆಚ್ಚವು ಗ್ರಾಹಕರಿಗೆ ಉಳಿಯುತ್ತಿದೆ. ಆದರೆ, ವಿತರಣಾ ವ್ಯವಸ್ಥೆಯನ್ನೇ ನಂಬಿರುವ ಗಿಗ್ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ವಿತರಣಾ ಏಜೆಂಟ್‌ಗಳು ತಿಳಿಸಿದ್ದಾರೆ.

‘ಮೊದಲು ದಿನಕ್ಕೆ 20ರಿಂದ 25 ಆರ್ಡರ್‌ಗಳು ಬರುತ್ತಿದ್ದವು. ನಾಲ್ಕೈದು ವಾರಗಳ ಈಚೆಗೆ 15ರಿಂದ 20 ಆರ್ಡರ್‌ಗಳಷ್ಟೇ ಬರುತ್ತಿವೆ. ಇದೀಗ ಪೆಟ್ರೋಲ್ ದರವೂ ಹೆಚ್ಚಳವಾಗಿರುವುದರಿಂದ ಖರ್ಚು ಅಧಿಕಗೊಂಡಿದ್ದು, ಆದಾಯ ಕಡಿಮೆಯಾಗಿದೆ’ ಎಂದು ಗಿಗ್ ಕಾರ್ಮಿಕ ಮುಜಾಕಿರ್ ತಿಳಿಸಿದರು.

‘ವೆಚ್ಚ ಹೆಚ್ಚಾಗಿದ್ದರೂ ನಮಗೆ ಸಿಗುವ ಕಮಿಷನ್ ಹೆಚ್ಚಾಗಿಲ್ಲ. ನಮಗೆ ಏನು ಪರಿಹಾರ ಎಂಬುದನ್ನು ವಿತರಣಾ ಅಗ್ರಿಗೇಟರ್ ಸಂಸ್ಥೆಗಳು ತಿಳಿಸಿಲ್ಲ. ನಮ್ಮನ್ನು ನಾವೇ ರಕ್ಷಿಸಿ ಕೊಳ್ಳಬೇಕಿದೆ’ ಎಂದು ಗಿಗ್ ಕಾರ್ಮಿಕ ತರುಣ್ ಕುಮಾರ್ ಹೇಳಿದರು.

‘ದೊಡ್ಡ ಪ್ರಮಾಣದ ರೆಸ್ಟೋರೆಂಟ್‌ಗಳಿಂದ ತರಿಸಿಕೊಳ್ಳುವವರ ಪ್ರಮಾಣ ಕಡಿಮೆಯಾಗಿಲ್ಲ. ರಾತ್ರಿ ವಿತರಣೆಗಳು ಹಾಗೇ ಉಳಿದಿರುವುದರಿಂದ ಗಿಗ್ ಕಾರ್ಮಿಕರು ಉಸಿರಾಡುವಂತಾಗಿದೆ’ ಎಂದು ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್‌ನರ್ಸ್ ಯೂನಿಯನ್ ಅಧ್ಯಕ್ಷ ವಿನಯ್ ಸಾರಥಿ ತಿಳಿಸಿದರು.

‘ಮೊದಲೇ ಕಡಿಮೆ ಆದಾಯ ಗಳಿಸುತ್ತಿದ್ದ ಗಿಗ್ ಕಾರ್ಮಿಕರಿಗೆ ಇಂಧನ ಬೆಲೆ ಏರಿಕೆ ಹೊಡೆತ ನೀಡಿದೆ. ಇಂಧನ ವೆಚ್ಚವನ್ನು ಸರಿದೂಗಿಸಲು ಅಗ್ರಿಗೇಟರ್ ಕಂಪನಿಗಳು ನೆರವಿಗೆ ಬರುತ್ತಿಲ್ಲ. ಅದೂ ಈ ಕಾರ್ಮಿಕರ ಜೇಬಿನಿಂದ ಭರಿಸಬೇಕಿದ್ದರೆ ಅವರ ಜೀವನ ಸಾಗುವುದು ಕಷ್ಟ. ಗಿಗ್ ಕಾರ್ಮಿಕರ ನೆರವಿಗೆ ಸರ್ಕಾರ ಬರಬೇಕು. ಪರಿಹಾರ, ರಿಯಾಯಿತಿಗಳನ್ನು ನೀಡಲು ಪರಿಶೀಲಿಸಬೇಕು’ ಎಂದು ಕರ್ನಾಟಕ ಆ್ಯಪ್ ಆಧಾರಿತ ಕಾರ್ಮಿಕರ ಒಕ್ಕೂಟದ ಅಧ್ಯಕ್ಷ ಮತ್ತು ಭಾರತೀಯ ಆ್ಯಪ್ ಆಧಾರಿತ ಸಾರಿಗೆ ಕಾರ್ಮಿಕರ ಒಕ್ಕೂಟದ ರಾಷ್ಟ್ರೀಯ ಉಪಾಧ್ಯಕ್ಷ ಇನಾಯತ್ ಅಲಿ ಒತ್ತಾಯಿಸಿದರು.

### ದರ ಹೆಚ್ಚಳ: ಗ್ರಾಹಕರಿಗೆ ಆಘಾತ

ತಮ್ಮ ವಾಹನಗಳಿಗೆ ಇಂಧನ ತುಂಬಿಸಲು ಶುಕ್ರವಾರ ಬೆಳಿಗ್ಗೆ ಬಂಕ್‌ಗಳಿಗೆ ಬಂದಿದ್ದ ಗ್ರಾಹಕರು ಡೀಸೆಲ್, ಪೆಟ್ರೋಲ್ ದರ ಏರಿಕೆಯಾಗಿರುವುದನ್ನು ಕಂಡು ಆಘಾತಗೊಂಡರು.

ಡೀಸೆಲ್ ದರವು ಲೀಟರ್‌ಗೆ ₹ 94.10, ಪೆಟ್ರೋಲ್ ದರವು ₹ 106.10ಕ್ಕೆ ತಲುಪಿತ್ತು. ರಾಜಾಜಿನಗರ, ಜಯನಗರ ಮತ್ತು ಸುತ್ತಮುತ್ತಲಿನ ಹಲವಾರು ಪೆಟ್ರೋಲ್ ಬಂಕ್‌ಗಳಲ್ಲಿ ಸಿಬ್ಬಂದಿ ದರದ ಪ್ರದರ್ಶನಗಳನ್ನು ಬದಲಾಯಿಸಿದಾಗ ಪ್ರಯಾಣಿಕರು ಹತಾಶೆ ವ್ಯಕ್ತಪಡಿಸಿದರು.

‘ನಾನು ಮೊದಲು ₹ 200ಕ್ಕೆ ಪೆಟ್ರೋಲ್ ಹಾಕಿಸಿದಾಗ ಎಷ್ಟು ದೂರ ಸಂಚರಿಸಲು ಸಾಧ್ಯವಿತ್ತೋ ಅಷ್ಟು ದೂರಕ್ಕೆ ಸಂಚರಿಸಲು ಇನ್ನು ಮುಂದೆ ₹220ಕ್ಕೆ ಪೆಟ್ರೋಲ್ ಹಾಕಿಸಬೇಕಾಗುತ್ತದೆ’ ಎಂದು ದ್ವಿಚಕ್ರ ವಾಹನ ಸವಾರ ಕಿರಣ್ ಹೇಳಿದರು.

‘ಡೀಸೆಲ್, ಪೆಟ್ರೋಲ್ ದರ ಹೆಚ್ಚಳವಾದಾಗ ಅದೇ ಪ್ರಮಾಣದಲ್ಲಿ ಆಹಾರ ಪದಾರ್ಥಗಳಿಂದ ಹಿಡಿದು ಸಾರಿಗೆ ದರಗಳವರೆಗೆ ದರ ಹೆಚ್ಚಳವಾಗುತ್ತದೆ. ಆದರೆ, ನಮ್ಮ ವೇತನವು ಅದಕ್ಕೆ ಅನುಗುಣವಾಗಿ ಹೆಚ್ಚಳವಾಗುವುದೇ ಇಲ್ಲ’ ಎಂದು ಇನ್ನೊಬ್ಬ ಗ್ರಾಹಕರು ಪ್ರತಿಕ್ರಿಯಿಸಿದರು.

‘ಮೆಟ್ರೊ ಪ್ರಯಾಣ ಈಗಾಗಲೇ ದುಬಾರಿಯಾಗಿದೆ. ಈಗ ಪೆಟ್ರೋಲ್ ದರವೂ ಹೆಚ್ಚಳವಾದರೆ ಇನ್ನು ಮುಂದೆ ವಿದ್ಯುತ್ ವಾಹನಗಳನ್ನೇ ಖರೀದಿಸುವುದು ಉತ್ತಮ’ ಎಂದು ಗ್ರಾಹಕ ರಂಜಿತ್ ಶಂಕರ್ ಹೇಳಿದರು.

ಆದಾಯ ಅಷ್ಟೇ ಇದ್ದು, ವೆಚ್ಚ ಹೆಚ್ಚಾಗಿರುವುದರಿಂದ ಸ್ಥಳೀಯ ಟ್ಯಾಕ್ಸಿ ಮತ್ತು ಆಟೊ ಚಾಲಕರ ದೈನಂದಿನ ಆದಾಯದ ಮೇಲೆ ಪರಿಣಾಮ ಬೀರಿದೆ ಎಂದು ಆಟೊ ಚಾಲಕರೊಬ್ಬರು ತಿಳಿಸಿದರು.

## ಸುದ್ದಿ 2 ನಿಮಿಷ

### ಶವ ಹೊರತೆಗೆದು ಮರು ತನಿಖೆ

**ಬೆಂಗಳೂರು:** ಕೊಲೆಯ ಅನುಮಾನದ ಮೇರೆಗೆ, ಅಂತ್ಯಸಂಸ್ಕಾರ ಮಾಡಿದ್ದ ಶವವನ್ನು ಹೊರತೆಗೆದು ಮರು ತನಿಖೆ ನಡೆಸಿರುವ ಪ್ರಕರಣ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಯೂನೆಸ್ ಎಂಬುವವರು ತಮ್ಮ ಸಹೋದರ ಇಮ್ತಿಯಾಜ್ (40) ಅವರ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ದೂರು ನೀಡಿದ್ದರು. ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಮರು ತನಿಖೆ ನಡೆಸಲಾಗುತ್ತಿದೆ. ಮೃತದೇಹವನ್ನು ಹೊರಕ್ಕೆ ತೆಗೆದು ಮಾದರಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನೆ ಮಾಡಲಾಗಿದೆ. ವರದಿ ಬಂದ ಬಳಿಕ ಅದು ಕೊಲೆಯೇ ಅಥವಾ ಹೃದಯಾಘಾತದಿಂದ ಮೃತಪಟ್ಟಿದ್ದಾರೆಯೇ ಎಂಬುದು ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು.

‘ಪತಿ ಇಮ್ತಿಯಾಜ್ ಹೃದಯಘಾತದಿಂದ ಮೃತಪಟ್ಟಿದ್ದಾರೆ ಎಂದು ಅವರ ಪತ್ನಿ ನಸೀರಾಬಾನು ಕುಟುಂಬದ ಸದಸ್ಯರಿಗೆ ಹೇಳಿ ತರಾತುರಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿಸಿದ್ದರು. ಅದಾದ ಕೆಲವು ದಿನ ಕಳೆದ ಮೇಲೆ ನಸೀರಾಬಾನು ಅವರು ಮನೆ ಕೆಲಸಕ್ಕೆ ತೆರಳುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಈ ನಡುವೆ, ಯೂನೆಸ್ ಅವರು ಅಣ್ಣನ ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿ ಸಹೋದರನ ಪತ್ನಿ ನಸೀರಾಬಾನು ಹಾಗೂ ಅವರ ಸ್ನೇಹಿತನ ವಿರುದ್ಧ ದೂರು ನೀಡಿದ್ದರು. ಈ ಬಗ್ಗೆ ತಹಶೀಲ್ದಾರ್ ಆದೇಶದ ಮೇರೆಗೆ ಹೂತಿಟ್ಟ ಶವ ಹೊರತೆಗೆದಿರುವ ಎಚ್‌ಎಎಲ್ ಠಾಣೆ ಪೊಲೀಸರು ಪ್ರಕರಣದ ಮರು ತನಿಖೆ ನಡೆಸುತ್ತಿದ್ದಾರೆ’ ಎಂದು ಮೂಲಗಳು ಹೇಳಿವೆ.

### ಕುಸಿದ ಹೆದ್ದಾರಿ: ಕಾರ್ಮಿಕನಿಗೆ ಗಾಯ

**ಆನೇಕಲ್:** ತಾಲ್ಲೂಕಿನ ಗುಡ್ಡಹಟ್ಟಿ ಸಮೀಪ ರಾಷ್ಟ್ರೀಯ ಹೆದ್ದಾರಿ-44ರ ಕಾಮಗಾರಿ ಸ್ಥಳದಲ್ಲಿ ಗುರುವಾರ ರಸ್ತೆ ಮತ್ತೆ ಕುಸಿತವಾಗಿದ್ದು, ಹಳ್ಳಕ್ಕೆ ಬಿದ್ದು ಕಾರ್ಮಿಕ ಆಲಮ್ ಅವರಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ.

ಚಂದಾಪುರ-ಅತ್ತಿಬೆಲೆ ರಸ್ತೆಯಲ್ಲಿ ಮೂರು ಕೆಳಸೇತುವೆ ನಿರ್ಮಿಸಲು 11 ತಿಂಗಳಿನಿಂದ ಕಾಮಗಾರಿ ನಡೆಯುತ್ತಿದೆ. ಗುರುವಾರ ಮಧ್ಯಾಹ್ನ ಏಕಾಏಕಿ ಹೆದ್ದಾರಿ ಕುಸಿತವಾಗಿ ಆಲಮ್ ಹಳ್ಳಕ್ಕೆ ಬಿದ್ದು ಅವರ ಮೇಲೆ ಮಣ್ಣು ಮುಚ್ಚಿಕೊಂಡಿತ್ತು. ತಕ್ಷಣವೇ ಸಹ ಕಾರ್ಮಿಕರು ಇವರನ್ನು ರಕ್ಷಿಸಿದ್ದಾರೆ. ಕಳೆದ ಫೆಬ್ರುವರಿ 3ರಂದು ಇದೇ ಸ್ಥಳದಲ್ಲಿ ಹೆದ್ದಾರಿ ಕುಸಿತವಾಗಿತ್ತು. ಗುತ್ತಿಗೆದಾರರು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ನಿರ್ಲಕ್ಷ್ಯದಿಂದಲೇ ಮತ್ತೆ, ಮತ್ತೆ ರಸ್ತೆ ಕುಸಿತವಾಗುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಮೆಗತಿ ಕಾಮಗಾರಿಯಿಂದ ವಾಹನ ಸವಾರರು ಹೈರಾಣಾಗಿದ್ದಾರೆ. ಇಲ್ಲಿ ಕಿ.ಮೀ. ಗಟ್ಟಲೇ ವಾಹನ ದಟ್ಟಣೆ ಉಂಟಾಗುತ್ತಿದೆ. ಇದರ ನಡುವೆ ಭೂ ಕುಸಿತವಾಗಿರುವುದರಿಂದ ಪಕ್ಕದ ರಸ್ತೆ ಇನ್ನಷ್ಟು ಕಿರಿದಾಗಿ ದಟ್ಟಣೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎನ್ನುತ್ತಾರೆ ಸ್ಥಳೀಯರು.

## ಬಾಲಕಿಯರ ಮೇಲೆ ದೌರ್ಜನ್ಯ, ಚಿತ್ರೀಕರಣ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

**ರಾಮನಗರ:** ಬಾಲಕಿಯರಿಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಅದರ ವಿಡಿಯೊ ಚಿತ್ರೀಕರಿಸಿಕೊಂಡು ಅಂತರ್ಜಾಲದಲ್ಲಿ ಅಪ್‌ಲೋಡ್ ಮಾಡಿದ್ದ ಇಬ್ಬರನ್ನು ರಾಮನಗರದ ಸಿಇಎನ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ್ದ ಮೂರು ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಕಿರಣ್ ಕುಮಾರ್

ಆದಿತ್ಯ ಎಂ.ಕೆ

ಬೆಂಗಳೂರು ನಗರದ ಕಗ್ಗಲೀಪುರ ಸಮೀಪದ ಕೈದಳ್ಳಿಪಾಳ್ಯದಲ್ಲಿ ವಾಸವಿದ್ದ ಚಿತ್ರದುರ್ಗ ತಾಲ್ಲೂಕಿನ ಯಮ್ಮನಗಟ್ಟೆಯ ಕಿರಣ್ ಕುಮಾರ್ (29) ಮತ್ತು ಚನ್ನಪಟ್ಟಣ ತಾಲ್ಲೂಕಿನ ಸೀಬನಹಳ್ಳಿಯಲ್ಲಿ ನೆಲಸಿದ್ದ ಶಿವಮೊಗ್ಗ ಜಿಲ್ಲೆಯ ಇಟ್ಟಿಗೆಹಳ್ಳಿಯ ಆದಿತ್ಯ ಎಂ.ಕೆ. (20) ಬಂಧಿತರು. ಆರೋಪಿಗಳಿಬ್ಬರೂ ಸಂಬಂಧಿಕರು.

ಕಿರಣ್ ಕುರಿ ಕಾಯುವ ಹಾಗೂ ಆದಿತ್ಯ ಈಜುಕೊಳ ನಿರ್ವಹಿಸುತ್ತಿದ್ದ. ಚಿಕ್ಕಮಗಳೂರು ಜಿಲ್ಲೆಯ ವಲಸೆ ಕೂಲಿ ಕಾರ್ಮಿಕರ ಇಬ್ಬರು ಹೆಣ್ಣು ಮಕ್ಕಳ ಮೇಲೆ ಆರೋಪಿಗಳು ಲೈಂಗಿಕ ದೌರ್ಜನ್ಯ ಎಸಗಿದ್ದರು. ಕೃತ್ಯವನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಆನ್‌ಲೈನ್‌ಗೆ ಅಪ್‌ಲೋಡ್ ಮಾಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ(ಸಿಎಸ್‌ಎಎಂ) ಸಂಬಂಧಿಸಿದ ವಿಡಿಯೊಗಳನ್ನು ಅಪ್‌ಲೋಡ್ ಮಾಡಿ ಹರಡುತ್ತಿದ್ದರ ಕುರಿತು, ರಾಷ್ಟ್ರೀಯ ಸೈಬರ್‌ಕ್ರೈಂ ರಿಪೋರ್ಟಿಂಗ್ ಪೋರ್ಟಲ್‌ನಲ್ಲಿ (ಎನ್‌ಸಿಆರ್‌ಪಿ) ವರದಿಯಾಗಿತ್ತು. ಆರೋಪಿಗಳನ್ನು ವಶಕ್ಕೆ ಪಡೆದೆವು ಎಂದು ಪೊಲೀಸರು ಹೇಳಿದ್ದಾರೆ.

## ಕನಕದಾಸರ ಸಾಹಿತ್ಯ ಅನುವಾದ ಕೃತಿಗಳ ಜನಾರ್ಪಣೆ, ಕನಕ ಶಿಲ್ಪವನ ಅನಾವರಣ

# ಕನಕದಾಸರ ಕೃತಿಗಳ ಪ್ರಕಟಣೆಗೆ ನೆರವು: ಸಿ.ಎಂ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಕನಕದಾಸರ ಸಮಗ್ರ ಸಾಹಿತ್ಯ ಅನುವಾದ ಸಂಪುಟಗಳನ್ನು ವಿವಿಧ ಭಾಷೆಗಳ ಗ್ರಂಥಾಲಯ, ವಿಶ್ವವಿದ್ಯಾಲಯಗಳಿಗೆ ಮುದ್ರಿಸಲು ಬೇಕಾದ ಆರ್ಥಿಕ ನೆರವನ್ನು ಸರ್ಕಾರ ನೀಡಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಹೊರ ತಂದಿರುವ ಕನಕದಾಸರ ಸಮಗ್ರ ಸಾಹಿತ್ಯ ಸಂಪುಟಗಳ 14 ಭಾಷೆಗಳ 40 ಕೃತಿಗಳನ್ನು ನಗರದಲ್ಲಿ ಶುಕ್ರವಾರ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

‘ಕನಕದಾಸರು ಕವಿ ಮಾತ್ರವಲ್ಲ. 16ನೇ ಶತಮಾನದಲ್ಲಿಯೇ ಸಮಾಜದ ಅಂಕುಡೊಂಕು ತಿದ್ದಿ ಮೂಢನಂಬಿಕೆಗಳನ್ನು ದೂರ ಮಾಡಲು ಕೀರ್ತನೆಗಳನ್ನು ಬರೆದರು. ಭಕ್ತಿಪಂಥಕ್ಕೆ ಮಾತ್ರ ಸೀಮಿತರಾಗದೇ ಸಮಾಜ ಸುಧಾರಕರಾಗಿಯೂ ಕೆಲಸ ಮಾಡಿದ್ದರಿಂದ ಅವರನ್ನು ವಿಶ್ವ ಮಾನವರಾಗಿಯೇ ನೋಡಬೇಕು. ಇಂದಿಗೂ ಬಸವಣ್ಣ, ಕನಕದಾಸರ ಸಮ ಸಮಾಜದ ಕನಸು ಈಡೇರಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

‘ವಚನ ಸಾಹಿತ್ಯ, ದಾಸ ಸಾಹಿತ್ಯ ವಿಶ್ವದ ಹಲವು ಭಾಷೆಗಳಿಗೆ ಅನುವಾದಗೊಂಡಿವೆ. ಅದೇ ರೀತಿ ಕನಕದಾಸರ ಮೋಹನ ತರಂಗಿಣಿ, ಹರಿಭಕ್ತಿಸಾರ, ರಾಮಧಾನ್ಯ ಚರಿತ್ರೆ, ನಳಚರಿತ್ರೆ, ಕೀರ್ತನೆಗಳು ಹಾಗೂ ಮುಂಡಿಗೆಗಳನ್ನು ಹಲವು ಭಾಷೆಗಳಿಗೆ ಅನುವಾದ ಮಾಡಲಾಗಿದೆ. ಇದು ಸುಲಭದ ಕೆಲಸವಲ್ಲ. ಇದಕ್ಕಾಗಿ ಶ್ರಮಿಸಿದ ಅನುವಾದಕಾರರು, ಸಾಹಿತಿಗಳು ಅಭಿನಂದನಾರ್ಹರು. ಕೇಂದ್ರವು ಶ್ರದ್ಧೆಯಿಂದಲೇ ಮಹತ್ವದ ಕೆಲಸ ಮಾಡಿದೆ’ ಎಂದರು.

ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕನಕ ಶಿಲ್ಪವನವನ್ನು ಅನಾವರಣ ಮಾಡಿದರು. ಪ್ರಜಾವಾಣಿ ಚಿತ್ರ

> **ನಾನು ಶಾಸಕನಾಗಿದ್ದಾಗ ಸತತ 10 ವರ್ಷ ಕಾಲ ಕನಕದಾಸರ ಜಯಂತಿಗೆ ಹೋಗಿ ಅವರ ವಿಚಾರಗಳನ್ನು ಜನರಿಗೆ ತಿಳಿಸುತ್ತಿದ್ದೆ. ಇದರಿಂದಲೇ ನನ್ನ ರಾಜಕೀಯ ಬೆಳವಣಿಗೆಗೂ ಅನುಕೂಲ ಆಯಿತು**
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಮಾತನಾಡಿ,‘ಕನಕದಾಸರ ಸಮಗ್ರ ಸಾಹಿತ್ಯ ಅನುವಾದದ 14 ಭಾಷೆಗಳ ಸಂಪುಟಗಳನ್ನು ಉಚಿತವಾಗಿ ಆಯಾ ರಾಜ್ಯದ ಸಂಸ್ಕೃತಿ ಇಲಾಖೆ, ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಿಗೆ ಒದಗಿಸಲು ಇಲಾಖೆ ಅನುಮತಿ ನೀಡಲಿದೆ’ ಎಂದು ಹೇಳಿದರು.

ಕೃತಿಗಳ ಕುರಿತು ಮಾತನಾಡಿದ ಚಿಂತಕ ಬಂಜಗೆರೆ ಜಯಪ್ರಕಾಶ್, ‘ಪ್ರಾಚೀನ ಭಾಷೆಗಳಿಗೆ ಕನಕದಾಸರ ಸಾಹಿತ್ಯ ಹಾಗೂ ಚಿಂತನೆಗಳು ಅನುವಾದಗೊಂಡು, ಅವರ ವಿಚಾರಗಳನ್ನು ಅಖಿಲ ಭಾರತ ಮಟ್ಟಕ್ಕೆ ತೆಗೆದುಕೊಂಡು ಹೋಗುತ್ತಿರುವುದು ಸ್ತುತ್ಯರ್ಹ ಕಾರ್ಯ’ ಎಂದು ಹೇಳಿದರು.

‘ಹಾರ್ವರ್ಡ್ ವಿಶ್ವವಿದ್ಯಾಲಯದ ಸಂಸ್ಕೃತಿ ವಿಭಾಗದಲ್ಲಿ ಈಗಾಗಲೇ ಕುಮಾರವ್ಯಾಸರ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸಲಾಗಿದೆ. ಕನಕದಾಸರ ವಿಚಾರಗಳು ಜಾಗತಿಕ ಮಟ್ಟಕ್ಕೂ ತಲುಪಬೇಕಾಗಿರುವುದರಿಂದ ಅಲ್ಲಿಯೂ ಅನುವಾದ ಮಾಡಿಸುವ ಕೆಲಸವನ್ನು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ ಮಾಡಬೇಕು’ ಎಂದು ಸಲಹೆ ನೀಡಿದರು.

ಶಾಸಕ ಆರ್.ಮುನಿರತ್ನ ಅಧ್ಯಕ್ಷತೆ ವಹಿಸಿದ್ದರು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ, ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ.ಮಂಜುನಾಥ್, ಅಧ್ಯಯನ ಕೇಂದ್ರದ ಸದಸ್ಯ ಕಾರ್ಯದರ್ಶಿ ಎನ್.ಕರಿಯಪ್ಪ ಉಪಸ್ಥಿತರಿದ್ದರು.

### ‘₹ 90 ಲಕ್ಷ ಉಳಿತಾಯ’

‘ಕರ್ನಾಟಕ ಸರ್ಕಾರವು ಕನಕದಾಸರ ಸಮಗ್ರ ಸಾಹಿತ್ಯ ಸಂಪುಟಗಳ 40 ಕೃತಗಳ ಬಿಡುಗಡೆಗೆ ₹2 ಕೋಟಿ ಆರ್ಥಿಕ ನೆರವು ನೀಡಿದ್ದು, ಇದರಲ್ಲಿ ₹90 ಲಕ್ಷ ಉಳಿಸಿದ್ದೇವೆ. ಇದನ್ನು 14 ಭಾಷೆಗಳಿಗೆ ಅನುವಾದಗೊಂಡಿರುವ ರಾಜ್ಯಗಳ ಗ್ರಂಥಾಲಯಗಳಿಗೆ ಉಚಿತವಾಗಿ ವಿತರಣೆಗೆ ಬಳಸಲು ಅನುಮತಿ ನೀಡಬೇಕು’ ಎಂದು ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, ‘ತುಳು, ಕೊಡವ, ಕೊಂಕಣಿ, ಬ್ಯಾರಿ, ತಮಿಳು, ತೆಲುಗು, ಮಲಯಾಳ, ಸಂಸ್ಕೃತ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ, ಗುಜರಾತಿ, ಬೆಂಗಾಲಿ ಭಾಷೆಗಳ ಅನುವಾದಕರು, ವಿವಿಧ ಅಕಾಡೆಮಿಗಳ ಪ್ರಮುಖ ಸಹಕಾರದಿಂದ ಇದು ಸಾಧ್ಯವಾಗಿದೆ. ಕನಕ ಶಿಲ್ಪವನವನ್ನು ಕಲಾವಿದ ವೆಂಕಟಾಚಲಪತಿ ಹಾಗೂ ತಂಡದವರು ಬರೀ ₹12 ಲಕ್ಷಕ್ಕೆ ಮುಗಿಸಿಕೊಟ್ಟಿದ್ದಾರೆ’ ಎಂದು ಶ್ಲಾಘಿಸಿದರು.

### ‘ಕಾಂಗ್ರೆಸ್ ಬಿಟ್ಟ ಮೇಲೆ ತೃಪ್ತಿಯಿಲ್ಲ’

‘ನಾನು ಹತ್ತು ವರ್ಷದ ಹಿಂದೆ ಶಾಸಕನಾದಾಗ ತೃಪ್ತಿಯಿಂದ ಇದ್ದೆ, ಅಲ್ಲಿದ್ದಾಗ ಸಿದ್ದರಾಮಯ್ಯ ಅವರು ನನ್ನನ್ನು ಚೆನ್ನಾಗಿಯೇ ನೋಡಿಕೊಂಡಿದ್ದರು. ಆ ಪಕ್ಷ ಬಿಟ್ಟು ಬಂದ ಮೇಲೆ ತೃಪ್ತಿಯೇ ಇಲ್ಲದಾಗಿದೆ’ ಎಂದು ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಆರ್.ಮುನಿರತ್ನ ಹೇಳಿದರು.

ಸಂತಕವಿ ಕನಕದಾಸ ಮತ್ತು ತತ್ವ ಪದಕಾರರ ಅಧ್ಯಯನ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಎದುರು ತಮ್ಮ ಕಷ್ಟ ಹೇಳಿಕೊಂಡರು.

‘2013ರಲ್ಲಿ ಮೊದಲ ಬಾರಿ ಕಾಂಗ್ರೆಸ್‌ನಿಂದ ಶಾಸಕನಾದಾಗ ಸಿದ್ದರಾಮಯ್ಯ ಅವರು ನಮ್ಮ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ಆ ಪಕ್ಷ ಬಿಟ್ಟು ಬಂದ ನಂತರ, ನನ್ನ ಮೇಲೆ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಅದು ಕಡಿಮೆಯಾಗುವಂತೆ ಕಾಣಿಸುತ್ತಿಲ್ಲ’ ಎಂದು ಹೇಳಿದರು.

‘ಕೆಲವರು ನನಗೆ ಅಪಘಾತ ಆಗಿ ಬಿಡುತ್ತದೆ. ಹೃದಯಾಘಾತವೂ ಆಗಿ ಬಿಡಬಹುದು ಎಂದು ಅಂದುಕೊಂಡಿದ್ದರು. ಕ್ಷೇತ್ರದ ಜನರ ಆಶೀರ್ವಾದ ಇರುವವರೆಗೂ ಏನೂ ಆಗುವುದಿಲ್ಲ’ ಎಂದರು.

ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಸಚಿವ ಶಿವರಾಜ ತಂಗಡಗಿ, ಗ್ಯಾರಂಟಿ ಸಮಿತಿಗಳ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಅವರೊಂದಿಗೆ ಮುನಿರತ್ನ ಲವಲವಿಕೆಯಿಂದ ಇದ್ದರು. ಮುನಿರತ್ನ ಅವರು 2013, 2018ರಲ್ಲಿ ಕಾಂಗ್ರೆಸ್‌ನಿಂದ ಜಯಗಳಿಸಿದ್ದರು. 2019ರಲ್ಲಿ ಬಿಜೆಪಿ ಸೇರಿ ಆ ಪಕ್ಷದಿಂದ ಉಪಚುನಾವಣೆಯಲ್ಲಿ ಗೆದ್ದಿದ್ದರು. 2023ರಲ್ಲೂ ಬಿಜೆಪಿಯಿಂದ ಸ್ಪರ್ಧಿಸಿ ಶಾಸಕರಾಗಿದ್ದಾರೆ.

## ಬೆಂಗಳೂರು ರೇಸ್

### ಗ್ಲೋಬಲ್ ಇನ್‌ಫ್ಲೂಯನ್ಸ್ ಗೆಲ್ಲುವ ನಿರೀಕ್ಷೆ

ಬಿ.ಟಿ.ಸಿ ಚಾರಿಟೆಬಲ್ ಟ್ರಸ್ಟ್ ಟ್ರೋಫಿ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ಲೋಬಲ್ ಇನ್‌ಫ್ಲೂಯನ್ಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಕೆಳಕಂಡಂತಿವೆ:

**1ನೇ ರೇಸ್:** ಡಾಕ್ಟರ್ ಆ್ಯಶ್ 1, ಅಕಂಥ 3, ರಿಯಲ್ ಹ್ಯಾಪಿನೆಸ್ 8

**2ನೇ ರೇಸ್:** ರಾಯಲ್ ಜ್ಯೂಯಲ್ 1, ಸುಪ್ರೀಂ ಸಕ್ಸಸ್ 4, ಮ್ಯಾಗ್ನಾಕಾರ್ಟ್ 3

**3ನೇ ರೇಸ್:** ಎಕ್ಸೀಡ್ 2, ಅಮೇಜಿಂಗ್ ಸ್ಟ್ರೈಡ್ 3, ಸ್ಟೆಂಟೋರಿಯನ್ 6

**4ನೇ ರೇಸ್:** ಗ್ಲೋಬಲ್ ಇನ್‌ಫ್ಲೂಯನ್ಸ್ 2, ರಿಕಾರ್ಡೊ 1, ಸ್ಟಾರ್ ಗ್ಲೋರಿ 4

**5ನೇ ರೇಸ್:** ಫ್ಲೇವಿಯನಸ್ 5, ಕ್ವಾನ್ನಾ 6, ಶ್ರಿಷ್ಠಿ 8

**6ನೇ ರೇಸ್:** ಸೋಲಾರ್ 3, ಡೇರಿಂಗ್ಟನ್ 1, ಬಿಗ್ ಬಿ 4

**ಉತ್ತಮ ಬೆಟ್: ರಾಯಲ್ ಜ್ಯೂಯಲ್**

| ಜಾಕ್‌ಪಾಟ್‌ಗೆ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 2,3,4,5,6 | 1,2,3 | 4,5,6 |

## ತಿಂಗಳ ಕವಾಯತಿನಲ್ಲಿ ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್

# ‘ದೂರಿಗೆ ಸ್ಪಂದಿಸದಿದ್ದರೆ ಠಾಣೆ ಮುಖ್ಯಸ್ಥರ ವಿರುದ್ಧ ಕ್ರಮ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ದೂರುದಾರರಿಗೆ ಸ್ಪಂದಿಸದಿದ್ದರೆ ಆಯಾ ಪೊಲೀಸ್ ಠಾಣೆಯ ಮುಖ್ಯಸ್ಥರ ವಿರುದ್ಧವೇ ಕ್ರಮ ಕೈಗೊಳ್ಳಲಾಗುವುದು’ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಎಚ್ಚರಿಕೆ ನೀಡಿದರು.

ನಗರದ ಥಣಿಸಂದ್ರದಲ್ಲಿ ಇರುವ ಉತ್ತರ ನಗರ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ಶುಕ್ರವಾರ ನಡೆದ ತಿಂಗಳ ಕವಾಯತಿನಲ್ಲಿ ಗೌರವ ವಂದನೆ ಸ್ವೀಕರಿಸಿ ಅವರು ಮಾತನಾಡಿದರು.

‘ಠಾಣೆಗೆ ಪ್ರತಿನಿತ್ಯ ಹಲವು ವಿಷಯಗಳಿಗೆ ಸಂಬಂಧಿಸಿದ ದೂರುಗಳು ಬರುತ್ತವೆ. ಆ ದೂರುಗಳಿಗೆ ಠಾಣೆಯ ಮುಖ್ಯಸ್ಥರು ಸಕಾಲದಲ್ಲಿ ಸ್ಪಂದಿಸಬೇಕು. ಠಾಣೆಯ ಮುಖ್ಯಸ್ಥರು ಕಾನೂನಿಗೆ ಅನುಗುಣವಾಗಿ ಕೆಲಸ ಮಾಡಿದರೆ, ಎಲ್ಲವೂ ಸರಿ ಇರುತ್ತದೆ. ಅಲ್ಲದೇ ನೊಂದವರಿಗೆ ನ್ಯಾಯ ಕಲ್ಪಿಸುವ ಕೆಲಸ ಮಾಡಬೇಕು’ ಎಂದು ಹೇಳಿದರು.

‘ಠಾಣೆಯ ಕೆಲಸ ಕಾರ್ಯಗಳ ಬಗ್ಗೆ ಕೆಲವು ದೂರುಗಳು ಕೇಳಿ ಬರುತ್ತಿವೆ. ಲೋಪದೋಷಗಳೂ ಪತ್ತೆ ಆಗಿವೆ. ದೂರು ಕೊಡಲು ಠಾಣೆಗೆ ಹೋದಾಗ, ಕೆಲವು ಠಾಣಾಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂಬ ಆಪಾದನೆ ಇವೆ. ಮುಂದಿನ ದಿನಗಳಲ್ಲಿ ಆ ರೀತಿಯ ದೂರು ಬಾರದಂತೆ ನಿಗಾ ವಹಿಸಬೇಕು’ ಎಂದರು.

‘ದೂರುದಾರರಿಗೆ ಠಾಣಾಧಿಕಾರಿಗಳು ಸ್ಪಂದಿಸದಿದ್ದರೆ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡುತ್ತಾರೆ. ಇದು ಆಗಬಾರದು. ಡಿಸಿಪಿ ಮತ್ತು ಎಸಿಪಿಗಳು ಪ್ರತಿ ಠಾಣೆಗಳಿಗೂ ಭೇಟಿ ನೀಡಿ ಪರಿಶೀಲಿಸಬೇಕು’ ಎಂದು ಸೂಚಿಸಿದರು.

‘ಪೊಲೀಸ್ ಇಲಾಖೆಯು ನಗರದಲ್ಲಿ ‘ನಮ್ಮ 112’ ಸೇವೆಯಲ್ಲಿ ಬಹುಭಾಷಾ ವ್ಯವಸ್ಥೆ ಜಾರಿಗೆ ತಂದಿದೆ. ಅದು ಉತ್ತಮವಾಗಿ ಕೆಲಸ ಮಾಡುತ್ತಿದೆ. ನಗರದಲ್ಲಿ ಶೇ 8ರಿಂದ 10ರಷ್ಟು ಅಪರಾಧ ಪ್ರಕರಣಗಳು ಕಡಿಮೆ ಆಗಿವೆ’ ಎಂದು ಹೇಳಿದರು.

ಥಣಿಸಂದ್ರದ ಸಶಸ್ತ್ರ ಮೀಸಲು ಪಡೆಯ ಕವಾಯತು ಮೈದಾನದಲ್ಲಿ ಶುಕ್ರವಾರ ಪೊಲೀಸ್ ತಂಡದ ಆಕರ್ಷಕ ಕವಾಯತು ನಡೆಯಿತು

## ಚಾಕು ತೋರಿಸಿ ದರೋಡೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಳಾಸ ಕೇಳುವ ನೆಪದಲ್ಲಿ ವ್ಯಕ್ತಿಯೊಬ್ಬರಿಗೆ ಚಾಕು ತೋರಿಸಿ ಬೆದರಿಸಿ ಚಿನ್ನಾಭರಣ ಹಾಗೂ ಮೊಬೈಲ್ ದೋಚಿ ಪರಾರಿಯಾಗಿದ್ದ ಇಬ್ಬರನ್ನು ಕೆ.ಆರ್.ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಮಮೂರ್ತಿ ನಗರದ ವಿವೇಕ್ (22) ಮತ್ತು ನಿಖಿಲ್ (19) ಬಂಧಿತರು. ಬಂಧಿತರಿಂದ ₹6 ಲಕ್ಷ ಮೌಲ್ಯದ 47 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ಬಿ.ಚನ್ನಸಂದ್ರ ನಿವಾಸಿ ಅಶೋಕ್ ಅವರು ದ್ವಿಚಕ್ರ ವಾಹನದಲ್ಲಿ ಕೆ.ಆರ್.ಪುರ ಪೆಟ್ರೋಲ್ ಬಂಕ್ ಬಳಿ ಹೋಗುತ್ತಿದ್ದರು. ಆಗ ಆರೋಪಿಗಳು ವಿಳಾಸ ಕೇಳುವ ನೆಪದಲ್ಲಿ ಅಡ್ಡ ಬಂದು ವಾಹನ ತಡೆದಿದ್ದರು. ನಂತರ, ಅಶೋಕ್ ಅವರ ಬೈಕ್‌ನ ಕೀ ಕಿತ್ತುಕೊಂಡಿದ್ದರು. ಬಳಿಕ ಚಾಕು ತೋರಿಸಿ ಬೆದರಿಸಿದ್ದರು. ಬೈಕ್‌ನಲ್ಲಿ ಕೂರಿಸಿಕೊಂಡು ಚನ್ನಸಂದ್ರದ ಅರಣ್ಯ ಪ್ರದೇಶಕ್ಕೆ ಕರೆದೊಯ್ದು ಚಿನ್ನಾಭರಣ, ಮೊಬೈಲ್ ದೋಚಿ ಪರಾರಿ ಆಗಿದ್ದರು. ಕೆ.ಆರ್.ಪುರ ಠಾಣೆ ಪೊಲೀಸರಿಗೆ ಅಶೋಕ್ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ.

**ಕಳ್ಳರ ಸೆರೆ:** ನಕಲಿ ಕೀ ಬಳಸಿ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಇಬ್ಬರನ್ನು ಶ್ರೀರಾಂಪುರ ಠಾಣೆಯ ಪೊಲೀಸರು ಬಂಧಿಸಿ 10 ದ್ವಿಚಕ್ರ ವಾಹನ ಜಪ್ತಿ ಮಾಡಿದ್ದಾರೆ. ತಮಿಳುನಾಡಿನ ಸಂಗಂ ಮುತ್ತು, ರಂಜಿತ್ ಕುಮಾರ್ ಬಂಧಿತರು. ಬಂಧಿತರಿಂದ 10 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ.

ಆರೋಪಿಗಳಿಬ್ಬರೂ ನಗರದ ವಿವಿಧೆಡೆ ಸುತ್ತಾಟ ನಡೆಸಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದರು. ನಂತರ ಕದ್ದ ವಾಹನಗಳನ್ನು ಖಾಲಿ ಜಾಗದಲ್ಲಿ ನಿಲುಗಡೆ ಮಾಡಿದ್ದರು. ಬಳಿಕ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

## ವಿದೇಶ ಪ್ರಯಾಣಕ್ಕೆ ತೆರಿಗೆ ಇಲ್ಲ: ಮೋದಿ

**ನವದೆಹಲಿ (ಪಿಟಿಐ):** ವಿದೇಶ ಪ್ರಯಾಣದ ಮೇಲೆ ತೆರಿಗೆ ಅಥವಾ ಸೆಸ್ ಅಥವಾ ಹೆಚ್ಚುವರಿ ಶುಲ್ಕ ವಿಧಿಸುವ ಬಗ್ಗೆ ಕೇಂದ್ರ ಸರ್ಕಾರ ಚಿಂತನೆ ನಡೆಸುತ್ತಿದೆ ಎಂಬ ಮಾಧ್ಯಮ ವರದಿಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ನಿರಾಕರಿಸಿದ್ದಾರೆ.

‘ಈ ಕುರಿತ ವರದಿಗಳು ಸಂಪೂರ್ಣವಾಗಿ ಸುಳ್ಳು. ಅದರಲ್ಲಿ ಸ್ವಲ್ಪವೂ ಸತ್ಯಾಂಶ ಇಲ್ಲ. ವಿದೇಶ ಪ್ರಯಾಣಗಳ ಮೇಲೆ ಅಂಥ ನಿರ್ಬಂಧಗಳನ್ನು ಹೇರುವ ಪ್ರಶ್ನೆಯೇ ಇಲ್ಲ. ನಮ್ಮ ಜನರು ಸುಲಲಿತ ವ್ಯವಹಾರ ಮತ್ತು ಸುಲಭ ಜೀವನ ನಡೆಸುವಂತೆ ಮಾಡಲು ನಾವು ಯಾವತ್ತಿಗೂ ಬದ್ಧರಾಗಿರುತ್ತೇವೆ’ ಎಂದು ಮೋದಿ ಅವರು ‘ಎಕ್ಸ್’ ಮೂಲಕ ತಿಳಿಸಿದ್ದಾರೆ.

ಅಪರೂಪವೆಂಬಂತೆ, ಮಾಧ್ಯಮ ವರದಿಯೊಂದನ್ನು ಸ್ವತಃ ಪ್ರಧಾನಿಯವರೇ ನಿರಾಕರಿಸಿದ್ದಾರೆ.

## ಶಿವಂ ಅಸೋಸಿಯೇಟ್ಸ್ ಮೇಲೆ ದಾಳಿ ನಡೆಸಿದ್ದ ಪೊಲೀಸರು

# ಬಡ್ಡಿ ವ್ಯವಹಾರ: ನೀಲಣ್ಣವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಳಗಾವಿ:** ಅನಧಿಕೃತ ಬಡ್ಡಿ ವ್ಯವಹಾರ ಆರೋಪದಡಿ ಇಲ್ಲಿನ ಶಿವಂ ಅಸೋಸಿಯೇಟ್ಸ್ ಮಾಲೀಕ ಶಿವಾನಂದ ನೀಲಣ್ಣವರ ಅವರ ವಿರುದ್ಧ ಶುಕ್ರವಾರ ಎಫ್‌ಐಆರ್ ದಾಖಲಿಸಿ, ಬಂಧಿಸಲಾಯಿತು.

ಶಿವಾನಂದ ಅವರ ಮನೆ, ಕಚೇರಿ ಹಾಗೂ ವಿವಿಧ ಸ್ಥಳಗಳ ಮೇಲೆ ಗುರುವಾರ ನಸುಕಿನಲ್ಲೇ ಶೋಧ ಆರಂಭಿಸಲಾಯಿತು. ಶುಕ್ರವಾರ ಕೂಡ ಇಡೀ ದಿನ ದಾಖಲೆಗಳ ಪರಿಶೀಲನೆ ನಡೆಯಿತು. ಮಧ್ಯಾಹ್ನ ಶಿವಾನಂದ ಅವರನ್ನು ಕರೆದೊಯ್ದ ಪೊಲೀಸರು ವಿಚಾರಣೆ ನಡೆಸಿ, ರಾತ್ರಿ 8ಕ್ಕೆ ಪ್ರಕರಣ ದಾಖಲಿಸಿದರು.

ದಾಳಿ ಮಾಡಿದ ಉಪವಿಭಾಗಾಧಿಕಾರಿ ನೇತೃತ್ವದ ತಂಡ 24 ತಾಸು ತಪಾಸಣೆ ನಡೆಸಿದೆ. ಈ ವೇಳೆ ಹಣದ ವಹಿವಾಟಿಗೆ ಸಂಬಂಧಿಸಿದ ನೂರಾರು ದಾಖಲೆಗಳನ್ನು ಪರಿಶೀಲಿಸಲಾಗಿದೆ ಎನ್ನಲಾಗಿದೆ.

ಶಿವಾನಂದ ಅವರು ದಶಕಗಳಿಂದ ಹೂಡಿಕೆ ವ್ಯವಹಾರ ನಡೆಸುತ್ತಿದ್ದರೂ ಯಾರ ಗಮನಕ್ಕೂ ಇರಲಿಲ್ಲ. ಆದರೆ, ಕಡೂರಿನಲ್ಲಿ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಆಡಿದ ಮಾತುಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ‘ದೊಡ್ಡ ಸಾಮ್ರಾಜ್ಯ ಕಟ್ಟಿದ್ದೇನೆ. ಯಾರಿಗೂ ಹೆದರುವುದಿಲ್ಲ. ನನ್ನ ಬಳಿ 15 ಸಾವಿರ ಬಂದೂಕುಗಳಿವೆ. ಬೇಕಾದರೆ ನಾನು 2028ಕ್ಕೆ ಸಿ.ಎಂ ಆಗಿ ತೋರಿಸಲೇನು’ ಎಂದೆಲ್ಲ ಹೇಳಿಕೊಂಡಿದ್ದರು.

ಅನಧಿಕೃತವಾಗಿ ಬೃಹತ್ ಮೊತ್ತದ ಬಡ್ಡಿ ವ್ಯವಹಾರ ನಡೆಸಿದ ಆರೋಪದಡಿ ಬೆಳಗಾವಿಯ ಶಿವಂ ಅಸೋಸಿಯೇಟ್ಸ್‌ನ ಮಾಲೀಕ ಶಿವಾನಂದ ನೀಲಣ್ಣವರ ಅವರನ್ನು ಪೊಲೀಸರು ಶುಕ್ರವಾರ ವಿಚಾರಣೆಗೆ ಕರೆದೊಯ್ದರು

ಮೇ 17ರಂದು 20 ಸಾವಿರ ಜನರನ್ನು ಸೇರಿಸಿ ಬೆಳಗಾವಿ ನಗರದ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಇದರ ಕಟೌಟ್‌ಗಳು ನಗರದಲ್ಲಿ ರಾರಾಜಿಸಿದ್ದವು. ಎಚ್ಚೆತ್ತುಕೊಂಡ ಅಧಿಕಾರಿಗಳು ನೀಲಣ್ಣವರ ಮನೆ, ಕಚೇರಿ ಮೇಲೆ ದಾಳಿ ಮಾಡಿದರು. 17ರ ಕಾರ್ಯಕ್ರಮ ರದ್ದು ಮಾಡಿದ ಪಾಲಿಕೆ ಅಧಿಕಾರಿಗಳು ಪೋಸ್ಟರುಗಳನ್ನು ತೆರವು ಮಾಡಿದರು.

**ಹಿನ್ನೆಲೆ:** ಶಿವಾನಂದ ಅವರು ಹುಬ್ಬಳ್ಳಿಯ ಉಣಕಲ್ ಮೂಲದವರು. ಇವರ ತಂದೆ ಸೇನೆಯಲ್ಲಿದ್ದರು. ನಿವೃತ್ತಿ ಬಳಿಕ ಕೆಇಬಿಯಲ್ಲಿ ಕೆಲಸ ಮಾಡುತ್ತಿದ್ದಾಗ ನಿಧನರಾದರು. ಆ ನೌಕರಿ ಶಿವಾನಂದ ಸೋದರರೊಬ್ಬರಿಗೆ ಸಿಕ್ಕಿದೆ. ಅವರಿಗೆ ಬೆಳಗಾವಿಗೆ ವರ್ಗವಾದಾಗ ಇಡೀ ಕುಟುಂಬ ಇಲ್ಲಿಗೆ ಬಂತು.

ದ್ವಿತೀಯ ಪಿಯು ಓದಿರುವ ಶಿವಾನಂದ ಆರಂಭದಲ್ಲಿ ಮೆಡಿಕಲ್ ಕಾಲೇಜಿನಲ್ಲಿ ಸಿಪಾಯಿ ಕೆಲಸ ಮಾಡುತ್ತಿದ್ದರು. 2004ರಿಂದ 2006ರವರೆಗೆ ಆಟೊದಲ್ಲಿ ಫ್ರಿಜ್ ಇಟ್ಟುಕೊಂಡು ಐಸ್ ಕ್ರೀಮ್ ಮಾರಿದ್ದರು. ಮುಂದೆ ಐಸ್ ಕ್ರೀಮ್ ಕಾರ್ಖಾನೆ ಹಾಕಿದ್ದರು. 2012ರ ನಂತರ ಶಿವಂ ಅಸೋಸಿಯೇಟ್ಸ್ ಎಂಬ ಹೂಡಿಕೆ ಸಂಸ್ಥೆ ಆರಂಭಿಸಿದರು.

‘ಅಕ್ಯೂಮೆನ್’ ಆ್ಯಪ್ ಅಭಿವೃದ್ಧಿಪಡಿಸಿ, ಅದರ ಮೂಲಕ ಜನರಿಂದ ಹಣ ಹೂಡಿಕೆ ಮಾಡಿಕೊಳ್ಳಲು ಆರಂಭಿಸಿದ್ದರು. ಈ ಆ್ಯಪ್ ಮೂಲಕ ಸಾವಿರಾರು ಕೋಟಿ ಹೂಡಿಕೆಯಾಗಿದೆ ಎಂಬ ಮಾಹಿತಿ ಕೂಡ ಮೂಲಗಳಿಂದ ಸಿಕ್ಕಿದೆ.

## 48 ವಸ್ತುಗಳಿರುವ ಕಿಟ್‌ನ ಮೌಲ್ಯ ₹21 ಸಾವಿರ

# ಸತ್ಯಸಾಯಿ ಗುರುಕುಲ ವಿದ್ಯಾರ್ಥಿಗಳಿಗೆ ಕಿಟ್

ಪ್ರಜಾವಾಣಿ ವಾರ್ತೆ

**ಚಿಕ್ಕಬಳ್ಳಾಪುರ:** ಬಡ ಹಾಗೂ ಗ್ರಾಮೀಣ ಕುಟುಂಬಗಳ ಮಕ್ಕಳ ಶಿಕ್ಷಣಕ್ಕೆ ಆರ್ಥಿಕ ಅಡೆತಡೆ ಉಂಟಾಗಬಾರದು ಎಂಬ ಉದ್ದೇಶದಿಂದ ಸತ್ಯಸಾಯಿ ಲೋಕಸೇವಾ ಗುರುಕುಲದಿಂದ ಜಿಲ್ಲೆಯ ವಿವಿಧ ಕ್ಯಾಂಪಸ್‌ಗಳಲ್ಲಿ 454 ವಿದ್ಯಾರ್ಥಿಗಳಿಗೆ ಶುಕ್ರವಾರ ಉಚಿತ ‘ಜಾಯಿನಿಂಗ್ ಕಿಟ್’ ವಿತರಿಸಲಾಯಿತು.

ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಕಿಟ್‌ನಲ್ಲಿ ಐದು ಜೊತೆ ಸಮವಸ್ತ್ರ, ಟಿ-ಶರ್ಟ್, ಟ್ರಾಲಿ ಬ್ಯಾಗ್, ಸ್ವೆಟರ್, ಬ್ಲಾಂಕೆಟ್, ಹಾಸಿಗೆ, ಬೆಡ್‌ಶೀಟ್, ಬ್ರಶ್, ಜಮಖಾನ, ಶೂ ಹಾಗೂ ಮೂರು ಜೋಡಿ ಜುಬ್ಬಾ-ಪೈಜಾಮ್ ಸೇರಿದಂತೆ ಹಾಸ್ಟೆಲ್ ಜೀವನಕ್ಕೆ ಅಗತ್ಯವಾದ 48 ವಸ್ತುಗಳಿವೆ. ಒಂದು ಕಿಟ್‌ನ ಮೌಲ್ಯ ₹21,200 ಎಂದು ಸಂಸ್ಥೆ ತಿಳಿಸಿದೆ.

ತಾಲ್ಲೂಕಿನ ಮುದ್ದೇನಹಳ್ಳಿ ಕ್ಯಾಂಪಸ್‌ನಲ್ಲಿ 250 ವಿದ್ಯಾರ್ಥಿಗಳಿಗೆ, ಪಿಬಿಎಂ ಕ್ಯಾಂಪಸ್‌ನಲ್ಲಿ 115 ಹಾಗೂ ಎನ್‌ಕೆಎಚ್ ಕ್ಯಾಂಪಸ್‌ನಲ್ಲಿ 89 ವಿದ್ಯಾರ್ಥಿಗಳಿಗೆ ಕಿಟ್ ಹಂಚಲಾಯಿತು. ರಾಜ್ಯದ 24 ಕ್ಯಾಂಪಸ್‌ಗಳಲ್ಲಿ ಒಟ್ಟು 2,377 ವಿದ್ಯಾರ್ಥಿಗಳಿಗೆ ಕಿಟ್‌ಗಳನ್ನು ವಿತರಿಸಲಾಗಿದೆ.

ಈ ವರ್ಷ ಕ್ರಿಕೆಟ್ ಅಕಾಡೆಮಿಗೆ ಹೊಸದಾಗಿ 14 ವಿದ್ಯಾರ್ಥಿಗಳು ಸೇರ್ಪಡೆಯಾಗಿದ್ದು, ಒಟ್ಟು 32 ಕ್ರೀಡಾ ವಿದ್ಯಾರ್ಥಿಗಳಿಗೆ ಹಾಗೂ ವೇದ ಗುರುಕುಲದ 16 ವಿದ್ಯಾರ್ಥಿಗಳಿಗೂ ಕಿಟ್ ವಿತರಿಸಲಾಯಿತು.

ಸಂಸ್ಥೆಯ ವಾರ್ಡನ್ ಶಿವಕೋಟಿ ಸಾಯಿ ಕೌಶಲ್ ಅವರು ಮಾತನಾಡಿ, ‘ಪೋಷಕರು ತಮ್ಮ ಮಕ್ಕಳನ್ನು ಎರಡು ಜೋಡಿ ಬಟ್ಟೆಯೊಂದಿಗೆ ಗುರುಕುಲಕ್ಕೆ ಕಳುಹಿಸಿದರೆ ಸಾಕು. ಉಳಿದ ಎಲ್ಲ ಅಗತ್ಯ ವಸ್ತುಗಳನ್ನು ಗುರುಕುಲವೇ ನೀಡುತ್ತದೆ’ ಎಂದು ಹೇಳಿದರು.

ಮುದ್ದೇನಹಳ್ಳಿಯ ಸತ್ಯಸಾಯಿ ಲೋಕಸೇವಾ ಗುರುಕುಲಕ್ಕೆ ಹೊಸದಾಗಿ ಸೇರ್ಪಡೆಯಾದ 6ನೇ ತರಗತಿ ವಿದ್ಯಾರ್ಥಿಗಳೊಂದಿಗೆ ವಾರ್ಡನ್ ಶಿವಕೋಟಿ ಸಾಯಿ ಕೌಶಲ್

‘ನನ್ನ ಮಗ ಶಣವ್‌ಗೆ ಈ ಗುರುಕುಲದಲ್ಲಿ ಪ್ರವೇಶ ದೊರೆತಿರುವುದು ಸಂತೋಷ ತಂದಿದೆ. ಇಲ್ಲಿನ ಮೌಲ್ಯಯುತ ಉಚಿತ ಶಿಕ್ಷಣದ ಬಗ್ಗೆ 15 ವರ್ಷಗಳಿಂದ ಕೇಳುತ್ತಿದ್ದೆ. ನನ್ನ ಕನಸು ಇಂದು ನನಸಾಗಿದೆ’ ಎಂದು ವಿದ್ಯಾರ್ಥಿಯ ಪೋಷಕಿ ತೀರ್ಥಕುಮಾರಿ ಹೇಳಿದರು.

ಕಿಟ್ ವಿತರಣಾ ಕಾರ್ಯಕ್ರಮದಲ್ಲಿ ಮುದ್ದೇನಹಳ್ಳಿ ಗುರುಕುಲದ ಚೇರ್‌ಮನ್ ಡಾ. ನಿಕೇತನ್ ಟಿ.ಸಿ., ವಾರ್ಡನ್ ಶಿವಕೋಟಿ ಸಾಯಿ ಕೌಶಲ್, ಚಿಕ್ಕಬಳ್ಳಾಪುರದ ಜೈ ಫೌಂಡೇಶನ್ ಅಧ್ಯಕ್ಷ ಜಯಕುಮಾರ್ ಹಾಗೂ ತ್ಯಾಗಜೀವಿ ವಾಸುದೇವ್ ಉಪಸ್ಥಿತರಿದ್ದರು.

# ‘ನನ್ನ ಜಿಲ್ಲೆಯಲ್ಲೇ ಕೆಲಸ ಆಗುತ್ತಿಲ್ಲ’

## ಉಪವಿಭಾಗಾಧಿಕಾರಿ ಕಿರಣ್ ವಿರುದ್ಧ ಕಂದಾಯ ಸಚಿವ ಕೃಷ್ಣ ಬೈರೇಗೌಡ ಕಿಡಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನಾನು ಪ್ರತಿನಿಧಿಸುವ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ತಕರಾರು ಪ್ರಕರಣಗಳು ವಿಲೇ ಆಗುತ್ತಿಲ್ಲ. ಜನ ನನ್ನನ್ನು ಪ್ರಶ್ನಿಸುತ್ತಾರೆ. ಅಧಿಕಾರಿ ಮಾಡುವ ತಪ್ಪಿಗೆ ನಾನು ತಲೆ ತಗ್ಗಿಸುವಂತಾಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ರಾಜ್ಯದ ಎಲ್ಲ ಉಪ ವಿಭಾಗಾಧಿಕಾರಿಗಳ ಜತೆ ವಿಡಿಯೊ ಸಂವಾದದ ಮೂಲಕ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿ ಅಸಹಾಯಕತೆ ವ್ಯಕ್ತಪಡಿಸಿದರು.

‘ಉತ್ತರ ಜಿಲ್ಲೆಯ ವಿಶೇಷ ಉಪ ವಿಭಾಗಾಧಿಕಾರಿಗಳು ತಮಗೆ ವಹಿಸಿದ ಜವಾಬ್ದಾರಿಯನ್ನು ಅತ್ಯುತ್ತಮವಾಗಿ ನಿರ್ವಹಿಸುತ್ತಿದ್ದಾರೆ. ಆದರೆ, ಉಪ ವಿಭಾಗಾಧಿಕಾರಿ ಕಿರಣ್ ಮಾತ್ರ ಆದೇಶಕ್ಕಾಗಿ ಕಾಯ್ದಿರಿಸಿದ ಪ್ರಕರಣಗಳನ್ನೂ ವಿಲೇ ಮಾಡುತ್ತಿಲ್ಲ. ಪರಿಣಾಮ ಜನ ಸಾಮಾನ್ಯರು ಪ್ರತಿನಿತ್ಯ ನನ್ನ ಮನೆಗೆ ಬಂದು ನನ್ನನ್ನು ಪ್ರಶ್ನಿಸುತ್ತಿದ್ದಾರೆ. ಯಾರೋ ಒಬ್ಬ ಅಧಿಕಾರಿ ಮಾಡುವ ತಪ್ಪಿಗೆ ಜನರ ಎದುರು ನಾನು ತಲೆ ತಗ್ಗಿಸುವಂತಾಗಿದೆ. ಇಂತಹ ಅಧಿಕಾರಿಗಳಿಂದಾಗಿ ಒಳ್ಳೆಯ ಕೆಲಸ ಮಾಡುವ ಅಧಿಕಾರಿಗಳಿಗೂ ಕೆಟ್ಟ ಹೆಸರು ಬರುತ್ತದೆ’ ಎಂದು ಕಿಡಿಕಾರಿದರು.

‘ಅತಿ ಹೆಚ್ಚು ಪ್ರಕರಣಗಳು ಬಾಕಿ ಇದ್ದ ತುಮಕೂರು, ದೊಡ್ಡಬಳ್ಳಾಪುರ, ತರೀಕೆರೆ, ಕೋಲಾರ ಸೇರಿದಂತೆ ಹಲವು ಉಪ ವಿಭಾಗಾಧಿಕಾರಿ(ಎ.ಸಿ) ವಲಯಗಳು ಪ್ರಸ್ತುತ ಸುಧಾರಣೆ ಕಂಡಿವೆ. ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಹಲವು ಪ್ರಕರಣಗಳು ಬಾಕಿ ಇವೆ’ ಎಂದರು.

ರಾಜ್ಯದ ವಿವಿಧ ಉಪ ವಿಭಾಗಾಧಿಕಾರಿಗಳ (ಎ.ಸಿ) ನ್ಯಾಯಾಲಯಗಳಲ್ಲಿ ಬಾಕಿ ಇದ್ದ ತಕರಾರು ಪ್ರಕರಣಗಳ ಪೈಕಿ ಶೇ 90ಕ್ಕೂ ಹೆಚ್ಚು ಪ್ರಕರಣಗಳನ್ನು ಮೂರು ವರ್ಷಗಳಲ್ಲಿ ಇತ್ಯರ್ಥ ಪಡಿಸಲಾಗಿದೆ ಎಂದರು.

ಸಚಿವ ಕೃಷ್ಣ ಬೈರೇಗೌಡ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ವಿಡಿಯೊ ಸಂವಾದದ ಮೂಲಕ ಪ್ರಗತಿ ಪರಿಶೀಲನಾ ಸಭೆ ನಡೆಸಿದರು

‘ಮೂರು ವರ್ಷಗಳ ಹಿಂದೆ ನಾನು ಕಂದಾಯ ಇಲಾಖೆ ಜವಾಬ್ದಾರಿ ಸ್ವೀಕರಿಸಿದ ವೇಳೆ ರಾಜ್ಯವ್ಯಾಪಿ ಸುಮಾರು 73,624 ಅವಧಿ ಮೀರಿದ ತಕರಾರು ಪ್ರಕರಣಗಳು ಬಾಕಿ ಇದ್ದವು. ಇದಕ್ಕೆ ಹತ್ತಾರು ವರ್ಷಗಳ ದುರಾಡಳಿತವೇ ಕಾರಣ. ಪರಿಣಾಮ ಜನ ಸಾಮಾನ್ಯರು ಅನಗತ್ಯವಾಗಿ ಸರ್ಕಾರಿ ಕಚೇರಿಗಳಿಗೆ ಅಲೆಯುವಂತಾಗಿತ್ತು. ಆದರೆ, ಆ ಸಂಖ್ಯೆಯನ್ನು ಇದೀಗ 7,490 ಕ್ಕೆ ಇಳಿಸಿದ್ದೇವೆ. ಆ ಮೂಲಕ ಶೇ 90 ಕ್ಕೂ ಹೆಚ್ಚು ಪ್ರಕರಣಗಳಿಗೆ ಮುಕ್ತಿ ಸಿಕ್ಕಿದೆ. ಮುಂದಿನ ದಿನಗಳಲ್ಲಿ ಉಳಿದಿರುವ ಪ್ರಕರಣಗಳನ್ನೂ ಶೀಘ್ರವಾಗಿ ಇತ್ಯರ್ಥಪಡಿಸಬೇಕು’ ಎಂದು ಸೂಚನೆ ನೀಡಿದರು.

‘ಅಧಿಕಾರಿಗಳ ಸಹಕಾರದಿಂದ 3 ವರ್ಷದಲ್ಲಿ ನ್ಯಾಯಾಲಯ ಪ್ರಕರಣ, ಪೌತಿ ಖಾತೆ, ಪೋಡಿ ದುರಸ್ತಿ, ಆರ್‌ಟಿಸಿ ತಿದ್ದುಪಡಿ, ಆಧಾರ್ ಸೀಡಿಂಗ್, ಇ-ಆಫೀಸ್ ಸೇರಿದಂತೆ ಕಂದಾಯ ಇಲಾಖೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಇನ್ನಷ್ಟು ಕೆಲಸ ಬಾಕಿಯಿದೆ. ಹೀಗಾಗಿ ಅಧಿಕಾರಿಗಳು ಮತ್ತಷ್ಟು ಜನಪರವಾಗಿ ಕಾರ್ಯ ನಿರ್ವಹಿಸಬೇಕು’ ಎಂದು ಸೂಚಿಸಿದರು.

ಸಭೆಯಲ್ಲಿ ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿ (ಕಂದಾಯ ಇಲಾಖೆ) ರಾಜೇಂದ್ರ ಕುಮಾರ್ ಕಟಾರಿಯಾ, ಹಿರಿಯ ಅಧಿಕಾರಿಗಳಾದ ಆಮ್ಲನ್ ಆದಿತ್ಯ ಬಿಸ್ವಾಸ್, ಮುಲ್ಲೈ ಮುಗಿಲನ್ ಪಾಲ್ಗೊಂಡಿದ್ದರು.

# ‘ಸರ್ಕಾರವೇ ಬಸವಾದಿ ಶರಣರ ಹಿಂದೂ ಸಮಾವೇಶ ತಡೆಯಲಿ’

ಪ್ರಜಾವಾಣಿ ವಾರ್ತೆ

**ಶಹಾಪುರ (ಯಾದಗಿರಿ ಜಿಲ್ಲೆ):** ‘ಬಸವಾದಿ ಶರಣರ ಹಿಂದೂ ಸಮಾವೇಶ ನಡೆಸುತ್ತಿರುವ ಬಗ್ಗೆ ರಾಜ್ಯ ಸರ್ಕಾರ ಮೌನವಾಗಿ ಇರುವುದು ಸರಿಯಲ್ಲ. ಸರ್ಕಾರವೇ ಮುಂದೆ ನಿಂತು ಈ ಸಮಾವೇಶಕ್ಕೆ ತಡೆಯೊಡ್ಡಬೇಕು’ ಎಂದು ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಹೇಳಿದರು.

ಶುಕ್ರವಾರ ಇಲ್ಲಿ ಜರುಗಿದ ಬಸವಾದಿ ಶರಣರ ಜಾಗೃತಿ ಸಮಾವೇಶದಲ್ಲಿ ಅವರು, ‘ಬಸವಾದಿ ಶರಣರ ಹಿಂದೂ ಸಮಾವೇಶದ ಮುಖೇನ ಬಸವಣ್ಣನ ವಚನಗಳ ಬಗ್ಗೆ ಅಪಪ್ರಚಾರ ಮಾಡಲಾಗುತ್ತಿದೆ. ಸೂಫಿ ಸಂತರ ನಾಡಿನಲ್ಲಿ ಮನುವಾದಿ, ದುಷ್ಟ ಶಕ್ತಿಗಳು ಲಗ್ಗೆ ಇಟ್ಟು ಯುವಕರಲ್ಲಿ ದ್ವೇಷ,ಮತೀಯ ಹಾಗೂ ಕೋಮು ಭಾವನೆ ಬಿತ್ತುವುದನ್ನು ನಿಲ್ಲಿಸಲಿ’ ಎಂದರು.

‘ಹಿಂದೂ ನಾವೆಲ್ಲರೂ ಒಂದು ಎನ್ನುವ ಮಠಾಧೀಶರು ತಮ್ಮ ಮಠಗಳಲ್ಲಿ ಸಹಪಂಕ್ತಿ ಭೋಜನ, ಗುಡಿ ಗುಂಡಾರಗಳಿಗೆ ಇವತ್ತಿಗೂ ಶೋಷಿತರಿಗೆ ಮುಕ್ತ ಪ್ರವೇಶ ಕೊಡುತ್ತಿಲ್ಲ. ಕೃಷಿ ಬಗ್ಗೆ ಮಾತನಾಡುವ ಕನ್ಹೇರಿಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ಅವರು ಸ್ವಾಮಿನಾಥನ್ ಆಯೋಗ, ರೈತ ವಿರೋಧಿ ಕಾಯ್ದೆಗಳ ಕುರಿತು ಮಾತನಾಡುವುದಿಲ್ಲ. ಅಂತಹವರು ಸಮಾವೇಶಕ್ಕೆ ಬಂದು ಏನು ಮಾತನಾಡುವರು’ ಎಂದು ಕೇಳಿದರು.

‘ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವ್ಯಕ್ತಿ ಪೂಜೆ ಅಪಾಯಕಾರಿ ಬೆಳವಣಿಗೆ. ಧರ್ಮದ ಆಧಾರದ ಮೇಲೆ ರಾಜಕೀಯ ಷಡ್ಯಂತ್ರ ನಡೆಯಿಸಿ ರಾಜಕೀಯ ತೆವಲು ತೀರಿಸಿಕೊಳ್ಳುತ್ತಿದ್ದಾರೆ. ರಾಜಕೀಯ ಪಕ್ಷಗಳಿಗೆ ಬಸವಣ್ಣ ಎಟಿಎಂ ಆಗಿದ್ದಾರೆ. ವಚನಗಳನ್ನು ತಿರುಚುವ ದುಷ್ಟಶಕ್ತಿಗಳನ್ನು ಮಟ್ಟಹಾಕಬೇಕು’ ಕರೆ ನೀಡಿದರು.

ಇದಕ್ಕೂ ಮುನ್ನ ಬಸವೇಶ್ವರ ವೃತ್ತದಿಂದ ಸಿಪಿಎಸ್ ಶಾಲಾ ಮೈದಾನದವರೆಗೆ ನಡೆದ ಮೆರವಣಿಗೆಯಲ್ಲಿ ಹಲವರು ಬಸವ ಟೋಪಿ ಹಾಕಿಕೊಂಡು, ಷಟಸ್ಥಲ ಧ್ವಜ ಹಿಡಿದು ಸಾಗಿದರು.

# ದೇವೇಗೌಡ ಮತ್ತೆ ರಾಜ್ಯಸಭೆಗೆ: ಜೆಡಿಎಸ್ ಕಸರತ್ತು

ನಿತಿನ್ ನವೀನ್ ಅವರಿಗೆ ಎಚ್‌.ಡಿ.ಕುಮಾರಸ್ವಾಮಿ ಅವರು ಹೂಗುಚ್ಛ ನೀಡಿದರು

ಪ್ರಜಾವಾಣಿ ವಾರ್ತೆ

**ನವದೆಹಲಿ:** ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರನ್ನು ಶುಕ್ರವಾರ ಇಲ್ಲಿ ಭೇಟಿ ಮಾಡಿ ಸಮಾಲೋಚಿಸಿದರು.

ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ಸೇರಿ ನಾಲ್ವರು ರಾಜ್ಯಸಭಾ ಸದಸ್ಯರ ಅವಧಿ ಜೂನ್‌ನಲ್ಲಿ ಮುಗಿಯಲಿದೆ. 93ರ ಹರೆಯದ ದೇವೇಗೌಡರು ಮತ್ತೊಂದು ಅವಧಿಗೆ ರಾಜ್ಯಸಭೆ ಪ್ರವೇಶಿಸಲು ಕಾತರರಾಗಿದ್ದಾರೆ. ಆದರೆ, ಜೆಡಿಎಸ್‌ಗೆ ಸಂಖ್ಯಾಬಲ ಇಲ್ಲ. ಕಾಂಗ್ರೆಸ್ ಮೂರು ಸ್ಥಾನಗಳನ್ನು ಸುಲಭವಾಗಿ ಗೆಲ್ಲಲಿದ್ದು, ಇನ್ನೊಂದು ಸ್ಥಾನ ಗೆಲ್ಲುವಷ್ಟು ಸಂಖ್ಯಾಬಲವನ್ನು ಬಿಜೆಪಿ ಹೊಂದಿದೆ. ಈ ಸ್ಥಾನವನ್ನು ಜೆಡಿಎಸ್‌ಗೆ ಬಿಟ್ಟುಕೊಡುವುದಕ್ಕೆ ಬಿಜೆಪಿ ರಾಜ್ಯ ಘಟಕದ ತೀವ್ರ ವಿರೋಧ ಇದೆ.

ಈ ಕಾರಣದಿಂದಾಗಿ, ಕುಮಾರಸ್ವಾಮಿ ಅವರು ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿ ಮನವೊಲಿಸುವ ಕಸರತ್ತು ನಡೆಸಿದರು. ಜೆಡಿಎಸ್–ಬಿಜೆಪಿ ಸಮನ್ವಯ, ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಹಾಗೂ ರಾಜ್ಯಸಭಾ ಚುನಾವಣೆಯ ಮೈತ್ರಿ ಕಾರ್ಯತಂತ್ರದ ಕುರಿತು ಚರ್ಚಿಸಿದರು ಎಂದು ಮೂಲಗಳು ತಿಳಿಸಿವೆ.


**GBA ಪಾಲಿಕೆಗಳ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.,**
ರಾಜಾರಾಂ ಮೋಹನ್ ರಾಯ್ ರಸ್ತೆ, ಸಂಪಂಗಿರಾಮನಗರ ಬೆಂಗಳೂರು–560027.
ಮೊ : 8310164982 / 9448955596 / 9916031052

ನಾವು BMICAPA ಅನುಮೋದಿತ ಪ್ರೀಮಿಯಂ ವಸತಿ ಲೇಔಟ್ ಅನ್ನು ಕನಕಪುರ ರಸ್ತೆಯಲ್ಲಿ (ಇದು GBA ವ್ಯಾಪ್ತಿಗೆ ಒಳಪಟ್ಟಿದೆ) ಉಃಂ ಕಾರ್ಪೊರೇಷನ್ ಅಧಿಕಾರಿಗಳು ಮತ್ತು ನೌಕರರಿಗಾಗಿ ಸಮಂಜಸವಾದ ದರದಲ್ಲಿ ಅಭಿವೃದ್ಧಿಪಡಿಸುತ್ತಿದ್ದೇವೆ. ಸಾರ್ವಜನಿಕರಿಗೂ ಸಹ ಕೆಲವು ವಸತಿ ನಿವೇಶನಗಳು ಇದೀಗ ಲಭ್ಯವಿರುವುದಾಗಿ ಸಂತೋಷದಿಂದ ತಿಳಿಸುತ್ತೇವೆ.
ಬಡಾವಣೆ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಮಾರ್ಚ್ 2027ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.
ಈಗಾಗಲೇ ಕೆಲವು GBA ಕಾರ್ಪೊರೇಷನ್ ಅಧಿಕಾರಿಗಳು ಮತ್ತು ನೌಕರರು ನಿವೇಶನಗಳಿಗೆ ಮುಂಗಡ ಹಣವನ್ನು ಪಾವತಿಸಿದ್ದು, ಉಳಿದಂತೆ ಇನ್ಯಾರಾದರೂ GBA ಕಾರ್ಪೊರೇಷನ್ ಅಧಿಕಾರಿಗಳು, ನೌಕರರು ನಿವೇಶನ ಬೇಕಾಗಿದ್ದಲ್ಲಿ ಹಾಗೂ ಸಾರ್ವಜನಿಕರು ಸಹ ನಿವೇಶನ ಬೇಕಾಗಿದ್ದಲ್ಲಿ ಹೆಚ್ಚಿನ ಮಾಹಿತಿಗಾಗಿ ಮತ್ತು ಬುಕ್ಕಿಂಗ್‌ಗಾಗಿ ನಮ್ಮನ್ನು ಸಂಪರ್ಕಿಸಬಹುದು. ಹಾಗೂ ಖರೀದಿದಾರರು ನೇರವಾಗಿ ನಮ್ಮ ಕಚೇರಿಗೆ ಭೇಟಿ ನೀಡಬಹುದು ಅಥವಾ ಕರೆ ಮಾಡಬಹುದು.
ಅಧ್ಯಕ್ಷರು
GBA ಪಾಲಿಕೆಗಳ ನೌಕರರ
ಗೃಹ ನಿರ್ಮಾಣ ಸಹಕಾರ ಸಂಘ ನಿ.,(ರಿ)



**ಮಂಗಳೂರು ಮಹಾನಗರಪಾಲಿಕೆ**
DMA/2026-27/WORK INDENT NO.58145, 58107 ದಿನಾಂಕ: 14-05-2026
**ಅಲ್ಪಾವಧಿ ಟೆಂಡರ್ ಪ್ರಕಟಣೆ E-PROCUREMENT OF KARNATAKA**
ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: **DMA/2026-27/WORK INDENT NO.58145, 58107** ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 2 ಕಾಮಗಾರಿಗಳ ಒಟ್ಟು ಮೊತ್ತ **ರೂಪಾಯಿ 70.80 ಲಕ್ಷಗಳಾಗಿರುತ್ತದೆ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 25–05–2026 ಅಪರಾಹ್ನ 4.00 ಗಂಟೆ.** ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು,
ಮಂಗಳೂರು ಮಹಾನಗರಪಾಲಿಕೆ
DIPR/DK/KSMCA/209/26-27 dt: 15.05.2026



ಕರ್ನಾಟಕ ಸರ್ಕಾರ
**ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ**
**ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ**
ಬಿಎಂಟಿಸಿ, ಟಿಟಿಎಂಸಿ, ‘ಬಿ’ ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com, dult@karnataka.gov.in
ಸಂಖ್ಯೆ : DULT/4/2026 ದಿನಾಂಕ 15.05.2026
**ಬಿಡ್ ಸಲ್ಲಿಸಲು ಕೊನೆಯ ದಿನಾಂಕದ ವಿಸ್ತರಣೆಗಾಗಿ ಪ್ರಕಟಣೆ**
ನಗರ ಭೂ ಸಾರಿಗೆ ನಿರ್ದೇಶನಾಲಯ (DULT) ಕರ್ನಾಟಕದ ನಾಲ್ಕು ನಗರಗಳಾದ ಬೆಳಗಾವಿ, ಬೆಂಗಳೂರು, ಕಲಬುರಗಿ ಮತ್ತು ಮೈಸೂರು ವಿಭಾಗದ ಅಡಿಯಲ್ಲಿ ಆಯ್ದ ನಗರ ಪುರಸಭೆಗಳಿಗೆ ರಸ್ತೆ ದಾಸ್ತಾನು ಮತ್ತು ಮೊಬಿಲಿಟಿ ಯೋಜನೆಗಳನ್ನು ಸಿದ್ಧಪಡಿಸುವ ಸಿದ್ಧಪಡಿಸುವ ಸಲುವಾಗಿ ದಿನಾಂಕ: **18.04.2026**ರ ಅಧಿಸೂಚನೆಯಲ್ಲಿ ಪ್ರಕಟಣೆ ಮಾಡಲಾಗಿದ್ದು, ಈ ಕೆಳಕಂಡ ಟೆಂಡರ್‌ನಲ್ಲಿ ಇ–ಬಿಡ್‌ಗಳನ್ನು ಆಹ್ವಾನಿಸಲು ಕೊನೆಯ **ದಿನಾಂಕ: 22.05.2026, ಸಂಜೆ 5.30 ವರೆಗೂ** ವಿಸ್ತರಿಸಲಾಗಿರುತ್ತದೆ. ಸಂಬಂಧಪಟ್ಟ ಎಲ್ಲಾ ಬಿಡ್ಡುದಾರರು ಕರ್ನಾಟಕ ಸರ್ಕಾರದ ವೆಬ್‌ಸೈಟ್ **https://kppp.karnataka.gov.in** ನಿಂದ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
ಟೆಂಡರ್‌ಗಳ ಸಂಖ್ಯೆ ಈ ಕೆಳಕಂಡಂತಿವೆ:
ಬೆಳಗಾವಿ ವಿಭಾಗ - DULT/2026-27/SE0045
ಬೆಂಗಳೂರು ವಿಭಾಗ - DULT/2026-27/SE0046
ಕಲಬುರಗಿ ವಿಭಾಗ - DULT/2026-27/SE0047
ಮೈಸೂರು ವಿಭಾಗ - DULT/2026-27/SE0048
ಸಹಿ/– ಜಂಟಿ ನಿರ್ದೇಶಕರು (ಆಡಳಿತ)
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ
ವಾಸಾಸಂಇ/ವಾಪ್ರ/687/ಶಿರಡಿ ಸಾಯಿ/2026–27



**NMDC Limited**
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad-500028
Corporate Identity Number (CIN) – L13100TG1958GOI001674
**COMMERCIAL DEPARTMENT**
**NOTICE INVITING EXPRESSION OF INTEREST (EOI)**
**EOI No.:** HO(COMMERCIAL)/COM-II(95)/2026-27/01 **Dated:** 16.05.2026
NMDC Limited, A “NAVARATNA” Public Sector Company under Ministry of Steel, Govt. of India, invites **Expression of Interest** through **NMDC Portal/e-mail/post/courier** from End use customers/ Plants & Traders for entering into **LONG TERM AGREEMENTS (LTAs) FOR SUPPLY OF IRON ORE PELLETS** from Donimalai Pellet Plant at Karnataka.
The detailed Notice Inviting EOI can be viewed and / or downloaded from **16/05/2026** from following website links:
1. NMDC Corporate website (under Latest From NMDC, Recent notices) - **https://www.nmdc.co.in**
2. Central Public Procurement Portal (CPP PORTAL) **http://www.eprocure.gov.in/epublish/app**
The interested parties/firms are requested to submit their EOI online through **NMDC portal/post/courier**. The details of submission of EOI through online/ any mode given in Notice Inviting EOI. The interested parties/firms, may visit the NMDC's website / CPP Portal for corrigendum, if any, at a future date.
For further clarification, the following can be contacted:
M.Sukumar, Senior Manager (Commercial), NMDC Ltd., Hyderabad
Ph: +91-9963929995, email: **msukumar@nmdc.co.in, hocommercial@nmdc.co.in**
**For and on behalf of NMDC Ltd**
**Executive Director (Commercial)**



**ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)**
ದೂರವಾಣಿ: 08384-226338 ವೆಬ್‌ಸೈಟ್: www.sirsicity.mrc.gov.in
ಇ–ಮೇಲ್: comm_srs@yahoo.com
ನಂ. ನಸಶಿ/ಕಾವಿ/ಟೆಂಡರ/SFC UNTIED/ವಿವ–/2026–27 ದಿನಾಂಕ: 13.05.2026
**ಟೆಂಡರ್ ಪ್ರಕಟಣೆ**
ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮಾವಳಿ–2000 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಡಾಕ್ಯುಮೆಂಟ್ KW-1 ರ ನಿಬಂಧನೆಗೊಳಪಟ್ಟಂತೆ, Kpp Portal ನಲ್ಲಿ ರಜಿಸ್ಟ್ರೇಷನ್ ಮಾಡಿಸಿದ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರನ್ನು Kpp Portal ಮೂಲಕ ಕರೆಯಲಾಗಿದ್ದು, Kpp Portal ನಿಯಮಗಳ ಮತ್ತು ಟೆಂಡರು ಕರಾರುಗಳ ಅನ್ವಯ ಟೆಂಡರ್ ಫಾರ್ಮಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು.
(1) Kpp Portal ಮೂಲಕ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 29.05.2026 (ಸಂಜೆ 16.30 ಗಂಟೆವರೆಗೆ) (2) Kpp Portal ಮೂಲಕ ಟೆಂಡರ್ ಬಿಡ್ ತೆರೆಯುವ ದಿನಾಂಕ: 30.05.2026 (ಸಂಜೆ 17.00 ಗಂಟೆಗೆ) (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು).
ಕಾಮಗಾರಿ ಹೆಸರು ಹಾಗೂ ಇಂಡೆಂಟ್ ಸಂಖ್ಯೆ: (1) DMA/2026-27/RD/Work_INDENT58312, ಶಿರಸಿ ನಗರಸಭೆ ವ್ಯಾಪ್ತಿಯ ದೇವಿಕೆರೆಯ ಶಕ್ತಿ ಶೋ ರೂಮ್‌ನಿಂದ ಮಹಾಲಕ್ಷ್ಮೀ ಆಸ್ಪತ್ರೆವರೆಗೆ ರಸ್ತೆ ಅಭಿವೃದ್ಧಿಪಡಿಸುವುದು. (ಅಂದಾಜು ಮೊತ್ತ 10.50 ಲಕ್ಷಗಳು), ಟೆಂಡರಿಗಿಟ್ಟ ಮೊತ್ತ: ರೂ. 8.89 ಲಕ್ಷ, ಇ.ಎಮ್.ಡಿ. ಹಣ: ರೂ. 22225/– ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ: 60 ದಿನಗಳು, ಗುತ್ತಿಗೆದಾರರ ದರ್ಜೆ: ಅರ್ಹ ಸಿವಿಲ್ ಗುತ್ತಿಗೆದಾರರು.
ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು Kpp Portal ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಕಚೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.
ಸಹಿ/– ಪೌರಾಯುಕ್ತರು,
ನಗರಸಭೆ, ಶಿರಸಿ.
DIPR/KWR/KSMCA/127/26-27 dt. 14.05.2026



**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ** KEONICS ISO 9001 : 2008
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಸಂಖ್ಯೆ 59, 1ನೇ ಮಹಡಿ, ಕುಮಾರ ಪಾರ್ಕ್ ಪಶ್ಚಿಮ, ರೈಲ್ವೆ ಪ್ಯಾರಲಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560020
ನಂ: KSEDC/P113/2026-27 ದಿನಾಂಕ: 14.05.2026
**ಇ–ಟೆಂಡರ್ ಪ್ರಕಟಣೆ**
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ನಿಯಮದನ್ವಯ ಕೆಪಿಪಿ ಪೋರ್ಟಲ್ ಮುಖಾಂತರ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಮೆ: ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್), ಸಂಸ್ಥೆಯು **Short Term e- Auction tender document for Fund Management (E-Auction Notification, Eligibility Criteria and Terms and Conditions)** ಗಾಗಿ ಸಂಸ್ಥೆಗಳನ್ನು ಆಯ್ಕೆ ಮಾಡಲು 7 ದಿನಗಳ ಅವಧಿಗೆ ಓಪನ್ ಹರಾಜು ಪ್ರಕಟಣೆಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಬಿಡ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://kppp.karnataka.gov.in**ನಲ್ಲಿ ವಿವರವನ್ನು ಪಡೆಯಬಹುದು, ಹೆಚ್ಚಿನ ಮಾಹಿತಿಗಾಗಿ ಕಿಯೋನಿಕ್ಸ್ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 080 2222 5645).

| ಕ್ರ. ಸಂ. | ಟೆಂಡರ್ ಪ್ರಕಟಣೆ ಸಂಖ್ಯೆ | ಟೆಂಡರ್ ವಿವರ | ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ |
|---|---|---|---|
| 1 | KEONICS/2026-27/AUCTION10 | Short Term e- Auction tender document for Fund Management (E-Auction Notification, Eligibility Criteria and Terms and Conditions) | 22.05.2026 |

DIPR/CP/670/SA/2026-27 ಸಹಿ/– ನಿರ್ದೇಶಕರು (ಹಣಕಾಸು)



ಕರ್ನಾಟಕ ಸರ್ಕಾರ
**ನಗರ ಭೂ ಸಾರಿಗೆ ನಿರ್ದೇಶನಾಲಯ, ನಗರಾಭಿವೃದ್ಧಿ ಇಲಾಖೆ**
ಆಯುಕ್ತರ ಕಾರ್ಯಾಲಯ ನಗರ ಭೂ ಸಾರಿಗೆ
ಬಿಎಂಟಿಸಿ, ಟಿಟಿಎಂಸಿ, ‘ಬಿ’ ಬ್ಲಾಕ್ (ಬಸ್ ಸ್ಟ್ಯಾಂಡ್ ಮೇಲ್ಭಾಗ), 4ನೇ ಮಹಡಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560027, ದೂರವಾಣಿ : 080–22226627/6628, ಫ್ಯಾಕ್ಸ್ : 080–22226630, ಇಮೇಲ್ : dultbangalore@gmail.com, dult@karnataka.gov.in
ಸಂಖ್ಯೆ: DULT-TECH/59/2025 ದಿನಾಂಕ: 15.05.2026
**ಟೆಂಡರ್ ಪ್ರಕಟಣೆ**
ನಗರ ಭೂ ಸಾರಿಗೆ ನಿರ್ದೇಶನಾಲಯ, ಕರ್ನಾಟಕದಲ್ಲಿನ 7 ಜಿಲ್ಲಾ ಕೇಂದ್ರಗಳ ಸಂಚಾರ ನಿರ್ವಹಣಾ ಯೋಜನೆಯ (TMP) ಸಿದ್ಧತೆಗಾಗಿ ಸಮಾಲೋಚಕರ ಸೇವೆಗಳಿಗಾಗಿ ಪ್ರತ್ಯೇಕ ಟೆಂಡರ್ (ಪ್ಯಾಕೇಜ್) (ಇ–ಬಿಡ್) ಅನ್ನು ಆಹ್ವಾನಿಸಿದ್ದು, ಬಿಡ್ಡುದಾರರು https://kppp.karnataka.gov.in ವೆಬ್‌ಸೈಟ್‌ನಿಂದ ಟೆಂಡರ್ ದಾಖಲೆಯನ್ನು ಡೌನ್ ಲೋಡ್ ಮಾಡಬಹುದಾಗಿದೆ.
ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ :29.05.2026, ಸಂಜೆ 5.30ರೊಳಗೆ

| ಸಂಖ್ಯೆ | ಜಿಲ್ಲಾ ಕೇಂದ್ರ | ಟೆಂಡರ್ ಸಂಖ್ಯೆ. |
|---|---|---|
| 1 | ಮಡಿಕೇರಿ<br>ಚಾಮರಾಜನಗರ<br>ಚಿಕ್ಕಬಳ್ಳಾಪುರ | DULT/2026-27/SE0050 |
| 2 | ಹಾವೇರಿ<br>ಕಾರವಾರ | DULT/2026-27/SE0051 |
| 3 | ಕೊಪ್ಪಳ<br>ಯಾದಗಿರಿ | DULT/2026-27/SE0052 |

ಸಹಿ/–ಜಂಟಿ ನಿರ್ದೇಶನಕರು( ಆಡಳಿತ)
ನಗರ ಭೂ ಸಾರಿಗೆ ನಿರ್ದೇಶನಾಲಯ
ನಗರಾಭಿವೃದ್ಧಿ ಇಲಾಖೆ.
ವಾಸಾಸಂಇ/ವಾಪ್ರ/689/ಶಿರಡಿ ಸಾಯಿ/2026–27



ಕರ್ನಾಟಕ ಸರ್ಕಾರ
**ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ**
E-mail:-dcfkoppa@gmail.com
ಸಂಖ್ಯೆಬಿ1:ಬಿಜಿಟಿ:ಸಿಆರ್:39/2025–26 ದಿನಾಂಕ: 16–04–2026
**ಸಾರ್ವಜನಿಕ ಟೆಂಡರ್ ಪ್ರಕಟಣೆ**
2026–27 ನೇ ಸಾಲಿನಲ್ಲಿ ಕೊಪ್ಪ ಅರಣ್ಯ ವಿಭಾಗದ, ಚಿಕ್ಕಗ್ರಹಾರ ವಲಯ ವ್ಯಾಪ್ತಿಯಲ್ಲಿ ಕೊಳ್ಳೆಹಳ್ಳದಿಂದ ಕರ್ಕೂಟದವರೆಗೆ (2.570 ಕಿ.ಮೀ) ರೈಲ್ ಬ್ಯಾರಿಕೇಡ್ ಕಾಮಗಾರಿಯ ನಿರ್ಮಾಣ (Including procurement and Transportation) ಬಾಬ್ತು **ದಿನಾಂಕ: 23–05–2026ರಂದು** ಇ –ಟೆಂಡರ್ ಕರೆಯಲಾಗಿದೆ. ಇ–ಟೆಂಡರ್‌ಗೆ ನಿಗದಿಪಡಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.3,66,98,577/– ಆಗಿರುತ್ತದೆ. ಈ ಕಛೇರಿಯ **ದಿನಾಂಕ: 16–04–2026 ರ ಟೆಂಡರ್** ಅಧಿಸೂಚನೆಯಲ್ಲಿರುವ ಎಲ್ಲಾ ಷರತ್ತುಗಳಿಗೆ ಒಳಪಟ್ಟು ಇ–ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.
**ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪ ವಿಭಾಗ, ಕೊಪ್ಪ**



**ಪೊಲೀಸ್ ಮಹಾನಿರ್ದೇಶಕರವರ ಕಛೇರಿ**
ಪೊಲೀಸ್ ಗಣಕ ವಿಭಾಗ, 7ನೇ ಮಹಡಿ, ಬಹುಮಹಡಿಗಳ ಕಟ್ಟಡ
ಡಾ. ಬಿ. ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು–560001. ದೂರವಾಣಿ: 080–22254790,
ಇ–ಮೇಲ್: dgppcw@ksp.gov.in, digpscrb@ksp.gov.in
**ಸಂಕ್ಷಿಪ್ತ ಟೆಂಡರ್ ಪ್ರಕಟಣೆ**
ಪೊಲೀಸ್ ಗಣಕ ವಿಭಾಗ, ಕರ್ನಾಟಕ ರಾಜ್ಯ ಪೊಲೀಸ್, ಬೆಂಗಳೂರು ಇವರಿಂದ, ವಿವಿಧ ಉಪಕರಣ/ತಂತ್ರಾಂಶಗಳ ಸರಬರಾಜು, ಅಳವಡಿಕೆ ಮತ್ತು ನಿರ್ವಹಣೆಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರುಗಳನ್ನು ಈ ಕೆಳಕಂಡಂತೆ ಆಹ್ವಾನಿಸಲಾಗಿದೆ.

| ಕ್ರಮ ಸಂಖ್ಯೆ | ಟೆಂಡರ್ ವಿವರಗಳು | ಟೆಂಡರ್ ಸಂಖ್ಯೆ & ದಿನಾಂಕ | ಅಂದಾಜು ಮೌಲ್ಯ ರೂ.ಲಕ್ಷಗಳಲ್ಲಿ |
|---|---|---|---|
| 1 | Ruggedised Tablets | KSP/2026-27/IND0592 07-05-2026 | 4200.00 |
| 2 | Display Units | KSP/2026-27/IND0593 07-05-2026 | 750.00 |
| 3 | M.S. Office Licenses | KSP/2026-27/IND0594 07-05-2026 | 1400.00 |
| 4 | Body Worn Cameras | KSP/2026-27/IND0595 07-05-2026 | 4615.80 |
| 5 | High End Servers With Graphic Cards | KSP/2026-27/IND0596 08-05-2026 | 800.00 |
| 6 | Video Management Application | KSP/2026-27/IND0597 08-05-2026 | 93.00 |
| 7 | 10 PB NAS Storage | KSP/2026-27/IND0598 08-05-2026 | 1800.00 |
| 8 | SAN Storage With 250 TB | KSP/2026-27/IND0599 08-05-2026 | 1100.00 |
| 9 | Data Fusion Platform | KSP/2026-27/IND0600 13-05-2026 | 500.00 |

Last date for tender submission : For Sl No. 1 to 5, 7 & 8 : 08-06-2026, For Sl No. 6 : 25-05-2026 and For Sl No. 9 : 15-06-2026.
ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಇತರೆ ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/–
ಪೊಲೀಸ್ ಮಹಾನಿರ್ದೇಶಕರು
ಮತ್ತು ಟೆಂಡರ್ ಕರೆಯುವ ಪ್ರಾಧಿಕಾರ,
ವಾ.ಸಾ.ಸಂ.ಇ/ವಾಪ್ರ/680/ಆಕಾರ್/2026–27 ಪೊಲೀಸ್ ಗಣಕ ವಿಭಾಗ, ಕರ್ನಾಟಕ ರಾಜ್ಯ ಪೊಲೀಸ್, ಬೆಂಗಳೂರು



**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ**
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಂಪನಿ ಕಾರ್ಯಾಲಯ, “ವಿದ್ಯುತ್ ಭವನ”, ಗೋಪನಕೊಪ್ಪ, ಹುಬ್ಬಳ್ಳಿ–580 023.
Tel : 0836-2223867
E-mail ID: gmadmhr.hescom@gmail.com
hescom.karnataka.gov.in
ಕಂಪನಿಯ ಗುರುತಿನ ಸಂಖ್ಯೆ CIN: U31401KA2002SGC030437
No:ಹುವಿಸಕಂನಿ/ಪ್ರವ್ಯ(ಆ)/ಜೆ.ಎಲ್.ಎಮ್.ನೇಮಕಾತಿ/2026–27 ದಿನಾಂಕ: 15.05.2026
**ಅಧಿಸೂಚನೆ**
**ವಿಷಯ:** ಕಿರಿಯ ಪವರ್‌ಮ್ಯಾನ್ (ಎನ್.ಕೆ.ಕೆ.) ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.
**ಉಲ್ಲೇಖ:** 1. ಕವಿಪ್ರನಿನಿ ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/ 2023–24(NKK), ದಿನಾಂಕ: 14.10.2024.
2. ಸಹನ ಶಕ್ತಿ ಪರೀಕ್ಷೆಯ ಅಧಿಸೂಚನೆಸಂಖ್ಯೆ: ಹುವಿಸಕಂನಿ/ ಪ್ರವ್ಯ(ಆ)/ ಜೆ.ಎಲ್.ಎಮ್. ನೇಮಕಾತಿ/ 2024–25/ ಸಿವೈಎಸ್–1704, ದಿನಾಂಕ: 26.05.2025
3. ಹುವಿಸಕಂನಿ/ಪ್ರವ್ಯ(ಆ)/ಜೆ.ಎಲ್.ಎಮ್. ನೇಮಕಾತಿ/2024–25/ ಸಿವೈಎಸ್–1519 ದಿನಾಂಕ: 15.05.2026
ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಉದ್ಯೋಗ ಪ್ರಕಟಣೆ **ಸಂಖ್ಯೆ:ಕವಿಪ್ರನಿನಿ/ಬಿ16/44953/2023–24, ದಿನಾಂಕ: 14.10.2024** ರ ಅನುಸಾರವಾಗಿ, ಹುವಿಸಕಂನಿಯಲ್ಲಿ **ಕಿರಿಯ ಪವರ್‌ಮ್ಯಾನ್ (NKK)** ಹುದ್ದೆಗೆ ಸಂಬಂಧಿಸಿದಂತೆ, ಎಸ್.ಎಸ್.ಎಲ್.ಸಿ./10ನೇ ತರಗತಿಯಲ್ಲಿ ಗಳಿಸಿರುವ ಅಂಕಗಳ ಜ್ಯೇಷ್ಠತೆಯ ಆಧಾರದ ಮೇಲೆ ಹಾಗೂ ಸಹನಶಕ್ತಿ ಪರೀಕ್ಷೆಯಲ್ಲಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳ **ಕಟ್–ಆಫ್ ಅಂಕಗಳು ಮತ್ತು ತಾತ್ಕಾಲಿಕ ಆಯ್ಕೆ ಪಟ್ಟಿಗಳನ್ನು** ಅಭ್ಯರ್ಥಿಗಳ ಮಾಹಿತಿಗಾಗಿ ಹಾಗೂ ಆಕ್ಷೇಪಣೆಗಳಿದ್ದಲ್ಲಿ ನಿಗದಿತ ಅವಧಿಯೊಳಗೆ ಸಲ್ಲಿಸಲು ಹುವಿಸಕಂನಿ ಅಂತರ್ಜಾಲ ತಾಣ **https://hescom.karnataka.gov.in** ನಲ್ಲಿ ಪ್ರಕಟಿಸಲಾಗಿದೆ.
ಸಹಿ/–
ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾ.ಸಂ.ಅ.)
ಹುವಿಸಕಂನಿ., ಹುಬ್ಬಳ್ಳಿ.
ವಾ.ಸಾ.ಇ./ಧಾರವಾಡ/182/2026–27/ದೇಶಪಾಂಡೆಪಬ್ಲಿಸಿಟಿ



**ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು**
(NAAC A+ ಮಾನ್ಯತೆ ಪಡೆದ ಸಂಸ್ಥೆ)
**NRUPATHUNGA UNIVERSITY, BENGALURU**
(NAAC A+ Accredited Institution)
ನೃಪತುಂಗ ರಸ್ತೆ, ಬೆಂಗಳೂರು – 560001. E-mail: nrupathungauniversity@gmail.com, Ph : 080-22212924
ಸಂಖ್ಯೆ:ನೃವಿವಿ/ಕುಸ/ಘಟಿಕೋತ್ಸವ /63/2026–27 ದಿನಾಂಕ : 15.05.2026
**ಅಧಿಸೂಚನೆ**
ನೃಪತುಂಗ ವಿಶ್ವವಿದ್ಯಾಲಯದ ಎರಡನೇ ಮತ್ತು ಮೂರನೇ ಘಟಿಕೋತ್ಸವವನ್ನು **ದಿನಾಂಕ : 02.06.2026 ಬೆಳಗ್ಗೆ 11.30 ಗಂಟೆಗೆ** ಅರಮನೆ ರಸ್ತೆ, ಸೆಂಟ್ರಲ್ ಕಾಲೇಜು ಆವರಣದಲ್ಲಿರುವ **ಜ್ಞಾನಜ್ಯೋತಿ ಸಭಾಂಗಣದಲ್ಲಿ** ಜರುಗಲಿದೆ. **ಶ್ರೀ ಥಾವರ್ ಚಂದ್ ಗೆಹ್ಲೋಟ್,** ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು, ನೃಪತುಂಗ ವಿಶ್ವವಿದ್ಯಾಲಯ ರವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು. **ಪ್ರೊ.ಹೆಚ್.ಎಸ್.ರಾಘವೇಂದ್ರರಾವ್,** ಖ್ಯಾತ ವಿದ್ವಾಂಸರು ಮತ್ತು ಚಿಂತಕರು ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಘಟಿಕೋತ್ಸವದ ಭಾಷಣವನ್ನು ಮಾಡುವರು. **ಸನ್ಮಾನ್ಯ ಡಾ.ಎಂ.ಸಿ.ಸುಧಾಕರ್** ಕರ್ನಾಟಕ ಸರ್ಕಾರದ ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ನೃಪತುಂಗ ವಿಶ್ವವಿದ್ಯಾಲಯದ ಸಮ ಕುಲಾಧಿಪತಿಗಳು ಘಟಿಕೋತ್ಸವದಲ್ಲಿ ಉಪಸ್ಥಿತರಿರುವರು. **ಪ್ರೊ. ಮೋಹನ್ ಕುಮಾರ್ ಬಿ.ಕೆ.** ಮಾನ್ಯ ಕುಲಪತಿಗಳು, ನೃಪತುಂಗ ವಿಶ್ವವಿದ್ಯಾಲಯ ಇವರು ವಿಶ್ವವಿದ್ಯಾಲಯದ ಚಟುವಟಿಕೆಗಳ ಕುರಿತು ಸಂಕ್ಷಿಪ್ತ ವರದಿ ಪ್ರಸ್ತುತಪಡಿಸುವರು.
ಸಹಿ/-
ಕುಲಸಚಿವರು (ಆಡಳಿತ)
ವಾಸಾಸಂಇ/ವಾಪ್ರ/690/ಶಿರಡಿ ಸಾಯಿ/2026–27



ಭಾರತ ಸರ್ಕಾರ
**ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳ ಕಛೇರಿ**
ರಾಷ್ಟ್ರೀಯ ಹೆದ್ದಾರಿ–275 (ಬಂಟ್ವಾಳ ಮೈಸೂರು ಸೆಕ್ಷನ್)
ರಾಷ್ಟ್ರೀಯ ಹೆದ್ದಾರಿಗಳು, ಪಿ.ಡಬ್ಲ್ಯೂ.ಡಿ. ಕಾಂಪೌಂಡ್, ಕೆ.ಆರ್ ವೃತ್ತ, ಬೆಂಗಳೂರು.
**ಸಾರ್ವಜನಿಕ ಪ್ರಕಟಣೆ**
ರಾಷ್ಟ್ರೀಯ ಹೆದ್ದಾರಿ, ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956( 1956ರ 48) ರಂತೆ ಮತ್ತು ತಿದ್ದುಪಡಿ ಕಾಯ್ದೆ 1997 ರ ಸೆಕ್ಷನ್ 3ಡಿ(1)ಮತ್ತು(2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರ್ಕಾರವು ತನ್ನ ಗೆಜೆಟ್ ಅಧಿಸೂಚನೆ ಸಂಖ್ಯೆ:ಎಸ್.ಓ 1657(ಇ) ದಿನಾಂಕ:08.04.2025, ರ ಅಧಿಸೂಚನೆಯಂತೆ **ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ದೊಡ್ಡಹುಣಸೂರು ಮತ್ತು ಕಲ್ಕುಣಿಕೆ ಗ್ರಾಮದ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–275 ರಲ್ಲಿ ಬಂಟ್ವಾಳ ಮೈಸೂರು ಸೆಕ್ಷನ್ ಕಿ.ಮೀ. 171.30 ರಿಂದ ಕಿ.ಮೀ. 176.40 ರವರೆಗೆ ರಸ್ತೆಯನ್ನು ನಿರ್ಮಾಣ ಮಾಡಲು** (ಅಗಲಗೊಳಿಸಲು 2/4 ಪಥಗಳ ರಸ್ತೆ, ಇತರೆ) ಭೂಸ್ವಾಧೀನಕ್ಕೆ ಅಂತಿಮ 3(ಡಿ) ಅಧಿಸೂಚನೆ ಹೊರಡಿಸಲಾಗಿರುತ್ತದೆ.
ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 3ಜಿ(1)(2)(4)(7)(a)(b)(c)(d)&RFCTLARR Act -2013 schedule 1 ರಡಿಯಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅನುಸೂಚಿಯಲ್ಲಿ ನಮೂದಿಸಿರುವ ಜಮೀನುಗಳಿಗೆ ಅವಾರ್ಡ್ ನಿಗದಿಪಡಿಸಲಾಗಿರುತ್ತದೆ. ಇದಕ್ಕೆ ಪೂರಕವಾಗಿ ಪ್ರಕಟಣೆಯಲ್ಲಿ ದಾಖಲಿಸಿರುವ ಸರ್ವೆ ನಂಬರ್‌ಗಳ ಖಾತೆದಾರರುಗಳಿಗೆ ಅಗತ್ಯ ದಾಖಲಾತಿಗಳನ್ನು ಸಲ್ಲಿಸಿ ಪರಿಹಾರ ಪಡೆಯುವಂತೆ ಈ ಕಛೇರಿಯಿಂದ ಈಗಾಗಲೇ ಅನೇಕ ಬಾರಿ ತಿಳುವಳಿಕೆ ಪತ್ರಗಳನ್ನು ನೀಡಲಾಗಿರುತ್ತದೆ. ಆದರೂ, ಈ ಕೆಳಕಂಡ ಭೂ ಮಾಲೀಕರು ತಹಲ್‌ವರೆಗೂ ದಾಖಲಾತಿಗಳನ್ನು ಈ ಕಛೇರಿಗೆ ಸಲ್ಲಿಸಿ, ಭೂಪರಿಹಾರ ಪಡೆದಿರುವುದಿಲ್ಲ. ಆದ್ದರಿಂದ ಈ ಪ್ರಕಟಣೆ ಹೊರಡಿಸಿದ **15 ದಿನಗಳೊಳಗಾಗಿ** ಅಗತ್ಯ ದೃಢೀಕೃತ ದಾಖಲಾತಿಗಳನ್ನು ಈ ಕಛೇರಿಗೆ ಹಾಜರುಪಡಿಸಿ ಪರಿಹಾರ ಪಡೆಯುವುದು, ತಪ್ಪಿದಲ್ಲಿ ಅನ್ಯಮಾರ್ಗವಿಲ್ಲದೆ ವಿಪಕ್ಷೀಯವಾಗಿ ವ್ಯಾಪ್ತಿಯ ಜಿಲ್ಲಾ ನ್ಯಾಯಲಯದಲ್ಲಿ ಠೇವಣಿ ಇಡಲಾಗುವುದು/ ಕಾನೂನು ರೀತಿಯ ಕ್ರಮವಹಿಸಲಾಗುವುದು ಎಂದು ಈ ಮೂಲಕ ತಿಳಿಯಪಡಿಸಿದೆ.
ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು
ರಾಷ್ಟ್ರೀಯ ಹೆದ್ದಾರಿ–275 (ಬಂಟ್ವಾಳ ಮೈಸೂರು ಸೆಕ್ಷನ್)
ರಾಷ್ಟ್ರೀಯ ಹೆದ್ದಾರಿಗಳು, ಪಿ.ಡಬ್ಲ್ಯೂ.ಡಿ. ಕಾಂಪೌಂಡ್, ಕೆ.ಆರ್. ವೃತ್ತ, ಬೆಂಗಳೂರು.

| ಜಿಲ್ಲೆ: ಮೈಸೂರು | | ತಾಲ್ಲೂಕು: ಹುಣಸೂರು | |
|---|---|---|---|
| ಕ್ರ.ಸಂ | ಸರ್ವೆ ನಂ. | ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | ಜಮೀನಿನ ಮಾಲೀಕರ ಹೆಸರು/ ಅನುಭವದಾರರ ಹೆಸರು |
| ಗ್ರಾಮ: ದೊಡ್ಡಹುಣಸೂರು | | | |
| 1. | 33 | 0.0125 | ಹೆಚ್ ಆರ್ ಅಣ್ಣಮಲೈ ಮೊದಲಿಯಾರ್, ಸುಂದರಮೂರ್ತಿ ಮೊದಲಿಯಾರ್, ಆರ್ಮುಗ ಮೊದಲಿಯಾರ್, ಮೋಹನವೇಲು ಮೊದಲಿಯಾರ್, ಬಾಳಮ್ಮ, ಸಾವಿತ್ರಮ್ಮ, ಪದ್ಮಾವತಮ್ಮ, ಕಣಕಮ್ಮ ಕೊಂ ಶಿವಭೂಷಣ್ ಮೊದಲಿಯಾರ್, ಸಭಾಪತಿ ಮೊದಲಿಯಾರ್. |
| ಗ್ರಾಮ: ಕಲ್ಕುಣಿಕೆ | | | |
| 1 | 82/2 | 0.0655 | ಹೆಚ್ ಟಿ ಗೋವಿಂದರಾಜು ಬಿನ್ ತಮ್ಮಯ್ಯ, ಎಸ್ ಕೆ ಕರಿಯಪ್ಪ. |
| 2 | 96/5ಬಿ1 | 0.0651 | ಕೆ.ಸಿ ಮಹದೇವಸ್ವಾಮಿ, ಹೆಚ್ ಕೆ ಸತೀಶ, ಹೆಚ್.ಎಸ್ ದೇವರಾಜ, ರಮ್ಯ ಕೆ ಮತ್ತು ವೆಂಕಟೇಶ, ಸಹದೇವಯ್ಯ, ಡಾ. ಡಿ ತಿಮ್ಮಯ್ಯ |

**ಅಭಿಮತದ ವಿಳಾಸ:** ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

### ಸುಭಾಷಿತ

ಪ್ರಜಾಪ್ರಭುತ್ವ ಬರಿಯ ಬಲವಲ್ಲ. ಬರಿಯ ಬಹುಮತವೇ ಅಲ್ಲ. ಹಕ್ಕುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿ ಬಯಸುವ ವ್ಯವಸ್ಥೆ.

-ಬಿ.ಎಂ. ಶ್ರೀಕಂಠಯ್ಯ

## ಸಂಪಾದಕೀಯ

# ಮರೀಚಿಕೆಯಾದ ಜಿಬಿಎ ಚುನಾವಣೆ ಆತಂಕ ಹುಟ್ಟಿಸುವ ಆಯೋಗದ ನಡೆ

**ಗ್ರೇಟರ್** ಬೆಂಗಳೂರು ಪ್ರಾಧಿಕಾರದ (ಜಿಬಿಎ) ಐದು ನಗರಪಾಲಿಕೆಗಳಿಗೆ ನಡೆಯಬೇಕಾದ ಚುನಾವಣೆಯು ಕಣ್ಣಿಗೆ ಕಂಡರೂ ಕೈಗೆ ನಿಲುಕದ ಮರೀಚಿಕೆಯಂತಾಗಿದೆ. 5 ವರ್ಷಗಳಿಗೂ ಹೆಚ್ಚು ಅವಧಿಯಿಂದ ಮುಂದಕ್ಕೆ ಹೋಗುತ್ತಲೇ ಇರುವ ಚುನಾವಣೆಯು, ಪ್ರಸ್ತುತ ಇನ್ನೇನು ದಿನ ನಿಗದಿಯಾಯಿತು ಎಂದು ಸಾರ್ವಜನಿಕರು ನಿರೀಕ್ಷಿಸುತ್ತಿದ್ದ ಸಂದರ್ಭದಲ್ಲಿ ಮತ್ತೆ ಮುಂದಕ್ಕೆ ಹೋಗುವ ಎಲ್ಲ ಸಾಧ್ಯತೆಗಳು ದಟ್ಟವಾಗಿದೆ. ಇದು ಗಂಭೀರ ಚುನಾವಣಾ ವೈಫಲ್ಯವಾಗಿದ್ದು, ಅದರ ಹೊಣೆಯನ್ನು ರಾಜ್ಯ ಚುನಾವಣಾ ಆಯೋಗವೇ (ಎಸ್‌ಇಸಿ) ಹೊರಬೇಕಾಗಿದೆ. ಆಯೋಗವೇ ನೀಡಿದ್ದ ಭರವಸೆಯನ್ನು ಆಧರಿಸಿ, ಪಾಲಿಕೆ ಚುನಾವಣೆ ನಡೆಸಲು ಅನೇಕ ಬಾರಿ ಕಾಲಾವಕಾಶ ನೀಡಿದ್ದ ಸುಪ್ರೀಂ ಕೋರ್ಟ್, ಜೂನ್ ತಿಂಗಳೊಳಗೆ ಚುನಾವಣೆ ನಡೆಸುವಂತೆ ಅಂತಿಮ ಗಡುವು ಗೊತ್ತುಪಡಿಸಿತ್ತು. ಇತ್ತೀಚಿನ ಪ್ರಮಾಣಪತ್ರದಲ್ಲಿ ಆಯೋಗವು, ಚುನಾವಣೆ ನಡೆಸಲು ತಾನು ಸಿದ್ಧವಾಗಿದ್ದು, ರಾಜ್ಯ ಸರ್ಕಾರವೇ ಹೆಚ್ಚಿನ ಕಾಲಾವಕಾಶ ಕೇಳುತ್ತಿದೆ ಎಂದು ಕೋರ್ಟ್‌ಗೆ ತಿಳಿಸಿತ್ತು. ಆದರೂ, ಜೂನ್ ಕೊನೆಯ ವೇಳೆಗೆ ಚುನಾವಣೆ ನಡೆಸುವುದಾಗಿ ಹೇಳಿತ್ತು. ಮತದಾರರ ಅಂತಿಮಪಟ್ಟಿ ಪ್ರಕಟಗೊಂಡಿದ್ದು, ವಾರ್ಡ್‌ಗಳ ಮರುವಿಂಗಡಣೆಯೂ ಪೂರ್ಣಗೊಂಡಿರುವುದರಿಂದ ಚುನಾವಣೆ ನಡೆಸಲು ಯಾವ ಗಂಭೀರ ಅಡೆತಡೆಯೂ ಇಲ್ಲ ಎಂದು ಸಾರ್ವಜನಿಕರು ಭಾವಿಸಿದ್ದರು. ಆದರೆ, ಆತಂಕಕಾರಿ ಹಾಗೂ ಅಚ್ಚರಿಯ ಬೆಳವಣಿಗೆಯಲ್ಲಿ ರಾಜ್ಯ ಸರ್ಕಾರದೊಂದಿಗೆ 'ಎಸ್‌ಸಿಎ' ಕೂಡ ಚುನಾವಣೆಗಾಗಿ ಹೆಚ್ಚುವರಿ ಸಮಯ ನೀಡುವಂತೆ ನ್ಯಾಯಾಲಯವನ್ನು ಕೇಳುತ್ತಿದೆ. ಜನಗಣತಿ, ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮತ್ತು ಸಿಬ್ಬಂದಿಯ ಕೊರತೆಯನ್ನು ವಿಳಂಬಕ್ಕೆ ಕಾರಣಗಳನ್ನಾಗಿ ನೀಡಲಾಗಿದೆ.

ಜಿಬಿಎ ಚುನಾವಣೆಗಳನ್ನು ಮತ್ತೆ ಮತ್ತೆ ಮುಂದೂಡುತ್ತಲೇ ಇರುವ ಚುನಾವಣಾ ಆಯೋಗದ ಧೋರಣೆಯು ಅದರ ಸಾಂವಿಧಾನಿಕ ಹೊಣೆಗಾರಿಕೆಗೆ ವಿರುದ್ಧವಾದುದಾಗಿದೆ.

ಚುನಾವಣೆ ನಡೆಸುವ ಬದ್ಧತೆಗೆ ವಿರುದ್ಧವಾದ ಹಿಮ್ಮುಖ ಚಲನೆಯು, ಸ್ವಾಯತ್ತತೆ ಹಾಗೂ ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸುವುದಕ್ಕಾಗಿ ಸಂವಿಧಾನದಿಂದ ನಿರ್ದೇಶನಗೊಂಡ ಸಂಸ್ಥೆಯ ವಿಶ್ವಾಸಾರ್ಹತೆಗೆ ತೀವ್ರ ಧಕ್ಕೆ ತರುವಂತಿದೆ. ಸರ್ಕಾರದ ಒತ್ತಡಕ್ಕೆ ಮಣಿಯುವಂತೆ ಕಾಣಿಸುವ ಆಯೋಗ ಸ್ವಾಯತ್ತ ಸಂಸ್ಥೆಯಂತೆಯೂ ಭಾಸವಾಗುತ್ತಿಲ್ಲ. ಚುನಾವಣೆ ನಡೆಸಲು ಸಿದ್ಧತೆ ಆಗಿದೆಯೋ ಇಲ್ಲವೋ ಎಂದು ನ್ಯಾಯಾಲಯಕ್ಕೆ ತಿಳಿಸುವುದು ಆಯೋಗದ ಕರ್ತವ್ಯವಾಗಿದೆಯೇ ಹೊರತು, ಸರ್ಕಾರದ ಅನುಕೂಲ ಅನನುಕೂಲದೊಂದಿಗೆ ಅದಕ್ಕೆ ಯಾವುದೇ ಸಂಬಂಧವಿಲ್ಲ. ಸರ್ಕಾರದ ನಿಲುವನ್ನು ಗಿಳಿಪಾಠದಂತೆ ಒಪ್ಪಿಸುವುದು ಆಯೋಗದ ನೈತಿಕತೆ ಮತ್ತು ಪ್ರಾಮಾಣಿಕತೆಯನ್ನು ಅನುಮಾನದಿಂದ ನೋಡಲು ಆಸ್ಪದ ಕಲ್ಪಿಸುತ್ತದೆ. ರಾಜ್ಯದಲ್ಲಿ ಮೇ 20ರಿಂದ 'ಎಸ್‌ಐಆರ್' ಆರಂಭಗೊಳ್ಳುತ್ತಿರುವುದು, ಸರ್ಕಾರ ಹಾಗೂ ಆಯೋಗಕ್ಕೆ ಚುನಾವಣೆ ಮುಂದೂಡಲು ದೊರಕಿರುವ ನೆಪವಾಗಿದೆ. ಆದರೆ, ಜಿಬಿಎ ಚುನಾವಣೆ ಮುಂದೂಡಿಕೆಗೆ 'ಎಸ್‌ಐಆರ್' ಪ್ರಕ್ರಿಯೆಯನ್ನು ಕಾರಣವಾಗಿ ನೀಡುವುದು ಸಮರ್ಥನೀಯವಲ್ಲ. ಮತದಾರರ ಪಟ್ಟಿ ಪರಿಷ್ಕರಣೆ ಎನ್ನುವುದು ನಿರಂತರವಾದ ಆಡಳಿತಾತ್ಮಕ ಪ್ರಕ್ರಿಯೆಯಾಗಿದ್ದು, ಅದು ಪೂರ್ಣಗೊಳ್ಳುವುದನ್ನು ಚುನಾವಣೆ ನಡೆಸಲು ಪೂರ್ವ ಷರತ್ತನ್ನಾಗಿ ವಿಧಿಸಿದರೆ, ಜಿಬಿಎ ಚುನಾವಣೆ ಅನಿರ್ದಿಷ್ಟಾವಧಿಗೆ ಮುಂದಕ್ಕೆ ಹೋಗುತ್ತದೆ.

ದೀರ್ಘ ಕಾಲದಿಂದ ಪಾಲಿಕೆಗಳಿಗೆ ಚುನಾವಣೆ ನಡೆಯದಿರುವುದರ ಪರಿಣಾಮವನ್ನು ಬೆಂಗಳೂರು ಅನುಭವಿಸುತ್ತಿದೆ. ಚುನಾಯಿತ ಸ್ಥಳೀಯ ಪ್ರತಿನಿಧಿಗಳಿಲ್ಲದೆ 'ಅಧಿಕಾರಿಗಳ ಆಡಳಿತ' (ಆಫೀಸರ್ ರಾಜ್) ಮುಂದುವರಿದಿದೆ. ಜನರಿಗೆ ಉತ್ತರದಾಯಿಯಾದ ಸ್ಥಳೀಯ ಆಡಳಿತ ಇಲ್ಲದ ಪರಿಸ್ಥಿತಿ, ಬೇಜವಾಬ್ದಾರಿತನದ ಹಾಗೂ ಪಾರದರ್ಶಕತೆಯ ಕೊರತೆಯಿಂದ ಕೂಡಿದ ಆಡಳಿತಕ್ಕೆ ಹಾಗೂ ನಾಗರಿಕರ ಸಮಸ್ಯೆಗಳು ಉಲ್ಬಣಗೊಳ್ಳಲು ಕಾರಣವಾಗಿದೆ. ರಸ್ತೆ–ಒಳಚರಂಡಿ ನಿರ್ವಹಣೆ, ಕಸ ವಿಲೇವಾರಿ, ನಗರ ಯೋಜನೆ ಮುಂತಾದ ದೈನಂದಿನ ಜೀವನಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲಿ ನಾಗರಿಕರ ಪ್ರಜಾಸತ್ತಾತ್ಮಕ ಧ್ವನಿಯೇ ಇಲ್ಲದಂತಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಅವಧಿಗೆ ಸರಿಯಾಗಿ ನಡೆಸುವುದು ಚುನಾವಣಾ ಆಯೋಗದ ಕರ್ತವ್ಯವೆಂದು ಸುಪ್ರೀಂ ಕೋರ್ಟ್ ಮತ್ತೆ ಮತ್ತೆ ಸ್ಪಷ್ಟಪಡಿಸಿದೆ. ತನ್ನ ಕರ್ತವ್ಯ ನಿರ್ವಹಿಸುವಲ್ಲಿ ಆಯೋಗ ವಿಫಲವಾದಲ್ಲಿ, ಪ್ರಜಾಪ್ರಭುತ್ವದ ಬೇರುಗಳು ದುರ್ಬಲಗೊಳ್ಳುತ್ತವೆ. ಆಯೋಗದ ಹೊಂದಾಣಿಕೆ ಮನೋಭಾವವನ್ನು ಕೋರ್ಟ್ ಗಂಭೀರವಾಗಿ ಪರಿಗಣಿಸಬೇಕು. ಆಡಳಿತದ ಅನುಕೂಲ ಅಥವಾ ರಾಜಕೀಯ ಲೆಕ್ಕಾಚಾರಗಳಿಗೆ ಸಂವಿಧಾನಾತ್ಮಕ ಬದ್ಧತೆಗಳು ಬಲಿಯಾಗಲು ಅವಕಾಶ ನೀಡಬಾರದು. ಚುನಾವಣಾ ಪ್ರಜಾಪ್ರಭುತ್ವವನ್ನು ಬಲಪಡಿಸಬೇಕಾದ ಸಂಸ್ಥೆಯೇ ಅದು ದುರ್ಬಲಗೊಳ್ಳಲು ಕಾರಣ ಆಗುತ್ತಿರುವುದು ಹೆಚ್ಚು ಆತಂಕ ಹುಟ್ಟಿಸುವ ಸಂಗತಿಯಾಗಿದೆ.

### ಜಾಲತಾಣ

## 10 ವರ್ಷದ ಲಾಭ ಎಲ್ಲಿದೆ?

**ಈಗ ಯುದ್ಧದಿಂದಾಗಿ ಕೇವಲ ಮೂರು ತಿಂಗಳಿಂದ ಕಚ್ಚಾತೈಲದ ಬೆಲೆ ಹೆಚ್ಚಾಗಿದ್ದಕ್ಕೆ ನಷ್ಟವಾಗಿದೆ ಎಂದು ಬಾಯಿ ಬಡಿದುಕೊಳ್ಳುತ್ತಿರುವ ತೈಲ ಕಂಪನಿಗಳು, ಕಳೆದ ಹತ್ತು ವರ್ಷಗಳಿಂದ ಗ್ರಾಹಕರ ಜೇಬಿನಿಂದ ಎಗರಿಸಿದ ಲಾಭದ ಬಗ್ಗೆ ಏಕೆ ಬಾಯಿ ಬಿಡುತ್ತಿಲ್ಲ?**

**ವಿಕಾಸ್ ಆರ್. ಮೌರ್ಯ,** ಲೇಖಕ, 'ಫೇಸ್‌ಬುಕ್'ನಿಂದ

### ಕಿಡಿನುಡಿ

**ಸಿದ್ದರಾಮಯ್ಯನವರೇ, ನಿಮಗೆ ತಿಲಕ ಕಂಡರೆ ನಡುಕ, ಕೇಸರಿ ಕಂಡರೆ ಮೈಯೆಲ್ಲ ಉರಿ, ರಾಮಮಂದಿರ ಎಂದರೆ ಕಿರಿಕಿರಿ. ಅನ್ಯಮತೀಯ ಸಂಭ್ರಮಗಳಲ್ಲಿ ಮಾತ್ರ ಸೆಂಟು ಹೊಡೆದುಕೊಂಡು, ಟೋಪಿ ಹಾಕಿಕೊಂಡು, ನವ ಮದುಮಗನಂತೆ ಸಿಂಗಾರಗೊಳ್ಳುತ್ತೀರಿ.**

**ಆರ್. ಅಶೋಕ,** ವಿಧಾನಸಭಾ ವಿರೋಧ ಪಕ್ಷದ ನಾಯಕ

## 25 ವರ್ಷಗಳ ಹಿಂದೆ

ಬುಧವಾರ, 16-5-2001

● **ಭೂ ಕಬಳಿಕೆ: 153 ಮಂದಿ ವಿರುದ್ಧ ಕ್ರಮ**

**ಬೆಂಗಳೂರು, ಮೇ 15**– ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಭಾರೀ ಪ್ರಮಾಣದಲ್ಲಿ ನಡೆದಿರುವ ಭೂ ಕಬಳಿಕೆ ಪ್ರಕರಣಗಳಿಗೆ ಸಂಬಂಧಿಸಿದಂತೆ 152 ಸರ್ಕಾರಿ ನೌಕರರು ಮತ್ತು ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗಿದೆ. ಈ ವಿಷಯವನ್ನು ಕಂದಾಯ ಸಚಿವ ಎಚ್.ಸಿ. ಶ್ರೀಕಂಠಯ್ಯ ಅವರು ತಿಳಿಸಿದರು.

ಅನಧಿಕೃತವಾಗಿ ಸರ್ಕಾರ ಜಮೀನನ್ನು ಒತ್ತುವರಿ ಮಾಡಿಕೊಳ್ಳುವ ಪಿಡುಗನ್ನು ತಪ್ಪಿಸಲು ಭೂ ಕಂದಾಯ ಕಾಯ್ದೆಗೆ ಶೀಘ್ರದಲ್ಲೇ ತಿದ್ದುಪಡಿ ತಂದು, ಭೂ ಕಬಳಿಕೆಯ ಪ್ರಕರಣವನ್ನು ಶಿಕ್ಷಾರ್ಹ ಅಪರಾಧವನ್ನಾಗಿ ಮಾಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

● **ಕಾಶಪ್ಪನವರ ವಿರುದ್ಧ ಮಹಾರಾಷ್ಟ್ರದಲ್ಲಿ ದಾವೆ**

**ವಿಜಾಪುರ, ಮೇ 15**– ಭೀಮಾ ನದಿ ನೀರಿಗೆ ಸಂಬಂಧಿಸಿದಂತೆ ಕರ್ನಾಟಕ-ಮಹಾರಾಷ್ಟ್ರ ಗಡಿಯಲ್ಲಿ ಮಹಾರಾಷ್ಟ್ರದ ಔಜ್ ಬ್ಯಾರೇಜ್‌ನ ಗೇಟುಗಳನ್ನು ಸೋಮವಾರ ಸಂಜೆ ರೈತರು ನಾಶಪಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಸಣ್ಣ ಕೈಗಾರಿಕಾ ಸಚಿವ ಎಸ್.ಆರ್. ಕಾಶಪ್ಪನವರ ಸೇರಿದಂತೆ 55 ಜನರ ವಿರುದ್ಧ ಮಹಾರಾಷ್ಟ್ರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 75 ವರ್ಷಗಳ ಹಿಂದೆ

ಬುಧವಾರ, 16-5-1951

● **ಇಸ್ರೇಲ್ ಪಾರ್ಲಿಮೆಂಟಿಗೆ ಬೆಂಕಿಯಿಡಲು ಯತ್ನ**

**ಜೂಸಲೆಂ, ಮೇ 15**– ಇಸ್ರೇಲಿ ಪಾರ್ಲಿಮೆಂಟ್ ನಿನ್ನೆ ಸಮಾವೇಶಗೊಂಡಿದ್ದಾಗ ಮತಾಂಧರು ಪಾರ್ಲಿಮೆಂಟ್ ಭವನಕ್ಕೆ ಬೆಂಕಿಯಿಡಲು ಪ್ರಯತ್ನಿಸಿದರೆಂದು ಈ ದಿನ ಇಲ್ಲಿ ಪ್ರಕಟಿಸಲಾಗಿದೆ.

ಈ ಉಗ್ರಗಾಮಿಗಳು ಬ್ರಿಟ್ ಹಕನಾಯ್ಮ್ ಎಂಬ ಸಂಸ್ಥೆಗೆ ಸೇರಿದವರೆಂದು ಪೊಲೀಸರು ಭಾವಿಸಿದ್ದಾರೆ. ಈ ಪ್ರಯತ್ನ ನಡೆದ ಮೇಲೆ ಪೊಲೀಸರು ಮತಾಂಧರು ಹೆಚ್ಚಾಗಿ ವಾಸ ಮಾಡುವ ಪ್ರದೇಶಗಳನ್ನು ಮುತ್ತಿ ಶೋಧನೆ ನಡೆಸಿ, ಅಧಿಕ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನೂ, ಮದ್ದುಗುಂಡುಗಳನ್ನೂ ವಶಪಡಿಸಿಕೊಂಡರು. ಅನೇಕರನ್ನು ದಸ್ತಗಿರಿ ಮಾಡಲಾಯಿತು.

# ಡಿಕೆಶಿ ಹಟ; ಮುಖ್ಯಮಂತ್ರಿ ಆಟ



**ಗತಿಬಿಂಬ**

**ವೈ.ಗ. ಜಗದೀಶ್**

'ಸಿದ್ದರಾಮಯ್ಯನವರು ನನ್ನ ಪಕ್ಕದಲ್ಲಿಯೇ ಕುಳಿತಿದ್ದಾರೆ. ಕೂತವನದ್ದೇ ಕುರ್ಚಿ, ಒದ್ದವನದ್ದೇ ಚೆಂಡು ಎನ್ನುವಂತಾಗಿದೆ. ಯಾರನ್ನೂ ಬಿಡಿಸಲು ಆಗುವುದಿಲ್ಲ. ಇದು ನಮ್ಮ ರಾಜಕೀಯದ ಕತೆ...'

ಹೀಗಂದವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್. ಅದೂ 'ಸಹಕಾರ' ಇಲಾಖೆಯ ಕಾರ್ಯಕ್ರಮದಲ್ಲಿ. ನಗುತ್ತಲೇ ಶಿವಕುಮಾರ್ ಹೀಗೆ ಹೇಳಿದಾಗ, ಸಿದ್ದರಾಮಯ್ಯ ಕೂಡ ನಗುತ್ತಲೇ ಆಲಿಸಿದರು. ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷದ 'ಅಧಿಕಾರ ಹಂಚಿಕೆ' ಆಗುತ್ತದೆ ಎಂದು ನಂಬಿದ್ದ ಶಿವಕುಮಾರ್, ಅದಾಗದೇ ಇದ್ದಾಗ, 'ಅಧಿಕಾರವನ್ನು ಒದ್ದು ಕಿತ್ತುಕೊಳ್ಳಬೇಕಾಗುತ್ತದೆ; ನಾನು ಸ್ಟ್ರೀಟ್ ಫೈಟರ್' ಎಂದು ಹೇಳಿದ್ದೂ ಉಂಟು. ಸರ್ಕಾರ ಇದೇ ಮೇ 20ಕ್ಕೆ ಮೂರು ವರ್ಷ ಪೂರೈಸುತ್ತಿದ್ದು, ಸಿದ್ದರಾಮಯ್ಯ ನಡೆಯ ಬಗ್ಗೆ ಶಿವಕುಮಾರ್‌ಗೆ ಈಗ ಒಂದು ಮಟ್ಟಿಗಿನ ಸ್ಪಷ್ಟತೆ ಬಂದಂತಿದೆ.

ಇದೇ ವಿಧಾನಸಭೆ ಅವಧಿಯಲ್ಲಿ ಮುಖ್ಯಮಂತ್ರಿ ಆಗಬೇಕೆಂಬ ಛಲದಲ್ಲಿರುವ ಶಿವಕುಮಾರ್, 'ಅಧಿಕಾರ ಹಂಚಿಕೆಯ ಸೂತ್ರ'ವನ್ನು ಪದೇ ಪದೇ ನೆನಪಿಸುತ್ತಾ ಬಂದಿದ್ದಾರೆ. 'ಅಂತಹ ಒಪ್ಪಂದ ಆಗಿಲ್ಲ. ಐದು ವರ್ಷ ನಾನೇ ಮುಖ್ಯಮಂತ್ರಿ. ಈ ವಿಷಯದಲ್ಲಿ ಹೈಕಮಾಂಡ್ ತೀರ್ಮಾನವೇ ಅಂತಿಮ' ಎನ್ನುವುದು ಸಿದ್ದರಾಮಯ್ಯ ವಾದ. ಚುನಾವಣೆ ಎದುರಿಸಲು ಎರಡು ವರ್ಷ ಉಳಿದಿದೆ. ನಾಯಕತ್ವಕ್ಕಾಗಿನ ಕಚ್ಚಾಟ ನಿಲ್ಲುವ ಲಕ್ಷಣವಂತೂ ಕಾಣುತ್ತಿಲ್ಲ.

ಶಿವಕುಮಾರ್ ಹೇಳಿದಂತೆ ಸಿಕ್ಕಿದ ಕುರ್ಚಿಯನ್ನು ಬಿಟ್ಟೇಳಲು ಯಾರೂ ತಯಾರಿರುವುದಿಲ್ಲ. ಹಾಗಿದ್ದರೂ ಶಿವಕುಮಾರ್ ಅವರು ಚೆಂಡೇ ಇಲ್ಲದೇ ಗೋಲ್ ಹೊಡೆಯಲು, ಶೂನ್ಯದಲ್ಲಿ ಒದೆಯುತ್ತಲೇ ಇದ್ದಾರೆ. ಚೆಂಡನ್ನು ತಮ್ಮ ಬಳಿಯೇ ಇಟ್ಟುಕೊಂಡಿರುವ ಸಿದ್ದರಾಮಯ್ಯ, ಆಟವನ್ನು ರಕ್ಷಣಾತ್ಮಕವಾಗಿ ಆಡುತ್ತಿದ್ದಾರೆ. ಒಕ್ಕಲಿಗ ಸಮುದಾಯದ ಸಚಿವರು, ಶಾಸಕರೂ ಸೇರಿದಂತೆ ಎಲ್ಲ ಜಾತಿಯವರಿರುವ ಬಲಿಷ್ಠ ತಂಡವನ್ನು ಕಟ್ಟಿಕೊಂಡು, ಮೈದಾನದಲ್ಲಿ ಶಿವಕುಮಾರ್ ಕೆಲವೊಮ್ಮೆ ಏಕಾಂಗಿಯಾಗುವಂತೆಯೂ ಮಾಡುತ್ತಿದ್ದಾರೆ. ಚೆಂಡಿಲ್ಲದಿದ್ದರೇನು? ತಮ್ಮ ಜತೆಗೆ ದೊಡ್ಡ ದಂಡೇ ಇದೆ ಎಂದುಕೊಂಡು ಆಟಕ್ಕೆ ಇಳಿದ ಶಿವಕುಮಾರ್, ಹಿಂದೆ ತಿರುಗಿ ನೋಡಿದರೆ ಚೆಂಡನ್ನು ತಮ್ಮ ಬಳಿ ನೂಕಲು ಬೇಕಾದ ತಂಡವೇ ಇಲ್ಲದೆ ಪರದಾಡಿದ್ದೂ ಇದೆ.

ನಾಯಕತ್ವ ಯಾರನ್ನೂ ಅರಸಿ ಬರುವುದಿಲ್ಲ. ಪಕ್ಷದ ರಾಷ್ಟ್ರೀಯ ನಾಯಕತ್ವ ಪ್ರಬಲವಾಗಿದ್ದಾಗ, ಸ್ಥಳೀಯ ನಾಯಕತ್ವಕ್ಕಾಗಿ ಹಲವರ ನಡುವೆ ಪೈಪೋಟಿ ಇದ್ದಾಗ, ಅತಂತ್ರ ಫಲಿತಾಂಶ ಬಂದಾಗ 'ಡಾರ್ಕ್ ಹಾರ್ಸ್'ಗಳು ನೇಪಥ್ಯದಿಂದ ಮುಂಚೂಣಿಗೆ ಪುಟಕ್ಕನೇ ಚಿಮ್ಮಿ ಬರುವುದುಂಟು. ಕರ್ನಾಟಕದಲ್ಲಿ ಈಚಿನ ವರ್ಷಗಳಲ್ಲಿ ಡಿ.ವಿ. ಸದಾನಂದಗೌಡ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ಹಾಗೂ ಕಾಂಗ್ರೆಸ್ ಜತೆಗಿನ ಮೈತ್ರಿ ವೇಳೆ ಎಚ್.ಡಿ. ಕುಮಾರಸ್ವಾಮಿ ಇಂತಹ ಅವಕಾಶ ಪಡೆದರು. ಪರಿಶ್ರಮ, ಜನಾಭಿಮಾನ ಇದ್ದರೂ ಅಧಿಕಾರ ದಕ್ಕಿಸಿಕೊಂಡು, ಅದನ್ನು ಉಳಿಸಿಕೊಳ್ಳುವುದು ಸುಲಭವಲ್ಲ. ದೇವೇಗೌಡರು ಮುಖ್ಯಮಂತ್ರಿಯಾಗಿ, ಬಳಿಕ ಪ್ರಧಾನಿಯೂ ಆದರು. ಎಸ್. ಬಂಗಾರಪ್ಪ, ಬಿ.ಎಸ್. ಯಡಿಯೂರಪ್ಪ ಅವರಂತಹ ಜನನಾಯಕರಿಗೆ ಪೂರ್ಣಾವಧಿ ಅಧಿಕಾರ ನಡೆಸಲು ಆಗಲಿಲ್ಲ. ಆಯಾ ಕಾಲದ, ಆಯಾ ಪಕ್ಷದ 'ಹೈಕಮಾಂಡ್' ಅವರನ್ನು ಬಗ್ಗಿಸಿದ್ದು ಇತಿಹಾಸ.

'ಅಧಿಕಾರಕ್ಕೆ ತರುವಲ್ಲಿ ತಮ್ಮ ಪರಿಶ್ರಮ ಇದೆ; ಅದರ ಕೂಲಿ ಕೇಳುತ್ತಿದ್ದೇನೆ' ಎಂದು ಶಿವಕುಮಾರ್ ಎಷ್ಟೇ ಹೇಳಿಕೊಂಡರೂ, ಶ್ರಮವೊಂದೇ ಕುರ್ಚಿಗೇರಿಸುವ ದಾರಿಯಾಗದು. ಛಲವೊಂದೇ ಸಾಕಾಗದು. ಕಪಟ ನಾಟಕ ಸೂತ್ರಧಾರಿ ಶ್ರೀಕೃಷ್ಣ, ಕುತಂತ್ರ ಪಾರಂಗತ ಶಕುನಿ, ತ್ಯಾಗಮಯಿ ಕರ್ಣನಂತಹವರೂ ರಾಜಕೀಯ ಚದುರಂಗದಾಟದಲ್ಲಿ ಬೇಕಾಗುತ್ತದೆ.

ನೀರಿನೊಳಗಣ ಎದುರಾಳಿಯ ಹೆಜ್ಜೆಗಳನ್ನು ಅರಿತು, ಕಟ್ಟಿ ಹಾಕುವಲ್ಲಿ ಸಿದ್ದರಾಮಯ್ಯ ನಿಷ್ಣಾತರು. ಅವಕಾಶ ಸೃಷ್ಟಿಸಿಕೊಳ್ಳುವ ನಿಸ್ಸೀಮ ಗುಣದ ಜತೆಗೆ, ಅವಕಾಶಗಳೂ ಅವರಿಗೆ ಒದಗುತ್ತಲೇ ಇವೆ.

> ಅಸಹಾಯ ಶೂರನಂತೆ ಕುರ್ಚಿಯ ಹಕ್ಕು ಪ್ರತಿಪಾದಿಸುತ್ತಿದ್ದ ಡಿ.ಕೆ. ಶಿವಕುಮಾರ್ ಅವರೀಗ ಅಸಹಾಯಕರಂತೆ ಕಾಣಿಸುತ್ತಿದ್ದಾರೆ. ಅವರ ಬತ್ತಳಿಕೆಯಲ್ಲಿ, ಸಿದ್ದರಾಮಯ್ಯ ಅವರ ತಂತ್ರಗಾರಿಕೆಯನ್ನು ಭೇದಿಸಲು ಅಗತ್ಯವಾದ ಅಸ್ತ್ರಗಳ ಕೊರತೆ ಇರುವಂತೆ ಕಾಣಿಸುತ್ತಿದೆ.

'ಅಧಿಕಾರ ಹಸ್ತಾಂತರ'ದ ಒಪ್ಪಂದವಾಗಿದ್ದು, 2025ರ ನವೆಂಬರ್‌ನಲ್ಲಿ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಲಿದ್ದಾರೆ ಎಂದು ಶಿವಕುಮಾರ್ ಆಪ್ತರು ನಂಬಿದ್ದರು. ದೇವರಾಜ ಅರಸು ಅವರ ದಾಖಲೆ ಮುರಿಯುವವರೆಗೆ ಅವಕಾಶ ಬೇಕು ಎಂಬ ಬಾಣಗಳನ್ನು ಸಿದ್ದರಾಮಯ್ಯ ಬಣದವರು ಬಿಟ್ಟರು. ಅದಕ್ಕೆ 2026ರ ಜನವರಿವರೆಗೆ ಕಾಯಬೇಕಾಯಿತು. ಅದೂ ಮುಗಿಯಿತು. ಅಷ್ಟೊತ್ತಿಗೆ, ಬಜೆಟ್ ಮಂಡನೆಯ ದಾಖಲೆ ಮುರಿಯಲು ಅವಕಾಶ ಕಲ್ಪಿಸಬೇಕು ಎಂಬ ಅಸ್ತ್ರವೂ ಹೊರಬಂತು.

ಆ ಹೊತ್ತಿಗೆ ದೆಹಲಿಗೆ ದೌಡಾಯಿಸಿದ ಶಿವಕುಮಾರ್, ಬಜೆಟ್ ಅಧಿವೇಶನಕ್ಕೆ ಮುನ್ನವೇ ನಾಯಕತ್ವ ಬದಲಾಗಲೇಬೇಕೆಂದು ಹಟ ಹಿಡಿದರು. 'ಯಾರು ಬಜೆಟ್ ಸಿದ್ಧಪಡಿಸುತ್ತಾರೆ ಎಂಬುದಲ್ಲ; ಯಾರು ಮಂಡಿಸುತ್ತಾರೆ ಎಂಬುದೇ ಮುಖ್ಯ' ಎಂಬ ನಿಗೂಢಾರ್ಥದ ಮಾತುಗಳನ್ನು ಶಿವಕುಮಾರ್ ಬೆಂಬಲಿಗರು ಹರಿಯಬಿಟ್ಟರು. ನಾಯಕತ್ವ ಜಗಳ ತಾರಕಕ್ಕೇರುವ ಲಕ್ಷಣಗಳು ಗೋಚರಿಸಿದವು. ಏನೋ ಘಟಿಸಲಿದೆ ಎಂಬ ವಾತಾವರಣವೂ ಸೃಷ್ಟಿಯಾಯಿತು. ದೆಹಲಿಯಲ್ಲಿ ಶಿವಕುಮಾರ್ ಯತ್ನ ಮುಂದುವರಿಸಿರುವುದು ಗೊತ್ತಾಗುತ್ತಿದ್ದಂತೆ, ತಮ್ಮ ಆಪ್ತರೂ ಸೇರಿದಂತೆ 25ಕ್ಕೂ ಹೆಚ್ಚು ಶಾಸಕರನ್ನು ಸಿದ್ದರಾಮಯ್ಯನವರ ಬೆಂಬಲಿಗರು ವಿದೇಶ ಯಾತ್ರೆಗೆ ಕಳುಹಿಸಿದರು.

ಆಮೇಲೂ ಸಿದ್ದರಾಮಯ್ಯ ಸುಮ್ಮನೇ ಕೂರಲಿಲ್ಲ. ಉದ್ಯೋಗ ಖಾತ್ರಿ ಯೋಜನೆ ರದ್ದುಪಡಿಸಿದ ಕೇಂದ್ರ ಸರ್ಕಾರ, ಅದರ ಬದಲು ವಿಬಿ-ಜಿ ರಾಮ್ ಜಿ ಯೋಜನೆ ಘೋಷಿಸಿತು. ಅದರ ವಿರುದ್ಧ ಹೋರಾಟ ರೂಪಿಸಬೇಕು ಎಂದು ಕಾಂಗ್ರೆಸ್ ಹೈಕಮಾಂಡ್ ಸೂಚಿಸಿತು. ಸಿದ್ದರಾಮಯ್ಯ ಅವರು ಇದನ್ನು ಯಶಸ್ವಿಯಾಗಿ ಬಳಸಿಕೊಂಡರು. ನಾಯಕತ್ವ ಬದಲಾವಣೆ ಚರ್ಚೆ ಮುನ್ನೆಲೆಗೆ ಬಾರದಂತೆ, ವಿಬಿ ಜಿ ರಾಮ್ ಜಿ ಕುರಿತು ಚರ್ಚಿಸಲು ವಿಧಾನಮಂಡಲದ ಅಧಿವೇಶನ ಕರೆದರು. ಅದು ಮುಗಿಯುವಾಗ ಫೆಬ್ರುವರಿ ಮೊದಲ ವಾರ ಕಳೆದಿತ್ತು. ಅಧಿಕಾರಕ್ಕೆ ಆಪತ್ಕಾಲ ಬಂದಾಗಲೆಲ್ಲ, ಅದನ್ನು ನಿವಾರಿಸಬಲ್ಲ 'ಸಿದ್ಧಾಸ್ತ್ರ'ವೊಂದನ್ನು ಸಿದ್ದರಾಮಯ್ಯ ಆಪ್ತರು ಬಿಡುತ್ತಲೇ ಬಂದಿದ್ದಾರೆ.

ಬಜೆಟ್ ಅಧಿವೇಶನ ಮುಗಿದ ಬಳಿಕ ಕೆಲವು ರಾಜ್ಯಗಳ ವಿಧಾನಸಭೆ ಚುನಾವಣೆಯ ತಯಾರಿಗೆ ಕಾಂಗ್ರೆಸ್ ಹೈಕಮಾಂಡ್ ಮುಂದಾಯಿತು. ಅಂತಹ ಸಭೆಗಳ ಸಮಯವನ್ನು ಬಳಸಿಕೊಂಡು ಅಧಿಕಾರ ಸೂತ್ರ ಹಿಡಿಯುವ ಯತ್ನವನ್ನು ಶಿವಕುಮಾರ್ ನಡೆಸಿದರು. ಆದರೆ, ಕರ್ನಾಟಕದಲ್ಲಿ ಎದುರಾದ ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ, ಸಿದ್ದರಾಮಯ್ಯನವರಿಗೆ ನಿರಾಳತೆ ಕೊಡಿಸಿತು.

ಚುನಾವಣೆ ಮುಗಿಯುತ್ತಿದ್ದಂತೆ ಮತ್ತೊಂದು ಸುತ್ತಿನ ದೆಹಲಿಯಾತ್ರೆಯನ್ನು ಶಿವಕುಮಾರ್ ಕೈಗೊಂಡರು. ಮತ್ತೊಂದು ಸೂತ್ರ ಹೆಣೆದ ಸಿದ್ದರಾಮಯ್ಯ, ಸಚಿವಾಕಾಂಕ್ಷಿಗಳಾದ 30ಕ್ಕೂ ಹೆಚ್ಚು ಶಾಸಕರನ್ನು ದೆಹಲಿಗೆ ಕಳುಹಿಸಿ ಸಂಪುಟ ವಿಸ್ತರಣೆಯ ಒತ್ತಡ ಹಾಕಿಸುವ ಯತ್ನ ಮಾಡಿದರು. ಸಂಪುಟ ವಿಸ್ತರಣೆಗೆ ಹೈಕಮಾಂಡ್ ಒಪ್ಪಿಗೆ ಬೇಕು ಎಂಬುದು ಗೊತ್ತಿದ್ದರೂ, ಶಾಸಕರಲ್ಲಿ ಸಚಿವ ಸ್ಥಾನದ ಆಸೆ ತುಂಬಿ ತಮ್ಮ ಬೆಂಬಲಿಗ ಪಡೆಯನ್ನು ವಿಸ್ತರಿಸಿಕೊಳ್ಳುವ ತಂತ್ರಗಾರಿಕೆಯನ್ನೂ ನಡೆಸಿದರು. ಸಿದ್ದರಾಮಯ್ಯ ಒಡನಾಡಿಗಳಾಗಿರುವ ಹಲವು ಹಿರಿಯ ಸಚಿವರು ದೆಹಲಿಗೆ ಹೋಗಿ, ತಮ್ಮ ಪಕ್ಷದ ವರಿಷ್ಠರನ್ನು ಭೇಟಿ ಮಾಡಿ ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿದರು.

ಎಲ್ಲ ಮುಗಿದು ಸರ್ಕಾರಕ್ಕೆ ಮೂರು ವರ್ಷ ತುಂಬುವ ಹೊತ್ತಿಗೆ ಸಿದ್ದರಾಮಯ್ಯ ಅವರಿಗೆ ಮತ್ತಷ್ಟು ವರಗಳು ಬಂದಿವೆ. ವಿಧಾನಸಭೆಯಿಂದ ರಾಜ್ಯಸಭೆಗೆ ಚುನಾಯಿತರಾದ ನಾಲ್ವರು ಸದಸ್ಯರ ಅವಧಿ ಜೂನ್ 25ಕ್ಕೆ ಮುಕ್ತಾಯವಾಗಲಿದೆ. ಅದರಲ್ಲಿ ಒಂದನ್ನಷ್ಟೇ ಕಾಂಗ್ರೆಸ್ ಪ್ರತಿನಿಧಿಸುತ್ತಿದೆ. ಶಾಸಕರ ಬಲಾಬಲದಲ್ಲಿ ಕಾಂಗ್ರೆಸ್‌ಗೆ ಮೂರು ಸ್ಥಾನ ಸಿಕ್ಕಲಿದೆ. ಈ ಚುನಾವಣೆಯು ರಾಜ್ಯಸಭೆಯ ಸಂಖ್ಯಾದೃಷ್ಟಿಯಿಂದ ಕಾಂಗ್ರೆಸ್‌ಗೆ ಪ್ರತಿಷ್ಠೆಯಾಗಿದೆ. ಅದಾದ ಬೆನ್ನಲ್ಲೇ, ವಿಧಾನಸಭೆಯಿಂದ ವಿಧಾನ ಪರಿಷತ್ತಿನ 7 ಸ್ಥಾನಗಳಿಗೆ ಚುನಾವಣೆ ನಡೆಯಬೇಕಿದೆ. ಅದರಲ್ಲಿ ಹೆಚ್ಚಿನ ಸ್ಥಾನ ಗೆದ್ದರೆ ಸಭಾಪತಿ ಸ್ಥಾನ ನಿರಾಯಾಸವಾಗಿ ಸಿಗಲಿದೆ. ಅದು ಮುಗಿಯುತ್ತಿದ್ದಂತೆ ಡಿ. ಸುಧಾಕರ್ ನಿಧನ ಹಾಗೂ ವಿನಯ ಕುಲಕರ್ಣಿಯವರ ಶಾಸಕತ್ವ ಅನರ್ಹಗೊಂಡ ಕಾರಣಕ್ಕೆ ಎರಡು ಕ್ಷೇತ್ರಗಳಿಗೆ ಉಪಚುನಾವಣೆ ಬರಲಿದೆ. ಸಿದ್ದರಾಮಯ್ಯ ಅವರು ತಮ್ಮ ಸ್ಥಾನ ಅಬಾಧಿತವಾಗುವ ರೀತಿಯಲ್ಲಿ ಗಟ್ಟಿ ಬೇಲಿಗಳನ್ನು ಕಟ್ಟಿಕೊಳ್ಳುವ ಹೊತ್ತಿಗೆ, ಅವಕಾಶಗಳು ಕೂಡ ತನ್ನಿಂತಾನೇ ಅವರಿಗೆ ಅನುಕೂಲಕರವಾಗಿ ಬರುತ್ತಲೇ ಇವೆ.

ಈ ಬೆಳವಣಿಗೆ ಮಧ್ಯೆಯೇ ಮತ್ತೆ ಸಂಪುಟ ವಿಸ್ತರಣೆಯ ಪ್ರಸ್ತಾವವನ್ನು ಸಿದ್ದರಾಮಯ್ಯ ಮುಂದಿಟ್ಟಿದ್ದಾರೆ. ಸ್ಥಾನ ಕಳೆದುಕೊಳ್ಳುವ ಭಯದಲ್ಲಿರುವವರು ಹಾಗೂ ಆಕಾಂಕ್ಷಿಗಳನ್ನು ಹಿಡಿದಿಟ್ಟುಕೊಳ್ಳುವುದು ಇದರ ಉದ್ದೇಶ. ಎಲ್ಲ ತಂತ್ರಗಾರಿಕೆ ನಡೆಸಿಯೂ 'ಹೈಕಮಾಂಡ್ ಹೇಳಿದಂತೆ ಕೇಳುವೆ' ಎನ್ನುವ ಮಹಾ ಮಂತ್ರವೂ ಅವರ ಬಳಿ ಇದೆ. ಹಾಗೆಯೇ, 'ಹೈಕಮಾಂಡ್' ಯಾರ ಪರ ಇದೆ ಎಂಬುದೂ ಅವರಿಗೆ ಗೊತ್ತಿದೆ. ಕಾಂಗ್ರೆಸ್‌ನ ಹೈಕಮಾಂಡ್ ಮಾತೂ ಆಡದ, ನೈವೇದ್ಯ ತಿನ್ನದ, ಬೇಕೆಂದಾಗ ಪ್ರಸಾದ ಬೀಳಿಸದ ದೇವರಂತೆ. ಪೂಜಾರಿ ಹಾಗಲ್ಲ; ಬಂದವರ ಎದುರೆಲ್ಲ ಹಸನ್ಮುಖಿ, ಯಾರಿಗೆ ಬೇಕಾದರೂ ಎಡದಿಂದಲೋ ಬಲದಿಂದಲೋ ಪ್ರಸಾದ ಬೀಳಿಸಬಲ್ಲರು. ಆದರೆ, ಫಲ ಸಿಗುವುದಿಲ್ಲ. ಪೂಜಾರಿ ಪಾತ್ರದಲ್ಲಿರುವ ಮಲ್ಲಿಕಾರ್ಜುನ ಖರ್ಗೆಯವರು, ಒಮ್ಮೆ ಮುಖ್ಯಮಂತ್ರಿ ಬದಲಾವಣೆ ಇಲ್ಲ ಎಂದರೆ, ಮಗದೊಮ್ಮೆ ಅದಕ್ಕೆ ದಿನಾಂಕ ನಿರ್ಧಾರವಾಗಿಲ್ಲ ಎನ್ನುತ್ತಾರೆ. ಪೂಜಾರಿ ಮುಂದೆ ನಿಂತ ಸ್ಥಿತಿ ಶಿವಕುಮಾರ್ ಅವರದ್ದು.

ಕಾಂಗ್ರೆಸ್‌ನ ಅಧಿಕೃತ ಹೈಕಮಾಂಡ್ ರಾಹುಲ್ ಗಾಂಧಿಯವರಿಗೆ ಕರ್ನಾಟಕದ ಗೊಂದಲ ನಿವಾರಿಸಿ, ಸ್ಥಿರ ಸರ್ಕಾರ ಕೊಡಬೇಕೆಂಬ ಮನಸ್ಸೇ ಇದ್ದಂತಿಲ್ಲ. ಕೇರಳಂ ವಿಷಯದಲ್ಲೂ ಅವರದ್ದು ಮಹಾಮೌನ. ನಿರ್ಣಾಯಕ ಸಂದರ್ಭದಲ್ಲೆಲ್ಲ, ಅದೇ ಧಾಟಿ. ಪಕ್ಕದ ತಮಿಳುನಾಡಿನಲ್ಲಿ ಜೋಸೆಫ್ ವಿಜಯ್‌ಗೆ ಬಹುಮತ ಕೊರತೆಯಾಗುತ್ತಿದ್ದಂತೆ, ಏಕಾಏಕಿ ಬೆಂಬಲ ಘೋಷಿಸಿ, ಅವರ ಪ್ರಮಾಣವಚನ ಸಮಾರಂಭಕ್ಕೂ ಹಾಜರಾದರು. ರಾಹುಲ್ ಈ ಧೋರಣೆಯೇ ಸಿದ್ದರಾಮಯ್ಯಗೆ ವರವಾಗಿದೆ.

## ವಾಚಕರ ವಾಣಿ

### ಮಾನವೀಯತೆಯ ಮೇಲೆ ಕ್ರೂರ ದಾಳಿ

'ಎಲ್ಲಿ ಮಹಿಳೆ ವಾಸಿಸುತ್ತಾಳೋ ಅಲ್ಲಿ ದೇವತೆಗಳು ನೆಲಸುತ್ತಾರೆ' ಎನ್ನುವುದು ಪುರಾಣದ ಮಾತು. ಆದರೆ, ದೇಶದ ಇಂದಿನ ಪರಿಸ್ಥಿತಿಯಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವೇ ಇಲ್ಲದಂತಾಗಿದೆ. 'ನಿರ್ಭಯಾ' ಪ್ರಕರಣ ಇನ್ನೂ ಜನರ ಮನಸ್ಸಿನಲ್ಲಿ ಇದೆ; ಇದೇ ಮಾದರಿಯ ಮತ್ತೊಂದು ದುಷ್ಕೃತ್ಯವು ದೆಹಲಿಯಲ್ಲಿ ನಡೆದಿರುವುದು ಅಮಾನವೀಯ. ಮಾನವೀಯತೆಯ ಮೇಲೆ ನಡೆದ ಕ್ರೂರ ದಾಳಿ ಇದಾಗಿದೆ; ದೇಶದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿರುವುದಕ್ಕೆ ನಿದರ್ಶನವೂ ಆಗಿದೆ. ಇಂತಹ ಕೃತ್ಯಗಳು ನಡೆದಾಗ ದೇಶದಾದ್ಯಂತ ಹೋರಾಟಗಳು ನಡೆಯುತ್ತವೆ. ಮಾಧ್ಯಮಗಳಲ್ಲಿಯೂ ದೊಡ್ಡ ಸುದ್ದಿಯಾಗುತ್ತದೆ. ಕೆಲವು ದಿನಗಳ ಬಳಿಕ ಆ ವಿಷಯವೇ ಮರೆತುಹೋಗುತ್ತದೆ. ಕಾನೂನಿನ ಹುಳುಕು, ಪೊಲೀಸರ ತನಿಖೆಯಲ್ಲಿನ ಲೋಪಗಳೇ ದುಷ್ಕರ್ಮಿಗಳ ಪಾಲಿಗೆ ವರದಾನವಾಗುತ್ತಿವೆ. ಅವರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಾರೆ. ಸಂತ್ರಸ್ತರು ನೋವಿನಲ್ಲಿಯೇ ಬದುಕು ದೂಡುತ್ತಾರೆ.

**ಪ್ರೇಮಾನಂದ ಹಿರೇಮಠ,** ಜಮಖಂಡಿ

### ಮೀಟರ್ ನಿಯಮ: ಹೊಸ ಮನೆಗೆ ಸಜೆ

**ಕಳೆದ** ಒಂದು ವರ್ಷದಿಂದ 30 × 40ಕ್ಕಿಂತ ದೊಡ್ಡ ನಿವೇಶನಗಳಲ್ಲಿ ನಿರ್ಮಿಸಿರುವ ಹೊಸ ಮನೆಗಳಿಗೆ ವಿದ್ಯುತ್ ಮೀಟರ್ ವಿತರಣೆಯು ಸ್ಥಗಿತಗೊಂಡಿದೆ. ಇದು ಸ್ವಂತ ಸೂರು ಹೊಂದುವ ನಾಗರಿಕರ ಕನಸಿಗೆ ಭಂಗ ತಂದಿದೆ. ಉತ್ತರ ಪ್ರದೇಶದಲ್ಲಿ ಅನಧಿಕೃತ ನಿವೇಶನವೊಂದರಲ್ಲಿ ನಿರ್ಮಿಸಿದ ಮನೆಗೆ ಮೀಟರ್ ವಿತರಣೆ ಮಾಡದಂತೆ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಇದೇ ಆದೇಶವನ್ನು ಮುಂದಿಟ್ಟುಕೊಂಡು ಕಾನೂನುಬದ್ಧವಾಗಿ ನಿರ್ಮಿಸಿರುವ ಮನೆಗಳಿಗೆ ಮೀಟರ್ ನೀಡದಿರುವುದು ಸರಿಯಲ್ಲ. ನಿಯಮ ಉಲ್ಲಂಘಿಸಿರುವ ಮನೆಗಳಿಗೆ ದಂಡ ವಿಧಿಸಿ ಮೀಟರ್ ವಿತರಿಸಬಹುದಲ್ಲವೆ? ಮತ್ತೊಂದೆಡೆ 'ಒಸಿ' (ಸ್ವಾಧೀನಾನುಭವ ಪತ್ರ) ವಿತರಣೆಗೂ ಸರಿಯಾದ ಮಾರ್ಗಸೂಚಿ ಇಲ್ಲ. ಸಮಸ್ಯೆಗೆ ಪರಿಹಾರೋಪಾಯ ಹುಡುಕಲು ಸರ್ಕಾರ ಮುಂದಾಗುತ್ತಿಲ್ಲ. ನಾಗರಿಕರು ಅನುಭವಿಸುತ್ತಿರುವ ಸಂಕಷ್ಟ ಗೊತ್ತಿದ್ದರೂ ಜಾಣಕುರುಡುತನ ಪ್ರದರ್ಶಿಸುತ್ತಿರುವುದು ಸರಿಯಲ್ಲ.

**ಕಬೀರ್ ನಾಯಕ್ ಎಚ್.,** ಹರಪನಹಳ್ಳಿ

### ಸೂಚನಾ ಫಲಕದಲ್ಲಿ ಕನ್ನಡ ಯಾಕಿಲ್ಲ?

**ಮೈಸೂರು**–ಬೆಳಗಾವಿ (ರೈಲು ಸಂಖ್ಯೆ 17301) ಹಾಗೂ ಬೆಳಗಾವಿ–ಮೈಸೂರು (ರೈಲು ಸಂಖ್ಯೆ 17302), ಇವೆರಡೂ ಮಾರ್ಗದ ರೈಲುಗಳು ಕರ್ನಾಟಕದ ಭೂಭಾಗದಲ್ಲಿ ಸಂಚರಿಸುತ್ತವೆ. ಆದರೆ, ಇವೆರಡೂ ರೈಲಿನ ಬೋಗಿಗಳ ಒಳಗಡೆ ಕನ್ನಡದಲ್ಲಿ ಸೂಚನಾಫಲಕಗಳನ್ನೇ ಅಳವಡಿಸಿಲ್ಲ. ಹಿಂದಿ ಹಾಗೂ ಆಂಗ್ಲಭಾಷೆಯ ಫಲಕಗಳು ರಾರಾಜಿಸುತ್ತಿವೆ. ಇದರಿಂದ ಕನ್ನಡಿಗ ಪ್ರಯಾಣಿಕರು ಮಾಹಿತಿ ಅರಿಯಲು ತೊಂದರೆಯಾಗುತ್ತಿದೆ. ರೈಲ್ವೆ ಇಲಾಖೆಯು ಈ ರೈಲುಗಳಲ್ಲಿ ಕನ್ನಡದ ಫಲಕ ಅಳವಡಿಸಲು ಮುಂದಾಗಲಿ.

**ಮಹಾಂತೇಶ ಗ. ಓಶಿಮಠ,** ಕೈಗಾ

### ಸಂಗೀತ ವಿ.ವಿ. ಪರೀಕ್ಷೆ: ಅವ್ಯವಸ್ಥೆಯ ಆಗರ

**ಕರ್ನಾಟಕ** ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಿಂದ ಮೇ 10ರಂದು ಸಂಗೀತ, ನಾಟ್ಯ ಮತ್ತು ತಾಳ ವಾದ್ಯಕ್ಕೆ ಸಂಬಂಧಿಸಿದಂತೆ ಪರೀಕ್ಷೆ ನಡೆಯಿತು. ಈ ಪರೀಕ್ಷೆ ತೆಗೆದುಕೊಂಡಿದ್ದ ಹುಡುಗಿಯೊಬ್ಬಳು, ಜೀವಮಾನದಲ್ಲಿಯೇ ಅಂತಹ ಪರೀಕ್ಷಾ ಅವ್ಯವಸ್ಥೆ ಕಂಡಿಲ್ಲವೆಂದು ನೊಂದುಕೊಂಡಳು. ಮೈಸೂರಿನ ಪರೀಕ್ಷಾ ಕೇಂದ್ರದಲ್ಲಿ ಒಂದೇ ಕಡೆ ಎಲ್ಲ ವಿಭಾಗಗಳ ಪರೀಕ್ಷಾ ಕೊಠಡಿಯ ವಿವರದ ಪಟ್ಟಿ ಹಾಕಿದ್ದರಿಂದ ಕೊಠಡಿ ತಿಳಿಯಲು ನೂಕುನುಗ್ಗಲು ಉಂಟಾಗಿದೆ. ಕೆಲವು ಮಕ್ಕಳ ನೋಂದಣಿ ಸಂಖ್ಯೆ ನಾಪತ್ತೆಯಾಗಿದೆ. ಅಂತಹವರಿಗೆ ಎಲ್ಲೆಂದರಲ್ಲಿ ಕೂರಿಸಿ ಪರೀಕ್ಷೆಯ ಮಧ್ಯದಲ್ಲಿಯೇ ಎಬ್ಬಿಸಿ ಬೇರೆಡೆಗೆ ಸ್ಥಳಾಂತರಿಸಿ ಅವಾಂತರ ಸೃಷ್ಟಿಸಲಾಗಿದೆ. ಪರೀಕ್ಷೆ ನಿಗದಿತ ಸಮಯಕ್ಕಿಂತ ಒಂದು ಗಂಟೆ ತಡವಾಗಿದೆ. ಕಳೆದ ಮೂರು ವರ್ಷಗಳಿಂದಲೂ ವಿ.ವಿ.ಯಿಂದ ಜರುಗುತ್ತಿರುವ ಈ ಪರೀಕ್ಷೆಯು ಗೊಂದಲದ ಗೂಡಾಗಿದೆ. ವಿಶ್ವವಿದ್ಯಾಲಯದ ಪರೀಕ್ಷೆಯೊಂದು ಹೀಗೆ ನಡೆಯುತ್ತದೆ ಎನ್ನುವುದು ಉನ್ನತ ಶಿಕ್ಷಣದ ಸ್ಥಿತಿಗತಿ ಸೂಚಿಸುವಂತಿದೆ.

**ಕೆ.ಎಂ. ನಾಗರಾಜು,** ಮೈಸೂರು

### ಚೀನಾ ನಡೆ ನಮಗೆ ಮಾದರಿ ಅಲ್ಲವೇ?

**ಇರಾನ್** ಮೇಲಿನ ಯುದ್ಧ ಅಮೆರಿಕಕ್ಕೆ ತಲೆಬಿಸಿಯಾಗಿದೆ. ಹಾಗಾಗಿ, 'ದೊಡ್ಡಣ್ಣ'ನೇ ಚೀನಾದ ಬಾಗಿಲ ಬಳಿ ನಿಂತಿದ್ದಾನೆ. ಚೀನಾ ತನ್ನ ಹಿತಾಸಕ್ತಿಗಾಗಿ ಏನನ್ನು ಬೇಕಾದರೂ ದಕ್ಕಿಸಿಕೊಳ್ಳುವಷ್ಟು ಬಲಾಢ್ಯವಾಗಿದೆ ಎಂಬುದು ಈ ಬೆಳವಣಿಗೆಯಿಂದ ಸುಸ್ಪಷ್ಟ. ಜನಸಂಖ್ಯೆಯಲ್ಲಿ ಚೀನಾವನ್ನು ಹಿಂದಿಕ್ಕಿರುವ ನಾವು, ನಮ್ಮ ರೂಪಾಯಿಯನ್ನು ಅಮೆರಿಕದ ಡಾಲರ್ ಎದುರು ದುರ್ಬಲಗೊಳಿಸಿಕೊಳ್ಳುತ್ತಿದ್ದೇವೆ. ಸಾಲದ್ದಕ್ಕೆ, ದೇವಸ್ಥಾನಗಳಿಗಾಗಿ ವಾಯುಸೇನೆಯಿಂದ 'ಪುಷ್ಪವೃಷ್ಟಿ' ಮಾಡಿಸುತ್ತಿದ್ದೇವೆ. ದೇಶದ ಭವಿಷ್ಯ ಕಟ್ಟುವ ಸಮೂಹದ ಪರೀಕ್ಷೆಗಳನ್ನು ಅಕ್ರಮದ ಗೂಡಾಗಿಸಿ, ಮರು ಪರೀಕ್ಷೆಗಾಗಿ ಮತ್ತಷ್ಟು ಹಣ ಸುಟ್ಟು ಭ್ರಷ್ಟರನ್ನು ಬೆಚ್ಚಗಿರಿಸು ತ್ತಿದ್ದೇವೆ. 'ನಾನು ಭಾರತೀಯ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಉತ್ತಮ ಮಾದರಿ ಸೃಷ್ಟಿಸುವ ಬದಲು ಹೊಸ ತಲೆಮಾರೊಂದನ್ನು ಶಿಲಾಯುಗಕ್ಕೆ ಕರೆದೊಯ್ಯುತ್ತಿದ್ದೇವೆ.

**ಶಾಂತರಾಜು ಎಸ್.,** ಬೆಂಗಳೂರು

### ವಿದ್ಯಾರ್ಥಿ ಬಸ್‌ಪಾಸ್‌ಗೆ ವಿಳಂಬ ಬೇಡ

**ಕರ್ನಾಟಕ** ರಾಜ್ಯ ರಸ್ತೆ ಸಾರಿಗೆ ನಿಗಮವು ಪ್ರತಿವರ್ಷ ರಾಜ್ಯದ ಶಾಲಾ–ಕಾಲೇಜಿನ ವಿದ್ಯಾರ್ಥಿಗಳಿಗೆ ಉಚಿತವಾಗಿ, ಕೆಲವರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್ ವಿತರಿಸುತ್ತದೆ. ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. 2026–27ನೇ ಶೈಕ್ಷಣಿಕ ಸಾಲಿನ ಶಾಲಾ–ಕಾಲೇಜುಗಳು ಮೇ 29ರಿಂದ ಪ್ರಾರಂಭವಾಗುತ್ತಿವೆ. ನಿಗಮವು ಜೂನ್ 1ರಿಂದ ಬಸ್‌ಪಾಸ್‌ಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತದೆ. ಪಾಸ್‌ಗೆ ಅರ್ಜಿ ಸಲ್ಲಿಸಲು ಈ ದಿನಾಂಕಕ್ಕೂ ಮುಂಚೆಯೇ ಅವಕಾಶ ಮಾಡಿಕೊಟ್ಟರೆ ಅನುಕೂಲ ಆಗಲಿದೆ. ಸಾರಿಗೆ ಸಚಿವರು ಈ ಬಗ್ಗೆ ಗಮನಹರಿಸಲಿ.

**ಟಿ. ಹನುಮಂತರಾಯ,** ಬೆಂಗಳೂರು

### ಚುರುಮುರಿ

## ಸ್ವದೇಶಿ ವಿನಿಮಯ!

● ತುರುವೇಕೆರೆ ಪ್ರಸಾದ್

'**ಪದ್ದು,** ಮೋದಿ ಮತ್ತೆ ವರ್ಕ್ ಫ್ರಂ ಹೋಂ ಶುರು ಮಾಡಿ ಅಂತ ಹೇಳಿದ್ದಾರಲ್ಲ, ದೇಶಕ್ಕೋಸ್ಕರ ಅಳಿಲುಸೇವೆ ಸಲ್ಲಿಸೋ ಅವಕಾಶ ಸಿಕ್ತು ಕಣೆ' ಎಂದ ಪರ್ಮೇಶಿ.

'ಸಾಕ್, ಸುಮ್ನಿರ್ರೀ! ನೀವು, ನಿಮ್ಮಗ ಧಿಮ್ಮಲೆ ರಂಗ ಅಂತ ಲ್ಯಾಪ್‌ಟಾಪು, ಮೊಬೈಲು ಹಿಡ್ಕಂಡು ಮನೇಲಿ ಕೂತ್‌ಬಿಡಿ, ನಾನಿಲ್ಲಿ ನಿಮಗೆ ಅನ್ನ ಬೇಸ್ಕಂಡು ಪತಿಸುತರ ಸೇವೆ ಮಾಡ್ಕಂಡು ಬಿದ್ದಿರ್ತೀನಿ'.

'ಹಾಗಲ್ವೇ! ಹೆಂಡತಿ ಮುಖ ಎಷ್ಟೊತ್ತು ನೋಡ್ತಿ? ಅಂತ ಒಬ್ರು ಕೇಳಿದ್ರು. ನಾನು ವನಜ ಮಿಸ್‌ನ, ನಮ್ ಪ್ರಾಜೆಕ್ಟ್ ಲೀಡರ್ ಮಿಸ್ ಲಿಲ್ಲೀನ ಮಿಸ್ ಮಾಡ್ಕಂಡು ಇಲ್ ಕೂತಿರ್ತೀನಿ ಅಂದ್ರೆ ಅದು ದೇಶಕ್ಕೋಸ್ಕರ ತಾನೆ? ನೀನು ಎಣ್ಣೆ ಹಾಕಕ್ಕೆ ಬಿಟ್ರೆ ಇನ್ನೂ ದೊಡ್ಡ ರೀತೀಲಿ ದೇಶೋದ್ಧಾರ ಆಗುತ್ತೆ'.

'ಎಣ್ಣೆಗೂ ದೇಶಕ್ಕೂ ಏನ್ರೀ ಸಂಬಂಧ?'

'ನಮ್ ರಾಜ್ಯದಲ್ಲಿ ಏಪ್ರಿಲ್‌ನಲ್ಲಿ ಜನ 3,688 ಕೋಟಿ ರೂಪಾಯಿ ಎಣ್ಣೆ ಕುಡಿದವ್ರೆ! ಎಣ್ಣೆ ಕುಡ್ಕೊಂಡ್ ಡ್ರೈವ್ ಮಾಡೋ ಹಾಗಿಲ್ಲ, ಹಾಗಾಗಿ ಇಂಧನ ಉಳಿಯುತ್ತಲ್ಲ'.

'ನಿಮ್ ತಲೆ! ಮೋದಿ ಮಾಮಂದು ಒಂದೋ ಎರಡೋ ಟಿಪ್ಸ್ ಸರಿ, ಸಲಹೇನೂ ಪ್ಯಾಕೇಜ್ ತರ ಕೊಡಕ್ಕೆ ಅದೇನು ಗ್ಯಾರಂಟಿ ಸ್ಕೀಮಾ? ವಿದೇಶಿ ವಿನಿಮಯ ಮಿತಿಮೀರುದ್ರೆ ಸಂಸಾರ ಅಯೋಮಯ ಆಗೋಗುತ್ತೆ ಅಷ್ಟೇ! ಹೊಸ ಚಿನ್ನ ಕೊಳ್ಳೋದು ಬೇಡ, ಇರೋದನ್ನೇ ಹೊಸದು ಮಾಡ್ಕೊಂಡು ಆಚೆನಾದ್ರೂ ಹೋಗೋದು ಬೇಡ್ವಾ?' ಕೊಂಕು ತೆಗೆದರು ಪದ್ದಮ್ಮ.

'ಅಯ್ಯೋ ನಿನ್ನ, ಇರೋದು ಹೊಸಾದು ಮಾಡ್ಕೊಳೋದು ಅಂದ್ರೆ ನಿನ್ ಒಡವೆ ಕರಗುಸ್ತೀಯಾ?'

'ನಂದ್ಯಾಕೆ ಕರಗುಸ್ಲಿ? ಸ್ವದೇಶಿ ವಿನಿಮಯ! ಅತ್ತೇದು, ನಿಮ್ದು ಒಡವೆ ಕರಗಿಸೋದು. ಮುಂದಿನ ವರ್ಷ ನೀವು ಹೊಸ ಚಿನ್ನ ಕೊಂಡ್ಕೊಳ್ಳಿ. ಮೋದಿ ಹೇಳಿರೋದು ಚಿನ್ನ ಕೊಳ್ಳಬೇಡಿ ಅಂತ, ಚಿನ್ನ ಕೀಳಬೇಡಿ ಅಂತ ಹೇಳಿಲ್ವಲ್ಲ?'

ಪರ್ಮೇಶಿ ಬಾಯ್ ಬಿಟ್ಕೊಂಡು ಪದ್ದಮ್ಮನನ್ನೇ ನೋಡುತ್ತಾ ಕುಳಿತ.

## ಸಂಗತ

# 'ನೀಡುವ ಖುಷಿ'ಯ ಹಿಂದೆ ವಿಜ್ಞಾನದ ಮುಖ

**ಒಂದು ಮೇಣದಬತ್ತಿ ಇನ್ನೊಂದನ್ನು ಬೆಳಗಿಸಿದಾಗ ಅದರ ಪ್ರಕಾಶಮಾನವೂ ಹೆಚ್ಚುವಂತೆ, ವ್ಯಕ್ತಿಯು ಹಂಚಿಕೊಳ್ಳುವುದರಿಂದ ಇರುವುದು ಮತ್ತಷ್ಟು ಹೆಚ್ಚುತ್ತದೆ.**

● ಡಾ. ಅಚ್ಯುತ ಸಮಂತ

**ಸಾಮಾನ್ಯವಾಗಿ** ನಾವೆಲ್ಲ 'ಸ್ವೀಕರಿಸುವುದು' ಒಳ್ಳೆಯದೆಂದು ಭಾವಿಸುತ್ತೇವೆ. ಅದರ ಆನಂದ ಕ್ಷಣಿಕ. ಸ್ಥಿರವಾದ, ಶಾಂತಿಯಿಂದ ಕೂಡಿದ, ಶಾಶ್ವತವಾದ ಖುಷಿ 'ಕೊಡು'ವುದರಲ್ಲಿದೆ. ಇಡೀ ಪ್ರಪಂಚವೆಲ್ಲ ಮರೆತರೂ ನಿಮ್ಮಲ್ಲಿರುವ ಆನಂದವು ಸದಾ ಉಳಿದುಬಿಡುತ್ತದೆ.

ಭಗವದ್ಗೀತೆಯು ಇದನ್ನು 'ನಿಷ್ಕಾಮ ಕರ್ಮ' ಎಂದು ಹೇಳುತ್ತದೆ. ಮುಂದೆ ಸಿಗುವ ಫಲಿತಾಂಶದ ಮೇಲೆ ಅವಲಂಬನೆ ಇಲ್ಲದ ಕೆಲಸವಿದು. ನಿಮ್ಮಲ್ಲಿರುವುದನ್ನು ನೀಡಿ, ಮತ್ತು ಮುಕ್ತರಾಗಿ. ನನಗೇನಾದರೂ ಸಿಗುತ್ತದೆ ಎಂಬ ನಿರೀಕ್ಷೆಯಲ್ಲಿ ಏನನ್ನೂ ಯಾರಿಗೂ ಕೊಡಬೇಡಿ. ಇತರರು ನೋಡಲಿ ಎಂದು ನೀಡಬೇಡಿ. ಕೊಡುವುದು ಆತ್ಮದ ಸಹಜವಾದ ಸ್ಥಿತಿ. ಶ್ರೀಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ: ಕ್ರಿಯೆ ಮಾತ್ರ ನಿಮ್ಮದು. ಬುದ್ಧನು ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಜಾಗೃತಿಯ ಹಾದಿಯಲ್ಲಿ ಮೊದಲ ಹೆಜ್ಜೆಯಾಗಿ ದಾನವನ್ನು ಇರಿಸಿದ.

ಕುರಾನ್‌ನಲ್ಲಿ 'ಸದಕಾ'ದ ಬಗ್ಗೆ ಹೇಳಲಾಗುತ್ತದೆ; ಅದು ದಾನವಾಗಿ ಅಲ್ಲ, ಶುದ್ಧೀಕರಣವಾಗಿ. ನೀವು ನೀಡುವ ದಾನವು ನಿಮ್ಮ ಕೈಗಳನ್ನು ಬಿಡುವುದರಿಂದ ಪವಿತ್ರವಾಗುವುದಿಲ್ಲ. ಅದನ್ನು ಬಿಟ್ಟುಬಿಡುವುದರಿಂದ ನೀವು ಸ್ಪಷ್ಟವಾಗುತ್ತೀರಿ. ತ್ಜೆದಕಾದ ಯಹೂದಿ ಸಂಪ್ರದಾಯವು ದಾನವನ್ನು 'ದಯೆಯ ಕ್ರಿಯೆ' ಎಂದು ಕರೆಯಲು ನಿರಾಕರಿಸಿ, ಅದನ್ನು 'ನ್ಯಾಯ' ಎಂದು ಕರೆಯುತ್ತದೆ.

ಬುದ್ಧ ಮತ್ತು ಭಗವದ್ಗೀತೆಯ ನಂತರದ ಇಪ್ಪತ್ತೈದು ಶತಮಾನಗಳ ತರುವಾಯ, ಆಧುನಿಕ ವಿಜ್ಞಾನವು 'ಕೊಡು'ವ ಪರಿಕಲ್ಪನೆಯನ್ನು ಮನೆ ಬಾಗಿಲಿಗೆ ಬಂದಿದೆ. ಅಮೆರಿಕದ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಸಂಶೋಧಕರು ದಾನದ ಕುರಿತು ಸಂಶೋಧನೆ ಮಾಡಿದ್ದಾರೆ. ದಾನ ಮಾಡಿದಾಗ, ಮೆದುಳಿನ ಮೆಸೊಲಿಂಬಿಕ್ ವ್ಯವಸ್ಥೆ ಸಕ್ರಿಯಗೊಳ್ಳುತ್ತದೆ ಎಂದು ಕಂಡುಕೊಂಡಿದ್ದಾರೆ. ಅತ್ಯಾಧುನಿಕ ಪ್ರಯೋಗಾಲಯಗಳು ಇಲ್ಲದೆಯೂ ಪ್ರಾಚೀನ ಕಾಲದಲ್ಲಿ ಜನರು ಇದನ್ನು ತಿಳಿದಿದ್ದರು. ಅವರು ಜೀವನವನ್ನು ಹಾಗೆಯೇ ಗಮನಿಸಿದ್ದರು. ಧಾನ್ಯವನ್ನು ಹಂಚಿಕೊಂಡ ರೈತನನ್ನು ಗಮನಿಸಿದರು ಮತ್ತು ಅವರ ಹೊಲಗಳು ಬಂಜರು ಬೀಳಲಿಲ್ಲ ಎನ್ನುವುದನ್ನು ಗಮನಿಸಿದರು. ನೆರೆಹೊರೆಯಲ್ಲಿರುವ ಮಗುವಿಗೆ ಆಹಾರವನ್ನು ನೀಡುವ ತಾಯಿಯನ್ನು ಗಮನಿಸಿದರು ಮತ್ತು ಆಕೆಯ ಸ್ವಂತ ಮಕ್ಕಳು ಹಸಿವಿನಿಂದ ಬಳಲಲಿಲ್ಲ ಎಂದು ಗಮನಿಸಿದರು. ಹಂಚಿಕೊಳ್ಳುವುದರಿಂದ ಏನೂ ಕಡಿಮೆಯಾಗುವುದಿಲ್ಲ.

ಅದು ಇರುವುದನ್ನು ಇನ್ನಷ್ಟು ಹೆಚ್ಚಿಸುತ್ತದೆ ಎಂಬ ತೀರ್ಮಾನಕ್ಕೆ ಅವರು ಬಂದರು. ನಾನು ಇದನ್ನೆಲ್ಲ ಧರ್ಮ ಗ್ರಂಥದಿಂದ, ವಿಜ್ಞಾನದಿಂದ ಕಲಿತಿಲ್ಲ; ಕಪ್ ಚಹಾದಿಂದ ಕಲಿತಿದ್ದೇನೆ.

ನಾಲ್ಕನೇ ವಯಸ್ಸಿನಲ್ಲಿ ತಂದೆಯನ್ನು ಕಳೆದುಕೊಂಡೆ. ನಾನಾಗ ಕಟಕ್‌ನ ಕಲಾರಬಂಕಾ ಗ್ರಾಮದಲ್ಲಿದ್ದೆ. ನನ್ನ ತಾಯಿಗೆ ಏಳು ಮಕ್ಕಳು. ತುತ್ತು ಅನ್ನಕ್ಕೂ ಗತಿ ಇಲ್ಲದ ದಿನಗಳಿದ್ದವು. ಐದು ವರ್ಷದವನಿದ್ದಾಗ ಕೆಲವು ಆಣೆಗಳನ್ನು ಸಂಪಾದಿಸಲು ಸಣ್ಣಪುಟ್ಟ ಕೆಲಸ ಮಾಡಲು ಆರಂಭಿಸಿದೆ. ಗಳಿಸಿದ್ದನ್ನೆಲ್ಲ ಸ್ನೇಹಿತರೊಂದಿಗೆ ಹಂಚಿಕೊಂಡೆ. ಹಂಚಿಕೊಳ್ಳುವುದು ಸರಿ ಎಂದು ಮಗುವಾಗಿ ತಿಳಿದಿತ್ತು. ಇಬ್ಬರು ಸೇರಿ ಚಹಾ ಕುಡಿದರೆ ಅದರ ರುಚಿ ಹೆಚ್ಚುತ್ತದೆ. ಒಟ್ಟಿಗೆ ಜವಾಬ್ದಾರಿ ಹೊತ್ತುಕೊಂಡಾಗ ಅದು ಬಡತನವನ್ನು ಕಡಿಮೆ ಮಾಡುತ್ತದೆ. ಆ ಪ್ರವೃತ್ತಿ ನನ್ನನ್ನು ಬಿಡಲಿಲ್ಲ. ಅದು ಬೆಳೆಯಿತು. ಅದು 'ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ' (ಕೆಐಐಟಿ) ಆಯಿತು, ಎರಡು ಬಾಡಿಗೆ ಕೋಣೆಗಳಲ್ಲಿ ಐದು ಸಾವಿರ ರೂಪಾಯಿಗಳಿಂದ ನಿರ್ಮಿಸಿದ್ದು ಇಂದು ವಿಶ್ವವಿದ್ಯಾಲಯವಾಗಿದೆ. ಅದು 'ಕೆಐಎಸ್‌ಎಸ್' ಆಯಿತು, ಎಂಬತ್ತು ಸಾವಿರ ಬುಡಕಟ್ಟು ಮಕ್ಕಳಿಗೆ ಮನೆ ಮತ್ತು ಶಾಲೆಯಾಯಿತು. 2013ರಲ್ಲಿ, ಅದು 'ಆರ್ಟ್ ಆಫ್ ಗಿವಿಂಗ್' ಆಗಿ ಮಾರ್ಪಟ್ಟಿತು. ಆರ್ಟ್ ಆಫ್ ಗಿವಿಂಗ್ ಒಂದು ಸಂಘಟನೆಯಲ್ಲ. ಅದು ಒಂದು ಗುರುತಿಸುವಿಕೆ. ದಾನ ಮಾಡುವ ಬಯಕೆ ಹೊರಗಿನಿಂದ ಬೆಳೆಸಿಕೊಳ್ಳಬೇಕಾಗಿಲ್ಲ ಎಂದು ಗುರುತಿಸುವಿಕೆ. ಇದು ಎಲ್ಲೆಡೆ ಇರುತ್ತದೆ.

ಹದಿಮೂರು ವರ್ಷಗಳ ನಂತರ, ಆರ್ಟ್ ಆಫ್ ಗಿವಿಂಗ್ ಬೃಹತ್ತಾಗಿ ಬೆಳೆದಿದೆ. 220 ದೇಶಗಳಲ್ಲಿ 20 ದಶಲಕ್ಷಕ್ಕೂ ಹೆಚ್ಚು ಜನರು ಇದರ ಆಚರಣೆಯ ಭಾಗವಾಗಿದ್ದಾರೆ. ಈ ವರ್ಷವನ್ನು ವಿಶ್ವಸಂಸ್ಥೆಯು 'ಸುಸ್ಥಿರ ಅಭಿವೃದ್ಧಿಗಾಗಿ ಅಂತರರಾಷ್ಟ್ರೀಯ ಸ್ವಯಂಸೇವಕರ ವರ್ಷ' ಎಂದು ಘೋಷಿಸಿದೆ ಮತ್ತು ಈ ಹಂಚಿಕೆಯ ಸಂದೇಶವನ್ನು ಮುಂದಕ್ಕೆ ಸಾಗಿಸಲು ಆರ್ಟ್ ಆಫ್ ಗಿವಿಂಗ್, ವಿಶ್ವಸಂಸ್ಥೆಯ ಸ್ವಯಂಸೇವಕರೊಂದಿಗೆ ಸಹಭಾಗಿತ್ವ ಹೊಂದಲು ಹೆಮ್ಮೆಪಡುತ್ತದೆ. ಈ ವರ್ಷದ ನಮ್ಮ ಥೀಮ್ 'ಶೇರ್ ಟು ಶೈನ್'. ಇದರ ಅರ್ಥ ನೀವು ಏನಾಗಿದ್ದೀರೋ ಅದನ್ನು ಹಂಚಿಕೊಳ್ಳಿ. ನಿಮ್ಮ ಶಾಂತಿ, ನಿಮ್ಮ ಸಮಯ, ನಿಮ್ಮ ಜ್ಞಾನ, ಗಮನವನ್ನು ಹಂಚಿಕೊಳ್ಳಿ. ಹೇಗೆ ಸಂಪರ್ಕಿಸಬೇಕೆಂದು ತಿಳಿಯದೆ ಅದಕ್ಕಾಗಿ ಕಾಯುತ್ತಿರುವ ಯಾರೊಂದಿಗಾದರೂ ನಿಮ್ಮ ಉಪಸ್ಥಿತಿಯನ್ನು ಹಂಚಿಕೊಳ್ಳಿ.

ಉಪನಿಷತ್ತಿನ 'ಪೂರ್ಣಮದಃ ಪೂರ್ಣಮಿದಂ' ದಾನದ ಅತ್ಯಂತ ಸಂಕ್ಷಿಪ್ತ ವಿವರಣೆಯಾಗಿದೆ. ನೀವು ಹೃದಯಂತರಾಳದಿಂದ ನೀಡಿದಾಗ, ಏನನ್ನೂ ಕಳೆದುಕೊಳ್ಳುವುದಿಲ್ಲ. ಪೂರ್ಣತೆ ಮಾತ್ರವೇ ಉಳಿಯುತ್ತದೆ.

ಲೇಖಕ: ಆರ್ಟ್ ಆಫ್ ಗಿವಿಂಗ್, ಕೆಐಐಟಿ, ಮತ್ತು ಕೆಐಎಸ್‌ಎಸ್, ಭುವನೇಶ್ವರ, ಇದರ ಸ್ಥಾಪಕರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

## ಕೊಲ್ಲಿ ಯುದ್ಧ ಸೃಷ್ಟಿಸಿರುವ ಆರ್ಥಿಕ ಬಿಕ್ಕಟ್ಟಿಗೆ ಪ್ರಧಾನಿ ಅವರ ಮಿತವ್ಯಯದ ಕರೆ ಪರಿಹಾರವೇ?

# ವೈಫಲ್ಯ ಮುಚ್ಚುವ ತಂತ್ರ

• ನಾಗೇಗೌಡ ಕೆ.ಎಸ್.

ಪ್ರಭುತ್ವ (ಸ್ಟೇಟ್), ನಾಗರಿಕರು, ಮಾರುಕಟ್ಟೆ- ಇವು ಒಂದು ದೇಶದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ತ್ರಿಕೋನ ಇದ್ದಂತೆ. ಪ್ರಭುತ್ವ ಹಾಗೂ ಮಾರುಕಟ್ಟೆ, ನಾಗರಿಕರ ಆರ್ಥಿಕ ಚಟುವಟಿಕೆಗಳ ವರ್ತನೆಯನ್ನು ಪ್ರತಿಕ್ಷಣವೂ ಪ್ರಭಾವಿಸುತ್ತಿರುತ್ತವೆ. ಅಂತೆಯೇ ನಾಗರಿಕರ ರಾಜಕೀಯ ಹಾಗೂ ಸಾಮಾಜಿಕ ನಿಲುವುಗಳು, ಉನ್ಮಾದಗಳು ಕೂಡ ಮಾರುಕಟ್ಟೆ ಮತ್ತು ಪ್ರಭುತ್ವವನ್ನು ಪ್ರಭಾವಿಸುತ್ತಿರುತ್ತವೆ. ಇದೀಗ ಪ್ರಧಾನಿ ನರೇಂದ್ರ ಮೋದಿಯವರು ಮಿತವ್ಯಯಕ್ಕೆ ಕರೆ ಕೊಟ್ಟಿರುವುದು ಹೇಗಿದೆಯೆಂದರೆ, ನಾಗರಿಕರ ಸಾಮಾನ್ಯ ಆರ್ಥಿಕ ವರ್ತನೆಗಳನ್ನು ರಾಷ್ಟ್ರೀಯತೆಯ ಪ್ರಭಾವದ ನಾಗರಿಕ ವರ್ತನೆಯಾಗಿ ಪರಿವರ್ತನೆ ಮಾಡಿಕೊಳ್ಳಿ ಎಂದು ವಿನಂತಿ ರೂಪದಲ್ಲಿ ಒತ್ತಾಯ ಮಾಡಿದಂತಿದೆ. ಇಂತಹ ನಾಗರಿಕ ವರ್ತನೆಗಳ ಬದಲಾವಣೆಯನ್ನು ಮೋದಿಯವರು ಕಳೆದ ಹನ್ನೆರಡು ವರ್ಷಗಳಲ್ಲಿ ನಾಲ್ಕು ಬಾರಿ ಮಾಡಿದ್ದಾರೆ. ಆದರೆ, ನಾಗರಿಕರು ಪ್ರತಿಬಾರಿಯೂ ಮಾಡಿದ ಇಂತಹ ತ್ಯಾಗಕ್ಕೆ ಯಾವುದೇ ಪ್ರತಿಫಲ ಸಿಕ್ಕಿಲ್ಲ ಎನ್ನುವ ಸತ್ಯವನ್ನು ನೆನಪಿಸಿಕೊಳ್ಳಬೇಕಿದೆ.

ಮೋದಿ ಅವರು ವಿನಂತಿ ರೂಪದ ಒತ್ತಾಯವನ್ನು 2016ರ ಮೇನಲ್ಲಿ ಪ್ರಧಾನಮಂತ್ರಿ ಉಜ್ವಲ ಯೋಜನೆಯ (ಪಿಎಂಯುವೈ) ನೆಪದಲ್ಲಿ ದೇಶದ ನಾಗರಿಕರ ಮುಂದಿರಿಸಿದ್ದರು. ಪಿಎಂಯುವೈ ಅಡಿ ಹೆಚ್ಚು ಮಂದಿಗೆ ನೆರವು ನೀಡಲು ದೇಶದ ಶ್ರೀಮಂತರು ಮತ್ತು ಮಧ್ಯಮ ವರ್ಗದವರು ಅಡುಗೆ ಅನಿಲದ ಸಬ್ಸಿಡಿಯನ್ನು ಬಿಟ್ಟುಕೊಡಿ ಎಂದು ಮೋದಿಯವರು ಮನವಿ ಮಾಡಿದಾಗ ಅದಕ್ಕೆ ಸ್ಪಂದಿಸಿ ಸುಮಾರು ಒಂದು ಕೋಟಿ ನಾಗರಿಕರು ತಮ್ಮ ಆರ್ಥಿಕ ವರ್ತನೆಯನ್ನು ಬದಲಾಯಿಸಿಕೊಂಡರು. ಆದರೆ, ಆ ಯೋಜನೆಯು ಯಶಸ್ವಿಯಾಯಿತೇ ಎಂದು ಹತ್ತು ವರ್ಷಗಳ ನಂತರ ಪರಿಶೀಲಿಸಿದರೆ, ಅಂಕಿಅಂಶಗಳು ನಿರಾಸೆಯನ್ನುಂಟುಮಾಡುತ್ತವೆ.

2016ರ ನವೆಂಬರ್ 8ರಂದು ಮೋದಿ ನೇತೃತ್ವದ ಸರ್ಕಾರವು ಕೈಗೊಂಡ ನೋಟು ರದ್ದತಿಯೆಂಬ ಮತ್ತೊಂದು ಅಸ್ತ್ರ ಕೇವಲ ನಾಗರಿಕರ ಆರ್ಥಿಕ ವರ್ತನೆಗಳ ಮೇಲೆ ನಡೆಸಿದ ದಾಳಿ ಮಾತ್ರ ಆಗಿರಲಿಲ್ಲ; ಅದು ನಾಗರಿಕರ ಆರ್ಥಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕಿನ ಮೇಲೆ ನಡೆಸಿದ ದಾಳಿಯೂ ಆಗಿತ್ತು. ಆಗಲೂ ಮೋದಿಯವರು ನೂರು ದಿನಗಳ ಮಟ್ಟಿಗೆ ತ್ಯಾಗ ಮಾಡಲು ನಾಗರಿಕರಲ್ಲಿ ಮನವಿ ಮಾಡಿದ್ದರು. ದೇಶದ ಜನರು ಅದರಿಂದ ನೂರಾರು ಬಗೆಯ ಕಷ್ಟಗಳನ್ನು ಅನುಭವಿಸಿದ್ದನ್ನು ಇಲ್ಲಿ ಸ್ಮರಿಸಬೇಕು.

2017 ಜೂನ್ 30ರ ಮಧ್ಯರಾತ್ರಿಯಲ್ಲಿ ಮೋದಿ ಸರ್ಕಾರವು ಸಂವಿಧಾನಕ್ಕೆ 101ನೇ ತಿದ್ದುಪಡಿ ತರುವ ಮುಖಾಂತರ ಮಗದೊಂದು ಅಸ್ತ್ರವನ್ನು ನಾಗರಿಕರ ಮೇಲೆ ಪ್ರಯೋಗಿಸಿತು. ಈ ತಿದ್ದುಪಡಿಯ ಮೂಲಕ ಜಾರಿಗೊಳಿಸಿದ ಜಿಎಸ್‌ಟಿ ವ್ಯವಸ್ಥೆಯನ್ನು ಸ್ವತಃ ಮೋದಿಯವರು ಎರಡನೇ ಬಾರಿಗೆ ಸ್ವಾತಂತ್ರ್ಯ ಪಡೆದಿದ್ದೇವೆ ಎನ್ನುವ ರೀತಿಯಲ್ಲಿ ವ್ಯಾಖ್ಯಾನ ಮಾಡಿದ್ದರು. ಆದರೆ, ಜಿಎಸ್‌ಟಿ ವ್ಯವಸ್ಥೆಯು ಒಕ್ಕೂಟದ ಆರ್ಥಿಕ ವ್ಯವಸ್ಥೆಯನ್ನು 'ಒಂದು ದೇಶ, ಒಂದು ತೆರಿಗೆ' ಎನ್ನುವ ಘೋಷಣೆ ಅಡಿಯಲ್ಲಿ ಅತಿಯಾದ ಕೇಂದ್ರೀಕರಣದಡಿ ಸಿಲುಕಿಸಿತು. ದೇಶದ ಎಲ್ಲಾ ರಾಜ್ಯ ಸರ್ಕಾರಗಳು ತಮ್ಮ ಆರ್ಥಿಕ ಸಾರ್ವಭೌಮತೆಯನ್ನು ಸಂಪೂರ್ಣವಾಗಿ ಕಳೆದುಕೊಂಡವು. ದೇಶದ ಸಣ್ಣ, ಮಧ್ಯಮ ಗಾತ್ರದ ಉದ್ದಿಮೆಗಳು ನೋಟು ರದ್ದತಿ ಮತ್ತು ಜಿಎಸ್‌ಟಿ ದೆಸೆಯಿಂದ ಸಂಪೂರ್ಣವಾಗಿ ನೆಲಕಚ್ಚಿದವು. ಅಭಿವೃದ್ಧಿ ಹೊಂದಿದ ಆರ್ಥಿಕತೆಯಲ್ಲಿ ಯಾವಾಗಲೂ ಕಾರ್ಪೊರೇಟ್ ಮತ್ತು ನೇರ ತೆರಿಗೆಯಿಂದ ಹೆಚ್ಚಿನ ಆದಾಯವನ್ನು ಸರ್ಕಾರಗಳು ಪಡೆಯುತ್ತವೆ. ಆದರೆ ಜಿಎಸ್‌ಟಿ ಮುಖಾಂತರ ಪ್ರಭುತ್ವ ತಂದ ಪರೋಕ್ಷ ತೆರಿಗೆಯು ನಾಗರಿಕರ ಮೇಲೆ ಈಗಲೂ ತೆರಿಗೆ ಭಯೋತ್ಪಾದನೆಯನ್ನು ಮುಂದುವರಿಸುತ್ತಿದೆ. ಇದುವರೆಗೆ ಮೋದಿ ಅವರು ನಾಗರಿಕ ವರ್ತನೆಗಳ ಬದಲಾವಣೆಗೆ ವಿನಂತಿ ಮಾಡುವ ಮೂಲಕ ಜಾರಿಗೊಳಿಸಿದ ಕಾನೂನುಗಳು ದೇಶದ ಕೋಟ್ಯಂತರ ಬಡಜನರಿಗೆ ನಿರೀಕ್ಷಿತ ಫಲವನ್ನು ನೀಡಿಲ್ಲವೆಂದು ಹೇಳಬಹುದು.

2020ರ ಮಾರ್ಚ್ 24ರಂದು ಕೋವಿಡ್ ಕಾರಣಕ್ಕೆ ಮೋದಿ ಅವರು ನಾಗರಿಕರಲ್ಲಿ ಲಾಕ್‌ಡೌನ್‌ಗೆ ಮನವಿ ಮಾಡಿದರು. ಲಾಕ್‌ಡೌನ್‌ನಿಂದ ಕೋಟ್ಯಂತರ ಜನರು ಅನುಭವಿಸಿದ ಸಾವು–ನೋವು ಸಂಕಷ್ಟಗಳನ್ನು ಭಾರತೀಯರು ಮರೆಯಲಾಗದು. ಇಂತಹ ಸಂಕಷ್ಟದ ಸಂದರ್ಭದಲ್ಲಿ ದೇಶದ ಶೇ 24ರಷ್ಟು ಜನರ ತಿಂಗಳ ಆದಾಯ ಇದ್ದದ್ದು ₹3,000 ಮಾತ್ರ. ಇದೇ ವೇಳೆ, ದೇಶದ ನೂರು ಶತಕೋಟ್ಯಧೀಶರ ಸಂಪತ್ತು ₹12,97,822 ಕೋಟಿ ಹೆಚ್ಚಾಗಿತ್ತು. ಇಂತಹ ಘೋರ ಆರ್ಥಿಕ ಅಸಮಾನತೆಯ ಹೆಚ್ಚಳದ ಹೊಣೆಗಾರಿಕೆಯನ್ನು ಮೋದಿ ಅವರಲ್ಲದೇ ಮತ್ಯಾರು ಹೊರಬೇಕು?

ವರ್ತಮಾನದ ರಾಜಕೀಯ ಹಾಗೂ ಆರ್ಥಿಕ ತಲ್ಲಣಗಳನ್ನು ಸರಿಯಾಗಿ ಗ್ರಹಿಸುವಲ್ಲಿ ಈಗಾಗಲೇ ನಾಲ್ಕು ಬಾರಿ ಸೋತಿರುವ ಮೋದಿಯವರು ಇದೀಗ ಐದನೇ ಬಾರಿ ನಾಗರಿಕರಿಗೆ ತಮ್ಮ ಆರ್ಥಿಕ ವರ್ತನೆಗಳನ್ನು ಬದಲಾಯಿಸಿಕೊಳ್ಳುವಂತೆ ವಿನಂತಿ ರೂಪದ ಒತ್ತಾಯವನ್ನು ಮಾಡಿದ್ದಾರೆ. ಈ ಬಾರಿಯೂ ವರ್ತಮಾನದ ವಿದೇಶಾಂಗ, ರಾಜಕೀಯ ಸಂಗತಿಗಳನ್ನು ಗ್ರಹಿಸಿ ದೇಶ ಮತ್ತು ದೇಶದ ಜನರನ್ನು ಭವಿಷ್ಯಕ್ಕೆ ಸಿದ್ಧಗೊಳಿಸುವಲ್ಲಿ ಮೋದಿ ಅವರು ಸಂಪೂರ್ಣವಾಗಿ ವಿಫಲವಾಗಿ, ತಮ್ಮ ಅದೇ ಹಳೇ ಮಾದರಿಯ ಮಾತಿನ ಜಾಣ್ಮೆಯ ಮುಖಾಂತರ ನಾಗರಿಕರಿಗೆ ರಾಷ್ಟ್ರೀಯತೆಯ ಉನ್ಮಾದವನ್ನು ಉಣಬಡಿಸಿ ತಮ್ಮ ಸರ್ಕಾರದ ವೈಫಲ್ಯವನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ.

ದೇಶದಲ್ಲಿ ಶೇ 90ರಷ್ಟು ಜನರು ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಿದ್ದೂ ಮನೆಯಿಂದಲೇ ಕೆಲಸ ಮಾಡಿ, ವಿದೇಶ ಪ್ರವಾಸವನ್ನು ಮುಂದೂಡಿ ಎನ್ನುವ ಸಂಕಥನವನ್ನು ನಾಗರಿಕರ ಮುಂದಿಡುತ್ತಿದ್ದಾರೆ. ಇದು ಬಡಜನರ ವರ್ತಮಾನದ ಬದುಕನ್ನು ವ್ಯಂಗ್ಯ ಮಾಡಿದಂತೆ.

ಮತ್ತೊಂದು, ಚಿನ್ನ ಖರೀದಿ ಮಾಡಬೇಡಿ ಎಂಬ ವಿನಂತಿ. ಅದರ ಜೊತೆಗೆ ಆಮದು ಸುಂಕದಲ್ಲಿ ಹೆಚ್ಚಳ ಬೇರೆ. ನೋಟು ರದ್ದತಿಯ ಸಂದರ್ಭದಲ್ಲಿ ಅಸಂಘಟಿತ ಮತ್ತು ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಕಡೆಗಣಿಸಿದ್ದರೋ, ಅದೇ ರೀತಿಯಲ್ಲಿ ಈ ಬಾರಿಯೂ ಗ್ರಾಮೀಣ ಆರ್ಥಿಕ ವ್ಯವಸ್ಥೆಯನ್ನು ಕಡೆಗಣಿಸಿದ್ದಾರೆ. ಭಾರತಕ್ಕೆ ಆಮದಾಗುವ ಒಟ್ಟು ಚಿನ್ನದಲ್ಲಿ ಶೇ 55–ಶೇ 58ರಷ್ಟು ಭಾಗವನ್ನು ಗ್ರಾಮೀಣ ಭಾರತದ ಜನರು ಬಳಸಿಕೊಳ್ಳುತ್ತಾರೆ. ನಮ್ಮ ಗ್ರಾಮೀಣ ಆರ್ಥಿಕತೆಯ ಉಳಿತಾಯ, ವ್ಯವಹಾರ, ಮದುವೆ, ಸಂಸ್ಕೃತಿ ಎಲ್ಲವೂ ಚಿನ್ನದ ಮೇಲೆಯೇ ಅವಲಂಬಿತವಾಗಿವೆ. ಚಿನ್ನದ ಮೇಲಿನ ಆಮದು ಸುಂಕದ ಹೆಚ್ಚಳವು ಗ್ರಾಮೀಣ ಜನರ ಬದುಕಿನ ಮೇಲೆ ಬೀರಬಹುದಾದ ಆರ್ಥಿಕ ದುಷ್ಪರಿಣಾಮಗಳ ಕುರಿತು ಮೋದಿ ಅವರು ಊಹೆ ಮಾಡಲು ಸಾಧ್ಯವೇ?

ಇನ್ನೊಂದು, ಪೆಟ್ರೋಲ್, ಡೀಸೆಲ್ ಕಡಿಮೆ ಉಪಯೋಗಿಸಿ ಎಂದು ಹೇಳಿರುವುದು. ರಷ್ಯಾದಿಂದ ರಿಯಾಯಿತಿಯಲ್ಲಿ ಆಮದು ಮಾಡಿಕೊಂಡ ಕಚ್ಚಾತೈಲದ ಲಾಭವನ್ನು ಪ್ರಧಾನಿಯವರು ದೇಶದ ಜನರಿಗೆ ವರ್ಗಾಯಿಸಿದ್ದಾರೆಯೇ ಎನ್ನುವ ಪ್ರಶ್ನೆ ಮೂಡುತ್ತದೆ; ಅಂಬಾನಿ ಅವರಿಗೆ ಸುಮಾರು ₹6,850 ಕೋಟಿ ಲಾಭವಾಗಿದೆಯಲ್ಲಾ ಎನ್ನುವ ಉತ್ತರವೂ ದೊರಕುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಸರ್ಕಾರ ಮತ್ತು ಕಂಪನಿಗಳು ಪೆಟ್ರೋಲ್ ಡೀಸೆಲ್‌ನ ಮುಖಾಂತರ ಲಕ್ಷಾಂತರ ಕೋಟಿ ಆದಾಯ ಗಳಿಸಿವೆ. ಇದರೊಂದಿಗೆ ನೆನಪು ಮಾಡಿಕೊಳ್ಳಬೇಕಾದ ಮತ್ತೊಂದು ಸಂಗತಿಯೆಂದರೆ, 2014ರ ಚುನಾವಣೆಯ ಸಂದರ್ಭದಲ್ಲಿ ರೂಪಾಯಿ ಮೌಲ್ಯವನ್ನು ಮಾರುಕಟ್ಟೆ ನಿರ್ಧರಿಸುತ್ತದೆ ಎನ್ನುವುದು ನಮ್ಮ ಪ್ರಧಾನಿಯವರಿಗೆ ಚೆನ್ನಾಗಿಯೇ ಗೊತ್ತಿದ್ದರೂ ಪ್ರಜ್ಞಾಪೂರ್ವಕವಾಗಿ ರೂಪಾಯಿ ಮೌಲ್ಯವನ್ನು ರಾಷ್ಟ್ರೀಯತೆಯ ಘನತೆಗೆ ತಳಕು ಹಾಕಿ ದೇಶದ ಜನರ ಆರ್ಥಿಕ ವಿವೇಕದ ಜೊತೆಗೆ ರಾಜಕೀಯ ಮಾಡಿದರು. ಕಳೆದ ಒಂದೂವರೆ ವರ್ಷದಿಂದ ರೂಪಾಯಿ ಮೌಲ್ಯ ಕುಸಿಯುತ್ತಿದ್ದರೂ ಆರ್ಥಿಕ ವ್ಯವಸ್ಥೆ ಹದಗೆಡುತ್ತಿದೆ ಎನ್ನುವ ಸತ್ಯವನ್ನು ದೇಶದ ಜನರಿಂದ ಮರೆಮಾಚಿ ಇದೀಗ ಯುದ್ಧದ ಕಾರಣದಿಂದಲೇ ರೂಪಾಯಿ ಮೌಲ್ಯ ಕುಸಿಯುತ್ತಿದೆ ಎಂದು ತಮ್ಮ ಮಾತಿನ ಜಾಣ್ಮೆಯನ್ನು ತೋರಿಸುತ್ತಿದ್ದಾರೆ. ಯುದ್ಧಕ್ಕೂ ಮುಂಚಿನಿಂದಲೇ ದೇಶದ ಆರ್ಥಿಕ ವ್ಯವಸ್ಥೆ ಹದಗೆಟ್ಟಿರುವುದರ ಬಗ್ಗೆ ಜನರಿಗೆ ತಿಳಿಸದ ಮೋದಿ ಅವರ ಈ ನಡೆ ರಾಷ್ಟ್ರೀಯತೆಗೆ ಮಾಡುವ ದ್ರೋಹವಲ್ಲವೇ?

ಇದರ ಜತೆಗೆ, ರಸಗೊಬ್ಬರದ ಬಳಕೆಯನ್ನು ಕಡಿಮೆ ಮಾಡಿ ಸಾವಯವ ಕೃಷಿ ಮಾಡಿ ಎನ್ನುವ ವಿನಂತಿ ಮಾಡಿದ್ದಾರೆ. ಅದರ ಹಿಂದೆ, ಅವರ ಮಾತಿನ ಜಾಣ್ಮೆ ಮತ್ತು ಅಧಿಕಾರದಿಂದ ದೇಶದ ಜನರ ವಿವೇಕವನ್ನು ಅನಾಯಾಸವಾಗಿ ಮಂಕುಗೊಳಿಸಿ, 'ಜುಮ್ಲಾ' ರಾಜಕೀಯವನ್ನು ಯಾವುದೇ ಅಡೆತಡೆ ಇಲ್ಲದೇ ಮುಂದುವರಿಸಬಲ್ಲೆ ಎಂಬ ಮನಃಸ್ಥಿತಿ ಸ್ಪಷ್ಟವಾಗಿ ಕಾಣುತ್ತದೆ. ದೇಶ ಎದುರಿಸಿದ ಎಂಥದ್ದೇ ಸಂದರ್ಭಗಳಲ್ಲೂ ಯಾವುದೇ ಹೆಚ್ಚುವರಿ ಶ್ರಮ ಅಥವಾ ಹೂಡಿಕೆ ಇಲ್ಲದೆ ಇಲ್ಲಿನ ಶತಕೋಟ್ಯಧೀಶರು ಸಾವಿರಾರು ಕೋಟಿ ಲಾಭ ಗಳಿಸಿದ್ದಾರೆ. ಪ್ರಭುತ್ವದ ಪ್ರತಿನಿಧಿಯಾದ ಮೋದಿ ಅವರು ರಾಷ್ಟ್ರೀಯತೆಯ ಹೆಸರಿನಲ್ಲಿ ನಾಗರಿಕರ ಆರ್ಥಿಕ ವರ್ತನೆಯನ್ನು ತಮ್ಮ ಮಾತಿನ ಮೋಡಿಯಿಂದ ಬದಲಾಯಿಸಿ, ಹೆಚ್ಚಿನ ಲಾಭ ಗಳಿಸಲು ಶತಕೋಟ್ಯಧೀಶರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆಯೇ ಹೊರತು ಸಾಮಾನ್ಯ ನಾಗರಿಕರಿಗೆ ಯಾವ ವಿಧದಲ್ಲೂ ಅನುಕೂಲ ಮಾಡಿಕೊಟ್ಟಿಲ್ಲ. ಹೀಗೆ ನಾಲ್ಕು ಬಾರಿ ದೇಶದ ಜನರಿಗೆ ಅನ್ಯಾಯ ಮಾಡಿರುವ ಮೋದಿ ಅವರು ಈಗಲಾದರೂ ನೈತಿಕ ಜವಾಬ್ದಾರಿಯಿಂದ ನಡೆದುಕೊಳ್ಳಲಿ ಎಂದು ಆಶಿಸೋಣ.

ಲೇಖಕ: ಪ್ರಾಧ್ಯಾಪಕ

> ವರ್ತಮಾನದ ರಾಜಕೀಯ ಹಾಗೂ ಆರ್ಥಿಕ ತಲ್ಲಣಗಳನ್ನು ಸರಿಯಾಗಿ ಗ್ರಹಿಸುವಲ್ಲಿ ಈಗಾಗಲೇ ನಾಲ್ಕು ಬಾರಿ ಸೋತಿರುವ ಮೋದಿಯವರು ಇದೀಗ ಐದನೇ ಬಾರಿ ನಾಗರಿಕರಿಗೆ ತಮ್ಮ ಆರ್ಥಿಕ ವರ್ತನೆಗಳನ್ನು ಬದಲಾಯಿಸಿಕೊಳ್ಳುವಂತೆ ವಿನಂತಿ ರೂಪದ ಒತ್ತಾಯವನ್ನು ಮಾಡಿದ್ದಾರೆ. ಈ ಬಾರಿಯೂ ವರ್ತಮಾನದ ವಿದೇಶಾಂಗ, ರಾಜಕೀಯ ಸಂಗತಿಗಳನ್ನು ಗ್ರಹಿಸಿ ದೇಶ ಮತ್ತು ದೇಶದ ಜನರನ್ನು ಭವಿಷ್ಯಕ್ಕೆ ಸಿದ್ಧಗೊಳಿಸುವಲ್ಲಿ ಮೋದಿ ಅವರು ಸಂಪೂರ್ಣವಾಗಿ ವಿಫಲವಾಗಿ, ತಮ್ಮ ಅದೇ ಹಳೇ ಮಾದರಿಯ ಮಾತಿನ ಜಾಣ್ಮೆಯ ಮುಖಾಂತರ ನಾಗರಿಕರಿಗೆ ರಾಷ್ಟ್ರೀಯತೆಯ ಉನ್ಮಾದವನ್ನು ಉಣಬಡಿಸಿ ತಮ್ಮ ಸರ್ಕಾರದ ವೈಫಲ್ಯವನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ

ಕಲೆ: ಸಂತೋಷ್ ಸಸಿಹಿತ್ಲು

# ಮೋದಿ ಜನಪ್ರಿಯತೆ ಪಣಕ್ಕೆ

• ವಿಶ್ವೇಶ್ವರ ಭಟ್ ಬಂಗಾರಡ್ಕ

ಕೊಲ್ಲಿಯುದ್ಧದ ಕಾರಣಕ್ಕಾಗಿ ಜಾಗತಿಕ ಆರ್ಥಿಕತೆ ತಲ್ಲಣಗೊಂಡಿದೆ. ಅದರಲ್ಲೂ ತೈಲ ಬೇಡಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಆಮದಿನ ಮೂಲಕವೇ ಪೂರೈಸುವ ದೇಶಗಳಿಗೆ ಈ ಒತ್ತಡ ಅಗಾಧ. ಈ ಹಿನ್ನೆಲೆಯಲ್ಲಿ ಭಾರತದ ಆರ್ಥಿಕತೆಯ ಮೇಲೆ ಕೊಲ್ಲಿ ಯುದ್ಧ ಪ್ರತಿಕೂಲ ಪರಿಣಾಮ ಬೀರಿದೆ. ಭಾರತದ ತೈಲ ಆಮದು ಒಟ್ಟು ಬೇಡಿಕೆಯ ಅಂದಾಜು ಶೇ 90ರಷ್ಟು ಇರುವುದರ ಜತೆಗೆ ದೇಶದ ಒಟ್ಟು ಆಮದಿನಲ್ಲಿ ತೈಲದ ಪಾಲು ಬಹಳ ದೊಡ್ಡದಾದ ಕಾರಣ ಆರ್ಥಿಕತೆಯ ಮೇಲೆ ಒತ್ತಡವನ್ನು ಸೃಷ್ಟಿ ಮಾಡುತ್ತದೆ.

ಸರ್ಕಾರಗಳು ಇಂಥ ಸಮಯದಲ್ಲಿ ಅನಿವಾರ್ಯವಾಗಿ 1) ಬೆಲೆ ಏರಿಕೆ 2) ವಸ್ತುಗಳ ಪಡಿತರ ಹಾಗೂ 3) ಆಮದು ಶುಲ್ಕ ಹಾಕುವುದು ಮೊದಲಾದ ಕ್ರಮಗಳನ್ನು ತೆಗೆದುಕೊಳ್ಳುತ್ತವೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ಮೇಲಿನ ಕ್ರಮಗಳನ್ನು ಕೈಗೊಳ್ಳುವುದಕ್ಕೂ ಮೊದಲು, ಆರೇಳು ವಿನಂತಿಗಳನ್ನು ದೇಶದ ಮುಂದೆ ಇಡುವ ಮೂಲಕ ರಾಜಕೀಯವಾಗಿ ಸವಾಲು ಎನಿಸಿದರೂ ತಮ್ಮ ಜನಪ್ರಿಯತೆಯನ್ನು ಪಣವಾಗಿ ಇಡುವ ಧೈರ್ಯ ಮಾಡಿದ್ದಾರೆ. ಇದಕ್ಕೆ ಜನ ಪೂರಕವಾಗಿ ಸ್ಪಂದಿಸಿ, ಪರಿಸ್ಥಿತಿಯ ಮೇಲೆ ಸ್ವಲ್ಪ ಹತೋಟಿ ದೊರೆತರೆ ನಂತರ ಅನಿವಾರ್ಯ ಎನಿಸಿದರೆ ಮೇಲಿನ ಹೆಜ್ಜೆಗಳನ್ನು ತೆಗೆದುಕೊಳ್ಳುವ ಯೋಚನೆ ಮಾಡಿದ್ದಾರೆ.

ಪ್ರಸಿದ್ಧ ಅರ್ಥಶಾಸ್ತ್ರಜ್ಞ ಗುನ್ನಾರ್ ಮೈರ್ಡಾಲ್, 'ಆರ್ಥಿಕ ನೀತಿಗಳ ಮೇಲೆ ಸ್ವಾಭಾವಿಕವಾಗಿಯೇ ರಾಜಕೀಯದ ಪ್ರಭಾವ ಹೆಚ್ಚು ಇರುವ ಕಾರಣ, ಅದು ಪರಿಪೂರ್ಣ ಫಲಿತಾಂಶ ಕೊಡಲು ವಿಫಲ ಆಗುತ್ತದೆ ಹಾಗೂ ಆ ಸಮಯದಲ್ಲಿ ಅರ್ಥಶಾಸ್ತ್ರವನ್ನು ವಿಜ್ಞಾನ ಎಂದು ಕರೆಯುವುದು ಕಷ್ಟ ಎನಿಸುತ್ತದೆ' ಎಂದು ಹೇಳಿದ್ದರು. ರಾಜಕೀಯ ನಾಯಕರು ಗಣನೀಯ ಆರ್ಥಿಕ ಸಲಹೆಗಳ ಬಗ್ಗೆ ಮೊದಲಿಗೆ ರಾಜಕೀಯ ಲಾಭನಷ್ಟಗಳ ದೃಷ್ಟಿಯಲ್ಲಿ ತುಲನೆ ಮಾಡಿ ನಂತರ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಇದಕ್ಕೆ ಕಾರಣ. ಆದರೆ, ಮೋದಿ ಅವರು ಅಂದು ಅಡುಗೆ ಅನಿಲ (ಎಲ್‌ಪಿಜಿ) ಸಬ್ಸಿಡಿ ಬಿಡಿ ಎಂದು ವಿನಂತಿ ಮಾಡಿದಾಗ ಸಿಕ್ಕ ಬಹು ದೊಡ್ಡ ಬೆಂಬಲದ ರೀತಿಯಲ್ಲಿ ಈ ಬಾರಿಯೂ ಜನರಿಂದ ಸ್ಪಂದನೆ ಸಿಗುವ ನಿರೀಕ್ಷೆಯಲ್ಲಿದ್ದಾರೆ.

ಹಾಗಾದರೆ, ಕೊಲ್ಲಿ ಯುದ್ಧ ಯಾವ ರೀತಿಯಲ್ಲಿ ನಮ್ಮ ಆರ್ಥಿಕತೆಯ ಮೇಲೆ ಪ್ರಭಾವ ಬೀರುತ್ತಿದೆ ಎನ್ನುವುದನ್ನು ವಿಶ್ಲೇಷಣೆ ಮಾಡುವುದು ಸೂಕ್ತ. ಕೋವಿಡ್ ಸಮಯದಲ್ಲಿ ಅನಿವಾರ್ಯವಾಗಿ ವಿತ್ತೀಯ ಕೊರತೆಯನ್ನು ಹೆಚ್ಚುವರಿ ಸಾಲಗಳ ಮೂಲಕ ಸರ್ಕಾರ ಏರಿಸಬೇಕಾಗಿ ಬಂದಿತ್ತು. 2023ರ ನಂತರ ಸರ್ಕಾರ ವಿತ್ತೀಯ ಶಿಸ್ತು (fiscal discipline) ಪಾಲನೆಯ ದೃಢಸಂಕಲ್ಪ ಮಾಡಿ ಸಾಲದ ಪ್ರಮಾಣವನ್ನು ಕಡಿತಗೊಳಿಸುತ್ತಾ ಬಂದಿದೆ. ಶೇ 7ಕ್ಕಿಂತಲೂ ಮೇಲೆ ಹೋಗಿದ್ದ ವಿತ್ತೀಯ ಕೊರತೆಯನ್ನು ಈ ವರ್ಷ ಶೇ 4.4ಕ್ಕೆ ಇಳಿಸಿದೆ. ರಾಜಕೀಯವಾಗಿ ಇದು ಪೂರಕ ಅಲ್ಲವಾದರೂ ಸರ್ಕಾರ ಇದರಲ್ಲಿ ಯಾವುದೇ ರಾಜಿಗೆ ಹೋಗಿಲ್ಲ.

ಈಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆ ಆಗಿರುವುದು ಮಾತ್ರವಲ್ಲದೇ ಅದು ಸದ್ಯದಲ್ಲಿ ಇಳಿಯಬಹುದು ಎನ್ನುವ ನಿರೀಕ್ಷೆಯೂ ಕಾಣಿಸುತ್ತಿಲ್ಲ. ಹಾಗಾಗಿ, ಸರ್ಕಾರ ಭರಿಸಬೇಕಾದ ತೈಲ ಆಮದಿನ ಖರ್ಚು ತುಂಬಾ ಏರುತ್ತಿದೆ. ಅಂದರೆ, ಈ ವರ್ಷದ ಬಜೆಟ್ ಲೆಕ್ಕಾಚಾರ ಬುಡಮೇಲು ಆಗಿ ಸಾಲದ ಪ್ರಮಾಣ ಮತ್ತೆ ಏರಬಹುದು ಎನ್ನುವ ಸ್ಥಿತಿ ಇದೆ. ಈಗಾಗಲೇ ಅಮೆರಿಕವು ರಷ್ಯಾ ತೈಲ ಆಮದಿನ ಕಾರಣಕ್ಕಾಗಿ ನಮಗೆ ಹಲವು ಸಮಸ್ಯೆಗಳನ್ನು ಒಡ್ಡಿದ್ದ ಮೇಲೆ ಈಗ ರಷ್ಯಾ ತೈಲ ಕೂಡ ಸುಲಭದಲ್ಲಿ ಬರುತ್ತಿಲ್ಲ ಮತ್ತು ಬಂದರೂ ಅದರಲ್ಲಿ ವರಮಾನ ಮೊದಲಿಗಿಂತ ಕಡಿಮೆಯಾಗಿದೆ.

ಎರಡನೆಯದಾಗಿ, ತೈಲ ಆಮದಿಗೆ ನಾವು ಡಾಲರ್ ಕೊಡಬೇಕಾಗಿ ಬರುವಾಗ ನಮ್ಮ ವಿದೇಶಿ ವಿನಿಮಯದ ಸಂಗ್ರಹ ಕಡಿಮೆಯಾಗುತ್ತಿರುವುದು ಸ್ಪಷ್ಟ. ಅಲ್ಲದೇ ಡಾಲರ್ ಬೇಡಿಕೆ ನಮ್ಮ ಮಟ್ಟಿಗೆ ಏರಿಕೆಯಾದಂತೆ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಾ ಬಂದು, ಈಗ ಅದು ₹96ರ ಆಸುಪಾಸಿನಲ್ಲಿದೆ. ಇದಕ್ಕೆ ಇನ್ನೊಂದು ಕಾರಣ, ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಓಡಾಟಕ್ಕೆ ಅಡ್ಡಿಯಾಗಿರುವುದು. ಹಡಗುಗಳ ಸಂಚಾರದಲ್ಲಿ ಕಡಿತ ಆಗಿರುವುದರಿಂದ ನಮಗೆ ರಫ್ತು ಮಾಡಲೂ ತೊಡಕಾಗಿದೆ. ಸಹಜವಾಗಿಯೇ ಇದು ಡಾಲರ್ ಬೇಡಿಕೆಯನ್ನು ಹೆಚ್ಚಿಸಿದೆ.

ಮೂರನೆಯದಾಗಿ, ತೈಲದ ದರ ಏರಿಕೆಯ ಜತೆ ಸರಬರಾಜು ಕೂಡ ಸಂಕಷ್ಟದಲ್ಲಿ ಇರುವ ಕಾರಣ ನಿತ್ಯದ ತೈಲ ಬೇಡಿಕೆ ಪೂರೈಸುವುದೂ ಸರ್ಕಾರದ ಎದುರಿನ ದೊಡ್ಡ ಸವಾಲು. ಎಚ್ಚರಿಕೆ ವಹಿಸಿಲ್ಲವಾದರೆ ನಮ್ಮ ತೈಲ ಸಂಗ್ರಹದಿಂದ ಪೂರೈಕೆ ಮಾಡಬೇಕಾಗಬಹುದು. ಹಾಗಾದರೆ, ಅದು ಅಪಾಯಕಾರಿ. ಅಲ್ಲದೇ ನಮ್ಮ ತೈಲ ದಾಸ್ತಾನು ಚೀನಾದಂತಹ ದೇಶಕ್ಕೆ ಹೋಲಿಸಿದರೆ ಬಹಳ ಕಡಿಮೆ.

ಈ ಎಲ್ಲ ಕಾರಣಕ್ಕಾಗಿ ಪ್ರಧಾನಿಯವರು ಜನರೇ ಸಹಕಾರ ನೀಡಿ ತೈಲ ಬೇಡಿಕೆಯನ್ನು ಕಡಿತಗೊಳಿಸಿದರೆ ದೇಶಕ್ಕೆ ಅನುಕೂಲ ಸ್ಥಿತಿ ಲಭ್ಯ ಆಗುವುದನ್ನು ಮನಗಂಡು ತಮ್ಮ ಜನಪ್ರಿಯತೆಯನ್ನು ಉಪಯೋಗಿಸಿ ಜನ ಬೆಂಬಲಕ್ಕೆ ವಿನಂತಿ ಮಾಡಿರುವುದು ಸಕಾರಾತ್ಮಕ ಬೆಳವಣಿಗೆ.

ಆ ಕಾರಣಕ್ಕಾಗಿ ಸಾರ್ವಜನಿಕ ಸಾರಿಗೆ ಬಳಕೆ, ಕಾರು ಪೂಲಿಂಗ್ ಮೂಲಕ ಆರ್ಥಿಕತೆಗೆ ಸಾಮಾನ್ಯ ನಾಗರಿಕ ಕೂಡ ಅಳಿಲು ಸೇವೆ ಮಾಡಿದಂತಾಗುವುದು. ಮನೆಯಿಂದ ಕೆಲಸ (ವರ್ಕ್ ಫ್ರಮ್ ಹೋಂ–ಡಬ್ಲ್ಯುಎಫ್‌ಎಚ್) ಅನ್ನುವ ಮಾದರಿ ಅಂದು ಕೋವಿಡ್ ಕಾಲದಲ್ಲಿ ಕಂಪನಿಗಳು ತಮ್ಮ ಚಟುವಟಿಕೆಯನ್ನು ನಿಲ್ಲಿಸದೇ ಮುಂದುವರಿಸುವಲ್ಲಿ ಬಹಳ ದೊಡ್ಡ ಕೊಡುಗೆ ನೀಡಿತ್ತು. ಅದಿಲ್ಲವಾಗಿದ್ರೆ ಆ ಸಮಯದಲ್ಲಿ ನಮ್ಮ ಐಟಿ ಕೆಲಸಗಳು ಬಹಳ ಮುದುಡಿ ಹೋಗಿ ಆರ್ಥಿಕತೆಯ ಮೇಲೆ ದೊಡ್ಡ ಹೊಡೆತ ಬೀಳುತ್ತಿತ್ತು. ಈಗ ಮತ್ತೆ ಮನೆಯಿಂದ ಕೆಲಸ ಮಾಡುವ ಮಾದರಿ ಅನುಸರಿಸಿದರೆ, ತೈಲ ಆಮದಿನ ಹೊರೆಯನ್ನು ಕಡಿಮೆ ಮಾಡುವಲ್ಲಿ ಅನುಕೂಲ ಆಗಬಹುದು.

ಚಿನ್ನದ ಆಮದು ದೇಶದ ವಿದೇಶಿ ವಿನಿಮಯದ ಹೊರಹರಿವನ್ನು ಹೆಚ್ಚು ಮಾಡುತ್ತದೆ. ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತವಾಗುವುದನ್ನು ಕಡಿಮೆ ಮಾಡಬೇಕಾದರೆ ಡಾಲರ್ ಅನ್ನು ನೇರವಾಗಿ ಬೇಡುವ ಚಿನ್ನದ ಆಮದು ಹಾಗೂ ವಿದೇಶಿ ಪ್ರವಾಸಗಳನ್ನು ಹತೋಟಿಗೆ ತರಬೇಕು. ಇದು ಪರಿಣಾಮ ಬೀರುವುದರಲ್ಲಿ ಸಂಶಯವೇ ಇಲ್ಲ.

ಅರ್ಥಶಾಸ್ತ್ರದ ಪ್ರಕಾರ, ಕೆಲವು ಬಾರಿ ದೊಡ್ಡ ಗಂಡಾಂತರಗಳು ಬಂದಾಗ ವ್ಯವಸ್ಥೆ ಸುಧಾರಣೆಗೆ ಅನುಕೂಲ ಹಾಗೂ ಹಳೆಯ ವ್ಯವಸ್ಥೆಗಳು ಬದಲಾಗಲು ಒಳ್ಳೆಯ ಅವಕಾಶ. ಇದನ್ನು 'ಕ್ರಿಯೇಟಿವ್ ಡಿಸ್ಟ್ರಕ್ಷನ್' (Creative Destruction- ಹೊಸದರ ಸೃಷ್ಟಿಗೆ ಹಳೆಯದರ ನಿರ್ಮೂಲನೆ) ಎಂದು ಕರೆಯುತ್ತಾರೆ.

ಭಾರತದ ಕೃಷಿಯಲ್ಲಿ ರಾಸಾಯನಿಕಗಳ ಬಳಕೆ ಅತಿಯಾಗಿದೆ. ಇದು ಕೃಷಿ ಕ್ಷೇತ್ರದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ ಹಾಗೂ ನಮ್ಮ ಉತ್ಪನ್ನಗಳನ್ನು ವಿದೇಶಕ್ಕೆ ರಫ್ತು ಮಾಡಲು ತೊಡಕಾಗಿದೆ. ಹಾಗಾಗಿ ಈಗ ತೈಲ ಬೆಲೆ ಏರಿಕೆಯ ಕಾರಣಕ್ಕಾಗಿ ರಸಗೊಬ್ಬರಗಳ ಬಳಕೆ ಕಡಿಮೆ ಮಾಡಿದಾಗ ತೈಲ ಬೇಡಿಕೆಯೂ ಹತೋಟಿಗೆ ಬರುತ್ತದೆ. ಜತೆಯಲ್ಲಿ ಸುಧಾರಿತ ಅಥವಾ ಸುಸ್ಥಿರ ಕೃಷಿಗೆ ಒಂದು ಹೊಸ ಅವಕಾಶ ಆಗಬಹುದು. ಆ ಹಿನ್ನೆಲೆಯಲ್ಲಿ ಕೃಷಿಕರು ರಸಗೊಬ್ಬರಗಳನ್ನು ಎಷ್ಟರ ಮಟ್ಟಕ್ಕೆ ತ್ಯಜಿಸಲು ಮುಂದೆ ಬರುತ್ತಾರೆ ಅನ್ನೋದು ಕುತೂಹಲಕಾರಿ. ಆದರೆ, ಇಂದಿನಂತೆ ರಸಗೊಬ್ಬರಗಳಿಗೆ ಪರ್ಯಾಯವಾದ ಬದಲಿ ಗೊಬ್ಬರಗಳು ಇನ್ನೂ ಸಾಕಷ್ಟು ಚಾಲ್ತಿ ಆಗದಿರುವ ಕಾರಣ ರೈತರಿಗೆ ಈ ಬದಲಾವಣೆಯಿಂದ ಸ್ವಲ್ಪ ಮಟ್ಟಿಗೆ ಕಷ್ಟವೂ ಆದೀತು.

ಇದೇ ರೀತಿ, ವೆಚ್ಚ ಸ್ಪರ್ಧಾತ್ಮಕತೆಯ (Cost Competitiveness) ಕಾರಣಕ್ಕಾಗಿ ನಾವು ತಾಳೆ ಎಣ್ಣೆ ಸಹಿತ ವಿದೇಶಿ ಅಡುಗೆ ಎಣ್ಣೆಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಆಮದು ಮಾಡುತ್ತಿದ್ದೇವೆ. ಈ ಕಾರಣದಿಂದ ನಮ್ಮಲ್ಲಿ ಎಣ್ಣೆಕಾಳು ಬೆಳೆಗಾಗಿ ಮೀಸಲಾಗಿದ್ದ ಗದ್ದೆಗಳಲ್ಲಿ ಈಗ ದೊಡ್ಡ ಪ್ರಮಾಣದಲ್ಲಿ ಇತರ ಕೃಷಿಗಳನ್ನು ಮಾಡಲಾಗುತ್ತಿದೆ. ದೇಶದ ಅಡುಗೆ ಎಣ್ಣೆ ಉತ್ಪಾದನೆಯ ಕೃಷಿ ಪದ್ಧತಿಯನ್ನು ಸುಧಾರಣೆ ಮಾಡಿದರೆ ನಾವು ಎಣ್ಣೆ ಆಮದು ಮಾಡುವುದರ ಬದಲು ಸುಲಭವಾಗಿ ಮಾತ್ರವಲ್ಲ, ದೊಡ್ಡ ಪ್ರಮಾಣದಲ್ಲಿ ರಫ್ತನ್ನೂ ಮಾಡಬಹುದು.

ಚುಟುಕಾಗಿ ಹೇಳುವುದಾದರೆ, ನಮ್ಮ ಆರ್ಥಿಕತೆಯ ತಕ್ಷಣದ ಸವಾಲುಗಳೆಂದರೆ,

1) ಹಲವು ಯುದ್ಧಗಳ ಕಾರಣ ಎಲ್ಲ ಕಡೆ ಪೂರೈಕೆ ವ್ಯವಸ್ಥೆಯಲ್ಲಿ ಆಗಿರುವ ಅಡಚಣೆ (supply chain blockage)
2) ಆಮದು ಮತ್ತು ರಫ್ತಿನಲ್ಲಿ ತೀವ್ರ ಅಸಮತೋಲನ
3) ಕುಸಿಯುತ್ತಿರುವ ರೂಪಾಯಿ ಮೌಲ್ಯವನ್ನು ಮತ್ತೆ ಸ್ಥಿರತೆಗೆ ತರುವುದು
4) ಈ ಮೂರು ಕಾರಣಗಳಿಂದ ಬರಬಹುದಾದ ತೀವ್ರ ಬೆಲೆ ಏರಿಕೆಯನ್ನು (inflationary pressure) ಮುಂದಾಗಿ ಹತೋಟಿ ಮಾಡುವುದು
5) ಇಂಧನದ ತೀವ್ರ ಪರಾವಲಂಬಿತನವನ್ನು ಕಡಿಮೆ ಮಾಡುವುದು.

ಈ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಾರ್ವಜನಿಕರಲ್ಲಿ ಮಾಡಿದ ವಿನಂತಿಗಳು ಪ್ರಥಮ ಹೆಜ್ಜೆಗಳು ಎಂದರೆ ತಪ್ಪಾಗಲಾರದು.

ಲೇಖಕ: ಬಿಜೆಪಿ ಮುಖಂಡ

> ಮೋದಿ ಅವರು ಮಾಡಿರುವ ಮನವಿ ರಾಜಕೀಯವಾಗಿ ಸವಾಲು ಎನಿಸುವ ಸಂಗತಿ. ರಾಜಕೀಯ ನಾಯಕರು ಆರ್ಥಿಕ ಸಲಹೆಗಳ ಬಗ್ಗೆ ರಾಜಕೀಯ ಲಾಭನಷ್ಟಗಳ ತುಲನೆ ಮಾಡಿ ನಂತರ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಜನರೇ ಸಹಕಾರ ನೀಡಿ ತೈಲ, ಚಿನ್ನ, ಅಡುಗೆ ಎಣ್ಣೆಗಳ ಬೇಡಿಕೆಯನ್ನು ಕಡಿತಗೊಳಿಸಿದರೆ ದೇಶದ ಆರ್ಥಿಕತೆಗೆ ಅನುಕೂಲ ಆಗಲಿದೆ ಎಂಬುದನ್ನು ಮನಗಂಡು ಪ್ರಧಾನಿ ಅವರು ತಮ್ಮ ಜನಪ್ರಿಯತೆಯನ್ನೇ ಪಣಕ್ಕಿಟ್ಟು ಜನಬೆಂಬಲಕ್ಕೆ ವಿನಂತಿ ಮಾಡಿರುವುದು ಸಕಾರಾತ್ಮಕ ಬೆಳವಣಿಗೆ. ಹಿಂದೆ ಎಲ್‌ಪಿಜಿ ಸಬ್ಸಿಡಿ ಬಿಟ್ಟುಬಿಡಿ ಎಂದು ಅವರು ಮನವಿ ಮಾಡಿದ್ದಾಗ ಉತ್ತಮ ಸ್ಪಂದನೆ ವ್ಯಕ್ತವಾಗಿತ್ತು. ಈಗಲೂ ಅವರು ಅಂತಹುದೇ ಸ್ಪಂದನೆಯ ನಿರೀಕ್ಷೆಯಲ್ಲಿದ್ದಾರೆ

## ಗುಂಡಣ್ಣ

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

**16 ಮೇ 2026 ಶನಿವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ:** ವೈಶಾಖ ಕೃಷ್ಣ ಅಮವಾಸ್ಯೆ ಗಂ. 25-31 ನಕ್ಷತ್ರ: ಭರಣಿ ಗಂ. 17-30 ಯೋಗ: ಸೌಭಾಗ್ಯ ಗಂ. 10-26 ಕರಣ: ಚತುಷ್ಪಾದ ಗಂ. 15-23, ವೃಷಭ ಮಾಸದ 01 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-08 ಸೂರ್ಯಾಸ್ತ : 06-46, ಮುಸ್ಲಿಂ ದಿನಾಂಕ : 28 ಜುಲ್ಕಾದಾ ,ದಿನ ವಿಶೇಷ : ವಟ ಸಾವಿತ್ರಿ ವ್ರತ, ಅದೃಷ್ಟ ಸಂಖ್ಯೆ : 2, 12

**ಮೇಷ:** ಬಂಧುಗಳಲ್ಲಿ ಅನಗತ್ಯ ವಾದ–ವಿವಾದ ಬೇಡ. ಈಗಾಗಲೇ ಕಳೆದುಕೊಂಡಿರುವ ವಿಶ್ವಾಸವನ್ನು ಪುನಃ ಸಂಪಾದಿಸುವ ಬಗ್ಗೆ ಗಮನಹರಿಸಿ. ಧಾರ್ಮಿಕ ಕಾರ್ಯದಿಂದ ಸತ್ಫಲಗಳು ಅನುಭವಕ್ಕೆ ಬರಲಿವೆ.

**ವೃಷಭ:** ಇತರರಿಗೆ ಮಾದರಿಯಂತಾಗುವ ವ್ಯಕ್ತಿತ್ವವನ್ನು ಸಹಿಸಲಾರದ ಜನರು ಎದುರಾಗಬಹುದು. ಬಹಳ ದಿನಗಳಿಂದ ನಿರೀಕ್ಷಿಸುತ್ತಿದ್ದಂತಹ ಹಣ ಕೈ ಸೇರಲಿದೆ. ಹಾಲು ಮಾರಾಟಗಾರರಿಗೆ ಅಧಿಕ ಆದಾಯ ಇರಲಿದೆ.

**ಮಿಥುನ:** ದೇವರ ಆಶೀರ್ವಾದದಿಂದ ಆರ್ಥಿಕ ಆದಾಯ ಉತ್ತಮವಾಗಲಿದೆ. ಸೋಮಾರಿತನವು ಶತ್ರುವಾಗಿ ಪರಿಣಮಿಸಲಿದೆ. ಸಂಜೆಯ ಸಮಯವನ್ನು ಪ್ರೀತಿ ಪಾತ್ರರೊಂದಿಗೆ ಕಳೆಯುವಿರಿ.

**ಕರ್ಕಾಟಕ:** ಅನಿವಾರ್ಯ ಕಾರಣಗಳಿಂದ ನಿತ್ಯದ ಆಚರಣೆಯಲ್ಲಿ ಬದಲಾವಣೆ ಅನುಭವಿಸುವಿರಿ ಇಷ್ಟಾರ್ಥ ನೆರವೇರುವ ಸಲುವಾಗಿ ಹೇಳಿಕೊಂಡಿರುವ ಹರಕೆಯನ್ನು ತೀರಿಸುವ ಬಗ್ಗೆ ಗಮನವಿರಲಿ.

**ಸಿಂಹ:** ಮನೆಯಲ್ಲಿ ಮಂಗಳ ಕಾರ್ಯವನ್ನು ನಡೆಸಲು ತೀರ್ಮಾನಿಸಿ. ಅದಕ್ಕೆ ಬೇಕಾದ ಜನಬಲ ಮತ್ತು ಆರ್ಥಿಕ ಬೆಂಬಲ ಬಂಧುಗಳಿಂದ ತಾನಾಗಿಯೇ ಬರಲಿದೆ. ಪ್ರಯಾಣ ಮತ್ತು ಹೊಸಬರ ಪರಿಚಯ ಉಂಟಾಗಲಿದೆ.

**ಕನ್ಯಾ:** ಕುಟುಂಬದ ಅಭಿವೃದ್ಧಿಗಾಗಿ ತೆಗೆದುಕೊಂಡ ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವುದು ಉತ್ತಮ. ಪ್ರೀತಿ ಪಾತ್ರರಲ್ಲಿ ಭಾವನೆಗಳನ್ನು ಹಂಚಿಕೊಳ್ಳಲು ಸೂಕ್ತ ಸಮಯ.

**ತುಲಾ:** ದಾಖಲೆಗಳು ಕಳೆದುಹೋಗಬಹುದು. ಕಾಗದಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ. ದೈವಾನುಗ್ರಹ ನಿಮಗೊದಗಿರುವುದರಿಂದ ಕೆಲಸ ಕಾರ್ಯಗಳಿಗಿದ್ದ ಅಡೆತಡೆಗಳು ದೂರಾಗಲಿವೆ.

**ವೃಶ್ಚಿಕ:** ಮಕ್ಕಳ ಹೆಸರಿನಲ್ಲಿ ನಿವೇಶನ ಖರೀದಿಸುವ ಯೋಚನೆಗಳು ಬರಲಿವೆ. ಅನಿರೀಕ್ಷಿತವಾಗಿ ಸಂಘ-ಸಂಸ್ಥೆಗಳ ಜವಾಬ್ದಾರಿಯ ಅಧಿಕಾರ ವಹಿಸಬೇಕಾಗುವುದು. ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ದಿನಗಳಿವೆ.

**ಧನು:** ಕುಟುಂಬದ ಗೊಂದಲವನ್ನು ಪರಿಹರಿಸುವ ಹೊಣೆಗಾರಿಕೆಯನ್ನು ಸ್ವಪ್ರೇರಣೆಯಿಂದ ತೆಗೆದುಕೊಳ್ಳುವುದು ಸರಿಯಲ್ಲ. ಮೇಲುಸ್ತುವಾರಿಯಲ್ಲಿ ಕೆಲಸ ಕಾರ್ಯಗಳು ಸುಗಮವಾಗಿ ಸಾಗಲಿವೆ.

**ಮಕರ:** ಅರ್ಥಪೂರ್ಣ ಮಾತುಕತೆಗಳಿಂದ ವೈವಾಹಿಕ ಸಮಸ್ಯೆಗಳ ಪರಿಹಾರ ಪಡೆಯುವಿರಿ. ಎಲ್ಲಾ ಕೆಲಸಗಳನ್ನು ಸಮಯದಲ್ಲಿ ಮಾಡಿ ಮುಗಿಸಿಕೊಳ್ಳುವ ಬಗ್ಗೆ ಹೆಚ್ಚಿನ ಗಮನವಿರಲಿ. ಆಪ್ತರಿಂದ ಬರುವ ಸಲಹೆ ಸೂಚನೆಗಳಿಗೆ ಗಮನ ನೀಡಿ.

**ಕುಂಭ:** ಇನ್ನೊಬ್ಬರನ್ನು ನೋಡಿ ಅಸೂಯೆ ಪಡುವ ವ್ಯಕ್ತಿತ್ವವನ್ನು ಬದಲಿಸಿಕೊಳ್ಳುವುದು ಅಭಿವೃದ್ಧಿಗೆ ಕಾರಣವಾಗುತ್ತದೆ. ಬಂಧು ಮಿತ್ರರೊಂದಿಗೆ ಸಂತಸದ ಕ್ಷಣಗಳನ್ನು ಹಂಚಿಕೊಳ್ಳುವಿರಿ. ಆರ್ಥಿಕ ಪರಿಸ್ಥಿತಿ ಸ್ವಲ್ಪ ವ್ಯತ್ಯಾಸವಾಗಲಿದೆ.

**ಮೀನ:** ಮನೆಯವರ ವಿಚಾರದಲ್ಲಿ ದೃಢವಾದ ಮನೋಭಾವ ತಾಳಬೇಕಾಗುವುದು. ಬಹುದಿನಗಳ ನಿರೀಕ್ಷೆಯ ವಿಚಾರಗಳು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿದಲ್ಲಿ ಲಾಭ ಕಾಣುವಿರಿ.

## ಪದಬಂಧ 6404

ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ಬಾಣವನ್ನು ಬಿಲ್ಲಿಗೆ ಹೂಡುವುದು (5)
4.ಉತ್ತರ ಹಾಗೂ ಪಶ್ಚಿಮಗಳ ನಡುವಿನ ದಿಕ್ಕು (3)
5.ಹತ್ತಿಯ ಬಟ್ಟೆಯಿದು (3)
6.ಗಡಿಯ ಹತ್ತಿರವಿದ್ದಾಗ ತಲೆದೋರಿದ ಶೀತ (3)
8.ರಾಕ್ಷಸರ ಶಿಲ್ಪಿ (2)
9.ಸವತಿಯೊಡನಿರುವ ಹೆಂಡತಿ (2)
11.ಅಸಲಿಯ ವಿರುದ್ಧ ಪದವಿಲ್ಲಿ ಉಲ್ಟಾ ಆಗಿದೆ (3)
14.ವಿಷಯವನ್ನು ತಿಳಿಸಿದಾಗ ಆಗಿರುವ ದುಃಖ (3)
15.ಉತ್ಸವದ ವೇಳೆ ಎರಚುವ ಕೆಂಪುಬಣ್ಣದ ಪುಡಿ (3)
16.ಬೆಂಗಳೂರಿನಲ್ಲಿರುವ ಭವ್ಯ ಸರ್ಕಾರಿ ಕಟ್ಟಡ (5)

**ಮೇಲಿಂದ ಕೆಳಕ್ಕೆ**

1.ಬಹಳ ದಡ್ಡನಿವನು (4)
2.ಸಂಪಾದಕನ ಅಗ್ರ ಲೇಖನ (5)
3.ಕಾರನ್ನು ನಿರಾಕರಿಸುವಿಕೆ! (3)
4.ಒಳ್ಳೆಯ ಅಥವಾ ಕೆಟ್ಟ ನಾತ (3)
7.ಗರ ಬಡಿದಂತೆ ಕುಳಿತಿರುವ ಪತಿವ್ರತೆ (3)
8.ಕರುವಿಗೆ ತೋರಿದ ದಯೆ (3)
9.ಕಡಲಿನ ಮೇಲೆ ಕೈಗೊಂಡ ಪಯಣ (5)
10.ಒಪ್ಪವಾಗಿ ಬಂದಿರುವ ಸಂಬಂಧ (4)
12.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
13.ಪದ ಹೇಳಿ ಕನ್ನಡಿಗನು ಪಡೆದ ಡಿಗ್ರಿ! (3)



### 6403ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**

1.ಸರೋವರ 3.ಪಾಪಭೀರು
5.ಕ್ಷತ್ರಿಯ 6.ಅರಸಿಕ
8.ಸತ್ಕಾರ 10.ಕಜ್ಜಿ
11.ಪಂಖ 12.ಶಪಾಕ
14.ತರತಮ 17.ವಕ್ತಾರ
18.ಕಡುಜಾಣೆ 19.ಗುಡಿಕಾರ

**ಮೇಲಿಂದ ಕೆಳಕ್ಕೆ:**

1.ಸಗಣ 2.ರಕ್ಷಕ
3.ಪಾಯಸ 4.ರುಜು
7.ರಸಕವಳ 9.ರತ್ನಖಚಿತ
13.ಕವಣೆ 14.ತರಗು
15.ಮಧುರ 16.ಬಿಂಕ

## ಸುಡೊಕು 6787

**ಆಡುವುದು ಹೀಗೆ:** ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

| | | | | | | | | |
|---|---|---|---|---|---|---|---|---|
| | 7 | 9 | | | 3 | | 8 | |
| | 4 | | | 8 | | 2 | 5 | 9 |
| 8 | 1 | | 2 | 6 | | 7 | | |
| | 8 | | | 2 | | 1 | | 5 |
| | 9 | 2 | 8 | 1 | 5 | | 6 | |
| 5 | | | | | | 8 | | |
| 9 | | 7 | 5 | | | | | |
| | 5 | | | 7 | 2 | | 4 | |
| 4 | 3 | | 6 | | 1 | | | 2 |

### 6786 ಸುಡೊಕು

| | | | | | | | | |
|---|---|---|---|---|---|---|---|---|
| 9 | 2 | 8 | 3 | 6 | 7 | 4 | 5 | 1 |
| 3 | 6 | 4 | 9 | 1 | 5 | 8 | 7 | 2 |
| 5 | 7 | 1 | 2 | 4 | 8 | 9 | 6 | 3 |
| 7 | 4 | 2 | 6 | 3 | 9 | 1 | 8 | 5 |
| 8 | 3 | 9 | 5 | 7 | 1 | 2 | 4 | 6 |
| 1 | 5 | 6 | 8 | 2 | 4 | 3 | 9 | 7 |
| 2 | 8 | 5 | 1 | 9 | 6 | 7 | 3 | 4 |
| 4 | 9 | 3 | 7 | 5 | 2 | 6 | 1 | 8 |
| 6 | 1 | 7 | 4 | 8 | 3 | 5 | 2 | 9 |

ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ● ಒಬ್ಬ ಅರ್ಹ ಮತದಾರರೂ ಬಿಟ್ಟುಹೋಗದಂತೆ ಎಚ್ಚರಿಕೆ: ಮುಖ್ಯ ಚುನಾವಣಾಧಿಕಾರಿ

# ಎಸ್‌ಐಆರ್‌ಗೆ ಸಕಲ ಸಿದ್ಧತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಜೂನ್ 20ರಿಂದ ಆರಂಭವಾಗಲಿದೆ. ಒಬ್ಬ ಅರ್ಹ ಮತದಾರರೂ ಪಟ್ಟಿಯಿಂದ ಕೈಬಿಟ್ಟುಹೋಗದಂತೆ ಕಟ್ಟುನಿಟ್ಟಿನ ಪರಿಷ್ಕರಣೆ ನಡೆಸಲಾಗುತ್ತದೆ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು ವಿವರ ನೀಡಿದರು.

'ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆಗೆ ಒಟ್ಟು 59,050 ಮತಗಟ್ಟೆ ಮಟ್ಟದ ಅಧಿಕಾರಿ (ಬಿಎಲ್‌ಒ), 5,905 ಬಿಎಲ್‌ಒ ಮೇಲ್ವಿಚಾರಕರು, 336 ಸಹಾಯಕ ಮತದಾರರ ನೋಂದಣಾಧಿಕಾರಿ, 224 ಮತದಾರರ ನೋಂದಣಾಧಿಕಾರಿಗಳನ್ನು ನಿಯೋಜನೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಎಸ್‌ಐಆರ್ ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸಲಿದ್ದಾರೆ' ಎಂದರು.

'ಎಸ್‌ಐಆರ್‌ಗೆ ಪೂರ್ವ ತಯಾರಿಯಾಗಿ ಮತದಾರರ ವಿವರಗಳನ್ನು ಹೋಲಿಸಿ, ಖಚಿತಪಡಿಸಿಕೊಳ್ಳುವ (ಮ್ಯಾಪಿಂಗ್) ಕೆಲಸ ಶೇ 86.46ರಷ್ಟಾಗಿದೆ. 2025ರ ಮತದಾರರ ಪಟ್ಟಿಯ ಪ್ರಕಾರ ರಾಜ್ಯದಲ್ಲಿ 5.55 ಕೋಟಿ ಅರ್ಹ ಮತದಾರರು ಇದ್ದು, ಈ ಪೈಕಿ 4.80 ಕೋಟಿ ಮತದಾರರ ವಿವರಗಳನ್ನು 2002ರ ಮತದಾರರ ಪಟ್ಟಿ ಮತ್ತು ಪೋಷಕರ ಮತದಾರರ ಚೀಟಿ ವಿವರಗಳ ಜತೆಗೆ ಹೋಲಿಸಿ ನೋಡಿ ಖಚಿತಪಡಿಸಿಕೊಳ್ಳಲಾಗಿದೆ. ಎಸ್‌ಐಆರ್ ಆರಂಭವಾಗುವರೆಗೂ ಮ್ಯಾಪಿಂಗ್ ಪ್ರಕ್ರಿಯೆ ಮುಂದುವರೆಯಲಿದೆ' ಎಂದು ಅವರು ತಿಳಿಸಿದರು.

ಅನ್ಬುಕುಮಾರ್

'ಮ್ಯಾಪಿಂಗ್ ಪ್ರಕ್ರಿಯೆಯ ಆಧಾರದಲ್ಲಿ ರಾಜ್ಯದ ಎಲ್ಲ 5.55 ಕೋಟಿ ಮತದಾರರಿಗೂ ಗಣತಿ ನಮೂನೆಗಳನ್ನು (ಎನ್ಯುಮರೇಷನ್ ಅರ್ಜಿ) ಸೃಜಿಸಲಾಗುತ್ತದೆ. ಪ್ರತಿ ಮತದಾರರಿಗಾಗಿ ಎರಡು ಗಣತಿ ನಮೂನೆಗಳಂತೆ, ಒಟ್ಟು ಸುಮಾರು 11 ಕೋಟಿ ನಮೂನೆಗಳನ್ನು ಸೃಜಿಸಲಾಗುತ್ತದೆ. ಮತದಾರರು ಎರಡೂ ನಮೂನೆಗಳನ್ನು ಭರ್ತಿ ಮಾಡಿ, ಒಂದನ್ನು ಬಿಎಲ್‌ಒಗಳಿಗೆ ನೀಡಬೇಕು ಮತ್ತು ಇನ್ನೊಂದನ್ನು ತಮ್ಮ ಬಳಿಯೇ ಇರಿಸಿಕೊಳ್ಳಬೇಕು. ಮತದಾರರ ಪಟ್ಟಿಯಲ್ಲಿ ಹೆಸರು ಬಿಟ್ಟುಹೋದರೆ, ಈ ಅರ್ಜಿಯ ಆಧಾರದಲ್ಲೇ ಮೇಲ್ಮನವಿ ಸಲ್ಲಿಸಬೇಕಾಗುತ್ತದೆ' ಎಂದು ವಿವರಿಸಿದರು.

'ಬಿಎಲ್‌ಒಗಳು ಗಣತಿ ನಮೂನೆಗಳನ್ನು ಪಡೆದುಕೊಂಡ ನಂತರ, ಅವುಗಳನ್ನು ಪರಿಶೀಲಿಸಿ ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.

> ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯನ್ನು ಚುನಾವಣಾ ಆಯೋಗ ಪ್ರಾರಂಭಿಸಿದ್ದು, ರಾಜ್ಯ ಸರ್ಕಾರವೂ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮತದಾರರ ಪಟ್ಟಿಯಲ್ಲಿ ವಿವರ ತಪ್ಪಾಗಿದ್ದರೆ, ಆಕ್ಷೇಪಣೆ ಸಲ್ಲಿಸಬಹುದು. ಅದನ್ನು ಪರಿಶೀಲಿಸಿ, ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಬಿಟ್ಟುಹೋಗಿದ್ದರೆ ಮತದಾರರು ಜಿಲ್ಲಾಧಿಕಾರಿ ಹಂತದ ಮೇಲ್ಮನವಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಬಹುದು. ನಂತರದ ಹಂತದಲ್ಲಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇತರ ರಾಜ್ಯಗಳಲ್ಲಿ ನಡೆದ ಎಸ್‌ಐಆರ್‌ನಲ್ಲಿ ನಿರ್ದಿಷ್ಟ ಧಾರ್ಮಿಕ ಸಮುದಾಯವೊಂದರ ಮತದಾರರ ಹೆಸರನ್ನು ಕೈಬಿಡಲಾಗಿದೆ ಎಂದು ರಾಜಕೀಯ ಪಕ್ಷಗಳು ಮಾಡುತ್ತಿರುವ ಆರೋಪದ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ, 'ಅಂತಹ ಆರೋಪಗಳಲ್ಲಿ ಹುರುಳಿಲ್ಲ' ಎಂದು ಅನ್ಬುಕುಮಾರ್ ಉತ್ತರಿಸಿದರು.

## ಗಣತಿ ನಮೂನೆ: ಏನು, ಎತ್ತ...

2025ರ ಮತದಾರರ ಪಟ್ಟಿಯಲ್ಲಿ ಇರುವ 5.55 ಕೋಟಿ ಮತದಾರರಿಗೂ ಪ್ರತ್ಯೇಕ ಗಣತಿ ನಮೂನೆಯನ್ನು (Enumeration Form) ಸೃಜಿಸಲಾಗುತ್ತದೆ. 2025ರ ಪಟ್ಟಿ ಮತ್ತು 2002ರ ಪಟ್ಟಿ ಎರಡರಲ್ಲೂ ಇರುವ ಮತದಾರರ ಭಾಗಶಃ ವಿವರಗಳು ಗಣತಿ ನಮೂನೆಯಲ್ಲಿ ಮುದ್ರಣವಾಗಿಯೇ ಬಂದಿರುತ್ತದೆ. 2025ರ ಪಟ್ಟಿಯಲ್ಲಿ ಇದ್ದು, 2002ರ ಪಟ್ಟಿಯಲ್ಲಿ ಪೋಷಕರ ವಿವರ ಇದ್ದವರ ಗಣತಿ ನಮೂನೆಯಲ್ಲಿ ಭಾಗಶಃ ವಿವರಗಳು ಮುದ್ರಣವಾಗಿರುತ್ತದೆ. ಜತೆಗೆ ಮತದಾರರ ಚಿತ್ರ ಮತ್ತು ಪ್ರತ್ಯೇಕ ಕ್ಯುಆರ್ ಕೋಡ್ ನಮೂನೆಯಲ್ಲಿ ಇರುತ್ತದೆ. ಆ ಕ್ಯುಆರ್ ಕೋಡ್ ಅನ್ನು ಬಿಎಲ್‌ಒಗಳು ತಮ್ಮ ಸ್ಮಾರ್ಟ್‌ಫೋನ್‌ನಲ್ಲಿರುವ ಬಿಎಲ್‌ಒ ಅಪ್ಲಿಕೇಷನ್ ಮೂಲಕ ಸ್ಕ್ಯಾನ್ ಮಾಡಿ, ಇತರ ವಿವರಗಳನ್ನು ಒದಗಿಸುತ್ತಾರೆ. ಆ ವಿವರಗಳನ್ನು ಮತದಾರರು ತುಂಬಬೇಕಾಗುತ್ತದೆ.

### ಗಣತಿ ನಮೂನೆ ಮಾದರಿ

ಈ ಸ್ಥಳದಲ್ಲಿ ಮತದಾರರ ಹೆಸರು, ಎಪಿಕ್ ಸಂಖ್ಯೆ, ವಿಳಾಸ ಮುದ್ರಿತವಾಗಿರುತ್ತದೆ

ಈ ಸ್ಥಳದಲ್ಲಿ ಕ್ರಮ ಸಂಖ್ಯೆ, ಪಾರ್ಟ್ ಸಂಖ್ಯೆ, ಕ್ಷೇತ್ರದ ಸಂಖ್ಯೆ ಮತ್ತು ಹೆಸರು ಹಾಗೂ ರಾಜ್ಯದ ಹೆಸರು ಮುದ್ರಿತವಾಗಿರುತ್ತದೆ

ಮತದಾರರ ವಿವರದ ಕ್ಯುಆರ್ ಕೋಡ್

ಅಗತ್ಯವಿದ್ದರೆ ಮತದಾರರು ತಮ್ಮ ಇತ್ತೀಚಿನ ಚಿತ್ರವನ್ನು ಲಗತ್ತಿಸಬಹುದು

2025ರ ಮತದಾರರ ಪಟ್ಟಿಯಲ್ಲಿ ಇರುವ ಮತದಾರರ ಚಿತ್ರ

2002ರ ಪಟ್ಟಿಯಲ್ಲಿ ಮತದಾರರ ವಿವರ ಲಭ್ಯವಿದ್ದರೆ, ಮ್ಯಾಪಿಂಗ್ ದತ್ತಾಂಶದಿಂದ ಅಷ್ಟೂ ವಿವರಗಳನ್ನು ಬಿಎಲ್‌ಒಗಳು ಹೆಕ್ಕಿಕೊಡುತ್ತಾರೆ. ಅದನ್ನು ಈ ಭಾಗದಲ್ಲಿ ತುಂಬಬೇಕು

2002ರ ಪಟ್ಟಿಯಲ್ಲಿ ಮತದಾರರ ಅಥವಾ ಅವರ ಪೋಷಕರ ವಿವರಗಳು ಮ್ಯಾಪಿಂಗ್ ಆಗದೇ ಇದ್ದರೆ, ಅಗತ್ಯ ದಾಖಲೆಗಳನ್ನು ಸಂಗ್ರಹಿಸಿಕೊಂಡು ಮತದಾರರೇ ಸ್ವತಃ ಈ ಭಾಗವನ್ನು ಭರ್ತಿ ಮಾಡಬೇಕಾಗುತ್ತದೆ

ಮೂರೂ ಸಂದರ್ಭದಲ್ಲಿ ಮತದಾರರು (ಸ್ವತಃ ಮತದಾರ ಆಗಿರಬಹುದು ಅಥವಾ ಅವರ ಕುಟುಂಬದ ಯಾವುದೇ ವಯಸ್ಕರು) ನಮೂನೆಯ ಈ ಭಾಗದಲ್ಲಿ ಸಹಿ ಮಾಡಬೇಕು ಅಥವಾ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಬೇಕು




2002ರ ಪಟ್ಟಿಯಲ್ಲಿ ಮತದಾರರ ಪೋಷಕರ ವಿವರ ಲಭ್ಯವಿದ್ದರೆ, ಮ್ಯಾಪಿಂಗ್ ದತ್ತಾಂಶದಿಂದ ಈ ವಿವರಗಳನ್ನು ಬಿಎಲ್‌ಒಗಳು ಹೆಕ್ಕಿ ಕೊಡುತ್ತಾರೆ. ಅದನ್ನು ಈ ಭಾಗದಲ್ಲಿ ತುಂಬಬೇಕು

ಬಿಎಲ್‌ಒ ಈ ಸ್ಥಳದಲ್ಲಿ ಸಹಿ ಮಾಡಬೇಕು. ಗಣತಿ ನಮೂನೆಯ ಒಂದು ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳಬೇಕು ಮತ್ತು ಇನ್ನೊಂದು ಪ್ರತಿಯನ್ನು ಮತದಾರರಿಗೆ ಹಿಂತಿರುಗಿಸಬೇಕು. ಎರಡರಲ್ಲೂ ಮತದಾರ ಮತ್ತು ಬಿಎಲ್‌ಒ ಸಹಿ ಇದ್ದರಷ್ಟೇ ಅದಕ್ಕೆ ಮಾನ್ಯತೆ

# 'ವಿವರ ವ್ಯತ್ಯಾಸವಿದ್ದರೆ ನೋಟಿಸ್'

'2025ರ ಮತ್ತು 2002ರ ಮತದಾರರ ಪಟ್ಟಿ ಎರಡರಲ್ಲೂ ಮತದಾರರ ಹೆಸರು ಇದ್ದು, ವಿವರಗಳಲ್ಲಿ ವ್ಯತ್ಯಾಸವಿದ್ದರೆ ನೋಟಿಸ್ ನೀಡಲಾಗುತ್ತದೆ. 2025ರ ಮತದಾರರ ಪಟ್ಟಿಯಲ್ಲಿ ಹೆಸರು ಇದ್ದು, 2002ರ ಮತದಾರರ ಪಟ್ಟಿಯಲ್ಲಿ ಮತದಾರರ ಅಥವಾ ಅವರ ಪೋಷಕರ ವಿವರ ಇಲ್ಲದೇ ಇದ್ದರೂ ನೋಟಿಸ್ ನೀಡಲಾಗುತ್ತದೆ. ನೋಟಿಸ್ ನೀಡಿದಾಕ್ಷಣ ಮತದಾರರ ಪಟ್ಟಿಯಿಂದ ಅಂತಹವರ ಹೆಸರನ್ನು ಕೈಬಿಡಲಾಗುತ್ತದೆ ಎಂದರ್ಥವಲ್ಲ. ನೋಟಿಸ್ ಪಡೆದುಕೊಂಡವರು ಅಗತ್ಯ ದಾಖಲೆಗಳನ್ನು ಒದಗಿಸಿದರೆ, ಆ ಪೈಕಿ ಅರ್ಹರನ್ನು ಕರಡು ಮತದಾರರ ಪಟ್ಟಿಗೆ ಸೇರಿಸಲಾಗುತ್ತದೆ' ಎಂದು ಅನ್ಬುಕುಮಾರ್ ಸ್ಪಷ್ಟಪಡಿಸಿದರು.

**ಯಾವ ಸಂದರ್ಭದಲ್ಲಿ ನೋಟಿಸ್? ಉದಾಹರಣೆಗಳು:**

- 2025ರ ಮತದಾರರ ಪಟ್ಟಿಯಲ್ಲಿ ಮತದಾರರ ಹೆಸರು 'ರಂಗಶಾಮಯ್ಯ ಎಂ.' ಎಂದು ಇದ್ದು, 2002ರ ಮತದಾರರ ಪಟ್ಟಿಯಲ್ಲಿ 'ರಂಗಶಾಮಯ್ಯ ಎಂ' ಅಥವಾ 'ಎಂ.ರಂಗಶಾಮಯ್ಯ' ಎಂದಿದ್ದರೆ
- 2025ರ ಮತದಾರರ ಪಟ್ಟಿಯಲ್ಲಿ ಮತದಾರ ಎಂ.ರಂಗಶಾಮಯ್ಯ ಅವರ ತಂದೆಯ ಹೆಸರು 'ಜಿ.ಮಂಜಯ್ಯ' ಎಂದು ಇದ್ದು, 2002ರ ಮತದಾರರ ಪಟ್ಟಿಯಲ್ಲಿ 'ಮಂಜಯ್ಯ' ಅಥವಾ 'ಮಂಜಯ್ಯ.ಜಿ' ಎಂದು ಇದ್ದರೆ. ತಾಯಿಯ ಹೆಸರಿನಲ್ಲೂ ಈ ರೀತಿಯ ವ್ಯತ್ಯಾಸವಿದ್ದರೂ ನೋಟಿಸ್
- 2025ರ ಮತದಾರರ ಪಟ್ಟಿಯಲ್ಲಿ ಇರುವ ಜನ್ಮದಿನಾಂಕ ಮತ್ತು 2002ರ ಮತದಾರರ ಪಟ್ಟಿಯಲ್ಲಿ ಇರುವ ಜನ್ಮದಿನಾಂಕದಲ್ಲಿ ವ್ಯತ್ಯಾಸವಿದ್ದರೆ
- 2025ರ ಪಟ್ಟಿಯಲ್ಲಿ ಮತದಾರರ ಹೆಸರು ಇದ್ದು, 2002ರಲ್ಲಿ ಅವರದ್ದಾಗಲೀ ಅವರ ಪೋಷಕರದ್ದಾಗಲಿ ಹೆಸರು ಇಲ್ಲದೇ ಇದ್ದ ಸಂದರ್ಭದಲ್ಲೂ ನೋಟಿಸ್ ನೀಡಲಾಗುತ್ತದೆ

### ಯಾರು, ಯಾವ ದಾಖಲೆ ಒದಗಿಸಬೇಕು...

ಗಣತಿ ನಮೂನೆಯ ಜತೆಗೆ, ಇಂತಿಷ್ಟು ವಯಸ್ಸಿನ ಮತದಾರರು ಭಿನ್ನ ಸ್ವರೂಪದ ಘೋಷಣಾಪತ್ರವನ್ನು ನೀಡಬೇಕಾಗುತ್ತದೆ. ಘೋಷಣಾಪತ್ರದ ಜತೆಗೆ ಸೂಚಿತ ಗುರುತಿನ/ ಭಾರತದ ಪೌರತ್ವ ಸಾಬೀತುಪಡಿಸುವ ದಾಖಲೆ ಪತ್ರಗಳನ್ನು ನೀಡಬೇಕಾಗುತ್ತದೆ. ಜನ್ಮ ವರ್ಷದ ಆಧಾರದಲ್ಲಿ ಮೂರು ವರ್ಗಗಳನ್ನು ಮಾಡಲಾಗಿದ್ದು, ಆಯಾ ವರ್ಗದವರಿಗೆ ಅನ್ವಯವಾಗುವ ಷರತ್ತುಗಳು ಈ ಮುಂದಿನಂತಿವೆ.

**1. 1987ರ ಜುಲೈ 1ಕ್ಕೂ ಮೊದಲು ಭಾರತದಲ್ಲಿ ಜನಿಸಿದವರು**
- ಆಯಾ ಮತದಾರನ ಗುರುತು ಮತ್ತು ಪೌರತ್ವ ಸಾಬೀತುಪಡಿಸುವ ದಾಖಲೆಯಾಗಿರಬೇಕು. ಜನ್ಮ ದಿನಾಂಕ/ ಜನ್ಮಸ್ಥಳವನ್ನು ಸಾಬೀತುಪಡಿಸುವಂತಹ ದಾಖಲೆ ಪತ್ರವಾಗಿರಬೇಕು

**2. 1987ರ ಜುಲೈ 1ರ ಬಳಿಕ 2004ರ ಡಿಸೆಂಬರ್ 2ರ ಮಧ್ಯೆ ಭಾರತದಲ್ಲಿ ಜನಿಸಿದವರು**
- ಆಯಾ ಮತದಾರನ ಗುರುತು ಮತ್ತು ಪೌರತ್ವ ಸಾಬೀತುಪಡಿಸುವ ದಾಖಲೆಯಾಗಿರಬೇಕು. ಜನ್ಮ ದಿನಾಂಕ/ ಜನ್ಮಸ್ಥಳವನ್ನು ಸಾಬೀತುಪಡಿಸುವಂತಹ ದಾಖಲೆ ಪತ್ರವಾಗಿರಬೇಕು
- ತಂದೆ ಅಥವಾ ತಾಯಿಯ ಜನ್ಮ ದಿನಾಂಕ ಅಥವಾ ಜನ್ಮ ಸ್ಥಳ ಸಾಬೀತುಪಡಿಸುವಂತಹ ದಾಖಲೆ ಪತ್ರಗಳನ್ನೂ ಸಲ್ಲಿಸಬೇಕು

**3. 2004ರ ಡಿಸೆಂಬರ್ 2ರ ನಂತರ ಭಾರತದಲ್ಲಿ ಜನಿಸಿದವರು**
- ಆಯಾ ಮತದಾರನ ಗುರುತು ಮತ್ತು ಪೌರತ್ವ ಸಾಬೀತುಪಡಿಸುವ ದಾಖಲೆಯಾಗಿರಬೇಕು. ಜನ್ಮ ದಿನಾಂಕ/ ಜನ್ಮಸ್ಥಳವನ್ನು ಸಾಬೀತುಪಡಿಸುವಂತಹ ದಾಖಲೆ ಪತ್ರವಾಗಿರಬೇಕು
- ತಂದೆಯ ಜನ್ಮ ದಿನಾಂಕ ಅಥವಾ ಜನ್ಮ ಸ್ಥಳ ಸಾಬೀತುಪಡಿಸುವಂತಹ ದಾಖಲೆ ಪತ್ರಗಳನ್ನೂ ಸಲ್ಲಿಸಬೇಕು
- ತಾಯಿಯ ಜನ್ಮ ದಿನಾಂಕ ಅಥವಾ ಜನ್ಮ ಸ್ಥಳ ಸಾಬೀತುಪಡಿಸುವಂತಹ ದಾಖಲೆ ಪತ್ರಗಳನ್ನೂ ಸಲ್ಲಿಸಬೇಕು
- ತಂದೆ ಅಥವಾ ತಾಯಿ ಭಾರತೀಯರು ಆಗಿರದೇ ಇದ್ದರೆ, ಮತದಾರನ ಜನ್ಮದ ಸಂದರ್ಭದಲ್ಲಿ ಪೋಷಕರು ಭಾರತದಲ್ಲಿ ಇದ್ದರು ಎಂಬುದಕ್ಕೆ ಪಾಸ್‌ಪೋರ್ಟ್ ಅಥವಾ ವೀಸಾ ಪ್ರತಿ ಬೇಕು

- ಭಾರತದ ಹೊರಗೆ ಜನಿಸಿದವರು, ವಿದೇಶದಲ್ಲಿನ ಭಾರತೀಯ ರಾಯಭಾರ ಕಚೇರಿ ನೀಡಿರುವ ಜನನ ನೋಂದಣಿ ಪ್ರಮಾಣ ಪತ್ರ ಸಲ್ಲಿಸಬೇಕು. ಪೌರತ್ವ ನೋಂದಣಿ ಮೂಲಕ ಭಾರತದ ಪೌರತ್ವ ಪಡೆದಿರುವವರು, ಪೌರತ್ವ ನೋಂದಣಿ ಪ್ರಮಾಣ ಪತ್ರ ನೀಡಬೇಕು

### ಯಾವೆಲ್ಲಾ ಗುರುತಿನ ಚೀಟಿ ಮಾನ್ಯ

1. ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ/ಸರ್ಕಾರಿ ಉದ್ಯಮದ ಕಾಯಂ ಉದ್ಯೋಗಿ/ ಪಿಂಚಣಿದಾರರಿಗೆ ನೀಡಿರುವ ಯಾವುದೇ ಗುರುತಿನ ಚೀಟಿ ಅಥವಾ ಪಿಂಚಣಿ ಸಂದಾಯ ಪತ್ರ
2. ಭಾರತದಲ್ಲಿ 1987ಕ್ಕೂ ಮೊದಲು ಸರ್ಕಾರ/ಸ್ಥಳೀಯ ಪ್ರಾಧಿಕಾರಗಳು/ ಬ್ಯಾಂಕುಗಳು/ಅಂಚೆ ಕಚೇರಿ/ಜೀವ ವಿಮಾ ನಿಗಮ/ಸರ್ಕಾರಿ ಉದ್ಯಮಗಳು ನೀಡಿರುವ ಯಾವುದೇ ಗುರುತಿನ ಚೀಟಿ/ ಪ್ರಮಾಣಪತ್ರ/ ದಸ್ತಾವೇಜು
3. ಜನನ ಪ್ರಮಾಣಪತ್ರ
4. ಪಾಸ್‌ಪೋರ್ಟ್
5. ಮಾನ್ಯತೆ ಪಡೆದ ಮಂಡಳಿಗಳು/ ವಿಶ್ವವಿದ್ಯಾಲಯಗಳು ನೀಡಿರುವ ಮೆಟ್ರಿಕ್ಯುಲೇಷನ್/ಶೈಕ್ಷಣಿಕ ಪ್ರಮಾಣಪತ್ರ
6. ರಾಜ್ಯ ಸರ್ಕಾರದ ಪ್ರಾಧಿಕಾರಗಳು ನೀಡಿರುವ ಕಾಯಂ ನಿವಾಸಿ ಪ್ರಮಾಣಪತ್ರ
7. ಅರಣ್ಯ ಹಕ್ಕು ಪ್ರಮಾಣಪತ್ರ
8. ಇತರೆ ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಯಾವುದೇ ಜಾತಿ ಪ್ರಮಾಣಪತ್ರಗಳು
9. ರಾಷ್ಟ್ರೀಯ ಪೌರತ್ವ ನೋಂದಣಿ ಚೀಟಿ (ಯಾವುದೇ ರಾಜ್ಯದಲ್ಲಿ ಇದ್ದರೂ ಮಾನ್ಯ)
10. ರಾಜ್ಯ ಸರ್ಕಾರ ಅಥವಾ ಸ್ಥಳೀಯ ಸಂಸ್ಥೆ/ಪ್ರಾಧಿಕಾರಗಳು ಸಿದ್ಧಪಡಿಸಿದ ಕುಟುಂಬ ನೋಂದಣಿ
11. ಜಮೀನು/ ಮನೆ ಹಂಚಿಕೆಗೆ ಸಂಬಂಧಿಸಿದಂತೆ ಸರ್ಕಾರವು ನೀಡಿರುವ ಪ್ರಮಾಣ ಪತ್ರ/ಹಂಚಿಕೆ ಪತ್ರ
12. ಆಧಾರ್: (ಸುಪ್ರೀಂ ಕೋರ್ಟ್‌ನ ನಿರ್ದೇಶನ ಮತ್ತು ಆದೇಶದ ಅನ್ವಯ ಗುರುತನ್ನು ಸಾಬೀತುಪಡಿಸುವ ದಾಖಲೆಯಾಗಿ ಮಾತ್ರವೇ ಪರಿಗಣಿಸಲಾಗುತ್ತದೆ. ಆಧಾರ್ ಅನ್ನು ಪೌರತ್ವ ಅಥವಾ ನಾಗರಿಕ ಪ್ರಮಾಣಪತ್ರವಾಗಿ ಪರಿಗಣಿಸುವುದಿಲ್ಲ)




- ಈ ದಾಖಲೆಪತ್ರಗಳ ಪರಿಶೀಲನೆಯ ನಂತರ ಮತದಾರರ ಅರ್ಹತೆಯನ್ನು ನಿರ್ಧರಿಸಲಾಗುತ್ತದೆ.

### ಅಸಂಗತ ವಿವರ

ಮತದಾರರ ಪಟ್ಟಿಯಲ್ಲಿನ ವಿವರಗಳು ಅಸಂಗತವಾಗಿದ್ದರೆ, ಅಂತಹ ಮತದಾರರನ್ನು 'logical discrepancy' ಎಂದು ಪ್ರತ್ಯೇಕಿಸಲಾಗುತ್ತದೆ. ಮತದಾರರೊಬ್ಬರ ವಯಸ್ಸು ಮತ್ತು ಅವರ ತಂದೆ/ತಾಯಿಯ ವಯಸ್ಸಿನ ಅಂತರ 15 ವರ್ಷ ಎಂದಿದ್ದರೆ, ಪುರುಷ ಮತದಾರರ ಲಿಂಗ ಹೆಣ್ಣು ಎಂದಾಗಿದ್ದರೆ ಅಥವಾ ಮಹಿಳಾ ಮತದಾರರ ಲಿಂಗ 'ಪುರುಷ' ಎಂದಾಗಿದ್ದರೆ ಅವುಗಳನ್ನು ತಾರ್ಕಿಕವಾಗಿ ಅಸಂಗತ ಎಂದು ಪರಿಗಣಿಸಲಾಗುತ್ತದೆ. ಅಂತಹ ಮತದಾರರು ಅಗತ್ಯ ದಾಖಲೆಗಳನ್ನು ಒದಗಿಸಿ, ವಿವರಗಳನ್ನು ಸರಿಪಡಿಸಿಕೊಳ್ಳಬಹುದು ಎಂದು ಅನ್ಬುಕುಮಾರ್ ತಿಳಿಸಿದರು.

# 19ರಂದೇ ಸಾಧನಾ ಸಮಾವೇಶ

ಪ್ರಜಾವಾಣಿ ವಾರ್ತೆ

**ತುಮಕೂರು:** ಕೆಎಸ್‌ಆರ್‌ಟಿಸಿ ನೌಕರರ ಮುಷ್ಕರದ ಕರೆಗೆ ಬೆದರಿದ ರಾಜ್ಯ ಸರ್ಕಾರ, ತನ್ನ ಸಾಧನಾ ಸಮಾವೇಶದ ದಿನಾಂಕವನ್ನೇ ಹಿಂದೂಡಿದೆ.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಮೇ 20ರಂದು ನಡೆಸಲು ಉದ್ದೇಶಿಸಿದ್ದ ಸಮಾವೇಶವನ್ನು ಈಗ ಮೇ 19ರಂದೇ ನಡೆಸಲು ನಿರ್ಧರಿಸಲಾಗಿದೆ.

'ಸಾರಿಗೆ ನೌಕರರ ಮುಷ್ಕರದಿಂದ ಸಮಾವೇಶಕ್ಕೆ ಅಡ್ಡಿ ಆಗಬಾರದು ಎಂದು ಒಂದು ದಿನ ಮುಂಚಿತವಾಗಿ ಆಯೋಜಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನದಂತೆ ಬದಲಾವಣೆ ಮಾಡಲಾಗಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಸ್ಪಷ್ಟಪಡಿಸಿದರು.

ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ತುಂಬಿದ್ದು, ಮೇ 20ರಂದು ಸಾಧನಾ ಸಮಾವೇಶ ಏರ್ಪಡಿಸಿತ್ತು.

ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಕರೆತರಲು 2,500ಕ್ಕೂ ಹೆಚ್ಚು ಬಸ್‌ಗಳನ್ನು ಬಳಸಲು ಉದ್ದೇಶಿಸಲಾಗಿದೆ. ಮುಷ್ಕರ ಆರಂಭವಾದರೆ ಸಮಾವೇಶಕ್ಕೆ ಜನರು ಬರಲು ಸಾಧ್ಯವಾಗುವುದಿಲ್ಲ. ಮುನ್ನೆಚ್ಚರಿಕೆ ವಹಿಸಿ ಒಂದು ದಿನ ಮೊದಲು ಸಮಾವೇಶ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಈಗ ಮುದ್ರಿಸಿರುವ ಆಹ್ವಾನ ಪತ್ರಿಕೆಗಳನ್ನೇ ನೀಡಿ ಮೇ 19ರಂದೇ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಲಾಗುತ್ತಿದೆ.

### ಬಸ್ ಟಿಕೆಟ್ ದರ ಹೆಚ್ಚಳ ಇಲ್ಲ: ಸಚಿವ

**ಉಡುಪಿ:** 'ತೈಲ ದರ ಏರಿಕೆಯಾಗಿದ್ದರೂ ಬಸ್‌ಗಳ ಟಿಕೆಟ್ ದರ ಏರಿಕೆ ಪ್ರಸ್ತಾವ ಇಲ್ಲ' ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಇಲ್ಲಿ ಮಾತನಾಡಿದ ಅವರು, 'ಆಲ್ ಇಂಡಿಯಾ ಪರ್ಮಿಟ್ ಪಡೆದ ಖಾಸಗಿ ಐಷಾರಾಮಿ ಬಸ್‌ನವರು ಟಿಕೆಟ್ ದರ ಏರಿಕೆ ಮಾಡುತ್ತಾರೆ. ಆ ಬಸ್‌ಗಳು ನಮ್ಮ ನಿಯಂತ್ರಣದಲ್ಲಿ ಇಲ್ಲ' ಎಂದರು.

'ನಮ್ಮಲ್ಲಿ ಪರ್ಮಿಟ್ ಪಡೆದ ಖಾಸಗಿ ಬಸ್‌ನವರು ದರ ಏರಿಸಲು ಸಾಧ್ಯವಿಲ್ಲ. ಜಿಲ್ಲಾಧಿಕಾರಿ ನೇತೃತ್ವದ ಸಮಿತಿಯಲ್ಲಿ ನಿರ್ಧಾರ ಆಗಬೇಕು' ಎಂದು ಹೇಳಿದರು.

'ಸಾರಿಗೆ ನೌಕರರಿಗೆ 26 ತಿಂಗಳ ಹಿಂದಿನ ಬಾಕಿ ಕೊಡುತ್ತೇವೆ, ಶೇ 12.5ರಷ್ಟು ವೇತನ ಪರಿಷ್ಕರಿಸುತ್ತೇವೆ ಎಂದು ಸರ್ಕಾರದ ನಿಲುವನ್ನು ಹೇಳಿದ್ದೇವೆ. ಏನು ಮಾಡುತ್ತಾರೋ ಗೊತ್ತಿಲ್ಲ. ನೋಡೋಣ' ಎಂದರು.

## ಬಾಲಕಿಯ ತಂದೆ, ಸ್ನೇಹಿತನಿಂದ ಅತ್ಯಾಚಾರ: ಬಂಧನ

ಪ್ರಜಾವಾಣಿ ವಾರ್ತೆ

**ಲಿಂಗಸುಗೂರು (ರಾಯಚೂರು ಜಿಲ್ಲೆ):** ಪಟ್ಟಣದ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಎರಡು ವರ್ಷಗಳಿಂದ 17 ವರ್ಷದ ಮಗಳ ಮೇಲೆ ನಿರಂತರವಾಗಿ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ತಂದೆ ಹಾಗೂ ಆತನ ಸ್ನೇಹಿತನನ್ನು ಪಟ್ಟಣದ ಪೊಲೀಸರು ಬಂಧಿಸಿದ್ದಾರೆ.

ಮಗಳ ಮೇಲೆ ಅತ್ಯಾಚಾರ ಎಸಗಿದ್ದಾನಲ್ಲದೇ ತನ್ನ ಸ್ನೇಹಿತನಿಗೂ ಸಹಕರಿಸಲು ಹೇಳಿದ್ದ. ಬಳಿಕ ಸ್ನೇಹಿತನೂ ಲೈಂಗಿಕ ದೌರ್ಜನ್ಯ ಎಸಗಿದ್ದ. ಇದನ್ನು ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ ಎಂದು ಬಾಲಕಿ ತನ್ನ ತಾಯಿ ಎದುರು ಬಹಿರಂಗಪಡಿಸಿದ್ದಳು.

ಬಳಿಕ ಬಾಲಕಿಯ ತಾಯಿ ಪಟ್ಟಣ ಪೊಲೀಸ್ ಠಾಣೆಗೆ ಮೇ 12ರಂದು ದೂರು ನೀಡಿದ್ದರು. ಪೋಕ್ಸೊ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

## ಡಿಸಿಎಂಗೆ ಉಡುಗೊರೆ

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಜನ್ಮದಿನದಂದು ಶುಕ್ರವಾರ ಸಫೀನಾ ಮೋಟಾರ್ಸ್‌ನ ಮುಖ್ಯಸ್ಥ ಫಿರೋಜ್ ಸತ್ತಾರ್ ಸೇಠ್ ಅವರು ಯೆಜ್ಡಿ ರೋಡ್‌ಸ್ಟರ್ ಬೈಕ್ ಅನ್ನು ಉಡುಗೊರೆಯಾಗಿ ನೀಡಿದರು

## ವಿಜಯಪುರ, ಬಳ್ಳಾರಿಯಲ್ಲಿ ಮಳೆ

**ಹುಬ್ಬಳ್ಳಿ:** ವಿಜಯಪುರ, ಬಳ್ಳಾರಿ, ಧಾರವಾಡ, ಬೆಳಗಾವಿ ಜಿಲ್ಲೆಯ ವಿವಿಧೆಡೆ ಗುರುವಾರ ರಾತ್ರಿ ಬಿರುಸಿನ ಮಳೆ ಸುರಿಯಿತು. ಬಹುತೇಕ ಕಡೆ ಮರಗಳು ಮತ್ತು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

ವಿಜಯಪುರ ಜಿಲ್ಲೆಯ ಕೊಲ್ಹಾರ ತಾಲ್ಲೂಕಿನ ಮಸೂತಿ ಮತ್ತು ಕುಬಕಡ್ಡಿ ಗ್ರಾಮದಲ್ಲಿ ಸಾವಿರಾರು ಬಾಳೆ ಗಿಡ ಗಳು ನೆಲಕ್ಕಚ್ಚಿದವು. ಕೊಲ್ಹಾರ ಪಟ್ಟಣದಲ್ಲಿ ಸಿಡಿಲು ಬಡಿದು ಎಮ್ಮೆಯೊಂದು ಸಾವಿಗೀಡಾದರೆ, ಹಳೇರೊಳ್ಳಿ ಗ್ರಾಮದಲ್ಲಿ ಬೃಹತ್ ಆಲದ ಮರ ಬಿದ್ದು 2 ಎಮ್ಮೆಗಳು ಮೃತಪಟ್ಟಿವೆ. ಹಲವು ಮನೆಗಳ ಚಾವಣಿ ಗಾಳಿಗೆ ಹಾರಿ ಹೋಗಿವೆ. ಮರಗಳು ಮತ್ತು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ.

**ಸೇಡಂ–ಸಿಡಿಲಿಗೆ ವ್ಯಕ್ತಿ, ಎತ್ತು ಬಲಿ:** ತಾಲ್ಲೂಕಿನ ವಿವಿಧೆಡೆ ಗುರುವಾರ ಸಂಜೆ ಸಿಡಿಲು ಬಡಿದು ತಾಲ್ಲೂಕಿನ ಜಾಕನಪಲ್ಲಿ ಗ್ರಾಮದ ಆಶಪ್ಪ ಕಂಪಿನ್ (60) ಮೃತಪಟ್ಟರು. ಗ್ರಾಮದ ಮನೆಯ ದೂರದಲ್ಲಿರುವ ದೊಡ್ಡಿಯಲ್ಲಿ ಕಟ್ಟಿದ ಎತ್ತಿಗೆ ಸಿಡಿಲು ಬಡಿದಿದ್ದರಿಂದ ಎತ್ತು ಮೃತಪಟ್ಟಿದೆ. ಚಂದ್ರಪ್ಪ ಪುಲಮೋರ್ ಅವರಿಗೆ ಸೇರಿದ ಎತ್ತು ಇದಾಗಿದೆ.

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು – 560009.
ದೂರವಾಣಿ ಸಂಖ್ಯೆ: 080–29710021/22/23/24 ಫ್ಯಾಕ್ಸ್: 080–29710025
ಇ–ಮೇಲ್: coo.krrda.karbng@gmail.com ವೆಬ್‌ಸೈಟ್: http://www.krrda.in
ಸಂಖ್ಯೆ:ಕೆಆರ್‌ಆರ್‌ಡಿಎ/208/ಟೆಂಡರ್ ನೋ–03/2026–27/820 ದಿನಾಂಕ: 15–05–2026
ಟೆಂಡರ್ ಆಹ್ವಾನ ಸೂಚನೆ (ಎನ್‌ಐಟಿ)
ಕರ್ನಾಟಕ ಸರ್ಕಾರದ ಪರವಾಗಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ (ಕೆಆರ್‌ಆರ್‌ಡಿಎ) ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಐಟಂ ದರ ಆಧಾರಿತ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.
**Indent Number: KRRDA/2025-26/RD/WORK INDENT 450, 451, 452, 453, 454, 455, 456, 457, 458, 459, 461, 462, 460, 446, 447, 464, 466, 468, 469, 470, 471, 473, 474, 475, 477, 478, 480, 340, 341, 342, 425, 429, 344, 345, 346, 347, 348, 349, 351, 352, 356, 357, 359, 360, 483, 484, 485, 487, 488, 489, 490, 491, 493, 494, 503, 495, 496, 497, 498, 499, 500, 502, 361, 362, 363, 364, 365, 367, 368, 369, 370, 372, 465, 472, 476, 479, 481, 373, 375, 376, 377, 378, 379, 381, 383, 382, 384, 385, 386, 388, 389, 390, 391, 392, 393, 394, 445, 442, 443, 444, 395, 396, 397, 399, 400, 505, 506, 508, 509, 401, 402, 403, 404, 405, 406, 407, 408, 409, 410, 411, 413, 414, 415, 416, 353, 354, 417, 421, 423, 424, 418, 419, 420, 422, 510, 511, 512, 513, 514, 515, 519, 518, 520, 521, 523, 433, 436, 437, 431, 441, 432, 434, 439, 440, 524, 525, 527, 529, 530, 531, 533, 534, 528.**
ಈ ಟೆಂಡರ್‌ಗಳು **ಕರ್ನಾಟಕ ರಾಜ್ಯದ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (KRRIP) – ಪ್ರಗತಿ ಪಥ (ಎಡಿಬಿ ರವರ ಬಾಹ್ಯ ನೆರವಿನೊಂದಿಗೆ)** ಯೋಜನೆಯಡಿಯಲ್ಲಿನ 163 ಪ್ಯಾಕೇಜ್ ಕಾಮಗಾರಿಗಳನ್ನು ಒಳಗೊಂಡಿದ್ದು, ಐದು ವರ್ಷಗಳ ವಾರ್ಷಿಕ ನಿರ್ವಹಣೆಯನ್ನು ಒಳಗೊಂಡಿರುತ್ತವೆ. ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರದಲ್ಲಿ ನೋಂದಾಯಿತ ಅರ್ಹ ಅಥವಾ ನೋಂದಾಯಿಸದೆ ಇರುವ ಗುತ್ತಿಗೆದಾರರು ಟೆಂಡರ್ ಸಲ್ಲಿಸಬಹುದಾಗಿರುತ್ತದೆ.
**ಟೆಂಡರ್ ದಾಖಲೆಗಳ ಲಭ್ಯತೆ ಮತ್ತು ಸಲ್ಲಿಕೆ ವಿಧಾನ:** ಟೆಂಡರ್ ದಾಖಲೆಗಳು ಕೆ.ಪಿ.ಪಿ. ಪೋರ್ಟಲ್‌ನಲ್ಲಿ **(https://kppp.karnataka.gov.in)** ಲಭ್ಯವಿದ್ದು, ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಟೆಂಡರ್ ಸಲ್ಲಿಸಲು, ಗುತ್ತಿಗೆದಾರರುಗಳು ಈ ಪೋರ್ಟಲ್‌ನಲ್ಲಿ ನೋಂದಾಯಿಸಿರಬೇಕು. ಜೊತೆಗೆ, ಮಾನ್ಯತೆ ಪಡೆದ ಪ್ರಮಾಣೀಕರಣ ಪ್ರಾಧಿಕಾರದಿಂದ ನೀಡಲಾದ ಡಿಜಿಟಲ್ ಸಹಿ ಪ್ರಮಾಣಪತ್ರ (ಡಿಎಸ್‌ಸಿ) ಹೊಂದಿರಬೇಕು.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ / ಸಮಯ: **29–06–2026 ರಂದು ಸಂಜೆ 5.00 ಗಂಟೆವರೆಗೆ** ಹಾಗೂ ಹೆಚ್ಚಿನ ಮಾಹಿತಿಯನ್ನು **https://kppp.karnataka.gov.in** ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸದರಿ ಟೆಂಡರ್ ಪ್ರಕಟಣೆ ಸಂಬಂಧ ಮುಂದಿನ ಯಾವುದೇ ತಿದ್ದುಪಡಿಗಳನ್ನು ಅಥವಾ ಹೆಚ್ಚುವರಿ ಮಾಹಿತಿ (corrigendum/addendum) ಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
**ಸಹಿ/– ಟೆಂಡರಿಂಗ್ ಅಧಿಕಾರಿ ಮತ್ತು ಕಾರ್ಯಪಾಲಕ ಇಂಜಿನಿಯರ್ ಕೆ.ಆರ್.ಆರ್.ಡಿ.ಎ., ಬೆಂಗಳೂರು.**
ವಾಸಾಸಂಇ/ವಾ.ಪ್ರ/697/ಅಡ್ವರ್ಟೋರ್/2026–27

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು – 560009.
ದೂರವಾಣಿ ಸಂಖ್ಯೆ: 080–29710021/22/23/24 ಫ್ಯಾಕ್ಸ್: 080–29710025
ಇ–ಮೇಲ್: coo.krrda.karbng@gmail.com ವೆಬ್‌ಸೈಟ್: http://www.krrda.in
ಸಂಖ್ಯೆ:ಕೆಆರ್‌ಆರ್‌ಡಿಎ/208/ಟೆಂಡರ್ ನೋ–02/2026–27/819 ದಿನಾಂಕ: 15–05–2026
ಟೆಂಡರ್ ಆಹ್ವಾನ ಸೂಚನೆ (ಎನ್‌ಐಟಿ)
ಕರ್ನಾಟಕ ಸರ್ಕಾರದ ಪರವಾಗಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ (KRRDA) ಕೆ.ಪಿ.ಪಿ ಪೋರ್ಟಲ್ ಮುಖಾಂತರ ಐಟಂ ದರ ಆಧಾರಿತ ಟೆಂಡರ್‌ಗಳನ್ನು ಆಹ್ವಾನಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತವೆ.
Indent Number: KRRDA/2025-26/RD/WORK INDENT 449, 463, 482, 427, 343, 350, 358, 486, 492, 504, 501, 366, 371, 467, 374, 380, 387, 398, 507, 412, 355, 516, 522, 517, 435, 438, 526, 532
ಈ ಟೆಂಡರ್‌ಗಳು ಕರ್ನಾಟಕ ರಾಜ್ಯದ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (KRRIP)–ಪ್ರಗತಿಪಥ (ADB ರವರ ಬಾಹ್ಯ ನೆರವಿನೊಂದಿಗೆ) ಯೋಜನೆಯಡಿಯಲ್ಲಿನ 28 ಪ್ಯಾಕೇಜ್ ಕಾಮಗಾರಿಗಳನ್ನು ಒಳಗೊಂಡಿದ್ದು, ಐದು ವರ್ಷಗಳ ವಾರ್ಷಿಕ ನಿರ್ವಹಣೆಯನ್ನು ಒಳಗೊಂಡಿರುತ್ತವೆ. ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರದಲ್ಲಿ ನೋಂದಾಯಿತ ಅರ್ಹ ಅಥವಾ ನೋಂದಾಯಿಸದೆ ಇರುವ ಗುತ್ತಿಗೆದಾರರು ಟೆಂಡರ್ ಸಲ್ಲಿಸಬಹುದಾಗಿರುತ್ತದೆ.
ಟೆಂಡರ್ ದಾಖಲೆಗಳ ಲಭ್ಯತೆ ಮತ್ತು ಸಲ್ಲಿಕೆ ವಿಧಾನ: ಟೆಂಡರ್ ದಾಖಲೆಗಳು ಕೆ.ಪಿ.ಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ಲಭ್ಯವಿದ್ದು, ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಟೆಂಡರ್ ಸಲ್ಲಿಸಲು, ಗುತ್ತಿಗೆದಾರರುಗಳು ಈ ಪೋರ್ಟಲ್‌ನಲ್ಲಿ ನೋಂದಾಯಿಸಿರಬೇಕು. ಜೊತೆಗೆ, ಮಾನ್ಯತೆ ಪಡೆದ ಪ್ರಮಾಣೀಕರಣ ಪ್ರಾಧಿಕಾರದಿಂದ ನೀಡಲಾದ ಡಿಜಿಟಲ್ ಸಹಿ ಪ್ರಮಾಣಪತ್ರ (DSC) ಹೊಂದಿರಬೇಕು.
ಟೆಂಡರ್ ಸಲ್ಲಿಕೆಯಕೊನೆಯ ದಿನಾಂಕ / ಸಮಯ: **29–06–2026 ರಂದು ಸಂಜೆ 5.00 ಗಂಟೆವರೆಗೆ** ಹಾಗೂ ಹೆಚ್ಚಿನ ಮಾಹಿತಿಯನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ಸದರಿಟೆಂಡರ್ ಪ್ರಕಟಣೆ ಸಂಬಂಧ ಮುಂದಿನ ಯಾವುದೇ ತಿದ್ದುಪಡಿಗಳನ್ನು ಅಥವಾ ಹೆಚ್ಚುವರಿ ಮಾಹಿತಿ (corrigendum / addendum) ಗಳನ್ನು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
**ಸಹಿ/– ಟೆಂಡರಿಂಗ್ ಅಧಿಕಾರಿ ಮತ್ತು ಕಾರ್ಯಪಾಲಕ ಇಂಜಿನಿಯರ್ ಕ.ಗ್ರಾ.ರ.ಅ. ಸಂಸ್ಥೆ, ಬೆಂಗಳೂರು.**
ವಾಸಾಸಂಇ/ವಾ.ಪ್ರ/696/ಅಡ್ವರ್ಟೋರ್/2026–27

ನಕಲಿ ದಾಖಲೆ ಸೃಷ್ಟಿಸಿ ಸರ್ಕಾರಿ ಕೆಲಸ ಪಡೆದಿದ್ದ ವ್ಯಕ್ತಿ

# 44 ವರ್ಷದ ಹಿಂದಿನ ವಂಚನೆ ಪತ್ತೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 44 ವರ್ಷಗಳ ಹಿಂದೆ ಬೇರೆ ಒಬ್ಬರ ಅಂಕಪಟ್ಟಿ ನೀಡಿ, ಸರ್ಕಾರಿ ಕೆಲಸ ಪಡೆದಿದ್ದ ಹಾಗೂ ಆ ಕೃತ್ಯವು ಗೊತ್ತಿದ್ದರೂ ಆರೋಪಿಗೆ ಸಹಕಾರ ನೀಡಿದ್ದ ಪ್ರಕರಣವೊಂದು ಪತ್ತೆ ಆಗಿದೆ.

ಬೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ಸಿ.ಟಿ.ಮಂಜುನಾಥ್ ನೀಡಿದ ದೂರಿನ ಮೇಲೆ ಮಂಡ್ಯ ಜಿಲ್ಲೆಯ ಮಳವಳ್ಳಿಯ ರಾಚಯ್ಯ, ಹಾಸನದ ಬೊಮ್ಮೇಗೌಡ ಹಾಗೂ ಕೆಇಬಿಯ ನಿವೃತ್ತ ಸಹಾಯಕ ಎಂಜಿನಿಯರ್, ಮಂಡ್ಯದ ಸುಭಾಷ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಆರೋಪಿಗಳ ಪೈಕಿ ಒಬ್ಬರನ್ನು ಬಂಧಿಸಲಾಗಿತ್ತು. ಉಳಿದ ಇಬ್ಬರು ಬಂಧನದ ಭೀತಿಯಿಂದ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಸಣ್ಣ ನಿರ್ಲಕ್ಷ್ಯದಿಂದ ಒಬ್ಬರಿಗೆ ಸರ್ಕಾರಿ ಕೆಲಸ ಕೈತಪ್ಪಿದ್ದರೆ, ಮತ್ತೊಬ್ಬರು ಬೇರೆಯವರ ಅಂಕ ಪಟ್ಟಿಯನ್ನು ಇಲಾಖೆಗೆ ನೀಡಿ 40 ವರ್ಷಗಳ ಕಾಲ ಸರ್ಕಾರಿ ಇಲಾಖೆಯಲ್ಲಿ ಕೆಲಸ ಮಾಡಿರುವ ಪ್ರಕರಣ ಇದು.

ಬೊಮ್ಮೇಗೌಡ (ನಕಲಿ ರಾಚಯ್ಯ) ವಿರುದ್ಧ ವಂಚನೆ, 'ಅಸಲಿ ರಾಚಯ್ಯ' ವಿರುದ್ಧ ಅಪರಾಧ ತಿಳಿದಿದ್ದರೂ ಹಣಕ್ಕಾಗಿ ಸತ್ಯಾಂಶ ಮುಚ್ಚಿಟ್ಟಿದ್ದ ಆರೋಪ, ನಿವೃತ್ತ ಎಂಜಿನಿಯರ್ ಸುಭಾಷ್ ವಿರುದ್ಧ ಇಬ್ಬರ ನಡುವೆ ಸಂಧಾನ ನಡೆಸಿದ್ದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

1982ರಲ್ಲಿ ಕರ್ನಾಟಕ ವಿದ್ಯುತ್ ಮಂಡಳಿಯು (ಶಿವಮೊಗ್ಗದಲ್ಲಿ ಲೈನ್‌ಮನ್ ಹುದ್ದೆ) ಅರ್ಜಿ ಆಹ್ವಾನಿಸಿತ್ತು. ಮಂಡ್ಯ ಜಿಲ್ಲೆಯ ಮಳವಳ್ಳಿಯ ಎಂ.ರಾಚಯ್ಯ, ಸಂದರ್ಶನಕ್ಕೆ ಹೋಗಿದ್ದರು. ಆದರೆ, ಅಂದು ಸಂದರ್ಶನ ರದ್ದಾಗಿತ್ತು. ವಾಪಸ್ ಬರುವಾಗ 7ನೇ ತರಗತಿಯ ತಮ್ಮ ಅಂಕಪಟ್ಟಿಯನ್ನು ಕಚೇರಿಯಲ್ಲೇ ಬಿಟ್ಟುಬಂದಿದ್ದರು. ಅದೇ ಸಮಯದಲ್ಲಿ ಕೆಲಸ ಹುಡುಕಿಕೊಂಡು ಬಂದಿದ್ದ ನಾಗಮಂಗಲದ ಬೊಮ್ಮೇಗೌಡಗೆ ಆ ಅಂಕಪಟ್ಟಿ ಸಿಕ್ಕಿತ್ತು.

ರಾಚಯ್ಯ ಅವರ ಹೆಸರನ್ನೇ ಬಳಸಿಕೊಂಡು ಬೊಮ್ಮೇಗೌಡ ಕೆಲಸಕ್ಕೆ ಅರ್ಜಿ ಸಲ್ಲಿಸಿದ್ದರು. 1992ರಲ್ಲಿ ಕೆಲಸವೂ ಕಾಯಂ ಆಗಿತ್ತು. 2003ರಲ್ಲಿ ಬೊಮ್ಮೇಗೌಡ ಕೋರ್ಟ್ ಮೂಲಕ ಪ್ರಮಾಣ ಪತ್ರ ಸಲ್ಲಿಸಿ, 'ನನ್ನ ಹೆಸರು ರಾಚಯ್ಯ ಅಲ್ಲ, ಬೊಮ್ಮೇಗೌಡ' ಎಂಬುದಾಗಿ ಬದಲಿಸಿಕೊಂಡು ಇಲಾಖೆಯ ಎಲ್ಲಾ ದಾಖಲೆಗಳಲ್ಲೂ ಸರಿಪಡಿಸಿಕೊಂಡಿದ್ದರು ಎಂದು ಮೂಲಗಳು ಹೇಳಿವೆ.

### ದೂರು ನೀಡದೇ ರಾಜಿ

2019ರಲ್ಲಿ 'ಅಸಲಿ ರಾಚಯ್ಯ'ಗೆ ಈ ವಿಷಯ ಗೊತ್ತಾಗಿತ್ತು. ಅವರು ಪೊಲೀಸರಿಗೆ ದೂರು ನೀಡದೇ ರಾಜಿ ಮಾಡಿಕೊಂಡಿದ್ದರು. ಪ್ರತಿವರ್ಷ ₹3 ಲಕ್ಷ ನೀಡಬೇಕೆಂದು ಬೊಮ್ಮೇಗೌಡಗೆ ರಾಚಯ್ಯ ತಿಳಿಸಿದ್ದರು. ಅಂದು ಸಹಾಯಕ ಎಂಜಿನಿಯರ್ ಆಗಿದ್ದ ರಾಚಯ್ಯ ಅವರ ಊರಿನವರೇ ಆಗಿದ್ದ ಸುಭಾಷ್ ಅವರ ಸಮ್ಮುಖದಲ್ಲಿ ಈ ಸಂಧಾನ ನಡೆದಿತ್ತು. ಒಪ್ಪಂದದಂತೆ ಪ್ರತಿ ವರ್ಷ ಹಣ ಸಂದಾಯ ಆಗುತ್ತಿತ್ತು. 2022ರಲ್ಲಿ ಬೊಮ್ಮೇಗೌಡ ನಿವೃತ್ತರಾಗಿದ್ದರು. ಆಗ ಬಂದಿದ್ದ ₹10 ಲಕ್ಷ ಗ್ರಾಚ್ಯುಟಿಯನ್ನೂ 'ಅಸಲಿ ರಾಚಯ್ಯ'ಗೆ ಬೊಮ್ಮೇಗೌಡ ನೀಡಿದ್ದರು. ಆದರೆ, ನಂತರ ಬೊಮ್ಮೇಗೌಡರಿಗೆ ಬರುತ್ತಿದ್ದ ₹65,224 ನಿವೃತ್ತಿ ವೇತನದಲ್ಲಿ ಅರ್ಧ ಪಾಲು ಬೇಕೆಂದು 'ಅಸಲಿ ರಾಚಯ್ಯ' ಪಟ್ಟು ಹಿಡಿದಿದ್ದರು. ಆಗ ಗಲಾಟೆ ಆರಂಭವಾಗಿತ್ತು. ನಿವೃತ್ತಿ ವೇತನದಲ್ಲಿ ಪಾಲು ನೀಡಲು ಬೊಮ್ಮೇಗೌಡ ನಿರಾಕರಿಸಿದ್ದರು ಎಂದು ಮೂಲಗಳು ಹೇಳಿವೆ.

### ಬೆಸ್ಕಾಂಗೆ ದೂರು, ಆಂತರಿಕ ತನಿಖೆ

ಬೆಸ್ಕಾಂ ವಿಚಕ್ಷಣಾ ದಳಕ್ಕೆ ರಾಚಯ್ಯ ದೂರು ನೀಡಿದ್ದರು. ಬೆಸ್ಕಾಂ ಅಧಿಕಾರಿಗಳು ಆಂತರಿಕ ತನಿಖೆ ನಡೆಸಿದಾಗ, ಪ್ರಕರಣದ ರಹಸ್ಯ ಬಯಲಾಗಿತ್ತು. ಬಳಿಕ, ಬೆಸ್ಕಾಂ ಅಧಿಕಾರಿಗಳು ಕಳೆದ ಫೆ.5ರಂದು ದೂರು ನೀಡಿದ್ದರು. ದೂರು ಆಧರಿಸಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಟೀಸರ್ ಬಿಡುಗಡೆಗೊಳಿಸಿದ ಶಾಸಕ ಎಸ್ ಆರ್ ವಿಶ್ವನಾಥ್ ಜೊತೆ ಚಿತ್ರತಂಡ

# ‘ಸರ್ಕಾರಿ ನ್ಯಾಯಬೆಲೆ ಅಂಗಡಿ’ ಟೀಸರ್ ಬಿಡುಗಡೆ

**52 ದಿನ ಮಂಡ್ಯದಲ್ಲಿ ಚಿತ್ರೀಕರಣ**

ರಾಗಿಣಿ ದ್ವಿವೇದಿ, ಕುಮಾರ್ ಬಂಗಾರಪ್ಪ, ದೊಡ್ಡಣ್ಣ ಮುಂತಾದ ಕಲಾವಿದರು ಮುಖ್ಯಭೂಮಿಕೆಯಲ್ಲಿರುವ ‘ಸರ್ಕಾರಿ ನ್ಯಾಯಬೆಲೆ ಅಂಗಡಿ’ ಸಿನಿಮಾದ ಪಾತ್ರಗಳನ್ನು ಪರಿಚಯಿಸುವ ಟೀಸರ್ ಇತ್ತೀಚೆಗೆ ಬಿಡುಗಡೆಯಾಯಿತು.

ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರೈಸಿ ಸಿನಿಮಾ ತೆರೆಗೆ ಬರಲು ಸಿದ್ಧವಾಗಿದ್ದು, ಇದು ಸರ್ಕಾರಿ ನ್ಯಾಯಬೆಲೆ ಅಂಗಡಿ ಮತ್ತು ಪಡಿತರ ವ್ಯವಸ್ಥೆಯ ಸುತ್ತ ನಡೆಯುವಂಥ ಕಥಾಹಂದರ ಹೊಂದಿದೆ. ಗ್ರಾಮೀಣ ಸೊಗಡಿನ ಈ ಸಿನಿಮಾದ ಸಂಪೂರ್ಣ ಚಿತ್ರೀಕರಣ ಮಂಡ್ಯ ಜಿಲ್ಲೆಯಲ್ಲೇ ನಡೆದಿದೆ.

‘ಸರ್ಕಾರಿ ನ್ಯಾಯಬೆಲೆ ಅಂಗಡಿ ಮತ್ತು ಪಡಿತರ ವ್ಯವಸ್ಥೆಯ ಮೇಲೆ ಮೂಡಿ ಬರುತ್ತಿರುವ ಮೊದಲ ಸಿನಿಮಾ ಇದಾಗಿದೆ. ಮನರಂಜನೆ ಜೊತೆಗೆ ಒಂದು ಒಳ್ಳೆಯ ಸಂದೇಶವೂ ಸಿನಿಮಾದಲ್ಲಿದೆ. ಅಲ್ಲಿ ನಡೆಯುವ ವ್ಯವಹಾರ, ಅವ್ಯವಹಾರವನ್ನು ಸಮಾಜಕ್ಕೆ ತೋರಿಸುವಂಥ ಕಥೆ ಸಿನಿಮಾದಲ್ಲಿದೆ. ಇದು ಎಲ್ಲಾ ಪ್ರೇಕ್ಷಕರಿಗೂ ಹತ್ತಿರವಾಗಲಿದೆ. ಬಹುಕಾಲದ ಬಳಿಕ ಇಂಥದ್ದೊಂದು ಸಾಮಾಜಿಕ ಕಳಕಳಿಯ ಚಿತ್ರದಲ್ಲಿ ಅಭಿನಯಿಸಿರುವುದಕ್ಕೆ ಖುಷಿಯಿದೆ’ ಎಂದಿದ್ದಾರೆ ಕುಮಾರ್ ಬಂಗಾರಪ್ಪ.

ಚಿತ್ರದಲ್ಲಿ ರಾಗಿಣಿ ದ್ವಿವೇದಿ ‘ಪಾರ್ವತಿ’ ಎಂಬ ಗ್ರಾಮೀಣ ಮಹಿಳೆಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ‘ಜಯಶಂಕರ ಟಾಕೀಸ್’ ಬ್ಯಾನರ್‌ನಡಿ ನಿರ್ಮಾಣವಾಗಿರುವ ಚಿತ್ರವನ್ನು ತೇಜು ಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ. ಅನಂತ್ ಆರ್ಯನ್ ಸಂಗೀತ ಸಂಯೋಜಿಸಿದ್ದು, ಬಿ.ರಾಮಮೂರ್ತಿ ಕಥೆ, ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ಚಿತ್ರಕ್ಕೆ ಸಾತ್ವಿಕ್ ಪವನ್ ಕುಮಾರ್ ಛಾಯಾಚಿತ್ರಗ್ರಹಣ ಮತ್ತು ನಿರ್ದೇಶನ ಮಾಡಿದ್ದಾರೆ.

ನಿರ್ಮಾಪಕರಾದ ಭಾ.ಮ.ಹರೀಶ್, ಭಾ.ಮ.ಗಿರೀಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಇದೇ ಆಗಸ್ಟ್‌ನಲ್ಲಿ ಸಿನಿಮಾವನ್ನು ಪ್ರೇಕ್ಷಕರ ಮುಂದೆ ಬರುವ ತಯಾರಿಯಲ್ಲಿದೆ ಚಿತ್ರತಂಡ.

ಶಿವರಾಜ್‌ಕುಮಾರ್

# ಗೌರ್‌ನಾಯ್ಡು ಆದ ಶಿವರಾಜ್‌ಕುಮಾರ್

ತೆಲುಗು ನಟ ರಾಮ್‌ಚರಣ್ ನಟನೆಯ ‘ಪೆದ್ದಿ’ಯಲ್ಲಿ ಶಿವರಾಜ್‌ಕುಮಾರ್ ಪಾತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ.

ಸಿನಿಮಾದೊಳಗೆ ‘ಗೌರ್‌ನಾಯ್ಡು’ ಆಗಿ ಶಿವರಾಜ್‌ಕುಮಾರ್ ಅವರು ಕಾಣಿಸಿಕೊಳ್ಳುತ್ತಿದ್ದು, ಗರಡಿಯ ಮುಖ್ಯಸ್ಥರಾಗಿ ನಟಿಸಿದ್ದಾರೆ. ಅವರ ಗರಡಿಯಲ್ಲೇ ಪಳಗಿದ ನಾಯಕನಾಗಿ ರಾಮ್‌ಚರಣ್ ಬಣ್ಣಹಚ್ಚಿದ್ದಾರೆ. ಸಿನಿಮಾ ಜೂನ್ 4ರಂದು ತೆರೆಕಾಣುತ್ತಿದೆ. ಬುಚ್ಚಿ ಬಾಬು ಸನಾ ನಿರ್ದೇಶಿಸುತ್ತಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ಜಾಹ್ನವಿ ಕಪೂರ್ ನಟಿಸಿದ್ದಾರೆ.

ಇದು ಶಿವರಾಜ್‌ಕುಮಾರ್ ಅವರ ಮೊದಲ ತೆಲುಗು ಸಿನಿಮಾವಾಗಿದ್ದು, ಜಗಪತಿ ಬಾಬು, ದಿವೇಂದು ಶರ್ಮಾ ಸೇರಿದಂತೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ‘ಪೆದ್ದಿ’ ಸ್ಪೋರ್ಟ್ಸ್ ಆ್ಯಕ್ಷನ್ ಡ್ರಾಮಾ ಆಗಿದ್ದು, ಎ.ಆರ್. ರೆಹಮಾನ್ ಸಂಗೀತ ನಿರ್ದೇಶನ ಮಾಡಿದ್ದಾರೆ. ವೃದ್ಧಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ವೆಂಕಟ ಸತೀಶ್ ಕಿಲಾರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಮೈತ್ರಿ ಮೂವಿ ಮೇಕರ್ಸ್ ಮತ್ತು ಸುಕುಮಾರ್ ರೈಟಿಂಗ್ಸ್ ಬ್ಯಾನರ್‌ಗಳು ಚಿತ್ರವನ್ನು ಪ್ರಸ್ತುತಪಡಿಸುತ್ತಿವೆ. ಆರ್. ರತ್ನವೇಲು ಛಾಯಾಚಿತ್ರಗ್ರಹಣ, ನವೀನ್ ನೂಲಿ ಸಂಕಲನ ಸಿನಿಮಾಗಿದೆ. ಈ ಸಿನಿಮಾ ಮೂಲಕ ಹೊಂಬಾಳೆ ಫಿಲ್ಮ್ಸ್ ವಿದೇಶಗಳಲ್ಲಿ ಸಿನಿಮಾ ವಿತರಣೆಯನ್ನು ಆರಂಭಿಸಿದೆ.

# ಶೀಘ್ರದಲ್ಲೇ ‘ಪ್ರಜಾವಾಣಿ ಸಿನಿ ಸಮ್ಮಾನ’

**4ನೇ ಆವೃತ್ತಿ**

ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ನಾಲ್ಕನೇ ಆವೃತ್ತಿಯ ಸಮಾರಂಭ ಶೀಘ್ರದಲ್ಲಿ ಜರುಗಲಿದೆ.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿವೆ. ಈಗಾಗಲೇ ಈ ಸಿನಿಮಾಗಳು ‘ಸಿನಿ ಸಮ್ಮಾನ’ದ 21 ತಾಂತ್ರಿಕ ತೀರ್ಪುಗಾರರ ಕೈಸೇರಿದ್ದು, ಶೀಘ್ರದಲ್ಲೇ ನಾಮನಿರ್ದೇಶನಗಳು ಹೊರಬೀಳಲಿವೆ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ.

ಚಿತ್ರತಂಡ

# ‘ಗರುಡ’ನ ಟ್ರೇಲರ್ ಬಿಡುಗಡೆ

ಎಐ ತಂತ್ರಜ್ಞಾನ ಕುರಿತು ಕಥೆ ಹೊಂದಿರುವ ‘ಗರುಡ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕಿರಣ್ ಎಸ್. ನಿರ್ದೇಶಿಸಿ, ನಿರ್ಮಿಸಿರುವ ಸಿನಿಮಾವಿದು.

‘ಇತ್ತೀಚಿನ ದಿನಗಳಲ್ಲಿ ಪ್ರತಿ ಕ್ಷೇತ್ರದಲ್ಲೂ ಎಐ ತಂತ್ರಜ್ಞಾನ ಹೆಚ್ಚು ಹೆಚ್ಚು ಬಳಕೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಅದು ಸಾರ್ವಜನಿಕರು ಮತ್ತು ಮಕ್ಕಳ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದೇ ಚಿತ್ರಕಥೆ. ಇದೊಂದು ಕಾಲ್ಪನಿಕ, ನಾನ್ ಲೀನಿಯರ್ ಚಿತ್ರ. ನಾಲ್ಕು ಕಥೆಗಳು ಬೇರೆ ಬೇರೆಯಾಗಿ ಸಾಗುತ್ತ ಒಂದು ಹಂತದಲ್ಲಿ ಸೇರುತ್ತವೆ. ಚಿತ್ರದ ನಾಯಕನ ಪ್ರಾಜೆಕ್ಟ್ ಹೆಸರು ‘ಗರುಡ’. ಈಗಾಗಿ ಚಿತ್ರಕ್ಕೆ ಈ ಶೀರ್ಷಿಕೆ ಇಡಲಾಗಿದೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ’ ಎಂದರು ನಿರ್ದೇಶಕ.

ಕಿರುತೆರೆ ನಟ ರಿತ್ವಾನ್ ಶ್ರೀನಿವಾಸ್ ಚಿತ್ರದ ನಾಯಕ. ದಿವ್ಯಾಚಂದ್ರ ನಾಯಕಿ. ಅಭಿ ಮಹೇಶ್, ಅಭಿಷೇಕ್, ಕಿರಣ್, ವಿನಯ್ ಪ್ರಭಾಕರ್ ಮುಂತಾದವರು ಚಿತ್ರದಲ್ಲಿದ್ದಾರೆ. ಸಂತೋಷ್ ಜೋಶ್ವಾ ಸಂಗೀತವಿದ್ದು, ನಿರ್ದೇಶಕರದ್ದೇ ಛಾಯಾಚಿತ್ರಗ್ರಹಣವಿದೆ.

# ಕೇರಳಂ: ಖಾತೆ ಹಂಚಿಕೆ ಕಸರತ್ತು ಆರಂಭ

## ಯುಡಿಎಫ್ ಸಭೆ: ಸೋಮವಾರ ಮುಖ್ಯಮಂತ್ರಿ ಪ್ರಮಾಣ ವಚನ ಸಾಧ್ಯತೆ

ತಿರುವನಂತಪುರ: ಚುನಾವಣೆ ಫಲಿತಾಂಶ ಘೋಷಣೆಯಾಗಿ 11 ದಿನಗಳ ಬಳಿಕ ಕೇರಳಂ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ವಿ.ಡಿ ಸತೀಶನ್ ಶುಕ್ರವಾರದಿಂದ ಸಂಪುಟ ರಚನೆ, ಖಾತೆ ಹಂಚಿಕೆ ಕಸರತ್ತು ಆರಂಭಿಸಿದ್ದಾರೆ.

ಇಲ್ಲಿ ನಡೆದ ಯುಡಿಎಫ್ ಸಭೆಯಲ್ಲಿ ಸಂಪುಟ ಸ್ಥಾನ ಮತ್ತು ಖಾತೆ ಹಂಚಿಕೆ ಬಗ್ಗೆ ಕೆಲವು ಒಪ್ಪಂದಗಳಿಗೆ ಬರಲಾಗಿದೆ ಎಂದು ಮೂಲಗಳು ಹೇಳಿವೆ.

ಮುಖ್ಯಮಂತ್ರಿ ಸ್ಥಾನದಿಂದ ವಂಚಿತರಾಗಿರುವ ರಮೇಶ್ ಚೆನ್ನಿತ್ತಲ ಅವರನ್ನು ಸಂಪುಟದಲ್ಲಿನ ಸ್ಥಾನ ಹಂಚಿಕೆ ಮಾತುಕತೆಯಲ್ಲಿ ಭಾಗಿಯಾಗುವಂತೆ ಮಾಡುವ ಮೂಲಕ ಅವರನ್ನು ಸಮಾಧಾನಪಡಿಸುವ ಪ್ರಯತ್ನ ನಡೆದಿದೆ.

ನಿಯೋಜಿತ ಮುಖ್ಯಮಂತ್ರಿ ವಿ.ಡಿ ಸತೀಶನ್ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ, ಕೇರಳಂನ ಉಸ್ತುವಾರಿಯೂ ಆಗಿರುವ ದೀಪಾ ದಾಸ್‌ಮುನ್ಶಿ ಅವರು ಚೆನ್ನಿತ್ತಲ ಅವರನ್ನು ಶುಕ್ರವಾರ ಭೇಟಿಯಾಗಿ ಅವರ ಮನವೊಲಿಕೆಗೆ ಪ್ರಯತ್ನಿಸಿದರು. 2011ರಲ್ಲೂ ಮುಖ್ಯಮಂತ್ರಿ ಸ್ಥಾನ ತಪ್ಪಿಸಿಕೊಂಡಿದ್ದ ಚೆನ್ನಿತ್ತಲ ಅವರಿಗೆ ಉಮ್ಮನ್ ಚಾಂಡಿ ನೇತೃತ್ವದ ಸಂಪುಟದಲ್ಲಿ ಗೃಹ ಖಾತೆ ನೀಡಲಾಗಿತ್ತು.

ಚೆನ್ನಿತ್ತಲ ಅವರು ಸಂಪುಟಕ್ಕೆ ಸೇರ್ಪಡೆಯಾದರೆ ಅವರಿಗೆ ಈ ಬಾರಿಯೂ ಗೃಹ ಖಾತೆ ಸಿಗುವ ಸಾಧ್ಯತೆ ಇದೆ. ಹಿಂದೆ ಗೃಹ ಖಾತೆ ನಿಭಾಯಿಸಿದ ಅನುಭವ ಅವರಿಗೆ ಇದೆ. ಜತೆಗೆ ತಮಗೆ ಆಪ್ತರಾಗಿರುವ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಅಧ್ಯಕ್ಷ ಸಣ್ಣಿ ಜೋಸೆಫ್ ಅವರಿಗೂ ಸಂಪುಟದಲ್ಲಿ ಸ್ಥಾನ ಕಲ್ಪಿಸಬೇಕು ಎಂಬ ಒತ್ತಡವನ್ನೂ ಅವರು ಹೇರಬಹುದು ಎಂದು ಮೂಲಗಳು ಹೇಳಿವೆ.

ಯುಡಿಎಫ್ ಗೆಲುವಿನಲ್ಲಿ ಇನ್ನೊಂದೆಡೆ ನಿರ್ಣಾಯಕ ಪಾತ್ರ ವಹಿಸಿರುವ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗೆ (ಐಯುಎಂಎಲ್) ‘ಶಿಕ್ಷಣ ಖಾತೆ’ ಸಿಗುತ್ತದೆಯೇ ಎನ್ನುವುದರ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ. ಐಯುಎಂಎಲ್‌ಗೆ ಶಿಕ್ಷಣ ಖಾತೆ ನೀಡುವುದಕ್ಕೆ ಬಿಜೆಪಿ ಈಗಾಗಲೇ ಆಕ್ಷೇಪ ವ್ಯಕ್ತಪಡಿಸಿದೆ.

ಭಾನುವಾರದ ವೇಳೆಗೆ ಸಂಪುಟ ಸ್ಥಾನಗಳನ್ನು ಅಂತಿಮಗೊಳಿಸುವ ಸಾಧ್ಯತೆ ಇದ್ದು, ಇಡೀ ಸಚಿವ ಸಂಪುಟ ಸೋಮವಾರದ ಸಮಾರಂಭದಲ್ಲೇ ಪ್ರಮಾಣ ವಚನ ಸ್ವೀಕರಿಸಲಿದೆ ಎಂದು ಮೂಲಗಳು ಹೇಳಿವೆ.

**ಸಂಪುಟ ಸ್ಥಾನದ ನಿರೀಕ್ಷೆ:** ‘ಯುಡಿಎಫ್ ಮಿತ್ರಪಕ್ಷಗಳ ಪ್ರತಿನಿಧಿಗಳು ಸಹ ವಿ.ಡಿ ಸತೀಶನ್ ಸಚಿವ ಸಂಪುಟದಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಲ್ಲಿ ಇದ್ದಾರೆ’ ಎಂದು ಕೇರಳ ಕಾಂಗ್ರೆಸ್‌ನ (ಜೇಕಬ್ ಬಣ) ಅನೂಪ್ ಜೇಕಬ್ ಹೇಳಿದ್ದಾರೆ.

ಮಾಜಿ ಸಚಿವ ಟಿ.ಎಂ. ಜೇಕಬ್ ಅವರ ಪುತ್ರರಾಗಿರುವ ಅನೂಪ್ ಜೇಕಬ್, ಈ ಬಾರಿ ಪಿರವಂ ವಿಧಾನಸಭಾ ಕ್ಷೇತ್ರದಿಂದ ಗೆಲ್ಲುವ ಮೂಲಕ ಪಕ್ಷದ ಏಕೈಕ ಶಾಸಕರಾಗಿ ಹೊರಹೊಮ್ಮಿದ್ದಾರೆ.

ಅಭ್ಯರ್ಥಿಗಳು, ಆಕಾಂಕ್ಷಿಗಳು ಹೆಚ್ಚಿರುವುದರಿಂದ, ಸಚಿವ ಸ್ಥಾನಗಳಿಗೆ 2.5 ವರ್ಷಗಳ ಸರದಿ ವ್ಯವಸ್ಥೆಯನ್ನು ಯುಡಿಎಫ್ ಅನುಸರಿಸಲಿದೆಯೇ ಎಂಬ ಪ್ರಶ್ನೆಗೆ, ಅಂತಹ ಯಾವುದೇ ಮಾತುಕತೆ ನಡೆದಿಲ್ಲ ಎಂದು ಅನೂಪ್ ಹೇಳಿದರು.

### ಚೆನ್ನಿತ್ತಲ, ಪಿಣರಾಯಿ ವಿಜಯನ್ ಭೇಟಿಯಾದ ಸತೀಶನ್

ಕೇರಳಂನ ನಿಯೋಜಿತ ಮುಖ್ಯಮಂತ್ರಿ ವಿ.ಡಿ ಸತೀಶನ್ ಅವರು ಶುಕ್ರವಾರ ಕಾಂಗ್ರೆಸ್ ಮುಖಂಡ, ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಯೂ ಆಗಿದ್ದ ರಮೇಶ್ ಚೆನ್ನಿತ್ತಲ ಅವರನ್ನು ತಿರುವನಂತಪುರದ ಅವರ ನಿವಾಸದಲ್ಲಿ ಭೇಟಿಯಾದರು.

ಮುಖ್ಯಮಂತ್ರಿ ಗಾದಿಗೆ ವಿ.ಡಿ ಸತೀಶನ್ ಹೆಸರನ್ನು ಕಾಂಗ್ರೆಸ್ ಹೈಕಮಾಂಡ್ ಅಂತಿಮಗೊಳಿಸಿದ ಬೆನ್ನಲ್ಲೇ, ಚೆನ್ನಿತ್ತಲ ಅವರು ಗುರುವಾಯೂರಿನ ಶ್ರೀಕೃಷ್ಣದೇವಸ್ಥಾನಕ್ಕೆ ಹೋಗಿದ್ದರು. ಶುಕ್ರವಾರ ಅವರನ್ನು ಭೇಟಿಯಾದ ಸತೀಶನ್ ಮಾತುಕತೆ ನಡೆಸಿದರು.

ಸಿಪಿಎಂ ಮುಖಂಡ, ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರನ್ನೂ ಸತೀಶನ್ ತಿರುವನಂತಪುರದ ನಿವಾಸದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು. ಸತೀಶನ್ ಅವರ ಕೈ ಹಿಡಿದು ಆತ್ಮೀಯವಾಗಿ ಮನೆಯೊಳಗೆ ಸ್ವಾಗತಿಸಿದ ಪಿಣರಾಯಿ, ಕೆಲಹೊತ್ತು ಅವರೊಂದಿಗೆ ಮಾತುಕತೆ ನಡೆಸಿದರು. ಯುಡಿಎಫ್ ಸಂಚಾಲಕ ಎಂ.ಪಿ ಅಡೂರ್ ಪ್ರಕಾಶ್ ಅವರ ನಿವಾಸಕ್ಕೆ ಸತೀಶನ್ ಭೇಟಿ ನೀಡಿದರು.

### ‘ದುಂದುವೆಚ್ಚವಿಲ್ಲ, ಕನಿಷ್ಠ ಭದ್ರತೆ ಮಾತ್ರ’



ವಿ.ಡಿ. ಸತೀಶನ್

‘ಯಾವುದೇ ಆಡಂಬರ ಬೇಕಿಲ್ಲ, ದುಂದುವೆಚ್ಚವಿಲ್ಲ, ಕನಿಷ್ಠ ಭದ್ರತೆ ಮಾತ್ರ ಸಾಕು’ ಎಂದು ಕೇರಳಂನ ನಿಯೋಜಿತ ಮುಖ್ಯಮಂತ್ರಿ ವಿ.ಡಿ. ಸತೀಶನ್ ಹೇಳಿದ್ದಾರೆ.

‘ರಾಜ್ಯವು ಬಿಗಿಯಾದ ಆರ್ಥಿಕ ಪರಿಸ್ಥಿತಿ ಎದುರಿಸುತ್ತಿದೆ. ಹಾಗಾಗಿ ದುಂದುವೆಚ್ಚಕ್ಕೆ ಕಡಿವಾಣ ಹಾಕುವಂತೆ ಹೈಕಮಾಂಡ್ ಸೂಚನೆ ಇದೆ. ಹೊಸ ವಾಹನ ಖರೀದಿಸುವುದಿಲ್ಲ. ಮುಖ್ಯಮಂತ್ರಿಗೆ ಝೆಡ್ ಪ್ಲಸ್ ಭದ್ರತೆ ಇದ್ದರೂ, ಕನಿಷ್ಠ ಭದ್ರತೆಯನ್ನು ಮಾತ್ರ ಒದಗಿಸುವಂತೆ ಪೊಲೀಸರಿಗೆ ಸೂಚಿಸಿದ್ದೇನೆ. ಭದ್ರತೆ, ದಟ್ಟಣೆ ನಿರ್ವಹಣೆ ಹೆಸರಿನಲ್ಲಿ ಸಾರ್ವಜನಿಕರಿಗೆ ತೊಂದರೆ ಕೊಡಬಾರದು ಎಂದೂ ಸೂಚಿಸಿದ್ದೇನೆ’ ಎಂದರು.

# ‘ಅದಾನಿಗಾಗಿ ಮೋದಿ ಚೌಕಾಸಿ’

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ಅವರನ್ನು ‘ಬಿಡುಗಡೆ’ ಮಾಡುವ ಏಕೈಕ ಉದ್ದೇಶದಿಂದ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದಕ್ಕೆ ಸಹಿ ಮಾಡಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

‘ರಾಜಿ ಮಾಡಿಕೊಳ್ಳುವ ಪ್ರಧಾನಿಯವರು ವ್ಯಾಪಾರ ಒಪ್ಪಂದದ ಆಗು–ಹೋಗುಗಳ ಬಗ್ಗೆ ಚರ್ಚಿಸಲಿಲ್ಲ. ಆದರೆ ಅದಾನಿ ಅವರ ಬಿಡುಗಡೆಗೆ ಚೌಕಾಸಿ ಮಾಡಿದ್ದರು’ ಎಂದು ‘ಎಕ್ಸ್’ ಪೋಸ್ಟ್‌ನಲ್ಲಿ ಅವರು ದೂರಿದ್ದಾರೆ.

ಅದಾನಿ ವಿರುದ್ಧದ ಲಂಚದ ಆರೋಪ ಪ್ರಕರಣದ ಇತ್ಯರ್ಥಕ್ಕೆ ಅಮೆರಿಕ ಒಪ್ಪಿಗೆ ನೀಡಿದೆ ಎಂಬ ಮಾಧ್ಯಮ ವರದಿ ಬೆನ್ನಲ್ಲೇ, ರಾಹುಲ್ ಗಾಂಧಿ ಹರಿಹಾಯ್ದಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಆಪರೇಷನ್ ಸಿಂಧೂರ ಕಾರ್ಯಾಚರಣೆಯು 2025ರ ಮೇ 10ರಂದು ಅರ್ಧಕ್ಕೆ ನಿಂತಿದ್ದೇಕೆ ಎಂಬುದು ಈಗ ಸ್ಪಷ್ಟವಾಗಿದೆ. ‘ಮೋದಾನಿ’ ವಿರುದ್ಧದ ಎಲ್ಲಾ ಭ್ರಷ್ಟಾಚಾರ ಆರೋಪಗಳನ್ನು ಟ್ರಂಪ್ ಆಡಳಿತ ಕೈಬಿಟ್ಟಿದೆ ಎಂದು ವರದಿಯಾಗಿದೆ’ ಎಂದು ಹೇಳಿದ್ದಾರೆ.

**ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ**

KUIDFC

ನಗರಾಭಿವೃದ್ಧಿ ಭವನ, ನಂ.22, 17ನೇ ’ಎಫ್’ ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038. ದೂರವಾಣಿ: 91–80–25196100, 25196124 ಫ್ಯಾಕ್ಸ್: 080–25196110

ಇ–ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com

ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/ಟೆಂಡರ್/04/2026–27/460 ದಿನಾಂಕ: 15.05.2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕೆಯುಐಡಿಎಫ್.ಸಿ ಸಂಸ್ಥೆಯು N.G.T ಪರಿಸರ ಪರಿಹಾರ ನಿಧಿ ಹಾಗೂ ಎಸ್.ಬಿ.ಎಂ (ನ)–2.0 ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆ.ಪಿ.ಪಿ ಪೋರ್ಟಲ್ ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರ್ ಮೊತ್ತ (ಜಿಎಸ್‌ಟಿ ಹೊರತುಪಡಿಸಿ) ರೂ.ಲಕ್ಷಗಳಲ್ಲಿ | ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ |
|---|---|---|---|
| 1 | Construction of Sewage Treatment Plants (STP) of capacity of 3.03 & 3.37 MLD at **Aurad & Hallikheda-B ULB of Bidar District** 2.26 & 3.56 MLD at **Yelburga & Kushtagi ULB of Koppal District** along with 5 years Operation & Maintenance (including 1-year Defect liability period) under Swachh Bharat Mission (U) -2.0 fund through Design, Built, Operate and Transfer (DBOT) model. **(Package: SBM_KLB_PKG-7).Call-4** | 1521.50 | 15.50 |
| 2 | Construction of Sewage Treatment Plant (STP) of 3.19 MLD capacity at **Chincholi ULB of Kalburgi District** along with 5 years Operation & Maintenance (including 1-year Defect liability period) under Swachh Bharat Mission (U)-2.0 fund through Design, Built, Operate and Transfer (DBOT) model. **(Package: SBM/KLB_Pkg-9). Call-3** | 427.34 | 6.50 |
| 3 | Construction of Sewage Treatment Plant (STP) of capacity 3.86 mld at **Chitguppa ULB of Bidar District** along with 5 years Operation & Maintenance (including 1year Defect liability period) under Swachh Bharat Mission (U) -2.0 fund through Design, Built, Operate and Transfer(DBOT)model". **(Package: SBM/KLB/PKG-10).Call-2** | 541.63 | 8.25 |
| 4 | Construction of Sewage Treatment Plants (STP) of capacities 5.80 mld 4.13 mld at **Wadi and Afzalpur ULBs of Kalaburagi District** along with 5 years Operation & Maintenance (including 1year Defect liability period) under Swachh Bharat Mission (U) -2.0 fund through Design, Built, Operate and Transfer (DBOT) model. **(Package:SBM/KLB/PKG-12).Call-2** | 1366.90 | 14.00 |
| 5 | Construction of Sewage Treatment Plants (STP) of varying capacities of 2.41 MLD to 4.50 MLD at **Ameengada, Keruru & Badami ULB's of Bagalkot District** along with 5 years Operation & Maintenance (including 1year Defect liability period) under Swachh Bharat Mission (U) -2.0 fund through Design, Built, Operate and Transfer (DBOT)model. **(Package: SBM-BGM-PKG-12). Call-2** | 1790.80 | 18.00 |
| 6 | Construction of Sewage Treatment Plants (STP) of 3.33 MLD at **Ankalagi-Akkatangirahaala ULB's of Belagavi District** along with 5 years Operation & Maintenance (including 1year Defect liability period) under Swachh Bharat Mission (U) -2.0 fund through Design, Built, Operate and Transfer (DBOT) model.**(Package:SBM-BGM-PKG-13).Call-2** | 419.29 | 6.50 |
| 7 | Construction of 0.55 MLD Sewage Treatment Plant in **Bagepalli town** along with 5 years Operation & Maintenance (including 1-year Defect liability period) under SBM (U)-2.0 fund through Design, Built, Operate and Transfer (DBOT) model **Call-2.** | 179.04 | 3.00 |

1) ಟೆಂಡರ್ ಆಹ್ವಾನಿಸಿರುವ ದಿನಾಂಕ: **16.05.2026**. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **20.05.2026 ಸಮಯ: 11.30 ಪೂರ್ವಾಹ್ನ**. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **25.05.2026 ಸಮಯ: 5.30 ಅಪರಾಹ್ನ**. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **27.05.2026 ಸಮಯ: 11.30 ಪೂರ್ವಾಹ್ನ**. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **06.06.2026 ಸಮಯ: 11.30 ಪೂರ್ವಾಹ್ನ**.

ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Website ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.

**ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನಾ ಮೇಲ್ವಿಚಾರಣಾ ಘಟಕ, ಯುಡಬ್ಲ್ಯೂಎಮ್–ಕೆಯುಐಡಿಎಫ್‌ಸಿ, ಬೆಂಗಳೂರು**

ವಾಸಾಸಂಇ/ವಾಪ್ರ/692/ಎಂಎಎ/2026–27

# ನೀಟ್: ಜೂನ್ 21ಕ್ಕೆ ಮರು ಪರೀಕ್ಷೆ

ಎರಡನೇ ಮುಖಪುಟದಿಂದ...

‘ರಾಜ್ಯಗಳ ಸಹಕಾರ ಪಡೆದು ಅಭ್ಯರ್ಥಿಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗುವುದು. ಇದಕ್ಕಾಗಿ ನಾನೇ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳ ಜತೆ ಮಾತನಾಡುತ್ತೇನೆ’ ಎಂದು ಅವರು ಹೇಳಿದರು.

ವಿದ್ಯಾರ್ಥಿಗಳ ಭವಿಷ್ಯ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ‘ನೀಟ್-ಯುಜಿ’ ಪರೀಕ್ಷೆಯಲ್ಲಿನ ಯಾವುದೇ ಅಕ್ರಮದಲ್ಲಿ ಭಾಗವಹಿಸುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಅವರು ಎಚ್ಚರಿಸಿದರು.

**‘ಮಾಫಿಯಾಕ್ಕೆ ಅವಕಾಶ ನೀಡಲ್ಲ’:** ‘ಅರ್ಹ ಅಭ್ಯರ್ಥಿಗಳ ಸೀಟುಗಳನ್ನು ಕಸಿದುಕೊಳ್ಳಲು ಯಾವುದೇ ಮಾಫಿಯಾದ ಪಿತೂರಿ ಅಥವಾ ಹಣ ಬಲದವರಿಗೆ ಅವಕಾಶ ನೀಡುವುದಿಲ್ಲ. ಅಂಥದ್ದನ್ನು ತಡೆಯುವ ಸಲುವಾಗಿಯೇ ಕಠಿಣ ನಿರ್ಧಾರ ತೆಗೆದುಕೊಂಡಿದ್ದೇವೆ. ಸಚಿವನಾಗಿ ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ತೀವ್ರ ದುಃಖಿತನಾಗಿದ್ದೇನೆ’ ಎಂದು ಅವರು ತಿಳಿಸಿದರು.

ಕಳೆದ ಬಾರಿ ಅಕ್ರಮಗಳು ನಡೆದಾಗ ರಾಧಾಕೃಷ್ಣನ್ ಸಮಿತಿ ರಚಿಸಲಾಯಿತು. ಆ ಸಮಿತಿ ನೀಡಿದ್ದ ಶಿಫಾರಸುಗಳನ್ನು ಜಾರಿಗೆ ತಂದಿದ್ದೇವೆ. ಅದರ ಹೊರತಾಗಿಯೂ ಈ ಘಟನೆ ನಡೆದಿದೆ. ಆದ್ದರಿಂದ, ಮೊದಲ ಹೆಜ್ಜೆಯಾಗಿ ಪರೀಕ್ಷೆಯನ್ನೇ ರದ್ದುಗೊಳಿಸಿದೆವು ಎಂದು ಪ್ರತಿಕ್ರಿಯಿಸಿದರು.

ಪ್ರಶ್ನೆ ಪತ್ರಿಕೆ ಸೋರಿಕೆಯಾದ ಕುರಿತ ಮಾಹಿತಿ ಎನ್‌ಟಿಎಗೆ ಮೇ 7ರಂದು ಬಂದಿತು. ಏಜೆನ್ಸಿಯು ಮೇ 8ರಂದು ಇದನ್ನು ಸರ್ಕಾರದ ಗಮನಕ್ಕೆ ತಂದಿತು. ಈ ಕುರಿತು ಪರಿಶೀಲಿಸಿ, ಪ್ರಶ್ನೆಗಳು ಸೋರಿಕೆ ಆಗಿರುವುದನ್ನು ಖಚಿತಪಡಿಸಿಕೊಂಡೆವು. ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೇ 12ರಂದು ಪರೀಕ್ಷೆಯನ್ನು ರದ್ದುಪಡಿಸುವ ಕ್ರಮ ತೆಗೆದುಕೊಂಡೆವು ಎಂದರು.

‘ಅರ್ಹ ಅಭ್ಯರ್ಥಿಗಳು ಅವಕಾಶದಿಂದ ವಂಚಿತರಾಗುವುದಕ್ಕೆ ಬಿಡಲು ನಾವು ಬಯಸುವುದಿಲ್ಲ. ಈ ಪ್ರಕರಣವನ್ನು ಈಗಾಗಲೇ ಸಿಬಿಐಗೆ ವಹಿಸಲಾಗಿದೆ. ಈ ಪ್ರಕರಣದಲ್ಲಿ ತಪ್ಪಿತಸ್ಥರು ಎನ್‌ಟಿಎ ಒಳಗೆ ಅಥವಾ ಹೊರಗೆ ಇದ್ದರೂ ಬಿಡುವುದಿಲ್ಲ ಎಂದು ಸಿಬಿಐ ಈಗಾಗಲೇ ಹೇಳಿರುವುದು ಸರಿಯಾಗಿದೆ’ ಎಂದು ಅವರು ಉತ್ತರಿಸಿದರು.

### ಪ್ರಶ್ನೆಪತ್ರಿಕೆ ಸೋರಿಕೆ: ಪ್ರಾಧ್ಯಾಪಕನ ಬಂಧನ

ಎರಡನೇ ಮುಖಪುಟದಿಂದ...

ಅಲ್ಲಿನ ವಿದ್ಯಾರ್ಥಿಯೊಬ್ಬ ತನ್ನ ನೋಟ್ ಬುಕ್‌ನಲ್ಲಿ ಈ ಪ್ರಶ್ನೆ, ಉತ್ತರದ ಆಯ್ಕೆಗಳನ್ನು ಬರೆದುಕೊಂಡಿದ್ದ. ಅವು ‘ನೀಟ್-ಯುಜಿ 2026’ರ ಅಧಿಕೃತ ಪ್ರಶ್ನೆ ಪತ್ರಿಕೆಯ ಜತೆಗೆ ಹೊಂದಾಣಿಕೆಯಾಗಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

**ಪೋಷಕರೊಬ್ಬರ ದೂರು:** ಲಾತೂರ್‌ನ ಖಾಸಗಿ ಕೋಚಿಂಗ್ ಕೇಂದ್ರ ನಡೆಸಿದ ಅಣಕು ಪರೀಕ್ಷೆಯಲ್ಲಿನ 42 ಪ್ರಶ್ನೆಗಳು ನೀಟ್ ಪರೀಕ್ಷೆಯ ನೈಜ ಪ್ರಶ್ನೆಪತ್ರಿಕೆಯಲ್ಲಿ ಬಂದ ಪ್ರಶ್ನೆಗಳನ್ನು ಹೋಲುತ್ತವೆ ಎಂದು ಆರೋಪಿಸಿ ವಿದ್ಯಾರ್ಥಿಯೊಬ್ಬರ ಪೋಷಕರು ಮೇ 12ರಂದು ಲಾತೂರ್‌ನ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ದೂರು ದಾಖಲಿಸಿದ್ದರು. ಅದನ್ನು ಆಧರಿಸಿ ಪೊಲೀಸರು ತನಿಖೆ ಕೈಗೊಂಡಿದ್ದರು.

**ಮತ್ತೊಬ್ಬರ ವಿಚಾರಣೆ:** ಲಾತೂರ್‌ನ ‘ನೀಟ್–ಯುಜಿ’ ಕೋಚಿಂಗ್ ಕೇಂದ್ರವಾದ ‘ರೇಣುಕಾಯ್ ಕೆಮಿಸ್ಟ್ರಿ ಕ್ಲಾಸಸ್’ನ (ಆರ್‌ಸಿಸಿ) ನಿರ್ದೇಶಕ ಶಿವರಾಜ್ ಮೋಟೆಗಾಂವ್ಕರ್ ಅವರನ್ನು ಸಿಬಿಐ ಶುಕ್ರವಾರ ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದೆ.

### ವಿನಾಯಿತಿಗೆ ಸ್ಟಾಲಿನ್ ಆಗ್ರಹ

ಚೆನ್ನೈ (ಪಿಟಿಐ): ಪ್ರಸಕ್ತ ಶೈಕ್ಷಣಿಕ ವರ್ಷ ‘ನೀಟ್–ಯುಜಿ’ಗೆ ವಿನಾಯಿತಿ ನೀಡುವಂತೆ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ರಾಷ್ಟ್ರೀಯ ವೈದ್ಯಕೀಯ ಆಯೋಗ (2019) ಕಾಯ್ದೆ ಸೆಕ್ಷನ್ 14ಕ್ಕೆ ತಿದ್ದುಪಡಿ ತರಬೇಕಿದ್ದು, ಅದಕ್ಕಾಗಿ ಸುಗ್ರೀವಾಜ್ಞೆ ಹೊರಡಿಸುವಂತೆ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಅಲ್ಲದೆ ಅರ್ಹತಾ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳನ್ನು ಆಧರಿಸಿ ಪ್ರವೇಶ ಪ್ರಕ್ರಿಯೆ ನಡೆಸಲು ರಾಜ್ಯ ಸರ್ಕಾರಗಳಿಗೆ ಅನುಮತಿ ನೀಡಬೇಕು ಎಂದು ಹೇಳಿದ್ದಾರೆ.

# ಭಾರತದ ಪಾತ್ರದಿಂದ ಸಂಘರ್ಷ ಕೊನೆ: ಇರಾನ್

ನವದೆಹಲಿ (ಪಿಟಿಐ): ‘ಪಶ್ಚಿಮ ಏಷ್ಯಾ ವಲಯದಲ್ಲಿ ಶಾಂತಿ ಮರುಸ್ಥಾಪಿಸುವಲ್ಲಿ ಭಾರತವು ನಿರ್ಣಾಯಕ ಪಾತ್ರ ವಹಿಸಬಹುದು’ ಎಂದು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪಶ್ಚಿಮ ಏಷ್ಯಾ ಸಂಘರ್ಷವನ್ನು ಮಾತುಕತೆ ಮೂಲಕ ಇತ್ಯರ್ಥಪಡಿಸುವುದನ್ನು ಹೊರತುಪಡಿಸಿ ಬೇರೆ ಯಾವುದೇ ಮಾರ್ಗವಿಲ್ಲ. ಇರಾನ್‌ಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳಿಗೂ ಮಿಲಿಟರಿ ಪರಿಹಾರವಲ್ಲ’ ಎಂದರು.

‘ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಭಾರತ ಕೈಗೊಳ್ಳುವ ಯಾವುದೇ ರಚನಾತ್ಮಕ ಕ್ರಮವನ್ನೂ ಇರಾನ್ ಸ್ವಾಗತಿಸುತ್ತದೆ. ಈಗಾಗಲೇ ಅಮೆರಿಕದ ಜತೆಗೆ ಒಂದು ಸುತ್ತಿನ ಮಾತುಕತೆ ಮುಗಿದಿದೆ. ಆದರೆ, ಆ ಮಾತುಕತೆ ವಿಶ್ವಾಸಾರ್ಹತೆಯ ಕೊರತೆ ಎದುರಿಸುತ್ತಿತ್ತು’ ಎಂದು ಅರಾಘ್ಚಿ ಹೇಳಿದರು.

‘ಹೊರ್ಮುಜ್ ಜಲಸಂಧಿ ಸಮಸ್ಯೆ ಈಗ ಇನ್ನಷ್ಟು ಜಟಿಲವಾಗಿದೆ. ಆದರೆ, ಈ ಮಾರ್ಗವನ್ನು ಎಲ್ಲ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲು ಇರಾನ್ ಸಿದ್ಧವಿದೆ’ ಎಂದರು.

‘ಅಮೆರಿಕನ್ನರಿಗೆ ಇರಾನ್ ಅನ್ನು ನಂಬಲು ಹಲವು ಕಾರಣಗಳಿವೆ. ಆದರೆ, ಇರಾನ್‌ಗೆ ಅಮೆರಿಕವನ್ನು ನಂಬದಿರಲು ಅನೇಕ ಕಾರಣಗಳಿವೆ’ ಎಂದ ಅರಾಘ್ಚಿ, ‘ಸಂಘರ್ಷ ಕೊನೆಗೊಳಿಸುವ ನಿಟ್ಟಿನಲ್ಲಿ ಪಾಕಿಸ್ತಾನದ ಮಧ್ಯಸ್ಥಿಕೆ ಪ್ರಯತ್ನಗಳು ಇನ್ನೂ ವಿಫಲಗೊಂಡಿಲ್ಲ. ಇರಾನ್ ಅಣ್ವಸ್ತ್ರ ಹೊಂದಲು ಬಯಸುತ್ತಿಲ್ಲ’ ಎಂದು ಸ್ಪಷ್ಟಪಡಿಸಿದರು.

ಇರಾನ ವಿದೇಶಾಂಗ ಸಚಿವ ಅಬ್ಬಾಸ್ ಆರಾಘ್ಚಿ ಅವರೊಂದಿಗೆ ಜೈಶಂಕರ್ ಮಾತನಾಡಿದರು ಎಎಫ್‌ಪಿ ಚಿತ್ರ

**ಅರಾಘ್ಚಿ– ಜೈಶಂಕರ್ ಮಾತುಕತೆ:** ಪಶ್ಚಿಮ ಏಷ್ಯಾ ಸಂಘರ್ಷದಿಂದ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಕಚ್ಚಾತೈಲ ಪೂರೈಕೆಯಲ್ಲಿ ಆಗಿರುವ ವ್ಯತ್ಯಯ ಮತ್ತು ಸಾಗರ ಸ್ಥಿರತೆ ಕುರಿತು ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಜೊತೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶುಕ್ರವಾರ ಇಲ್ಲಿ ಮಾತುಕತೆ ನಡೆಸಿದರು.

ಅರಾಘ್ಚಿ ಅವರು ನವದೆಹಲಿಯಲ್ಲಿ ನಡೆಯುತ್ತಿರುವ ಬ್ರಿಕ್ಸ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗವಹಿಸಲು ಭಾರತಕ್ಕೆ ಬಂದಿದ್ದಾರೆ.

‘ಪಶ್ಚಿಮ ಏಷ್ಯಾದಲ್ಲಿನ ಬೆಳವಣಿಗೆಗಳ ಕುರಿತು ಮತ್ತು ದ್ವಿಪಕ್ಷೀಯ ಸಹಕಾರದ ಬಗ್ಗೆ ಅರಾಘ್ಚಿ ಅವರೊಂದಿಗೆ ಮಾತುಕತೆ ನಡೆಸಿದ್ದೇನೆ’ ಎಂದು ಜೈಶಂಕರ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

**ಷೇರುಪೇಟೆ ವಹಿವಾಟು**




| ಎನ್‌ಎಸ್‌ಇ ನಿಫ್ಟಿ | |
|---|---|
| ಹಿಂದಿನ ಅಂತ್ಯ: | 23,689 |
| ಇಂದಿನ ಅಂತ್ಯ: | 23,643 |
| ದಿನದ ಕನಿಷ್ಠ: | 23,610 |
| | 46 |

| ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು | |
|---|---|
| 100 ಕ್ಕೆ | ₹590 |
| 12 ಕ್ಕೆ | ₹84 |
| ಮೈಸೂರು: 100 ಕ್ಕೆ | ₹595 |

| ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ) | |
|---|---|
| ಆರ್‌ಎಸ್‌ಎಸ್-4 | ₹257 |
| ಆರ್‌ಎಸ್‌ಎಸ್-5 | ₹250 |
| ಗುಡ್ ಲಾಟ್ | ₹217 |

| ರಾಮನಗರ ರೇಷ್ಮೆಗೂಡು | |
|---|---|
| ಮಿಶ್ರತಳಿ(ಸಿ.ಬಿ) | ₹321-700 |
| ದ್ವಿತಳಿ (ಬಿ.ವಿ) | ₹459-850 |

| ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ) | |
|---|---|
| ಶೇಂಗಾ (ರಿಫೈನ್ಡ್) | ₹1590 (1590) |
| ಸೋಯಾ (ರಿಫೈನ್ಡ್) | ₹1485 (1490) |
| ಸೂರ್ಯಕಾಂತಿ (ರಿಫೈನ್ಡ್) | ₹1630 (1635) |
| ಪಾಮೋಲಿನ್ | ₹1475 (1470) |

| ಮುದ್ರೆಮನೆ ಕಾಫಿ (50 ಕೆ.ಜಿಗೆ) | |
|---|---|
| ಎಪಿ | ₹23250 |
| ಎಸಿ | ₹14000 |
| ಆರ್‌ಪಿ | ₹18300 |
| ಆರ್‌ಸಿ | ₹9850 |

## ಐಟಿಆರ್–1,4 ಸಲ್ಲಿಕೆ ಆರಂಭ

ನವದೆಹಲಿ (ಪಿಟಿಐ): 2026–27ರ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ಮೂಲಕ ಐಟಿಆರ್ 1 ಮತ್ತು ಐಟಿಆರ್ 4 ಅನ್ನು ಸಲ್ಲಿಸಬಹುದಾಗಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

ಐಟಿಆರ್ ನಮೂನೆಗಳು (1 ಮತ್ತು 4) ಸಣ್ಣ ಮತ್ತು ಮಧ್ಯಮ ತೆರಿಗೆ ಪಾವತಿದಾರರಿಗೆ ಸಂಬಂಧಿಸಿವೆ.

2025–26ರ ಆರ್ಥಿಕ ವರ್ಷದಲ್ಲಿ ಗಳಿಸಿದ ವರಮಾನಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ವಿವರ ಸಲ್ಲಿಸುವುದನ್ನು (ಐಟಿಆರ್) ಆರಂಭಿಸಬಹುದಾಗಿದೆ. ಐಟಿಆರ್–1 ಸಲ್ಲಿಕೆಗೆ ಜುಲೈ 31 ಮತ್ತು ಐಟಿಆರ್–4 ಅನ್ನು ಸಲ್ಲಿಸಲು ಆಗಸ್ಟ್ 31 ಕೊನೆಯ ದಿನವಾಗಿದೆ ಎಂದು ಇಲಾಖೆಯು 'ಎಕ್ಸ್'ನಲ್ಲಿ ಶುಕ್ರವಾರ ತಿಳಿಸಿದೆ.

| ಮುಂಬೈ ಧಾರಣೆ (ಶೇಂಗಾ) | |
|---|---|
| 15-05-2026 | |
| ಜಾವಾ 70/80(ಹೊಸ) | 11100-11200 |
| ಜಾವಾ 80/90(ಹೊಸ) | 10400-10500 |
| ದಪ್ಪ ಮಧ್ಯಪ್ರದೇಶ (ಹೊಸ) | 8400-8500 |
| ದಪ್ಪ ಗುಜರಾತ್ (ಹೊಸ) | 9300-9400 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1600 (1600) |
| ಒಂದು ವಾರದ ಡೆಲಿವರಿ | 1595 (1595) |
| ಪಾಮ್ ವಾರದ ಡೆಲಿವರಿ | 1473 (1468) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1525 (1525) |
| **ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 1,57,400 (1,60,000) |
| ಬೆಳ್ಳಿ ಕೆ.ಜಿಗೆ | 2,66,000 (2,80,000) |

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

# ದೇಶದ ರಫ್ತು ಶೇ 13ರಷ್ಟು ಏರಿಕೆ

## ಪಶ್ಚಿಮ ಏಷ್ಯಾದ ಸಂಘರ್ಷದ ನಡುವೆಯೂ ರಫ್ತು ಹೆಚ್ಚಳ: ವಾಣಿಜ್ಯ ಸಚಿವಾಲಯ

ನವದೆಹಲಿ (ಪಿಟಿಐ): ಏಪ್ರಿಲ್ ತಿಂಗಳಿನಲ್ಲಿ ದೇಶದಿಂದ ₹4.17 ಲಕ್ಷ ಕೋಟಿ (43.56 ಬಿಲಿಯನ್ ಡಾಲರ್) ಮೌಲ್ಯದ ಸರಕು ಮತ್ತು ಸೇವೆಗಳು ರಫ್ತಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ರಫ್ತು ಪ್ರಮಾಣವು ಶೇ 13.78ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಂಕಿ–ಅಂಶಗಳು ಶುಕ್ರವಾರ ತಿಳಿಸಿದೆ.

ಇದೇ ಅವಧಿಯಲ್ಲಿ ದೇಶದ ಆಮದು ಪ್ರಮಾಣ ಶೇ 10ರಷ್ಟು ಹೆಚ್ಚಳವಾಗಿದ್ದು, ₹6.90 ಲಕ್ಷ ಕೋಟಿ (71.94 ಬಿಲಿಯನ್ ಡಾಲರ್) ಆಗಿದೆ. ಇದು ಆರು ತಿಂಗಳ ಗರಿಷ್ಠ ಮಟ್ಟವಾಗಿದೆ. ವ್ಯಾಪಾರ ಕೊರತೆಯು ₹2.59 ಲಕ್ಷ ಕೋಟಿಗೆ (27.1 ಬಿಲಿಯನ್ ಡಾಲರ್) ತಲುಪಿದೆ ಎಂದು ತಿಳಿಸಿದೆ.

ರಫ್ತು ಮೌಲ್ಯಕ್ಕಿಂತ ಆಮದು ಮೌಲ್ಯ ಹೆಚ್ಚಿದ್ದರೆ ಅದನ್ನು ವ್ಯಾಪಾರ ಕೊರತೆ ಎಂದು ಕರೆಯಲಾಗುತ್ತದೆ.

'ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನ ನಡುವೆಯೂ ದೇಶದ ಸರಕು ಮತ್ತು ಸೇವೆಗಳ ರಫ್ತು ಆರೋಗ್ಯಕರ ಬೆಳವಣಿಗೆ ದಾಖಲಿಸಿದೆ. ಏಪ್ರಿಲ್‌ನಲ್ಲಿ ರಫ್ತು ಐದು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿದೆ' ಎಂದು ಸಚಿವಾಲಯದ ಕಾರ್ಯದರ್ಶಿ ರಾಜೇಶ್ ಅಗರ್‌ವಾಲ್ ಹೇಳಿದ್ದಾರೆ.

ಎಲೆಕ್ಟ್ರಾನಿಕ್ಸ್ ವಸ್ತುಗಳ ರಫ್ತು ಶೇ 40ರಷ್ಟು ಏರಿಕೆಯಾಗಿದೆ. ಮಾಂಸ ಮತ್ತು ಹೈನು ಉತ್ಪನ್ನಗಳು ಶೇ 48, ಪೆಟ್ರೋಲಿಯಂ ಉತ್ಪನ್ನಗಳು ಶೇ 34, ಎಂಜಿನಿಯರಿಂಗ್ ಸರಕುಗಳು ಶೇ 8 ಮತ್ತು ಔಷಧಗಳ ರಫ್ತು ಶೇ 7ರಷ್ಟು ಹೆಚ್ಚಳವಾಗಿದೆ. ಇದು ಒಟ್ಟಾರೆ ರಫ್ತು ಏರಿಕೆಗೆ ಕಾರಣ ಎಂದು ತಿಳಿಸಿದೆ.

ಹೊಸ ಮಾರುಕಟ್ಟೆಗಳಿಗೆ ದೇಶದ ರಫ್ತು ಹೆಚ್ಚಳವಾಗಿದ್ದು, ಸಹ ಏರಿಕೆಗೆ ಕಾರಣವಾಗಿದೆ. ಸಿಂಗಪುರ, ತಾಂಜೇನಿಯಾ, ಶ್ರೀಲಂಕಾ, ಬಾಂಗ್ಲಾದೇಶ, ಹಾಂಕಾಂಗ್, ಮಲೇಷ್ಯಾ, ಆಸ್ಟ್ರೇಲಿಯಾ ಮತ್ತು ವಿಯೆಟ್ನಾಂಗೆ ರಫ್ತು ಉತ್ತಮವಾಗಿದೆ.

**ಪಶ್ಚಿಮ ಏಷ್ಯಾಕ್ಕೆ ಇಳಿಕೆ:** ಆದರೆ, ಇದೇ ಅವಧಿಯಲ್ಲಿ ಪಶ್ಚಿಮ ಏಷ್ಯಾಕ್ಕೆ ದೇಶದ ರಫ್ತು ಪ್ರಮಾಣದಲ್ಲಿ ಶೇ 28ರಷ್ಟು ಇಳಿಕೆಯಾಗಿದ್ದು, ₹39,878 ಕೋಟಿಯಾಗಿದೆ. ಆಮದು ಪ್ರಮಾಣವು ಶೇ 31ರಷ್ಟು ಕುಸಿತವಾಗಿದ್ದು, ₹1 ಲಕ್ಷ ಕೋಟಿಯಷ್ಟಾಗಿದೆ. ಇದು ಕಳೆದ ವರ್ಷದ ಇದೇ ಅವಧಿಯಲ್ಲಿ ₹1.46 ಲಕ್ಷ ಕೋಟಿಯಷ್ಟಿತ್ತು. ಪಶ್ಚಿಮ ಏಷ್ಯಾದ ಸಂಘರ್ಷವೇ ಇಳಿಕೆಗೆ ಕಾರಣ ಎಂದು ತಿಳಿಸಿದೆ.

ಕಚ್ಚಾ ತೈಲದ ಆಮದಿನಲ್ಲಿ ಶೇ 10ರಷ್ಟು ಇಳಿಕೆಯಾಗಿದ್ದು, ₹1.79 ಲಕ್ಷ ಕೋಟಿಯಷ್ಟಾಗಿದೆ ಎಂದು ತಿಳಿಸಿದೆ.

**ಮುಖ್ಯಾಂಶಗಳು**

- ₹2.59 ಲಕ್ಷ ಕೋಟಿಗೆ ತಲುಪಿದ ದೇಶದ ವ್ಯಾಪಾರ ಕೊರತೆ
- ಸಂಘರ್ಷದಿಂದ ಪಶ್ಚಿಮ ಏಷ್ಯಾಕ್ಕೆ ರಫ್ತು, ಆಮದಿನಲ್ಲಿ ಇಳಿಕೆ
- ಕಚ್ಚಾ ತೈಲದ ಆಮದಿನಲ್ಲಿ ಶೇ 10ರಷ್ಟು ಕುಸಿತ

**ವ್ಯಾಪಾರ ಒಪ್ಪಂದ ಕುರಿತಾಗಿ ಮುಂದಿನ ಸುತ್ತಿನ ಮಾತುಕತೆ ನಡೆಸಲು ಅಮೆರಿಕದ ತಂಡವು ಭಾರತಕ್ಕೆ ಜೂನ್ ತಿಂಗಳಿನಲ್ಲಿ ಭೇಟಿ ನೀಡುವ ನಿರೀಕ್ಷೆ ಇದೆ. ಭೇಟಿಯ ದಿನಾಂಕ ಅಂತಿಮಗೊಂಡಿಲ್ಲ**

**ರಾಜೇಶ್ ಅಗರ್‌ವಾಲ್,** ಕೇಂದ್ರ ವಾಣಿಜ್ಯ ಸಚಿವಾಲಯದ ಕಾರ್ಯದರ್ಶಿ

### ಚಿನ್ನ, ಬೆಳ್ಳಿ ಆಮದು ಭಾರಿ ಜಿಗಿತ

ಏಪ್ರಿಲ್‌ನಲ್ಲಿ ₹53,916 ಕೋಟಿ ಮೌಲ್ಯದ ಚಿನ್ನ ಮತ್ತು ₹3,943 ಕೋಟಿ ಮೌಲ್ಯದ ಬೆಳ್ಳಿ ಆಮದಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಕ್ರಮವಾಗಿ ಶೇ 81 ಮತ್ತು ಶೇ 157ರಷ್ಟು ಏರಿಕೆಯಾಗಿದೆ ಎಂದು ಸಚಿವಾಲಯದ ಅಂಕಿ–ಅಂಶಗಳು ತಿಳಿಸಿವೆ.

ಅಮೂಲ್ಯ ಲೋಹಗಳ ಬೆಲೆಯಲ್ಲಿನ ಹೆಚ್ಚಳದಿಂದ ಮೌಲ್ಯವು ಏರಿಕೆಯಾಗಿದೆ. ಆದರೆ, ಕೇಂದ್ರ ಸರ್ಕಾರವು ಇತ್ತೀಚೆಗೆ ಚಿನ್ನ ಮತ್ತು ಬೆಳ್ಳಿಯ ಮೇಲೆ ಆಮದು ಸುಂಕವನ್ನು ಹೆಚ್ಚಿಸಿದೆ. ಇದರಿಂದ ಮುಂದಿನ ದಿನಗಳಲ್ಲಿ ಆಮದು ಪ್ರಮಾಣ ಇಳಿಕೆ ಆಗಬಹುದು ಎಂದು ಅಗರ್‌ವಾಲ್ ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದಲ್ಲಿ ₹69 ಲಕ್ಷ ಕೋಟಿಯಷ್ಟು ಮೌಲ್ಯದ ಚಿನ್ನವು ದೇಶಕ್ಕೆ ಆಮದಾಗಿತ್ತು. 2024-25ಕ್ಕೆ ಹೋಲಿಸಿದರೆ ಇದು ಶೇ 24ರಷ್ಟು ಏರಿಕೆಯಾಗಿದೆ. ಗಾತ್ರದ ಲೆಕ್ಕದಲ್ಲಿ 721.03 ಟನ್‌ನಷ್ಟು ಚಿನ್ನ ಆಮದಾಗಿದ್ದು, ಶೇ 4.76ರಷ್ಟು ಇಳಿಕೆ ಆಗಿದೆ ಎಂದು ತಿಳಿಸಿದೆ.

ಬೆಳ್ಳಿ ಆಮದಿನಲ್ಲಿ ಶೇ 150ರಷ್ಟು ಏರಿಕೆಯಾಗಿದ್ದು, ₹1.15 ಲಕ್ಷ ಕೋಟಿಯಾಗಿದೆ. 7,334 ಟನ್ ಬೆಳ್ಳಿ ಆಮದಾಗಿದ್ದು, ಶೇ 42ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

## ಸುದ್ದಿ 2 ನಿಮಿಷ

### 'ಈರುಳ್ಳಿ ಕೆ.ಜಿ ₹12.35ರಂತೆ ಖರೀದಿ'

ಪುಣೆ / ನಾಸಿಕ್ (ಪಿಟಿಐ): ಈರುಳ್ಳಿ ಬೆಲೆ ಕುಸಿತದ ಕಾರಣದಿಂದ ಪ್ರತಿ ಕೆ.ಜಿಗೆ ₹12.35ರಂತೆ (ಕ್ವಿಂಟಲ್‌ಗೆ ₹1,235) ರೈತರಿಂದ ಈರುಳ್ಳಿ ಖರೀದಿಸಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಮಹಾರಾಷ್ಟ್ರದ ಸತಾರಾದಲ್ಲಿ ಮಾತನಾಡಿದ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಪಶ್ಚಿಮ ಏಷ್ಯಾದ ಸಂಘರ್ಷದಿಂದ ಈರುಳ್ಳಿ ರಫ್ತಿಗೆ ತೊಂದರೆ ಉಂಟಾಗಿದ್ದು, ಬೆಲೆ ಕುಸಿದಿದೆ. ಹೀಗಾಗಿ, ಶುಕ್ರವಾರದಿಂದಲೇ ಖರೀದಿಸಲಾಗುವುದು ಎಂದು ಹೇಳಿದ್ದಾರೆ.

ಈರುಳ್ಳಿ ದರದ ಕುರಿತು ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಜೊತೆ ಚೌಹಾಣ್ ಮಾತುಕತೆ ನಡೆಸಿದ ಬಳಿಕ ಈ ಘೋಷಣೆ ಮಾಡಿದ್ದಾರೆ.

**ವಿರೋಧ:** ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಲ್ ಈರುಳ್ಳಿಯನ್ನು ₹1,235ರಂತೆ ಖರೀದಿಸುವ ನಿರ್ಧಾರವನ್ನು ಮಹಾರಾಷ್ಟ್ರದ ಈರುಳ್ಳಿ ಬೆಳೆಗಾರರ ಸಂಘ ವಿರೋಧಿಸಿದ್ದು, ಕ್ವಿಂಟಲ್‌ಗೆ ಕನಿಷ್ಠ ₹3 ಸಾವಿರ ನೀಡಬೇಕು ಎಂದು ಒತ್ತಾಯಿಸಿದೆ.

2023ರಲ್ಲಿ ದೇವೇಂದ್ರ ಫಡಣವೀಸ್ ಅವರು ಉಪ ಮುಖ್ಯಮಂತ್ರಿ ಆಗಿದ್ದರು. ಅಂದು ಕ್ವಿಂಟಲ್‌ಗೆ ₹2,410ರಂತೆ ಈರುಳ್ಳಿ ಖರೀದಿಸಲಾಗಿತ್ತು. ಆದರೆ, ಇಂದು ₹1,235ರಂತೆ ಖರೀದಿಸ ಲಾಗುತ್ತಿದೆ. ಇದು ಉತ್ಪಾದನಾ ವೆಚ್ಚಕ್ಕೂ ಸಾಕಾಗುವುದಿಲ್ಲ ಎಂದು ಹೇಳಿದೆ.

### ಬ್ಲಿಂಕಿಟ್‌ನಲ್ಲಿ ಕಳಪೆ ಗುಣಮಟ್ಟದ ಮೊಟ್ಟೆ: ವಿವರಣೆಗೆ ಆದೇಶ

ನವದೆಹಲಿ (ಪಿಟಿಐ): ಕ್ವಿಕ್–ಕಾಮರ್ಸ್ ವಲಯದ ಕಂಪನಿಯಾದ ಬ್ಲಿಂಕಿಟ್‌ನಲ್ಲಿ ಕಳಪೆ ಗುಣಮಟ್ಟದ ಮೊಟ್ಟೆಗಳನ್ನು ಮಾರಾಟ ಮಾಡಲಾಗಿದೆ ಎನ್ನುವ ಗ್ರಾಹಕರ ದೂರಿಗೆ ಸಂಬಂಧಿಸಿದಂತೆ ವಿವರಣೆ ನೀಡುವಂತೆ ಕಂಪನಿಗೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಮೊಟ್ಟೆಗಳು ಕೆಟ್ಟ ವಾಸನೆ ಹೊಂದಿದ್ದು, ರಬ್ಬರ್ ರೀತಿ ಇವೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹಲವಾರು ಗ್ರಾಹಕರು ದೂರಿದ್ದರು. ಈ ಕುರಿತು ಸ್ವಯಂಪ್ರೇರಿತವಾಗಿ ಪ್ರಾಧಿಕಾರವು ದೂರು ದಾಖಲಿಸಿಕೊಂಡಿದ್ದು, ವಾರದೊಳಗೆ ಸಮಗ್ರ ವಿವರಣೆ ನೀಡುವಂತೆ ಬ್ಲಿಂಕ್ ಕಾಮರ್ಸ್ ಪ್ರೈವೆಟ್ ಲಿಮಿಟೆಡ್‌ಗೆ ಪತ್ರ ಬರೆದಿದೆ ಎಂದು ತಿಳಿಸಿವೆ.

## ಟಿಎಂಪಿವಿ ಲಾಭ ಶೇ 31ರಷ್ಟು ಇಳಿಕೆ

ಮುಂಬೈ (ಪಿಟಿಐ): 2025–26ರ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಟಾಟಾ ಮೋಟರ್ಸ್ ಪ್ಯಾಸೆಂಜರ್ ವೆಹಿಕಲ್ಸ್ (ಟಿಎಂಪಿವಿ) ಕಂಪನಿಯ ನಿವ್ವಳ ಲಾಭದಲ್ಲಿ ಶೇ 31ರಷ್ಟು ಇಳಿಕೆಯಾಗಿದೆ.

2024–25ರ ಇದೇ ಅವಧಿಯಲ್ಲಿ ಕಂಪನಿಯ ಲಾಭವು ₹8,556 ಕೋಟಿಯಷ್ಟಾಗಿತ್ತು. ಅದು ಈ ಬಾರಿ ₹5,878 ಕೋಟಿಗೆ ಇಳಿದಿದೆ.

ಕಂಪನಿಯ ಜಾಗ್ವಾರ್ ಲ್ಯಾಂಡ್ ರೋವರ್ ಮಾರಾಟದಲ್ಲಿ ಶೇ 14.5ರಷ್ಟು ಇಳಿಕೆಯಾಗಿದ್ದು, 95,300 ವಾಹನಗಳು ಮಾರಾಟವಾಗಿವೆ. ಇದು ಲಾಭದ ಪ್ರಮಾಣ ಇಳಿಕೆಗೆ ಒಂದು ಕಾರಣ ಎಂದು ಕಂಪನಿ ತಿಳಿಸಿದೆ.

### ಅಧ್ಯಕ್ಷ ಶೇಖ್ ಮೊಹಮ್ಮದ್– ಪ್ರಧಾನಿ ಮೋದಿ ಮಾತುಕತೆ

# ಯುಎಇ ಜೊತೆ ಇಂಧನ ಒಪ್ಪಂದ

ಅಬುಧಾಬಿ (ಪಿಟಿಐ): ಇಂಧನ ಭದ್ರತೆ, ರಕ್ಷಣಾ ಪಾಲುದಾರಿಕೆ ಸೇರಿ ವ್ಯಾಪಾರದ ಪ್ರಮುಖ ಒಪ್ಪಂದಗಳಿಗೆ ಯುಎಇ–ಭಾರತ ಶುಕ್ರವಾರ ಸಹಿ ಹಾಕಿದವು.

ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೇದ್ ಅಲ್ ನಹ್ಯಾನ್ ಅವರ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಅಬುಧಾಬಿ ನ್ಯಾಷನಲ್ ಆಯಿಲ್ ಕಂಪನಿ ಜೊತೆ ಭಾರತದ ಸಾರ್ವಜನಿಕ ವಲಯದ ಇಂಡಿಯನ್ ಸ್ಟ್ರಾಟೆಜಿಕ್ ಪೆಟ್ರೋಲಿಯಂ ರಿಸರ್ವ್ಸ್ ಲಿಮಿಟೆಡ್ ಕಂಪನಿಯು ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ವಿದೇಶಾಂಗ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಇಂಧನ ಭದ್ರತೆ, ಭಾರತದ ಪೆಟ್ರೋಲಿಯಂ ನಿಕ್ಷೇಪ ಹೆಚ್ಚಿಸುವುದು, ದ್ರವ ನೈಸರ್ಗಿಕ ಅನಿಲ (ಎಲ್‌ಎನ್‌ಜಿ), ದ್ರವ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಶೇಖರಣಾ ಸೌಲಭ್ಯಗಳ ಸಹಕಾರವನ್ನು ಈ ಒಪ್ಪಂದವು ಒಳಗೊಂಡಿದೆ.

ಭಾರತದಲ್ಲಿ ವ್ಯಾಪಕ ಪ್ರಮಾಣದಲ್ಲಿ ಬಳಸುತ್ತಿರುವ ಅಡುಗೆ ಅನಿಲದ ದೀರ್ಘಾವಧಿಯ ಪೂರೈಕೆ, ಆರ್ಥಿಕ ಸ್ಥಿರತೆ, ಇಂಧನ ಪಾಲುದಾರಿಕೆ ಉದ್ದೇಶದ 'ಎಲ್‌ಪಿಜಿಯಲ್ಲಿ ಕಾರ್ಯತಂತ್ರದ ಸಹಯೋಗ' ಒಪ್ಪಂದವನ್ನು ಉಭಯ ದೇಶಗಳು ಮಾಡಿಕೊಂಡಿವೆ.

ರಕ್ಷಣಾ ಕೈಗಾರಿಕಾ ಸಹಯೋಗ ಬಲಪಡಿಸುವುದು, ನಾವೀನ್ಯ, ತಂತ್ರಜ್ಞಾನದ ಕೊಡು–ಕೊಳ್ಳುವಿಕೆ ಹೆಚ್ಚಿಸುವುದು, ರಾಷ್ಟ್ರೀಯ, ಪ್ರಾದೇಶಿಕ ಭದ್ರತೆ ಬಲಪಡಿಸುವ ಒಪ್ಪಂದಗಳು ಆಗಿವೆ ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

ಇಂಧನ, ವ್ಯಾಪಾರ, ಹೂಡಿಕೆ, ಕಡಲ ಆರ್ಥಿಕತೆ, ಫಿನ್‌ಟೆಕ್, ತಂತ್ರಜ್ಞಾನ, ಶಿಪ್ಪಿಂಗ್, ಸುಧಾರಿತ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತಹ ಒಪ್ಪಂದಗಳು ಆಗಿವೆ ಎಂದಿದೆ.

**ಸೇನಾ ವಿಮಾನ ಬೆಂಗಾವಲು:** ನರೇಂದ್ರ ಮೋದಿ ಅವರು ಪ್ರಯಾಣಿಸುತ್ತಿದ್ದ ವಿಮಾನವು ಯುಎಇಯ ವಾಯುಪ್ರದೇಶ ಪ್ರವೇಶಿಸುತ್ತಿದ್ದಂತೆ ಎಫ್–16 ಸೇನಾ ವಿಮಾನಗಳು ಪ್ರಧಾನಿಯ ವಿಮಾನಕ್ಕೆ ಬೆಂಗಾವಲು ನೀಡಿದವು.

ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೇದ್ ಅಲ್ ನಹ್ಯಾನ್ ಅವರು ವಿಮಾನ ನಿಲ್ದಾಣಕ್ಕೆ ಬಂದು ಮೋದಿ ಅವರನ್ನು ಸ್ವಾಗತಿಸಿದರು.

ನೆದರ್ಲೆಂಡ್, ಸ್ವೀಡನ್, ನಾರ್ವೆ ಮತ್ತು ಇಟಲಿಗೂ ಮೋದಿ ಅವರು ಭೇಟಿ ನೀಡಲಿದ್ದಾರೆ.

ಅರಬ್ ಸಂಯುಕ್ತ ಸಂಸ್ಥಾನಕ್ಕೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೇದ್ ಅಲ್ ನಹ್ಯಾನ್ ಅವರೊಂದಿಗೆ ಶುಕ್ರವಾರ ಮಾತುಕತೆ ನಡೆಸಿದರು ಪಿಟಿಐ ಚಿತ್ರ

**ಅರಬ್ ಸಂಯುಕ್ತ ಸಂಸ್ಥಾನದ ಸೇನಾ ವಿಮಾನಗಳು ನೀಡಿದ ಬೆಂಗಾವಲು ಭಾರತೀಯರಿಗೆ ನೀಡಿದ ಗೌರವ. ಯುಎಇ ಭೇಟಿ ಖುಷಿ ನೀಡಿದೆ**

**ನರೇಂದ್ರ ಮೋದಿ,** ಭಾರತದ ಪ್ರಧಾನಿ

### ಶಾಂತಿ ಸ್ಥಾಪನೆಗೆ ಸಹಕಾರ

ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತವು ಎಲ್ಲ ಸಹಕಾರ ನೀಡಲಿದೆ. ಮಾತುಕತೆ, ರಾಜತಾಂತ್ರಿಕತೆಯಿಂದ ಮಾತ್ರ ಸಮಸ್ಯೆ ಪರಿಹಾರವಾಗಲಿದೆ ಎಂದು ಮೋದಿ ಹೇಳಿದರು.

ಸಂಘರ್ಷದಿಂದಾಗಿ ಕಚ್ಚಾತೈಲ, ಅನಿಲ ಪೂರೈಕೆಗೆ ಅಡ್ಡಿ ಉಂಟಾಗಿರುವುದಕ್ಕೆ ಕಳವಳ ವ್ಯಕ್ತಪಡಿಸಿದ ಅವರು, ಇದರಿಂದಾಗಿ ಜಾಗತಿಕ ಪರಿಣಾಮಗಳು ಉಂಟಾಗಿವೆ ಎಂದರು. 'ಹೊರ್ಮುಜ್ ಜಲಸಂಧಿ ಮುಕ್ತವಾಗಿರಬೇಕು' ಎಂದು ಆಗ್ರಹಿಸಿದರು.

'ಅರಬ್ ಸಂಯುಕ್ತ ಸಂಸ್ಥಾನವನ್ನು ಇರಾನ್ ಗುರಿಯಾಗಿಸಿಕೊಂಡ ರೀತಿ ಸರಿಯಾಗಿಲ್ಲ. ಪರಿಸ್ಥಿತಿಯನ್ನು ಯುಎಇ ಸಂಯಮದಿಂದ ನಿಭಾಯಿಸಿದ ರೀತಿ ಶ್ಲಾಘನಾರ್ಹ-ವಾದುದು. ದಾಳಿಯನ್ನು ನಾವು ಖಂಡಿಸಿದ್ದೇವೆ' ಎಂದು ಪ್ರಧಾನಿ ತಿಳಿಸಿದರು.

### ಚೀನಾ ಜತೆ ಅತ್ಯದ್ಭುತ ಒಪ್ಪಂದ: ಟ್ರಂಪ್

ಬೀಜಿಂಗ್ (ಎಎಫ್‌ಪಿ): ಚೀನಾದ ಅಧ್ಯಕ್ಷ ಷಿ–ಜಿನ್‌ಪಿಂಗ್ ಅವರೊಂದಿಗೆ 'ಅತ್ಯದ್ಭುತ ವ್ಯಾಪಾರ ಒಪ್ಪಂದ' ಮಾಡಿ-ಕೊಳ್ಳಲಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಶುಕ್ರವಾರ ತಿಳಿಸಿದರು.

ಉಭಯ ದೇಶಗಳ ನಾಯಕರು ಸೂಪರ್‌ಪವರ್ ಸಮಾವೇಶದಲ್ಲಿ ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ಹೊರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸಲು ಸಹಾಯ ಮಾಡುವುದಾಗಿ ತಿಳಿಸಿದ ಚೀನಾದ ಪ್ರಸ್ತಾವವನ್ನು ಅಮೆರಿಕ ತಳ್ಳಿಹಾಕಿತು.

ಕೃಷಿ, ವಿಮಾನಯಾನ, ಕೃತಕ ಬುದ್ಧಿಮತ್ತೆ ಸೇರಿದಂತೆ ವಿವಿಧ ವಲಯಗಳಿಗೆ ಸಂಬಂಧಿಸಿದಂತೆ ಒಪ್ಪಂದ ಮಾಡಿಕೊಳ್ಳಲು ಮತ್ತು ಉಭಯ ದೇಶಗಳ ನಡುವಣ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಟ್ರಂಪ್ ಚೀನಾಗೆ ಭೇಟಿ ನೀಡಿದ್ದರು.

ಸಮಾವೇಶದ ಬಳಿಕ ಮಾತನಾಡಿದ ಟ್ರಂಪ್, 'ಇರಾನ್‌ಗೆ ಸೇನಾ ಸಲಕರಣೆಗಳನ್ನು ರವಾನಿಸಿಲ್ಲ ಎಂದು ಷಿ–ಜಿನ್‌ಪಿಂಗ್ ಬಲವಾಗಿ ಹೇಳಿದ್ದಾರೆ' ಎಂದು ತಿಳಿಸಿದರು.

'ಇರಾನ್ ಬಗೆಗಿನ ನನ್ನ ತಾಳ್ಮೆಯು ಮಿತಿ ಮೀರಿದೆ. ಹೊರ್ಮುಜ್ ಜಲಸಂಧಿಯನ್ನು ಇರಾನ್ ಮುಕ್ತಗೊಳಿಸಬೇಕು ಎಂದು ಷಿ–ಜಿನ್‌ಪಿಂಗ್ ಒಪ್ಪಿಕೊಂಡಿದ್ದಾರೆ' ಎಂದು ಟ್ರಂಪ್ ಹೇಳಿದರು.

ಇರಾನ್‌ನ ತೈಲ ಕಂಪನಿಗಳಿಂದ ಕಚ್ಚಾತೈಲ ಖರೀದಿಸುವ ಚೀನಾದ ಕಂಪನಿಗಳ ಮೇಲೆ ಹೇರಿರುವ ನಿರ್ಬಂಧವನ್ನು ತೆಗೆದುಹಾಕುವ ವಿಚಾರವಾಗಿ ಪರಿಶೀಲನೆ ನಡೆಸುವುದಾಗಿಯೂ ಅವರು ತಿಳಿಸಿದರು.

'ಜಿನ್‌ಪಿಂಗ್ ಅವರು 200 ಬೋಯಿಂಗ್ ಜೆಟ್‌ಗಳನ್ನು ಖರೀದಿಸಲು ಒಪ್ಪಿಗೆ ನೀಡಿದ್ದಾರೆ. 750 ಜೆಟ್‌ಗಳ ಖರೀದಿವರೆಗೂ ಅದು ವಿಸ್ತರಣೆಯಾ-ಗುವ ಸಾಧ್ಯತೆ ಇದೆ' ಎಂದೂ ಹೇಳಿದರು.

ಟ್ರಂಪ್ ಭೇಟಿ ಬಗ್ಗೆ ಪ್ರತಿಕ್ರಿಯಿಸಿದ ಷಿ ಜಿನ್ ಪಿಂಗ್, 'ಇದೊಂದು ಮಹತ್ವದ ಭೇಟಿ. ಉಭಯ ದೇಶಗಳ ಮಧ್ಯೆ ನೂತನ ದ್ವಿಪಕ್ಷೀಯ ಸಂಬಂಧ ಬೆಸೆದಿದೆ' ಎಂದು ಹೇಳಿದರು.

**ಟ್ರಂಪ್ ಚೀನಾ ಭೇಟಿ ಸಮಾಪ್ತಿ:** ಟ್ರಂಪ್ ಅವರು ತಮ್ಮ ಮೂರು ದಿನಗಳ ಚೀನಾ ಭೇಟಿ ಬಳಿಕ ಶುಕ್ರವಾರ ಅಮೆರಿಕಕ್ಕೆ ಮರಳಿದರು. ಟ್ರಂಪ್ ಅವರ ನಿರ್ಗಮನಕ್ಕೂ ಮುನ್ನ ಚೀನಾ ಅಧ್ಯಕ್ಷ ಮತ್ತು ಟ್ರಂಪ್ ಅವರು ಖಾಸಗಿ ಸಭೆ ನಡೆಸಿದರು. ತೈವಾನ್ ವಿಚಾರವಾಗಿ ಉಭಯ ನಾಯಕರ ನಡುವೆ ಭಿನ್ನಾಭಿಪ್ರಾಯ ಇರುವುದು ಮೇಲ್ನೋಟಕ್ಕೆ ಗೋಚರವಾಗುತ್ತಿತ್ತು.

ಷಿ–ಜಿನ್‌ಪಿಂಗ್ ಮತ್ತು ಅವರ ಪತ್ನಿಯನ್ನು ಟ್ರಂಪ್ ಸೆಪ್ಟೆಂಬರ್ 24ರಂದು ಶ್ವೇತಭವನಕ್ಕೆ ಆಹ್ವಾನಿಸಿದ್ದಾರೆ ಎಂದೂ ಅದು ವರದಿ ಮಾಡಿದೆ.

## ಭೋಜಶಾಲಾ ಸಂಕೀರ್ಣ ಸರಸ್ವತಿ ದೇವಾಲಯ: ಹೈಕೋರ್ಟ್ ತೀರ್ಪು

ಎರಡನೇ ಮುಖಪುಟದಿಂದ...

ಹಿಂದೂ ಸಮುದಾಯದವರು ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿ, ಸಂಕೀರ್ಣದಲ್ಲಿ ಪೂಜೆ ಸಲ್ಲಿಸಲು ವಿಶೇಷ ಹಕ್ಕುಗಳನ್ನು ನೀಡುವಂತೆ ಕೋರಿದ್ದರು.

ಹೈಕೋರ್ಟ್‌ನ ಇಂದೋರ್ ಪೀಠದ ನ್ಯಾಯಮೂರ್ತಿ ವಿಜಯ್ ಕುಮಾರ್ ಶುಕ್ಲಾ ಮತ್ತು ನ್ಯಾಯಮೂರ್ತಿ ಅಲೋಕ್ ಅವಸ್ಥಿ ಅವರು ಇದೇ ವರ್ಷದ ಏಪ್ರಿಲ್ 6ರಂದು ಪ್ರಕರಣಕ್ಕೆ ಸಂಬಂಧಿಸಿದ ಐದು ಅರ್ಜಿಗಳು ಮತ್ತು ಒಂದು ರಿಟ್ ಮೇಲ್ಮನವಿಯ ವಿಚಾರಣೆ ಪ್ರಾರಂಭಿಸಿದ್ದರು.

ವಿಭಿನ್ನ ಧಾರ್ಮಿಕ ನಂಬಿಕೆಗಳು, ಐತಿಹಾಸಿಕ ಹಕ್ಕು ಮಂಡನೆ, ಕಾನೂನು ಅಂಶಗಳು ಮತ್ತು ವಿವಾದಿತ ಸ್ಮಾರಕಕ್ಕೆ ಸಂಬಂಧಿಸಿದ ಸಾವಿರಾರು ದಾಖಲೆಗಳ ಆಧಾರದಲ್ಲಿ ಎಲ್ಲಾ ಕಡೆಯವರ ವಾದಗಳನ್ನು ಆಲಿಸಿದ ನಂತರ, ನ್ಯಾಯಪೀಠವು ಮೇ 12ರಂದು ತನ್ನ ತೀರ್ಪನ್ನು ಕಾಯ್ದಿರಿಸಿತ್ತು.

ವಿಚಾರಣೆಯ ಸಮಯದಲ್ಲಿ, ಹಿಂದೂ, ಮುಸ್ಲಿಂ ಮತ್ತು ಜೈನ ಸಮುದಾಯಗಳ ಅರ್ಜಿದಾರರು ಸುದೀರ್ಘ ವಾದಗಳನ್ನು ಮಂಡಿಸಿದ್ದರು. ಸ್ಮಾರಕದಲ್ಲಿ ತಮ್ಮ ಸಮುದಾಯಗಳಿಗೆ ವಿಶೇಷ ಪೂಜಾ ಹಕ್ಕುಗಳನ್ನು ನೀಡುವಂತೆ ಕೋರಿದ್ದರು.

'ಎಎಸ್‌ಐ ಸಮೀಕ್ಷಾ ವರದಿಯು 'ಪಕ್ಷಪಾತ'ದಿಂದ ಕೂಡಿದೆ ಮತ್ತು ಹಿಂದೂ ಅರ್ಜಿದಾರರ ಹಕ್ಕುಗಳನ್ನು ಬೆಂಬಲಿಸುವಂತಿದೆ' ಎಂದು ಮುಸ್ಲಿಂ ಸಮುದಾಯದವರು ನ್ಯಾಯಾಲಯದಲ್ಲಿ ವಾದಿಸಿದ್ದರು. ಈ ವಾದವನ್ನು ತಳ್ಳಿ ಹಾಕಿದ್ದ ಎಎಸ್‌ಐ, 'ಮುಸ್ಲಿಂ ಸಮುದಾಯದ ಮೂವರು ಸೇರಿದಂತೆ ತಜ್ಞರ ಸಹಾಯದಿಂದ ವೈಜ್ಞಾನಿಕವಾಗಿ ಸಮೀಕ್ಷಾ ಪ್ರಕ್ರಿಯೆಯನ್ನು ನಡೆಸಲಾಗಿದೆ' ಎಂದು ನ್ಯಾಯಾಲಯಕ್ಕೆ ತಿಳಿಸಿತ್ತು.

ಭೋಜಶಾಲಾ ದೇವಸ್ಥಾನ-ಕಮಾಲ್ ಮೌಲಾ ಮಸೀದಿ ಸಂಕೀರ್ಣದ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ಹೈಕೋರ್ಟ್ 2024ರ ಮಾರ್ಚ್ 11ರಂದು ಎಎಸ್‌ಐಗೆ ಆದೇಶಿಸಿತ್ತು. ಆ ವರ್ಷದ ಮಾರ್ಚ್ 22 ರಂದು ಎಎಸ್‌ಐ ಸಮೀಕ್ಷೆ ಪ್ರಾರಂಭಿಸಿತ್ತು. 98 ದಿನಗಳ ಸಮೀಕ್ಷೆಯ ನಂತರ ಜುಲೈ 15ರಂದು ಹೈಕೋರ್ಟ್‌ಗೆ ತನ್ನ ವರದಿಯನ್ನು ಸಲ್ಲಿಸಿತ್ತು.

**ಅಡಿಕೆ ಧಾರಣೆ**

| ಕುಮಟಾ | | | | | |
|---|---|---|---|---|---|
| ಚಿಪ್ಪು | 30099-34999 | ಕೋಕ | 8129-8129 | ಕೋಕ | 23269-31699 |
| ಕೋಕ | 18019-34699 | ಕೆಂಪುಗೋಟು | 16229-16229 | ಕೆಂಪುಗೋಟು | 28099-39300 |
| ಫ್ಯಾಕ್ಟರಿ | 14069-29490 | ರಾಶಿ | 37129-37129 | ರಾಶಿ | 46099-52699 |
| ಹಳೆಚಾಲಿ | 46099-48598 | **ಶಿವಮೊಗ್ಗ** | | ತಟ್ಟಿಬೆಟ್ಟೆ | 36300-45099 |
| ಹೊಸಚಾಲಿ | 42599-47529 | ಸರಕು | 64099-99239 | **ಶಿರಸಿ** | |
| **ಪುತ್ತೂರು** | | ಬೆಟ್ಟೆ | 52309-66059 | ಬೆಟ್ಟೆ | 38899-48699 |
| ಕೋಕ | 20000-34500 | ರಾಶಿ | 45099-54011 | ಬಿಳಿಗೋಟು | 26081-37199 |
| ಹೊಸತು | 30000-47500 | ಗೊರಬಲು | 19020-41869 | ಚಾಲಿ | 44200-48200 |
| **ಸಾಗರ** | | **ಸಿದ್ದಾಪುರ** | | ಕೆಂಪುಗೋಟು | 28899-37158 |
| ಚಾಲಿ | 31329-31329 | ಬಿಳಿಗೋಟು | 26019-35811 | ರಾಶಿ | 51600-53100 |
| | | ಚಾಲಿ | 39339-47399 | | |

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

| ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ) | |
|---|---|
| ಅರಸೀಕೆರೆ | ₹21500-25000 |
| ಪುತ್ತೂರು | ₹5000-16500 |
| ಸುಳ್ಯ | ₹13000-15200 |

## 'ಬೀಜ ಮಾರಾಟಕ್ಕೆ ಪ್ರತ್ಯೇಕ ಪರವಾನಗಿ ಅಗತ್ಯವಿಲ್ಲ'

ಬೆಂಗಳೂರು: 'ಕೇಂದ್ರ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ಬೀಜ ಕಾಯ್ದೆಗೆ ಸಂಬಂಧಿಸಿದ ಮಸೂದೆಯನ್ನು ಆಧಾರವಾಗಿಟ್ಟುಕೊಂಡು ಸಗಟು, ಚಿಲ್ಲರೆ ಮತ್ತು ವಿತರಣೆಗೆ ಪ್ರತ್ಯೇಕವಾದ ಹೊಸ ಪರವಾನಗಿ ಪಡೆಯುವಂತೆ ಬೀಜ ವ್ಯಾಪಾರಸ್ಥರಿಗೆ ಒತ್ತಾಯ ಮಾಡಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಸುವರ್ಣ ಹೈಬ್ರೀಡ್ ಸೀಡ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿ' ಸೇರಿದಂತೆ ಒಟ್ಟು ಎಂಟು ಬೀಜ ಮಾರಾಟ ಕಂಪನಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶಂಕರ ಎಸ್. ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕೇಂದ್ರ ಸರ್ಕಾರ ಜಾರಿಗೆ ತರಲು ಆಲೋಚಿಸಿರುವ, ಬೀಜಗಳ ಕಾಯ್ದೆ-2025 ಇನ್ನೂ ಜಾರಿಗೆ ಬಂದಿಲ್ಲ. ಹಾಗಾಗಿ, ಅರ್ಜಿದಾರರ ಚಟುವಟಿಕೆಗಳನ್ನು ಅಸ್ತಿತ್ವದಲ್ಲಿರುವ ಬೀಜಗಳ ನಿಯಂತ್ರಣ–1983ರ ಆದೇಶದ ಅಡಿಯಲ್ಲಿ ನೀಡಲಾದ ಪರವಾನಗಿ ಅನುಸಾರ ಕಟ್ಟುನಿಟ್ಟಾಗಿ ನಿಯಂತ್ರಿಸಬೇಕು' ಎಂದು ನಿರ್ದೇಶಿಸಿದೆ.

'ಬೀಜಗಳ ಕಾಯ್ದೆ–1966 ಮತ್ತು ಬೀಜಗಳ ನಿಯಂತ್ರಣ ಆದೇಶ 1983ರ ಅನುಸಾರ ಕೃಷಿ ಮತ್ತು ತೋಟಗಾರಿಕೆ ಬೀಜಗಳ ನಡುವೆ ಪ್ರತ್ಯೇಕ ವ್ಯಾಖ್ಯಾನವಿಲ್ಲ. ಒಮ್ಮೆ ರಾಜ್ಯ ಸರ್ಕಾರದಿಂದ ಬೀಜಗಳ ಪರವಾನಗಿ ಪಡೆದರೆ ಸಾಕು, ಬೀಜಗಳ ಆಮದು ಅಥವಾ ರಫ್ತು ಮಾಡಬಹುದು. ನಮ್ಮದೇ ಬ್ರಾಂಡ್ ಅನ್ನೂ ಪ್ಯಾಕ್ ಮಾಡಬಹುದು. ವಿತರಣೆ ಮಾಡಬಹುದು. ಚಿಲ್ಲರೆ ಕೇಂದ್ರಗಳಲ್ಲಿ ಮಾರಾಟ ಮಾಡ ಬಹುದು' ಎಂಬ ಅರ್ಜಿದಾರರ ವಾದ ವನ್ನು ನ್ಯಾಯಪೀಠ ಮಾನ್ಯ ಮಾಡಿದೆ.

**ಆಕ್ಷೇಪ ಏನು?:** 'ಕೇಂದ್ರದ ಉದ್ದೇಶಿತ ಮಸೂದೆಯು, ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ಇರಾದೆ ಹೊಂದಿದೆ. ಇದರ ಪ್ರಕಾರ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಬೀಜಗಳ ವ್ಯಾಪಾರಸ್ಥರು ಸಗಟು, ಚಿಲ್ಲರೆ ಮತ್ತು ವಿತರಣೆಗೆ ರಾಜ್ಯ ಮತ್ತು ರಾಷ್ಟ್ರೀಯ ವ್ಯಾಪ್ತಿಯಲ್ಲಿ ಪ್ರತ್ಯೇಕವಾಗಿ ಪರವಾನಗಿ ಪಡೆಯಬೇಕಿದೆ. ಈ ಮೊದಲು ಪರವಾನಗಿಯನ್ನು ರಾಜ್ಯ ಸರ್ಕಾರದ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಿಂದ ಪಡೆದರೆ ಸಾಕಿತ್ತು. ಆದರೆ, ಉದ್ದೇಶಿತ ಶಾಸನದಲ್ಲಿ ವರ್ಗೀಕರಣಗೊಂಡ ದಕ್ಷಿಣ, ಉತ್ತರ, ಪೂರ್ವ, ಪಶ್ಚಿಮ ಮತ್ತು ಕೇಂದ್ರ ವಲಯ ಸಮಿತಿಗಳು ಕಂಪನಿಗಳಿಗೆ ಪರವಾನಗಿ ನೀಡಬೇಕಾಗುತ್ತದೆ ಎಂಬ ಅಂಶ ಒಳಗೊಂಡಿದೆ' ಎಂಬುದು ಅರ್ಜಿದಾರರ ಆಕ್ಷೇಪ.


ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

**ಉದ್ಯೋಗಾವಕಾಶ**

**Factory**

REQUIRED HELPERS for Plastic Product Manufacturing Co. at Doddaballapur, Bengaluru Rural, free room, Salary 18000/- Contact-9606018797

**General**

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

ತಕ್ಷಣ ಬೇಕಾಗಿದ್ದಾರೆ ಬೆಂಗಳೂರಿನಲ್ಲಿ ಕೇರ್ ಟೇಕರ್ ಪೇಷಂಟ್ಗಳನ್ನು ನೋಡಿಕೊಳ್ಳಲು ಮಹಿಳೆ ಮತ್ತು ಪುರುಷರು ಸೇವಾ ಮನೋಭಾವ ಇರುವವರು ಬೇಕಾಗಿದ್ದಾರೆ. ಉಚಿತ ಊಟ ವಸತಿ ಕೊಡಲಾಗುವುದು. ಸಂಪರ್ಕಿಸಿ:7019258503 / 9945603366

**Part-Time Jobs**

ಕರ್ನಾಟಕದಾದ್ಯಂತ ಮನೆಯಿಂದಲೇ ಕೆಲಸ. ಆಫೀಸ್‌ಗಳಿಗೆ, ಕಂಪನಿಗಳಿಗೆ ವಿದ್ಯಾರ್ಥಿನಿಯರು, ಮಹಿಳೆಯರು, ಯುವಕರು, ತಕ್ಷಣ ಬೇಕಾಗಿದ್ದಾರೆವಿದ್ಯಾರ್ಹತೆಯಿಲ್ಲದ ವರಿಗೂ. 20,000 / 25,000 ಕೊರಿಯರ್, 7090177446

**ವೈಯಕ್ತಿಕ**

**Change of Name**

SRI MAHENDRA Yadav K A S son of Amaranarayana Swamy K V aged 42 residing at ward No 09, Malapalli, Chintamani Town, Chikkaballapura Dist, have changed my son name from STALIN M to AMAR M vide affidavit dated 12.05.2026 sworn before advocate and Notary M Devaraja, Chintamani

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೆಟ್ ಲಿ. ಬೆಂಗಳೂರು


# ಪೆಟ್ರೋಲ್, ಡೀಸೆಲ್ ದರ ₹3 ಏರಿಕೆ

ಒಂದನೇ ಪುಟದಿಂದ...

ನವದೆಹಲಿಯಲ್ಲಿ ಪ್ರತಿ ಲೀಟರ್ ಪೆಟ್ರೋಲ್ ದರ ₹94.77ರಿಂದ ₹97.77 ಕ್ಕೆ ಹಾಗೂ ಡೀಸೆಲ್ ದರ ₹87.67ರಿಂದ ₹90.67ಕ್ಕೆ ಏರಿಕೆಯಾಗಿದೆ. ಮೌಲ್ಯವರ್ಧಿತ ತೆರಿಗೆಯಲ್ಲಿನ ವ್ಯತ್ಯಾಸಗಳಿಂದಾಗಿ ವಿವಿಧ ರಾಜ್ಯಗಳಲ್ಲಿನ ದರಗಳಲ್ಲಿ ಅಲ್ಪ ವ್ಯತ್ಯಾಸ ಕಂಡುಬರುತ್ತದೆ.

ನವದೆಹಲಿಯಲ್ಲಿ ಸಿಎನ್‌ಜಿ ದರ ಪ್ರತಿ ಕೆ.ಜಿಗೆ ₹79.09ಕ್ಕೆ ಹಾಗೂ ಮುಂಬೈನಲ್ಲಿ ₹84ಕ್ಕೆ ಏರಿಕೆಯಾಗಿದೆ. ಕೊಳವೆ ಮೂಲಕ ಮನೆಗಳಿಗೆ ತಲುಪಿಸುವ ನೈಸರ್ಗಿಕ ಅನಿಲ (ಪಿಎನ್‌ಜಿ) ಮತ್ತು ಗೃಹ ಬಳಕೆ ಅಡುಗೆ ಅನಿಲ ಬೆಲೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಫೆಬ್ರುವರಿ 28ರಂದು ಇರಾನ್ ಮೇಲೆ ಅಮೆರಿಕ–ಇಸ್ರೇಲ್ ಪಡೆಗಳು ದಾಳಿ ಆರಂಭಿಸಿದ ಬಳಿಕ ಜಾಗತಿಕ ಮಾರುಕಟ್ಟೆ-ಯಲ್ಲಿ ಕಚ್ಚಾ ತೈಲದ ಬೆಲೆ ಶೇಕಡ 50ರಷ್ಟು ಹೆಚ್ಚಳವಾಗಿದೆ. ಈ ದಾಳಿಗೆ ಪ್ರತೀಕಾರದ ಕ್ರಮವಾಗಿ ಇರಾನ್, ಹೊರ್ಮುಜ್ ಜಲಸಂಧಿಯನ್ನು ಮುಚ್ಚಿರುವುದರಿಂದ ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಗೆ ಅಡ್ಡಿ ಉಂಟಾಗಿದೆ.

ಪಶ್ಚಿಮ ಏಷ್ಯಾ ಸಂಘರ್ಷದ ಹೊರತಾಗಿಯೂ, ದೇಶದ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಕಚ್ಚಾ ತೈಲದ ಬೆಲೆ ಹೆಚ್ಚಳಕ್ಕೆ ಅನುಗುಣವಾಗಿ ಇಷ್ಟು ದಿನ ಜಾಸ್ತಿ ಮಾಡಿರಲಿಲ್ಲ. 'ಜನರ ಮೇಲಿನ ಹೊರೆ ತಗ್ಗಿಸುವ ಪ್ರಯತ್ನದ ಭಾಗವಾಗಿ ಬೆಲೆ ಏರಿಕೆ ಮಾಡಿಲ್ಲ' ಎಂದು ಕೇಂದ್ರ ಸರ್ಕಾರ ಹೇಳುತ್ತಲೇ ಇತ್ತು. ಆದರೆ, 'ಕೆಲವು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ಇದ್ದ ಕಾರಣ ಸರ್ಕಾರ ಬೆಲೆ ಏರಿಕೆ ಮಾಡಿಲ್ಲ' ಎಂದು ವಿರೋಧ ಪಕ್ಷಗಳು ಹೇಳಿದ್ದವು. ಇದೀಗ ವಿಧಾನಸಭೆ ಚುನಾವಣೆ ಪೂರ್ಣಗೊಂಡು ಫಲಿತಾಂಶ ಹೊರಬಿದ್ದ ಕೆಲವೇ ದಿನಗಳಲ್ಲಿ ಸರ್ಕಾರವು ಇಂಧನ ಬೆಲೆ ಹೆಚ್ಚಿಸಿದೆ.

'ಕಚ್ಚಾ ತೈಲದ ಬೆಲೆ ಏರಿಕೆಗೆ ಹೋಲಿಸಿದರೆ ಈಗ ಮಾಡಿರುವ ಬೆಲೆ ಏರಿಕೆಯು ಸಾಧಾರಣವಾಗಿದೆ. ಬೆಲೆ ಏರಿಕೆಯ ಹೊರತಾಗಿಯೂ ತೈಲ ಕಂಪನಿಗಳು ಪ್ರತಿ ಲೀಟರ್ ಪೆಟ್ರೋಲ್ ಮೇಲೆ ₹11 ಮತ್ತು ಡೀಸೆಲ್ ಮೇಲೆ ₹39ರಷ್ಟು ನಷ್ಟ ಅನುಭವಿಸುತ್ತವೆ' ಎಂದು ಉದ್ಯಮದ ಮೂಲಗಳು ತಿಳಿಸಿವೆ.

'ತೈಲ ಕಂಪನಿಗಳ ಮೇಲಿನ ಒತ್ತಡವನ್ನು ಭಾಗಶಃ ತಗ್ಗಿಸಲು ಇದು ನೆರವಾಗಲಿದೆ. ದರ ಹೆಚ್ಚಳವು ಹಣದುಬ್ಬರದ ಮೇಲೆ ಸ್ವಲ್ಪ ಪರಿಣಾಮ ಬೀರುತ್ತದೆ' ಎಂದು ಹೇಳಿವೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗುವ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಅವರು ಕೆಲ ದಿನಗಳ ಹಿಂದೆಯೇ ಮುನ್ಸೂಚನೆ ನೀಡಿದ್ದರು.

### ವಿಪಕ್ಷ ಟೀಕೆ; ಬಿಜೆಪಿ ಸಮರ್ಥನೆ

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಗೆ ಸಂಬಂಧಿಸಿದಂತೆ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಸೇರಿದಂತೆ ವಿಪಕ್ಷ ನಾಯಕರು ಶುಕ್ರವಾರ ವಾಗ್ದಾಳಿ ನಡೆಸಿದ್ದು, 'ವಿಧಾನಸಭೆ ಚುನಾವಣೆ ಮುಗಿಯುವವರೆಗೆ ಬೆಲೆ ಏರಿಕೆ ನಿರ್ಧಾರವನ್ನು ಉದ್ದೇಶಪೂರ್ವಕವಾಗಿ ತಡೆಹಿಡಿಯಲಾಗಿತ್ತು' ಎಂದು ಆರೋಪಿಸಿದ್ದಾರೆ.

'ವಿಧಾನಸಭಾ ಚುನಾವಣೆ ಮುಗಿದ ತಕ್ಷಣ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಿಸಲಾಗಿದೆ. ಮತದಾರರನ್ನು ಸೆಳೆಯಲು ಇಷ್ಟು ದಿನ ಬೆಲೆ ಏರಿಸಲಿಲ್ಲ, ಆದರೆ, ಚುನಾವಣೆ ಮುಗಿದ ಬೆನ್ನಲ್ಲೇ ಸಾರ್ವಜನಿಕರ ಮೇಲೆ ಹೊರೆ ಹೊರಿಸಲಾಗಿದೆ' ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಟೀಕಿಸಿದ್ದಾರೆ.

'ಇಂಧನ ಬೆಲೆ ಏರಿಕೆಯನ್ನು ಒಪ್ಪಲಾಗದು. ಸರ್ಕಾರ ಈ ನಿರ್ಧಾರವನ್ನು ವಾಪಸ್ ಪಡೆಯಬೇಕು' ಎಂದು ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಆಗ್ರಹಿಸಿದ್ದಾರೆ.

**ಶೇ 3ರಷ್ಟು ಏರಿಕೆ:** ಪೆಟ್ರೋಲ್ ಮತ್ತು ಡೀಸೆಲ್‌ನ ಬೆಲೆ ಏರಿಕೆಯನ್ನು ಸಮರ್ಥಿಸಿಕೊಂಡಿರುವ ಬಿಜೆಪಿ, 'ಕೆಲವು ದೇಶಗಳು ಇಂಧನ ಬೆಲೆಯನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿದರೂ, ಭಾರತವು 'ಅಲ್ಪ ಪ್ರಮಾಣ'ದಲ್ಲಿ ಏರಿಕೆ ಮಾಡಿದೆ' ಎಂದಿದೆ.

'ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ಹಲವು ದೇಶಗಳು ಈ ಹಿಂದೆಯೇ ಇಂಧನ ಬೆಲೆ ಹೆಚ್ಚಿಸಿದ್ದವು. ಆದರೆ ಕೇಂದ್ರ ಸರ್ಕಾರವು ತನ್ನ ಪ್ರಜೆಗಳನ್ನು ಇಂಧನ ಬೆಲೆ ಏರಿಕೆಯ ಹೊರೆಯಿಂದ ಸುಮಾರು ಎರಡೂವರೆ ತಿಂಗಳು ಕಾಲ ಕಾಪಾಡುವಲ್ಲಿ ಯಶಸ್ವಿಯಾಗಿದೆ' ಎಂದು ಬಿಜೆಪಿ ಐ.ಟಿ. ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಹೇಳಿದ್ದಾರೆ.

'ಪಶ್ಚಿಮ ಏಷ್ಯಾ ಸಂಘರ್ಷ ಆರಂಭವಾದ ಬಳಿಕ ಇಂಧನ ಬೆಲೆಯು ಪಾಕಿಸ್ತಾನದಲ್ಲಿ ಶೇ 55ರಷ್ಟು, ಮಲೇಷ್ಯಾದಲ್ಲಿ ಶೇ 56ರಷ್ಟು ಮತ್ತು ಅಮೆರಿಕದಲ್ಲಿ ಶೇ 45ರಷ್ಟು ಹೆಚ್ಚಳವಾಗಿದೆ. ಆದರೆ, ಭಾರತದಲ್ಲಿ ಶೇ 3ರಷ್ಟು ಮಾತ್ರ ಏರಿಕೆ ಮಾಡಲಾಗಿದೆ' ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

### ನಾಲ್ಕು ವರ್ಷಗಳ ಬಳಿಕ ಏರಿಕೆ

ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ನಾಲ್ಕು ವರ್ಷಗಳಲ್ಲಿ ಇದೇ ಮೊದಲ ಬಾರಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿವೆ. 2022ರ ಏಪ್ರಿಲ್‌ನಲ್ಲಿ ಕೊನೆಯದಾಗಿ ಬೆಲೆ ಹೆಚ್ಚಳ ಮಾಡಲಾಗಿತ್ತು. ಕಳೆದ ಲೋಕಸಭಾ ಚುನಾವಣೆಗೆ ಅಲ್ಪ ಮುನ್ನ, 2024ರ ಮಾರ್ಚ್‌ನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ₹2ರಷ್ಟು ಇಳಿಕೆ ಮಾಡಲಾಗಿತ್ತು.

**ಮೋದಿ ಸರ್ಕಾರದ ಆಡಳಿತ ವೈಫಲ್ಯವೇ ಇಂಧನ ಬೆಲೆ ಏರಿಕೆಗೆ ಪ್ರಮುಖ ಕಾರಣ. ದೂರದೃಷ್ಟಿಯ ಕೊರತೆ ಮತ್ತು ಅದಕ್ಷತೆಯಿಂದಾಗಿ ದೇಶಕ್ಕೆ ಆರ್ಥಿಕ ಬಿಕ್ಕಟ್ಟು ಎದುರಾಗಿದೆ**

**ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

**ಜಗತ್ತಿನ ಪ್ರಮುಖ ಆರ್ಥಿಕತೆಗಳಲ್ಲಿ ಭಾರತದಲ್ಲೇ ಅತ್ಯಂತ ಕಡಿಮೆ ಬೆಲೆ ಏರಿಕೆ ದಾಖಲಾಗಿದೆ. ಪೆಟ್ರೋಲ್ ಬೆಲೆ ಶೇ 3.2 ಮತ್ತು ಡೀಸೆಲ್ ಬೆಲೆ ಶೇ 3.4ರಷ್ಟು ಏರಿಕೆಯಾಗಿದೆ**

**ಅಮಿತ್ ಮಾಳವೀಯ,** ಬಿಜೆಪಿ ಐ.ಟಿ ವಿಭಾಗದ ಮುಖ್ಯಸ್ಥ

### ಖಾಸಗಿ ಬಸ್ ಟಿಕೆಟ್ ದರ ಹೆಚ್ಚಳ

ಒಂದನೇ ಪುಟದಿಂದ...

ದರ ಏರಿಕೆಯ ಪರಿಣಾಮವಾಗಿ ಬೆಂಗಳೂರು–ಮಂಗಳೂರು ಮಾರ್ಗದಲ್ಲಿ ಮೊದಲು ಇದ್ದ ಸಾಮಾನ್ಯ ದರವು ₹1,000ದಿಂದ ₹1,200ಕ್ಕೆ ಏರಿಕೆಯಾಗಲಿದೆ. ಬೆಂಗಳೂರು–ಬಾಗಲಕೋಟೆ ಮಾರ್ಗದಲ್ಲಿ ₹800 ಇದ್ದ ದರ ₹1,000ಕ್ಕೆ ಏರಿಕೆಯಾಗಿದೆ. ಬೆಂಗಳೂರು–ಕಲಬುರಗಿ ಮಾರ್ಗದಲ್ಲಿ ₹1,200 ಇದ್ದ ದರ ಈಗ ₹1,400–₹1,500ರವರೆಗೆ ಹೆಚ್ಚಳವಾಗಲಿದೆ.

**ಸ್ಟೇಟ್ ಕ್ಯಾರಿಯೇಜ್‌ಗಳಲ್ಲೂ ಹೆಚ್ಚಳ:** 'ಸ್ಟೇಟ್ ಕ್ಯಾರಿಯೇಜ್ ಬಸ್‌ಗಳಲ್ಲಿ ಟಿಕೆಟ್ ದರವನ್ನು ಏರಿಸುವ ಅಧಿಕಾರವು ಬಸ್ ಮಾಲೀಕರಿಗೆ ಇಲ್ಲ. ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿ ಅಧ್ಯಕ್ಷರಾಗಿರುವ ಪ್ರಾದೇಶಿಕ ಸಾರಿಗೆ ಪ್ರಾಧಿಕಾರವು ದರ ನಿಗದಿ ಮಾಡುತ್ತದೆ. ಈ ಬಾರಿ ಹೆಚ್ಚಳ ಮಾಡಲು ಅವರಿಗೆ ಎರಡು ಮೂರು ದಿನಗಳಲ್ಲಿ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಸ್ಟೇಟ್ ಕ್ಯಾರಿಯೇಜ್ ಬಸ್ ಮಾಲೀಕರ ಸಂಘದ ಅಧ್ಯಕ್ಷ ರಾಜವರ್ಮ ಬಲ್ಲಾಳ್ ತಿಳಿಸಿದ್ದಾರೆ. 'ಬಸ್ ಪ್ರಯಾಣ ದರ ಏರಿಕೆ ಅನಿವಾರ್ಯವಾಗಿದೆ. ಖರ್ಚು ಎಷ್ಟು ಎಂದು ಲೆಕ್ಕಾಚಾರ ಮಾಡಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುತ್ತೇವೆ' ಎಂದು ಮಾಹಿತಿ ನೀಡಿದರು.

